

ಬಿಸಿಲ ಅಕ್ಟೋಬರ್ 1999 ರೂ. 10




ಟೊಳ್ಳಾದ ಮನೆ ಕಟ್ಟುವ ಶಿಲ್ಪಿ




ಸಾಕುಪ್ರಾಣಿ ಬಗ್ಗೆ ಎಚ್ಚರ !



ಕಿಲಾಡಿ ಗೌಡರು !



ವೈದ್ಯರನ್ನು ಕಾಣುವ ಮುನ್ನ...



ವಾಸ್ತು

ಎಷ್ಟು ನಿಜ ! ಎಷ್ಟು ಸುಳ್ಳು !

'ಸೋನಿ' ಬೆಳೆದ ಕತೆ

ವರದಿಯಾಗದ ಚುನಾವಣೆ ಸುದ್ದಿಗಳು

ಖ್ಯಾತ ತೆಲುಗು ಲೇಖಕ ಮಲ್ಲಾದಿ ಕತೆ

ವರ್ಷಪೂರ್ತಿ ಓದಬಹುದಾದ ಸಮೃದ್ಧ ಸಾಹಿತ್ಯ
ಹೊಳಪು ಕಾಗದದಲ್ಲಿ ಬಹುವರ್ಣ ಮುದ್ರಣ

ಸಹಸ್ರಮಾನದ ಕೊನೆಯ

ದೀಪಾವಳಿ

ಚಿರಸ್ಮರಣೀಯ ಆಗಿ ನಿಮ್ಮೆಲ್ಲರ
ಮನದಲ್ಲಿ ಉಳಿಯುವಂತೆ
ರೂಪಿಸಲಾದ ಸಂಚಿಕೆ.


ಕತೆಗಾರರೆಂದರೆ ಇವರೇ ಎಂಬಂತೆ
ಕತೆ ಬರೆಯುತ್ತಿದ್ದ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ವಿಜೇತ
ಶ್ರೀ ಕೃಷ್ಣ ಆಲನಹಳ್ಳಿ
ಅವರ ಅಪ್ರಕಟಿತ ಕತೆ

ಹಾಗೂ
ಕುಂ. ವೀರಭದ್ರಪ್ಪ, ಗೀತಾ ನಾಗಭೂಷಣ
ನಾ. ಡಿಸೋಜ, ಬಿದರಹಳ್ಳಿ ನರಸಿಂಹಮೂರ್ತಿ
ಮೊದಲಾದವರ ಸೊಗಸಾದ ಕತೆಗಳು.

ಚೆನ್ನವೀರ ಕಣವಿ, ಶಾಂತರಸ
ಚಂದ್ರಶೇಖರ ಕಂಬಾರ, ಎಸ್.ಸಂಧ್ಯಾ
ಮುದೇನೂರ ಸಂಗಣ್ಣ
ಎಂ.ಆರ್. ಕಮಲ
ಎಚ್.ಎಸ್. ಶಿವಪ್ರಕಾಶ್
ಎಂ.ಎನ್.ವ್ಯಾಸರಾವ್
ಕೆ.ಎಸ್.ನಿಸಾರ್ ಅಹಮ್ಮದ್
ಸುಬ್ರಾಯ ಚೊಕ್ಕಾಡಿ
ಅವರ ಅರ್ಥಪೂರ್ಣ ಕವಿತೆಗಳು.

ಅನಂತ ಕಲ್ಲೋಳ
ಭುವನೇಶ್ವರಿ ಹೆಗಡೆ
ಎಂ.ಎಸ್.ನರಸಿಂಹಮೂರ್ತಿ
ಅವರ ನಗೆ ಚಿಮ್ಮಿಸುವ ಬರಹಗಳು.

ನೇಮಿಚಂದ್ರ, ಚಕ್ಕೆರೆ ಶಿವಶಂಕರ್
ಎಸ್.ಮಾಲತಿ, ಜಿ.ಎಂ.ಶಿರಹಟ್ಟಿ
ಮೀರಾಸಾಬಿಹಳ್ಳಿ ಶಿವಣ್ಣ
ಬರೆದ ವಿಶೇಷ ಲೇಖನಗಳು.



ಆರ್.ಕೆ. ಲಕ್ಷ್ಮಣ್, ಬಿ.ವಿ. ರಾಮಮೂರ್ತಿ
ಗುಜ್ಜಾರಪ್ಪ, ಪಂಜು ಗಂಗೂಲಿ
ಚಂದ್ರಶೇಖರ ಗುಬ್ಬಿ, ಕೆ.ಆರ್. ಸ್ವಾಮಿ
ನರೇಂದ್ರ, ರಾವ್‌ಬೈಲ್
ನಾಡಿಗ್, ಪ್ರಕಾಶ್ ಶೆಟ್ಟಿ, ಹುಬ್ಳೀಕರ್
ಮೊದಲಾದವರ ವಕ್ರ ರೇಖೆಗಳ ವಿನ್ಯಾಸದ ಗುಚ್ಛ.

ಜೊತೆಗೆ ಕತಾಸ್ಪರ್ಧೆ, ಪ್ರಬಂಧ ಸ್ಪರ್ಧೆ,
ಛಾಯಾಚಿತ್ರ ಸ್ಪರ್ಧೆಗಳ ಫಲಿತಾಂಶ

ಬದುಕು

ಅಕ್ಟೋಬರ್ 1999 ಸಂಪುಟ 3 ಸಂಚಿಕೆ 4

- **ಸುಡಿದರೆ ಮುತ್ತಿನ ಹಾರದಂತಿರಬೇಕು**

  ಬಸವಣ್ಣ

- **ಮಾತು ಬೆಳ್ಳಿ, ಮೌನ ಬಂಗಾರ**

  ಇಂಗ್ಲಿಷ್ ಗಾದೆ

- **ಭಾಷೆ ಕಿರಿದು, ಭಾವ ಹಿರಿದು**

  ಅಲ್ಲಮ ಪ್ರಭು

- **ಮಾತು ಮನಸು ಬಿಚ್ಚಿಡಬೇಕು, ಆದರೆ ನಾವು ಮಾತನ್ನು ಬಳಸುವುದು ನಮ್ಮ ಮನಸು ಬಚ್ಚಿಡುವುದಕ್ಕೇ.**

  ರಜನೀಶ್

- **ಮಾತು ಮನೆ ಕೆಡಿಸಿತು. ತೂತು ಒಲೆ ಕೆಡಿಸಿತು**

  ಗಾದೆ

- **ಯಾರೂ ಏನೂ ಹೇಳದೇ ಇರುವ ಸಮಯದಲ್ಲಿ ನಮಗೆ ಏನೆಲ್ಲ ಕೇಳಿಸುತ್ತದೆ ಎಂಬುದೇ ನಿಜಕ್ಕೂ ಸೋಜಿಗವಲ್ಲವೇ!**

  ಇಲೈನ್ ಸೆಂಟ್ ಜೇಮ್ಸ್

- ಚಕ್ರವರ್ತಿಯ ಸ್ಥಾನದಲ್ಲಿ ಕುಳಿತೂ ಸಾಮಾನ್ಯನಂತೆ ಜೀವನವನ್ನು ನಡೆಸಿದ್ದು ಸ್ಟ್ಯಾಲಿನ್‌ನ ಒಂದು ದೊಡ್ಡ ಗುಣ. ಈ ನೇಮನಿಸ್ವಾರ್ಥಗಳಿಂದ ಅವನು ತನ್ನ ಉನ್ನತ ಸ್ಥಾನದಲ್ಲಿ ನಿಶ್ಚಲವಾಗಿ ನಿಲ್ಲುವುದು ಸಾಧ್ಯವಾಯಿತು. ಆದರೆ ಇದರ ಜೊತೆಗೆ ಅವನು ಬಹಳ ಕ್ರೂರಿ, ಕಠಿಣ ಸ್ವಭಾವದವನು ಎಂದೂ ನಾವು ಹೇಳಬೇಕು. ಒಳ್ಳೆಯ ದಕ್ಕೆಂದೇ ಆದರೂ ಅವನು ಹಿಡಿದ ದಾರಿ ಬಹಳ ಕ್ರೂರ. ಬಹು ಕಠೋರ. ಅಮೆರಿಕದ ರೀತಿ ಇವನ ರೀತಿಯಿಂದ ಬಹು ಬೇರೆ ಎಂದು ಕಂಡರೂ ಅದು ಇವನ ಅಣ್ಣನೇ.

  - ಮಾಸ್ತಿ ವೆಂಕಟೇಶ ಅಯ್ಯಂಗಾರ್

  'ಪ್ರಸಂಗ' ಪುಸ್ತಕದಿಂದ

ಸಂಪಾದಕ
ಚಂದ್ರಕಾಂತ ವಡ್ಡು
ಕಾರ್ಯನಿರ್ವಾಹಕ ಸಂಪಾದಕ
ಎಂ.ಎಲ್. ದೇಶಿಕರ್
ಸಹಕಾರ
ಲಿಂಗರಾಜು
ವಿಳಾಸ
ಬಿಸಿಲ ಬದುಕು ಮಾಸ ಪತ್ರಿಕೆ
ಅಂಕುರ ಪ್ರಕಾಶನ, ಅಂಚೆ ಪೆಟ್ಟಿಗೆ: 7951
ಬಸವೇಶ್ವರ ನಗರ, ಬೆಂಗಳೂರು- 560 079
ದೂರವಾಣಿ: 3307810

Printed, Published and Owned by Chandrakanta Vaddu, 473, I Cross, I Block, III Stage, Near Water Tank Bus Stop, Basaveshwaranagar, Bangalore - 560 079. Tel : 080 3307810 Pager:9622 738638 Mobile:98440 87433 Editor : Chandrakanta Vaddu

ಕಾಳಜಿ

ಆತ ಶ್ರೀಮಂತ. ಒಬ್ಬಳೇ ಮಗಳು. ತೀರಾ ಮುದ್ದಿನಿಂದ ಬೆಳೆಸಿದ್ದ. ಆಕೆ ಸಾಕಷ್ಟು ಓದಿದವಳು. ಅನುಕಂಪ, ಸಹೃದಯತೆ ಹೊಂದಿದ್ದ ವ್ಯಕ್ತಿ. ಶ್ರೀಮಂತರ ಅಟ್ಟಹಾಸ, ಬೂಟಾಟಿಕೆ ಕಂಡರೆ ಸಿಟ್ಟು. ಬಡವರ ಸಂಕಷ್ಟ, ಒದ್ದಾಟಗಳನ್ನು ಕಂಡರೆ ಅವಳು ಸಹೃದಯತೆಯಿಂದ ವರ್ತಿಸುತ್ತಾ ಇದ್ದಳು.

ಮಗಳ ಮದುವೆ ಆಯಿತು. ಆಕೆಯ ಇಷ್ಟದಂತೆ ಸರಳವಾಗಿಯೇ ಮದುವೆ. ಮದುವೆ ಆದ ಮೇಲೆ ಜನಕ್ಕೆ ಒಂದು ಊಟವಾದರೂ ಹಾಕಬೇಡವೇ! ಅದಕ್ಕೆ ಮಗಳ ತಕರಾರು ಏನೂ ಇರಲಿಲ್ಲ. ನಾಲ್ಕು ಜನ ಬಂದು ಊಟಮಾಡಿ ಸಂತೋಷಪಟ್ಟು ಹೋದರೆ ಒಳ್ಳೆಯದೇ ಅಲ್ಲವೇ!

ಆದರೆ ತಂದೆ, ಮಗಳಿಗೆ ಊಟದ ವ್ಯವಸ್ಥೆ ಕುರಿತು ತಕರಾರು ಆರಂಭವಾಯಿತು. 'ಊಟದ ಸಮಯಕ್ಕೆ ತನ್ನ ಹತ್ತಿರವೇ ಮನೆಯ ಆಳುಗಳು, ಕೂಲಿಯವರು, ಬಡಬಗ್ಗರು ಊಟಕ್ಕೆ ಕೂರಬೇಕು. ಶ್ರೀಮಂತರೇನಿದ್ದರೂ ದೂರ ಕುಳಿತು ಊಟ ಮಾಡಿ ಹೋಗಲಿ' ಮಗಳದು ಒಂದೇ ಹಟ.

ಬದುಕು ಕಂಡು ಅರಿತ ತಂದೆಗೆ ಇದು ಒಪ್ಪದ ವಿಚಾರ. ನಾಳೆಯ ದಿನ ಜನ ಆಡಿಕೊಂಡು ನಗುತ್ತಾರೆ. ಅಷ್ಟೇಕೆ, ಇಂಥದೊಂದು ಭೋಜನದ ವ್ಯವಸ್ಥೆ ಆಗಿದೆ ಅಂದರೆ ಜೊತೆಗಾರ ಶ್ರೀಮಂತರು ಭೋಜನ ಕೂಟಕ್ಕೆ ಬರದೇ ಹೋಗಬಹುದು. ಕೆಲವರ ಮುನಿಸಿಗೂ ಕಾರಣವಾಗಬಹುದು. ಇದು ಸುಮ್ಮನೆ ಮೈಮೇಲೆ ತೊಂದರೆ ಎಳೆದುಕೊಂಡಂತೆ. ಹಾಗೆಂದು ಮಗಳ ಮನಸ್ಸು ನೋಯಿಸಲು ಇಷ್ಟವಿಲ್ಲ. ಅವಳಿಗೆ ಬಡವರು, ನೊಂದವರ ಬಗ್ಗೆ ಇರುವ ಕಳಕಳಿ ಗೊತ್ತು. 'ಬೇಡ' ಅಂದರೆ ತಂದೆಯೇ, ಅದೂ ತನ್ನ ಮದುವೆಯ ಭೋಜನ ಕೂಟದಲ್ಲೇ ಶ್ರೀಮಂತರ ಪರವಾಗಿ ವಾದಿಸುತ್ತಾನೆ ಎಂದು ಮಗಳು ತಪ್ಪು ತಿಳಿಯಬಹುದು.

ಸಾಮಾನ್ಯವಾಗಿ ಸಮಸ್ಯೆ ತೋರಿದಾಗ, ಊರಿನ ಹಿರಿಯರೊಬ್ಬರಲ್ಲಿ ಹೇಳಿಕೊಳ್ಳುವುದು ವಾಡಿಕೆ. ಅವರಿಗೆ ತಿಳುವಳಿಕೆ ಜಾಸ್ತಿ, ಏನಾದರೊಂದು ಪರಿಹಾರ ಸೂಚಿಸುತ್ತಾರೆ. ಈ ಸಂದರ್ಭದಲ್ಲಿ ಅವರು ಆ ಹಿರಿಯರನ್ನೇ ಹುಡುಕಿಕೊಂಡು ಹೋದರು. ಸಮಸ್ಯೆ ಹೇಳಿದರು. ಅವರು ಶಾಂತವಾಗಿ ಎಲ್ಲ ಕೇಳಿಸಿಕೊಂಡು,

''ಆಯಿತು ನಿಮ್ಮ ವಿಚಾರ ಹೇಳಿದಿರಿ. ನಿಮ್ಮ ಮಗಳು ಏನು ಹೇಳುತ್ತಾಳೋ ಕೇಳೋಣ ನಡೆಯಿರಿ'' ಎಂದು ಮನೆಗೇ ಬಂದರು. ದೊಡ್ಡವರನ್ನು ಕಂಡ ಆ ಹುಡುಗಿ ಸಂತಸ, ಉತ್ಸಾಹದಿಂದ ತಾನು ಮಾಡಿರುವ ಏರ್ಪಾಟು ಎಲ್ಲ ಹೇಳಿ, 'ನೀವು ಖಂಡಿತ ಊಟಕ್ಕೆ ಬರಬೇಕು' ಅಂದಳು.

''ಆಯಿತು. ನಿನ್ನ ಕಾಳಜಿ ಮೆಚ್ಚುವಂಥದ್ದು. ಎಲ್ಲರೂ ಸಂತೋಷದಿಂದ ಊಟ ಮಾಡಿ ನಿನ್ನ ಹರಸಿ ಹೋಗಲಿ ಅಂತ ಆಶಿಸುತ್ತೀಯ. ಬಡವರು ನಿನಗೆ ತುಂಬಾ ಹತ್ತಿರ. ಶ್ರೀಮಂತರು ದೂರ ದೂರ ಇರಬೇಕು ಅಂತ ಆಶಿಸುತ್ತೀಯ. ಎಲ್ಲ ಸರಿ ಅಂಥ ಶ್ರೀಮಂತ ಭೋಜನ ಕೂಟದಲ್ಲಿ ನಿನ್ನ ಮಗ್ಗುಲಿಗೇ ಬಂದು ಕುಳಿತ ಬಡವರು ನಿರಾಳವಾಗಿ ಊಟ ಮಾಡುತ್ತಾರಾ? ಅವರಿಗೆ ಏನೋ ಮುಜುಗರ ಸಂಕೋಚ. ಇನ್ನು ಆ ಶ್ರೀಮಂತರು. ತಮ್ಮನ್ನು ಅವಮಾನ ಮಾಡಲೆಂದೇ ಕರೆದಿದ್ದಾರೆ ಅಂತ ತಿಳಿಯುತ್ತಾರೆ. ಅವರು ಖುಷಿಯಿಂದ ಊಟ ಮಾಡುತ್ತಾರಾ? ನಿನ್ನ ಕಳಕಳಿ ಒಪ್ಪಿದೆ. ಆದರೆ, ಅದರ ಪರಿಣಾಮ ಏನಾಗುತ್ತೆ ಊಹಿಸು. ನಮ್ಮ ಭಾವನೆಗಳ ಹಾಗೇ ಅವನ್ನು ಪ್ರತಿ ಪಾಲಿಸೋ ರೀತೀನೂ ಮುಖ್ಯ. ಯೋಚಿಸಿ ನೋಡು'' ಅಂದರು.

ಹುಡುಗಿ ಬುದ್ಧಿವಂತೆ. ಪರಿಸ್ಥಿತಿ ಅರ್ಥಮಾಡಿಕೊಂಡಳು. ಯಾರಿಗೂ ನೋವಾಗದ ರೀತಿಯಲ್ಲಿ, ಎಲ್ಲರಿಗೂ ಸಂತೋಷ ಆಗುವ ಹಾಗೆ ಭೋಜನಕೂಟ ನಡೆಯಿತು.

■ ಚಂದ್ರಶೇಖರ ಸಿ.ಆರ್.

ವರ್ಷಪೂರ್ತಿ ಓದಬಹುದಾದ ಸಮೃದ್ಧ ಸಾಹಿತ್ಯ
ಹೊಳಪು ಕಾಗದದಲ್ಲಿ ಬಹುವರ್ಣ ಮುದ್ರಣ

ಸಹಸ್ರಮಾನದ ಕೊನೆಯ

ದೀಪಾವಳಿ

ಚಿರಸ್ಮರಣೀಯ ಆಗಿ ನಿಮ್ಮೆಲ್ಲರ
ಮನದಲ್ಲಿ ಉಳಿಯುವಂತೆ
ರೂಪಿಸಲಾದ ಸಂಚಿಕೆ.


ಕತೆಗಾರರೆಂದರೆ ಇವರೇ ಎಂಬಂತೆ
ಕತೆ ಬರೆಯುತ್ತಿದ್ದ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ವಿಜೇತ
ಶ್ರೀ ಕೃಷ್ಣ ಆಲನಹಳ್ಳಿ
ಅವರ ಅಪ್ರಕಟಿತ ಕತೆ

ಹಾಗೂ
ಕುಂ. ವೀರಭದ್ರಪ್ಪ, ಗೀತಾ ನಾಗಭೂಷಣ
ನಾ. ಡಿಸೋಜ, ಬಿದರಹಳ್ಳಿ ನರಸಿಂಹಮೂರ್ತಿ
ಮೊದಲಾದವರ ಸೊಗಸಾದ ಕತೆಗಳು.

ಚೆನ್ನವೀರ ಕಣವಿ, ಶಾಂತರಸ
ಚಂದ್ರಶೇಖರ ಕಂಬಾರ, ಎಸ್.ಸಂಧ್ಯಾ
ಮುದೇನೂರ ಸಂಗಣ್ಣ
ಎಂ.ಆರ್. ಕಮಲ
ಎಚ್.ಎಸ್. ಶಿವಪ್ರಕಾಶ್
ಎಂ.ಎನ್.ವ್ಯಾಸರಾವ್
ಕೆ.ಎಸ್.ನಿಸಾರ್ ಅಹಮ್ಮದ್
ಸುಬ್ರಾಯ ಚೊಕ್ಕಾಡಿ
ಅವರ ಅರ್ಥಪೂರ್ಣ ಕವಿತೆಗಳು.

ಅನಂತ ಕಲ್ಲೋಳ
ಭುವನೇಶ್ವರಿ ಹೆಗಡೆ
ಎಂ.ಎಸ್.ನರಸಿಂಹಮೂರ್ತಿ
ಅವರ ನಗೆ ಚಿಮ್ಮಿಸುವ ಬರಹಗಳು.

ನೇಮಿಚಂದ್ರ, ಚಕ್ಕೆರೆ ಶಿವಶಂಕರ್
ಎಸ್.ಮಾಲತಿ, ಜಿ.ಎಂ.ಶಿರಹಟ್ಟಿ
ಮೀರಾಸಾಬಿಹಳ್ಳಿ ಶಿವಣ್ಣ
ಬರೆದ ವಿಶೇಷ ಲೇಖನಗಳು.



ಆರ್.ಕೆ. ಲಕ್ಷ್ಮಣ್, ಬಿ.ವಿ. ರಾಮಮೂರ್ತಿ
ಗುಜ್ಜಾರಪ್ಪ, ಪಂಜು ಗಂಗೂಲಿ
ಚಂದ್ರಶೇಖರ ಗುಬ್ಬಿ, ಕೆ.ಆರ್. ಸ್ವಾಮಿ
ನರೇಂದ್ರ, ರಾವ್‌ಬೈಲ್
ನಾಡಿಗ್, ಪ್ರಕಾಶ್ ಶೆಟ್ಟಿ, ಹುಬ್ಳೀಕರ್
ಮೊದಲಾದವರ ವಕ್ರ ರೇಖೆಗಳ ವಿನ್ಯಾಸದ ಗುಟ್ಟು.

ಜೊತೆಗೆ ಕತಾಸ್ಪರ್ಧೆ, ಪ್ರಬಂಧ ಸ್ಪರ್ಧೆ,
ಛಾಯಾಚಿತ್ರ ಸ್ಪರ್ಧೆಗಳ ಫಲಿತಾಂಶ

ಬದುಕು

ಅಕ್ಟೋಬರ್ 1999 ಸಂಪುಟ 3 ಸಂಚಿಕೆ 4

- **ನುಡಿದರೆ ಮುತ್ತಿನ ಹಾರದಂತಿರಬೇಕು**

  ಬಸವಣ್ಣ

- **ಮಾತು ಬೆಳ್ಳಿ, ಮೌನ ಬಂಗಾರ**

  ಇಂಗ್ಲಿಷ್ ಗಾದೆ

- **ಭಾಷೆ ಕಿರಿದು, ಭಾವ ಹಿರಿದು**

  ಅಲ್ಲಮ ಪ್ರಭು

- **ಮಾತು ಮನಸು ಬಿಚ್ಚಿಡಬೇಕು, ಆದರೆ ನಾವು ಮಾತನ್ನು ಬಳಸುವುದು ನಮ್ಮ ಮನಸು ಬಚ್ಚಿಡುವುದಕ್ಕೇ.**

  ರಜನೀಶ್

- **ಮಾತು ಮನೆ ಕೆಡಿಸಿತು. ತೂತು ಒಲೆ ಕೆಡಿಸಿತು**

  ಗಾದೆ

- **ಯಾರೂ ಏನೂ ಹೇಳದೇ ಇರುವ ಸಮಯದಲ್ಲಿ ನಮಗೆ ಏನೆಲ್ಲ ಕೇಳಿಸುತ್ತದೆ ಎಂಬುದೇ ನಿಜಕ್ಕೂ ಸೋಜಿಗವಲ್ಲವೇ!**

  ಇಲೈನ್ ಸೆಂಟ್ ಜೇಮ್ಸ್

- ಚಕ್ರವರ್ತಿಯ ಸ್ಥಾನದಲ್ಲಿ ಕುಳಿತೂ ಸಾಮಾನ್ಯನಂತೆ ಜೀವನವನ್ನು ನಡೆಸಿದ್ದು ಸ್ಟ್ಯಾಲಿನ್‌ನ ಒಂದು ದೊಡ್ಡ ಗುಣ. ಈ ನೇಮನಿಸ್ವಾರ್ಥಗಳಿಂದ ಅವನು ತನ್ನ ಉನ್ನತ ಸ್ಥಾನದಲ್ಲಿ ನಿಶ್ಚಲವಾಗಿ ನಿಲ್ಲುವುದು ಸಾಧ್ಯವಾಯಿತು. ಆದರೆ ಇದರ ಜೊತೆಗೆ ಅವನು ಬಹಳ ಕ್ರೂರಿ, ಕಠಿಣ ಸ್ವಭಾವದವನು ಎಂದೂ ನಾವು ಹೇಳಬೇಕು. ಒಳ್ಳೆಯ ದಕ್ಕೆಂದೇ ಆದರೂ ಅವನು ಹಿಡಿದ ದಾರಿ ಬಹಳ ಕ್ರೂರ. ಬಹು ಕಠೋರ. ಅಮೆರಿಕದ ರೀತಿ ಇವನ ರೀತಿಯಿಂದ ಬಹು ಬೇರೆ ಎಂದು ಕಂಡರೂ ಅದು ಇವನ ಅಣ್ಣನೇ.

  - ಮಾಸ್ತಿ ವೆಂಕಟೇಶ ಅಯ್ಯಂಗಾರ್

  'ಪ್ರಸಂಗ' ಪುಸ್ತಕದಿಂದ

ಸಂಪಾದಕ

ಚಂದ್ರಕಾಂತ ವಡ್ಡು

ಕಾರ್ಯ ನಿರ್ವಾಹಕ ಸಂಪಾದಕ

ಎಂ.ಎಲ್. ದೇಶಿಕರ್

ಸಹಕಾರ

ಲಿಂಗರಾಜು

ವಿಳಾಸ

ಬಿಸಿಲ ಬದುಕು ಮಾಸ ಪತ್ರಿಕೆ

ಅಂಕುರ ಪ್ರಕಾಶನ, ಅಂಚೆ ಪೆಟ್ಟಿಗೆ : 7951

ಬಸವೇಶ್ವರ ನಗರ, ಬೆಂಗಳೂರು- 560 079

ದೂರವಾಣಿ : 3307810

Printed, Published and Owned by Chandrakanta Vaddu, 473, I Cross, I Block, III Stage, Near Water Tank Bus Stop, Basaveshwaranagar, Bangalore - 560 079. Tel : 080 3307810 Pager:9622 738638 Mobile:98440 87433 Editor : Chandrakanta Vaddu

ಕಾಳಜಿ

ಆತ ಶ್ರೀಮಂತ. ಒಬ್ಬಳೇ ಮಗಳು. ತೀರಾ ಮುದ್ದಿನಿಂದ ಬೆಳೆಸಿದ್ದ. ಆಕೆ ಸಾಕಷ್ಟು ಓದಿದವಳು. ಅನುಕಂಪ, ಸಹೃದಯತೆ ಹೊಂದಿದ್ದ ವ್ಯಕ್ತಿ. ಶ್ರೀಮಂತರ ಅಟ್ಟಹಾಸ, ಬೂಟಾಟಿಕೆ ಕಂಡರೆ ಸಿಟ್ಟು. ಬಡವರ ಸಂಕಷ್ಟ, ಒದ್ದಾಟಗಳನ್ನು ಕಂಡರೆ ಅವಳು ಸಹೃದಯತೆಯಿಂದ ವರ್ತಿಸುತ್ತಾ ಇದ್ದಳು.

ಮಗಳ ಮದುವೆ ಆಯಿತು. ಆಕೆಯ ಇಷ್ಟದಂತೆ ಸರಳವಾಗಿಯೇ ಮದುವೆ. ಮದುವೆ ಆದ ಮೇಲೆ ಜನಕ್ಕೆ ಒಂದು ಊಟವಾದರೂ ಹಾಕಬೇಡವೇ! ಅದಕ್ಕೆ ಮಗಳ ತಕರಾರು ಏನೂ ಇರಲಿಲ್ಲ. ನಾಲ್ಕು ಜನ ಬಂದು ಊಟಮಾಡಿ ಸಂತೋಷಪಟ್ಟು ಹೋದರೆ ಒಳ್ಳೆಯದೇ ಅಲ್ಲವೇ!

ಆದರೆ ತಂದೆ, ಮಗಳಿಗೆ ಊಟದ ವ್ಯವಸ್ಥೆ ಕುರಿತು ತಕರಾರು ಆರಂಭವಾಯಿತು. 'ಊಟದ ಸಮಯಕ್ಕೆ ತನ್ನ ಹತ್ತಿರವೇ ಮನೆಯ ಆಳುಗಳು, ಕೂಲಿಯವರು, ಬಡಬಗ್ಗರು ಊಟಕ್ಕೆ ಕೂರಬೇಕು. ಶ್ರೀಮಂತರೇನಿದ್ದರೂ ದೂರ ಕುಳಿತು ಊಟ ಮಾಡಿ ಹೋಗಲಿ' ಮಗಳದು ಒಂದೇ ಹಟ.

ಬದುಕು ಕಂಡು ಅರಿತ ತಂದೆಗೆ ಇದು ಒಪ್ಪದ ವಿಚಾರ. ನಾಳೆಯ ದಿನ ಜನ ಆಡಿಕೊಂಡು ನಗುತ್ತಾರೆ. ಅಷ್ಟೇಕೆ, ಇಂಥದೊಂದು ಭೋಜನದ ವ್ಯವಸ್ಥೆ ಆಗಿದೆ ಅಂದರೆ ಜೊತೆಗಾರ ಶ್ರೀಮಂತರು ಭೋಜನ ಕೂಟಕ್ಕೆ ಬರದೇ ಹೋಗಬಹುದು. ಕೆಲವರ ಮುನಿಸಿಗೂ ಕಾರಣವಾಗಬಹುದು. ಇದು ಸುಮ್ಮನೆ ಮೈಮೇಲೆ ತೊಂದರೆ ಎಳೆದುಕೊಂಡಂತೆ. ಹಾಗೆಂದು ಮಗಳ ಮನಸ್ಸು ನೋಯಿಸಲು ಇಷ್ಟವಿಲ್ಲ. ಅವಳಿಗೆ ಬಡವರು, ನೊಂದವರ ಬಗ್ಗೆ ಇರುವ ಕಳಕಳಿ ಗೊತ್ತು. 'ಬೇಡ' ಅಂದರೆ ತಂದೆಯೇ, ಅದೂ ತನ್ನ ಮದುವೆಯ ಭೋಜನ ಕೂಟದಲ್ಲೇ ಶ್ರೀಮಂತರ ಪರವಾಗಿ ವಾದಿಸುತ್ತಾನೆ ಎಂದು ಮಗಳು ತಪ್ಪು ತಿಳಿಯಬಹುದು.

ಸಾಮಾನ್ಯವಾಗಿ ಸಮಸ್ಯೆ ತೋರಿದಾಗ, ಊರಿನ ಹಿರಿಯರೊಬ್ಬರಲ್ಲಿ ಹೇಳಿಕೊಳ್ಳುವುದು ವಾಡಿಕೆ. ಅವರಿಗೆ ತಿಳುವಳಿಕೆ ಜಾಸ್ತಿ, ಏನಾದರೊಂದು ಪರಿಹಾರ ಸೂಚಿಸುತ್ತಾರೆ. ಈ ಸಂದರ್ಭದಲ್ಲಿ ಅವರು ಆ ಹಿರಿಯರನ್ನೇ ಹುಡುಕಿಕೊಂಡು ಹೋದರು. ಸಮಸ್ಯೆ ಹೇಳಿದರು. ಅವರು ಶಾಂತವಾಗಿ ಎಲ್ಲ ಕೇಳಿಸಿಕೊಂಡು,


''ಆಯಿತು ನಿಮ್ಮ ವಿಚಾರ ಹೇಳಿದಿರಿ. ನಿಮ್ಮ ಮಗಳು ಏನು ಹೇಳುತ್ತಾಳೋ ಕೇಳೋಣ ನಡೆಯಿರಿ'' ಎಂದು ಮನೆಗೇ ಬಂದರು. ದೊಡ್ಡವರನ್ನು ಕಂಡ ಆ ಹುಡುಗಿ ಸಂತಸ, ಉತ್ಸಾಹದಿಂದ ತಾನು ಮಾಡಿರುವ ಏರ್ಪಾಟು ಎಲ್ಲ ಹೇಳಿ, 'ನೀವು ಖಂಡಿತ ಊಟಕ್ಕೆ ಬರಬೇಕು' ಅಂದಳು.

''ಆಯಿತು. ನಿನ್ನ ಕಾಳಜಿ ಮೆಚ್ಚುವಂಥದ್ದು. ಎಲ್ಲರೂ ಸಂತೋಷದಿಂದ ಊಟ ಮಾಡಿ ನಿನ್ನ ಹರಸಿ ಹೋಗಲಿ ಅಂತ ಆಶಿಸುತ್ತೀಯ. ಬಡವರು ನಿನಗೆ ತುಂಬಾ ಹತ್ತಿರ. ಶ್ರೀಮಂತರು ದೂರ ದೂರ ಇರಬೇಕು ಅಂತ ಆಶಿಸುತ್ತೀಯ. ಎಲ್ಲ ಸರಿ ಅಂಥ ಶ್ರೀಮಂತ ಭೋಜನ ಕೂಟದಲ್ಲಿ ನಿನ್ನ ಮಗ್ಗುಲಿಗೇ ಬಂದು ಕುಳಿತ ಬಡವರು ನಿರಾಳವಾಗಿ ಊಟ ಮಾಡುತ್ತಾರಾ? ಅವರಿಗೆ ಏನೋ ಮುಜುಗರ ಸಂಕೋಚ. ಇನ್ನು ಆ ಶ್ರೀಮಂತರು. ತಮ್ಮನ್ನು ಅವಮಾನ ಮಾಡಲೆಂದೇ ಕರೆದಿದ್ದಾರೆ ಅಂತ ತಿಳಿಯುತ್ತಾರೆ. ಅವರು ಖುಷಿಯಿಂದ ಊಟ ಮಾಡುತ್ತಾರಾ? ನಿನ್ನ ಕಳಕಳಿ ಒಪ್ಪಿದೆ. ಆದರೆ, ಅದರ ಪರಿಣಾಮ ಏನಾಗುತ್ತೆ ಊಹಿಸು. ನಮ್ಮ ಭಾವನೆಗಳ ಹಾಗೇ ಅವನ್ನು ಪ್ರತಿ ಪಾಲಿಸೋ ರೀತೀನೂ ಮುಖ್ಯ. ಯೋಚಿಸಿ ನೋಡು'' ಅಂದರು.

ಹುಡುಗಿ ಬುದ್ಧಿವಂತೆ. ಪರಿಸ್ಥಿತಿ ಅರ್ಥಮಾಡಿಕೊಂಡಳು. ಯಾರಿಗೂ ನೋವಾಗದ ರೀತಿಯಲ್ಲಿ, ಎಲ್ಲರಿಗೂ ಸಂತೋಷ ಆಗುವ ಹಾಗೆ ಭೋಜನಕೂಟ ನಡೆಯಿತು.

■ ಚಂದ್ರಶೇಖರ ಸಿ.ಆರ್.

ಟಪಾಲು



ಇತ್ತೀಚೆಗೆ 'ಬಿಸಿಲ ಬದುಕು' ಪತ್ರಿಕೆಯು ಚೆನ್ನಾಗಿ ಧನಾತ್ಮಕವಾಗಿದ್ದುಕೊಂಡು ಎಲ್ಲರಿಗೂ ಪ್ರಯೋಜನಕಾರಿಯಾದಂತಿದೆ. ಈ ಪತ್ರಿಕೆಯಿಂದಾಗಿ ಸಮಾಜದಲ್ಲಿ ಒಂದಲ್ಲ ಒಂದು ರೀತಿಯಲ್ಲಿ ಉತ್ತಮ ಭವಿಷ್ಯವನ್ನು ಪಡೆಯಬಹುದು. ಉತ್ತಮವೆಂದು ನಾನು ಮೊದಲೆಲ್ಲ ಎಣಿಸಿಕೊಂಡಿದ್ದ ಕೆಲವು ಪತ್ರಿಕೆಗಳು ಈಗ ನಿರಾಶೆಯನ್ನು ಮೂಡಿಸಿವೆ. 'ಬಿಸಿಲ ಬದುಕು' ಉನ್ನತಿಯ ದಾರಿಯತ್ತ ಚಲಿಸುವ ಆಶಾಕಿರಣವಾಗಬಹುದೇ ಎನಿಸುತ್ತದೆ. ಕಾದು ನೋಡುವ, ಇದು ನಿಜವಾಗಬಹುದೋ ಎಂದು.

- *ಕೆ. ಕಲಾವತಿ, ಪುತ್ತೂರು.*

ಸೆಪ್ಟೆಂಬರ್ ತಿಂಗಳ ಬದುಕು ತುಂಬ ಬದಲಾಗಿದೆ. ಸುಹಾಸರವರ ಲೇಖನ 'ನಿಮಗೆ ಗೊತ್ತೇ? ಈ ಸೋನಿಯಾ' ಕಥೆ ಓದಿ ಮನಸು ಕರಗಿತಾದರೂ ಏನು ಮಾಡಲು ಸಾಧ್ಯ? ಚುನಾವಣೆಯ ಅಗ್ನಿ ಪರೀಕ್ಷೆಯಲ್ಲಿ ಸೋನಿಯಾ ಪಾಸಾಗಬಹುದೆ?

'ಅಂತೂ ಇಂತೂ ಕಾಂಗ್ರೆಸ್‌ಗೆ ಕುರ್ಚಿ ಇಲ್ಲ'. ಎಂಬ ರಾಮುರವರ ಲೇಖನ ಮೆಚ್ಚಿದೆ. ಚಿಕ್ಕ ಲೇಖನ ಆದರೂ ರಾಜಕೀಯದ ದೊಡ್ಡ ವಿಚಾರ ಅದರಲ್ಲಿ ತುಂಬಿತ್ತು.

- *ಅಶೋಕ ಉಮರಾಣಕರ, ಸೊಲ್ಲಾಪುರ*

ಬದುಕು ಸೆಪ್ಟೆಂಬರ್ 1999 ಸಂಪುಟ 3, ಸಂಚಿಕೆ 3, ಇಂದೇ ಕೈ ಸೇರಿತು. ಓದುತ್ತ ಹೋದಂತೆ ಸಂಚಿಕೆ ಕನ್ನಡ ಸಾಹಿತ್ಯದಲ್ಲಿ ಮಹತ್ವದ ಹೆಜ್ಜೆಗಳನ್ನು ಮೂಡಿಸುತ್ತ, ಕನ್ನಡಕ್ಕೆ ಹೆಮ್ಮೆಯ ಪತ್ರಿಕೆಯಾಗಿದೆ ಎನಿಸಿತು.

-*ಡಾ. ನಿಂಗಣ್ಣ ಸಣ್ಣಕ್ಕಿ, ಗೋಕಾಕ.*

'ನಿಮಗೆ ಗೊತ್ತೇ? ಈ ಸೋನಿಯಾ' ಲೇಖನ ಚೆನ್ನಾಗಿ ಮೂಡಿ ಬಂದಿದೆ. ಆದರೆ ಕಾಂಗ್ರೆಸ್ಸಿನ ರಾಜಕಾರಣಿಗಳು ಬರೇ ಗಾಂಧಿ ಮನೆತನವನ್ನು ಮುಂದಿಟ್ಟು ರಾಜಕೀಯ ಮಾಡುತ್ತಾರೆ ಎಂದು ಹೇಳಿದರೆ ತಪ್ಪಾಗದು.

-*ಚಂದ್ರಶೇಖರ ಎಸ್. ಪಾಟೀಲ್, ಮೋರಟಗಿ.*

ಸೆಪ್ಟೆಂಬರ್-99ರ ಸಂಚಿಕೆಯಲ್ಲಿ ಮೂಡಿ ಬಂದ 'ರಜನೀಶ್ ಕತೆಗಳು' ಅತ್ಯಂತ ಪ್ರಭಾವಿಯಾಗಿದ್ದವು ಮತ್ತು ನೀತಿ ಗೌರವ ಮೂಡಿಸುವಂತಹವಾಗಿದ್ದವು.

ಎಲ್ಲ ಕತೆಗಳೂ ತುಂಬಾ ಚೆನ್ನಾಗಿದ್ದವು. ಸ್ವರ್ಗ-ನರಕ ಮತ್ತು ಪವಾಡ ಇವುಗಳಂತೂ ತುಂಬಾ ಪರಿಣಾಮ ಬೀರುವಂತಹವುಗಳಾಗಿದ್ದವು. ಇದೆ ರೀತಿ ಪ್ರತಿ ತಿಂಗಳು ಒಳ್ಳೆಯ ವ್ಯಕ್ತಿಗಳ, ದಾರ್ಶನಿಕರ ಕತೆಗಳೂ ಪ್ರಕಟಗೊಳ್ಳಲಿ. ಅಲ್ಲದೆ ಬಿಸಿಲ ಬದುಕು ಪತ್ರಿಕೆ ತುಂಬಾ ಚೆನ್ನಾಗಿ ಹೊರ ಬರುತ್ತಿದೆ. ಹೀಗೆಯೇ ಇದು ಮುಂದುವರಿಯಲಿ ಎಂದು ಆಶಿಸುವೆ.

-*ಸಂಗಮೇಶ ಪ್ರಭಾಕರ, ಧಾರವಾಡ.*

ಬದುಕು ಸೆಪ್ಟೆಂಬರ್-99ರ 'ಅಲೆಕ್ಸಾಂಡರ್‌ನ ಬರಿಗೈ' ಎಂಬ ರಜನೀಶ್ ಕತೆಗೆ ಸಂಬಂಧಿಸಿದ ಚಿತ್ರ ತಪ್ಪಾಗಿ ಮುದ್ರಿತವಾಗಿದೆ. ಕತೆಯಲ್ಲಿ ಬರಿದಾದ ಅಂಗೈ ಆಕಾಶ ನೋಡುತ್ತಿರಲಿ ಎಂದಿದೆ. ಆದರೆ ಚಿತ್ರ ಇದಕ್ಕೆ ವಿರುದ್ಧವಾಗಿದೆ.

ರಜನೀಶರ ಕತೆಗಳು ಅರ್ಥಪೂರ್ಣವಾಗಿವೆ. ರಜನೀಶರ ಕೆಲವೊಂದು ವಿಚಾರಗಳು ಅತ್ಯಂತ ಪ್ರಬುದ್ಧ ಹಾಗೂ ಉಪಯುಕ್ತವಾಗಿವೆ. ಇತ್ತೀಚೆಗೆ ಸಂಪಾದಕೀಯ ಕಾಣೆಯಾಗಿದೆ ಏಕೆ?

- *ಹ. ಮುರಳೀಧರರಾವ್, ಬೆಂಗಳೂರು..*

ದೃಷ್ಟಾಂತ ವಿವರಣೆ

ಸೆಪ್ಟೆಂಬರ್ ತಿಂಗಳ ಸಂಚಿಕೆಯಲ್ಲಿ ಪ್ರಕಟವಾದ ರಜನೀಶ್‌ರವರ ದೃಷ್ಟಾಂತ ಕತೆಗಳ ವಿವರ ತುಂಬಾ ಚೆನ್ನಾಗಿತ್ತು. ತರಂಗ ವಾರಪತ್ರಿಕೆಯಲ್ಲಿ ಒಂದೂವರೆ ವರ್ಷದ ಹಿಂದೆ, ರಜನೀಶ್‌ರ ಜೀವನ ಚರಿತ್ರೆ ಮಾತ್ರ ಪ್ರಕಟವಾಗಿತ್ತು.

'ಬಿಸಿಲ ಬದುಕು' ಓದುಗರ ಮನ ತಣಿಸಲು ರಜನೀಶ್‌ರ ದೃಷ್ಟಾಂತ ಕಥೆಗಳನ್ನು ಪ್ರಕಟಿಸಿರುವುದು ಸ್ವಾಗತಾರ್ಹ. ಇದೇ ರೀತಿ ಇನ್ನು ಹೆಚ್ಚು ಮಹಾನೀಯರ ಜೀವನ ಕ್ರಮ ಮತ್ತು ದೃಷ್ಟಾಂತ ಕಥೆಗಳನ್ನು ಪ್ರಕಟಿಸಿ.

ದಯವಿಟ್ಟು ವ್ಯಕ್ತಿತ್ವ ವಿಕಾಸ, ನಿಗೂಢ ಜಗತ್ತು ಮುಂದುವರೆಸಿ.

- *ಎಂ. ನಾಗರಾಜ, ಮದ್ದೀಹಳ್ಳಿ*

ಸಂಗ್ರಹ ಯೋಗ್ಯ

ಸೆಪ್ಟೆಂಬರ್-99ರ 'ಬಿಸಿಲ ಬದುಕು' ಮಾಸಪತ್ರಿಕೆಯ ಪ್ರತಿಯೊಂದು ಅಂಕಣವು ಸಂಗ್ರಹ ಯೋಗ್ಯ. ಅದರಲ್ಲೂ ಕೆನಡಿ ಕಣ್ಮರೆ, ನೀವೂ ಅತಿಥಿಗಳಾಗಿ, ಸಚಿತ್ರ ಲೇಖನಗಳು ಸಮಗ್ರ ವಿಷಯದೊಂದಿಗೆ ಉಪಯುಕ್ತ ಮಾಹಿತಿಯನ್ನು ನೀಡಿದವು. ಲೇಖಕರಿಗೆ ತುಂಬು ಹೃದಯದ ಧನ್ಯವಾದಗಳು.

-*ಹನುಮಂತರಾವ್ ಭಜಂತ್ರಿ, ತುಳಸಿಗೇರಿ.*

ಉತ್ತಮ ಲೇಖನ

'ಪ್ರಸ್ತುತ' ಅಂಕಣದಲ್ಲಿ ಪ್ರಕಾಶ ಬಾಳಕ್ಕನವರ ಅವರ 'ಮುಳುಗುತ್ತಿರುವ ಬಾಗಲಕೋಟೆ' ಎಂಬ ಲೇಖನ ಉತ್ತಮವಾದದ್ದು. ಈಗಲಾದರೂ ಸರಕಾರ ಬಾಗಲಕೋಟೆಗೆ ಕಣ್ಣು ಹಾಯಿಸುವುದೆ? ಅಥವಾ ಮುಳುಗಡೆಯಾದ ಮೇಲೆ ಕಣ್ಣು ತೆರೆಯುವುದೆ? ಅದೇ ರೀತಿ ಈ ಲೇಖನ ಪ್ರಕಟಿಸಿದ ತಮಗೂ ಧನ್ಯವಾದಗಳು.

-*ಕೃಷ್ಣಾ ನಾ. ರಾಯಬಾಗಿ, ಬೆಟಗೇರಿ.*

ಈ ಮೂಲಕ ನಾನು ತಿಳಿಸುವುದೇನೆಂದರೆ ಮೊದಲು ಪ್ರಕಟವಾಗಿದ್ದ ಪತ್ರಿಕೆಗಳು ಬಹಳ ಚೆನ್ನಾಗಿದ್ದವು. ಇತ್ತೀಚಿನ ಸಂಚಿಕೆಗಳ ವಿಷಯಗಳು ಓದುಗರಿಗೆ ಅಷ್ಟು ಮಾರ್ಗದರ್ಶಿಯಾಗಿವೆ ಅನಿಸುವುದಿಲ್ಲ. ಆದ್ದರಿಂದ ಮೊದಲಿನಂತೆಯೇ ಪ್ರಕಟಿಸಬೇಕಾಗಿ ವಿನಂತಿ.

- *ನಾರಾಯಣ ಎ. ಗೌಡ, ಶಿವಪುರ.*

ತಮ್ಮ 'ಬಿಸಿಲ ಬದುಕು' ಪತ್ರಿಕೆಯನ್ನು ಪ್ರಾರಂಭದಿಂದಲೇ ಓದುತ್ತಿರುವೆ. ನನ್ನ ಮನಸ್ಸಿಗೆ ತೃಪ್ತಿಯನ್ನು ನೀಡಿದ್ದು ಆಗಸ್ಟ್, ಸೆಪ್ಟೆಂಬರ್ ಸಂಚಿಕೆಗಳು. ಉತ್ತಮ ಲೇಖನಗಳಿಂದ, ಸತ್ವಯುತವಾದ ಸ್ಫೂರ್ತಿದಾಯಕ ಪತ್ರಿಕೆಯಾಗಿ ಮುಂದುವರಿಯಲಿ ಎಂದು ನನ್ನ ಹಾರೈಕೆ.

-*ಬಿ. ಕೆ. ನಾಲ್ವಾಡ, ತಂಬ್ರಹಳ್ಳಿ*

ಒಳನೋಟ

ರಾಜಕೀಯ



ಸರಳ, ಅಷ್ಟೇ ಸಂಕೀರ್ಣ ನಮ್ಮ ದೇವೇಗೌಡರು
ಸುಹಾಸ 7

ವರದಿಯಾಗದ ಚುನಾವಣಾ ಸುದ್ದಿಗಳು
ರಾಮು 9

ಪ್ರಸ್ತುತ



ವಾಸ್ತು : ಎಷ್ಟು ನಿಜ ! ಎಷ್ಟು ಸುಳ್ಳು !
ಟಿ. ಸಿದ್ಧಲಿಂಗಸ್ವಾಮಿ 12

ಗಾಂಧೀನಾಡಿನ ತಪಸ್ವಿ ಲಾರಿ ಬೇಕರ್
ಕೆ.ಎನ್. ಅರುಣ್ 15

ವಿಶೇಷ



ಹಿಂದೂ ಪರಂಪರೆಯ ಮುಸ್ಲಿಂ ಕಲಾವಿದ
ಕಾವೆಂಶ್ರೀ 22

ಸುಸ್ಪಷ್ಟ ಚಿತ್ರಕ್ಕೆ ದುಬಾರಿ ಟಿವಿ
ಎಂ. ಉಲ್ಲಾಸ್ 31

ಮಗನಿಗೊಂದು ಮನವರಿಕೆಯ ಮಾತು
ಟಿ.ಎನ್. ಸೂರ್ಯನಾರಾಯಣ 34

ಸವಾಲಾದ ಸೊಳ್ಳೆ
ಶೇಷಗಿರಿ ಜೋಡಿದಾರ್ 37

ಸಾಕುಪ್ರಾಣಿಗಳ ಬಗ್ಗೆ ಎಚ್ಚರ 39

ಮೈಲುಗಲ್ಲುಗಳ ಹುಡುಕುತ್ತಾ....
ನಾಗತಿಹಳ್ಳಿ ಚಂದ್ರಶೇಖರ 45

ಸಿಂಧನೂರಿನ 'ಸಾಧನಾ'
ವಿ. ರಮೇಶ್ 47

ನಿತ್ಯ ಜೀವನದಲ್ಲಿ ಯೋಗಾಭ್ಯಾಸ
ಚಂದ್ರಕಾಂತ ಭಟ್ 57

ಕತೆ

ತಾರಿ
ವಾಸುದೇವ ಶೆಟ್ಟಿ 18

ನಗರ ಜಾನಪದ : ಎರಡು ನಮೂನೆ
ಕೆ.ಆರ್. ಪ್ರಹಲ್ಲಾದ 33

ಅಂತರ್ಮುಖ
ತೆಲುಗು : ಮಲ್ಲಾದಿ ವೆಂಕಟಕೃಷ್ಣ ಮೂರ್ತಿ
ಕನ್ನಡಕ್ಕೆ : ಶ್ರೀಕಾಂತ್ 50

ಕ್ರೀಡೆ, ವೈದ್ಯಕೀಯ




ಕ್ರೀಡೆಗಳಲ್ಲಿ ಡ್ರಗ್ಸ್ ಪಿಡುಗು
ಸುಹಾಸ 28

ನಿಮ್ಮ ವೈದ್ಯರನ್ನು ಕಾಣುವ ಮುನ್ನ....
ವಿನೋದ್ ಛೆಬ್ಬಿ 42

'ಸೋನಿ' ಬೆಳೆದ ಕತೆ

ಎನ್. ಮಾಲತೀಶ್ ಭಟ್ 60



ಲಲಿತ ಪ್ರಬಂಧ

ಕವಿಗೋಷ್ಠಿಗಳೆಂಬ ಪ್ರಸಂಗಗಳು
ಚಂದ್ರಶೇಖರ ಪಾಟೀಲ 25

ಓದುಗರ ಅಂಕಣ

ಹೀಗೆ ಈ ಬದುಕು 36
ವಿಚಿತ್ರ ಜಗತ್ತು 38

ಮುಂದಿನ ಸಂಚಿಕೆ

ದೀಪಾವಳಿ ವಿಶೇಷಾಂಕ

ಸರಳ, ಅಷ್ಟೇ ಸಂಕೀರ್ಣ ನಮ್ಮ ದೇವೇಗೌಡರು

ದೇವೇಗೌಡರ ರಾಜಕೀಯ ಜೀವನವೇ ಮುಗಿದುಹೋಯಿತು ಎಂದು ಕೂಗೆಬ್ಬಿಸುತ್ತಾ, ಅದನ್ನು ನಂಬುವಂತೆ ಮಾಡುವ ಸನ್ನಾಹವೇ ಈಗ ಆರಂಭವಾಗಿದೆ. ಕಾಲ ಮತ್ತು ರಾಜಕಾರಣ ಏನೇನನ್ನು ಮಾಡಿಸುತ್ತದೆ ಹೇಳಲು ಬರುವಂತಿಲ್ಲ. ಮುಂದೆ ಬರಲಿರುವ ಕೇಂದ್ರ, ಮತ್ತು ರಾಜ್ಯ ಸರ್ಕಾರಗಳೆರಡಕ್ಕೂ ದೇವೇಗೌಡರು ಅನಿವಾರ್ಯ ಆಗುವ ಪರಿಸ್ಥಿತಿ ಬಂದರೂ ಆಶ್ಚರ್ಯವಿಲ್ಲ. ಭಾರತದ ಜಾಣ ಮತದಾರ ಅನಿರೀಕ್ಷಿತ ತಿರುವು ನೀಡಿ, ಅಚ್ಚರಿ ಹುಟ್ಟಿಸುವುದರಲ್ಲಿ ನಿಪುಣ.



ದೇವೇಗೌಡರದು ಸಂಕೀರ್ಣ ವ್ಯಕ್ತಿತ್ವ. ಯಾವ ಕಾರಣಕ್ಕೆ ಕೆಲವರು ಅವರನ್ನು ಮೆಚ್ಚುತ್ತಾರೋ, ಅದೇ ಕಾರಣಕ್ಕೆ ಉಳಿದವರು ಅವರನ್ನು ದ್ವೇಷಿಸುತ್ತಾರೆ. ದೊಡ್ಡ ಮನುಷ್ಯ ಅನ್ನಿಸಿಕೊಳ್ಳಲು ಕೆಲವು ಮೂಲಭೂತ ಕಲ್ಪನೆಗಳಿವೆ. ಅಂಥ ಕಲ್ಪನೆಗಳಿಗೆ ದೇವೇಗೌಡರು ಒಗ್ಗಿಕೊಳ್ಳುವುದಿಲ್ಲ. ಅದೇ ಅವರ ವಿಶಿಷ್ಟತೆ.

ಸದಾ ಬಿಳಿ ಅಂಗಿ, ಅಂಥದ್ದೆ ಪಂಚೆ. ಹೆಗಲ ಮೇಲೊಂದು ವಸ್ತ್ರ. ಪ್ರಧಾನಿ ಆಗಿದ್ದಾಗಲೂ ಅವರು ಈ ಉಡುಪು ಬದಲಿಸಲಿಲ್ಲ. ವಿರೋಧ ಪಕ್ಷದ ನಾಯಕರಾಗಿ ವಿದೇಶ ಪ್ರವಾಸಕ್ಕೆ ಹೋಗಿದ್ದಾಗ, ಸಂಸತ್ ಸದಸ್ಯರಾಗಿ ಡಾವೋಸ್‌ಗೆ ತೆರಳಿದಾಗ ಅವರು ಪ್ಯಾಂಟು ತೊಟ್ಟಿದ್ದು ಉಂಟು. ಅದು ಬಿಟ್ಟರೆ ಶಾಸಕರ ದಿನಾಚರಣೆಯಲ್ಲಿ ಕ್ರಿಕೆಟ್ ಆಡಲೆಂದು ಅವರು ಪ್ಯಾಂಟು ತೊಟ್ಟಿದ್ದು ಇದೆ. ರಾಜಕಾರಣಿಗಳು ಸಾರ್ವಜನಿಕ ಬದುಕಿಗೆ, ಅಂತರಂಗದ ಬದುಕಿಗೆ ಎಂದು ಬೇರೆ ಬೇರೆ ಉಡುಪುಗಳಿಗೆ ಜಾಯಿಷುಪಡುವ ಈ ಕಾಲದಲ್ಲಿಯೂ ದೇವೇಗೌಡರು ಪಂಚೆ, ಅಂಗಿಗೆ ಜೋತು ಬಿದ್ದಿದ್ದರೆ, ಅದು ತಾವು ಬೇರೆಯವರ ಹಾಗಲ್ಲ ಎಂದು ಸಾಧಿಸುವುದಕ್ಕೆ ಇರಬಹುದು.

ಆಹಾರದ ವಿಷಯದಲ್ಲೂ ಅವರು ಹಾಗೇ. ಬೆಳಿಗ್ಗೆ ಎದ್ದಾಗ ಒಂದು ಇಡೀ ಪರಂಗಿ ಹಣ್ಣು ಹೆಚ್ಚಿ ತಿನ್ನುತ್ತಾರೆ. ತಿಂಡಿ ಇದ್ದರೂ ಆಯಿತು, ಇಲ್ಲದೇ ಇದ್ದರೂ ಆಯಿತು. ಎಂಟಿಆರ್‌ನ ಸಣ್ಣ ಗಾತ್ರದ ಉದ್ದಿನ ವಡೆ ಎಂದರೆ ತುಂಬಾ ಇಷ್ಟ.

ಊಟಕ್ಕೆ ಎರಡೂ ಹೊತ್ತು ಮುದ್ದೆ, ಸಾರು ಇರಲೇ ಬೇಕು. ತುಂಬಾ ಹಿಂದೆ ಬಾಡಿನ ಸಾರು ಇಷ್ಟಪಡುತ್ತಿದ್ದ ಅವರು, ಈಗ ಅದರಿಂದ ದೂರ. ಅಪರೂಪಕ್ಕೆ ತೆರೆಮರೆಯಲ್ಲಿ ವಿಸ್ಕಿ ಆಸ್ವಾದಿಸಿದ್ದು, ಸಿಗರೇಟು ಹಚ್ಚಿದ್ದೂ ಉಂಟು ಎಂದು ತೀರಾ ಹತ್ತಿರದಿಂದ ಅವರನ್ನು ಬಲ್ಲವರು ಹೇಳುತ್ತಾರೆ.

ಅವರು ಮುಖ್ಯಮಂತ್ರಿ ಆಗುವವರೆಗೆ ಮನೆಗೆ ಹೋದವರಿಗೆ ನೀರು ಮಜ್ಜಿಗೆಯ ಆತಿಥ್ಯ ಸಿಗುತ್ತಿತ್ತು. ಅದನ್ನು ಅವರೇ ಕೈಯಾರೆ ತಂದುಕೊಡುತ್ತಿದ್ದರು. ಈಚೆಗೆ ಅವರು ಪ್ರಧಾನಿ ಪಟ್ಟದಿಂದ ಇಳಿದು ಬಂದ ಮೇಲೆ ಮನೆಗೆ ಹೋದವರಿಗೆ ಕಾಫೀ, ಟೀ ವ್ಯವಸ್ಥೆ ಉಂಟು. ಆದರೆ ಅದನ್ನು ಸಿಬ್ಬಂದಿಯವರು ನೋಡಿಕೊಳ್ಳುತ್ತಾರೆ. ಶಾಸಕರಾಗಿ ಬಂದ ಮೊದಲ ದಿನಗಳಲ್ಲಿ ಎಲ್ಲ ಅಯೋಮಯ. ಹೊಳೇನರಸೀಪುರದಲ್ಲಿ ಸಣ್ಣ ಗುತ್ತಿಗೆದಾರರಾಗಿದ್ದ ಅವರಿಗೆ ಬೆಂಗಳೂರಿನಂತೆ, ವಿಧಾನಸಭೆಯ ಕಲಾಪವೂ ಬೆರಗಿಗಿಂತ ಹೆಚ್ಚು ಆತಂಕಕ್ಕೆ ಕಾರಣವಾಗುತ್ತಿತ್ತು. ಆದರೆ ಅವರಲ್ಲಿ ಒಂದು ಛಲ ಇತ್ತು. ತಾವು ಹೇಳಿದ್ದು ಹತ್ತರ ಜೊತೆ ಹನ್ನೊಂದಾಗಬಾರದು ಎಂಬ ಸ್ಪಷ್ಟತೆ ಇತ್ತು. ವಿಧಾನ ಸಭೆಯಲ್ಲಿ ವಿಷಯ ಮಂಡಿಸುವ ಮುಂಚೆ ದೊಡ್ಡ ತಯಾರಿ ಆಗುತ್ತಿತ್ತು. ಹೈಕೋರ್ಟ್ ಎದುರಿನ ಹುಲ್ಲು ಹಾಸು ಅವರ ಅಧ್ಯಯನ ಕೇಂದ್ರ. ನೆತ್ತಿ ಸುಡುವ ಸೂರ್ಯ. ಹೆಗಲ ವಸ್ತ್ರ ಆಗ ತಲೆಗೇರುತ್ತಿತ್ತು. ಮುಂದೆ ಕಡತ, ಮಾಹಿತಿಗಳ ರಾಶಿ. ಹೀಗೆ ಗಂಟೆಗಟ್ಟಲೆ ಮಗ್ನರಾಗಿರುತ್ತಿದ್ದ ಅವರನ್ನು ಕಂಡವರು 'ಪಾಪ ಕೋರ್ಟಿಗೆ ಬಂದ ಯಾವುದೋ ಹಳ್ಳಿಯ ಕಕ್ಷೀದಾರ ಇರಬೇಕು' ಎಂದು ಭಾವಿಸುತ್ತಿದ್ದರು.

ನಡೆಯುವುದು ಶ್ರಮವಲ್ಲ. ಯೋಚಿಸುತ್ತಾ ನಡೆಯತೊಡಗಿದರೆ ಗಂಟೆಗಳ ಲೆಕ್ಕವಿಲ್ಲ. ಕೇವಲ ಐದಾರು ವರ್ಷದ ಹಿಂದೆ ಇದು ನಡೆದಿದ್ದು. ಬೆಂಗಳೂರಿನ ಒಂದು ತುದಿಯ ಪದ್ಮನಾಭ ನಗರದ ಮನೆಯಿಂದ ಇನ್ನೊಂದು ತುದಿಯ ಸದಾಶಿವ ನಗರದ ಕಚೇರಿವರೆಗೆ ನಡೆದುಕೊಂಡೇ ಬಂದಿದ್ದಿದೆ. "ಏನ್ಸಾರ್?" ಎಂದು ಅವರಿಗಾಗಿ ಕಾಯುತ್ತ ಕುಳಿತಿದ್ದವರು ಆತಂಕದಿಂದ ಪ್ರಶ್ನಿಸಿದಾಗ "ಏನೋ ಯೋಚಿಸ್ತಾ ನಡಕೊಂಡು ಬಂದು ಬಿಟ್ಟೆ" ಅಂದರು ಸಲೀಸಾಗಿ. ಆದರೆ ದೇವೇಗೌಡರು ಕಾರ್ ಏರಿ ಕುಳಿತರೆಂದರೆ ಅಲ್ಲಿ ನಿಧಾನ, ಸಾವಧಾನಕ್ಕೆ ಎಡೆ ಇಲ್ಲ. ಸ್ಪೀಡೋಮೀಟರ್ ಮುಳ್ಳು ನೂರು-ನೂರಿಪ್ಪತ್ತರ ಆಚೀಚೆ ಇರಬೇಕು. ಅದಕ್ಕಿಂತ ಕಡಿಮೆ ಆದರೆ, ಡ್ರೈವರ್‌ನ ಪಕ್ಕಕ್ಕೆ ಸರಿಸಿ ತಾವೇ ಕೂಲಾಗಿ ಡ್ರೈವಿಂಗ್ ವೀಲ್ ಹಿಡಿದುಬಿಡುತ್ತಾರೆ. (ಅಂಥ ಸಾಹಸಕ್ಕೆ ಎಸ್‌ಪಿಜಿಯಿಂದಾಗಿ ಈಗ ಅವಕಾಶ ಇಲ್ಲ).


ಶ್ರಮಕ್ಕೆ ಅಂಜುವವರಲ್ಲ. ದಿನಕ್ಕೆ ಹದಿನೆಂಟು ಗಂಟೆ ದುಡಿಯಬಲ್ಲರು. ಅರವತ್ತು ದಾಟಿರುವ ಈಗಲೂ ದಿನಗಟ್ಟಲೆ ಪ್ರವಾಸ, ಭಾಷಣ, ಮೀಟಿಂಗ್ ಎಲ್ಲ ನಿಭಾಯಿಸುವ ಶಕ್ತಿ ಮತ್ತು ಮನಸ್ಸು ಉಳಿಸಿಕೊಂಡೇ ಬಂದಿದ್ದಾರೆ.

ನೀರಾವರಿಯ ಬಗ್ಗೆ ತಿಳಿವಳಿಕೆ, ರೈತರ ಮನಸ್ಸು ಎರಡೂ ಚೆನ್ನಾಗಿ ತಿಳಿದ ಒಬ್ಬರು ಕರ್ನಾಟಕದಲ್ಲಿ ಇರುವುದಾದರೆ, ಅದು ಅವರೊಬ್ಬರೇ. ಇಂಥ ತಿಳಿವಳಿಕೆ ಅವರನ್ನು ರಾಜಕೀಯದಲ್ಲಿ ತುಂಬಾ ದೂರ ನಡೆಸಿ ತಂದಿದೆ. ರಾಜ್ಯದ ಮುಖ್ಯಮಂತ್ರಿ ಮತ್ತು ದೇಶದ ಪ್ರಧಾನಿಯನ್ನಾಗಿ ಮಾಡಿದೆ.

ಅಧಿಕಾರ ಎಂಬುದು ಇವರನ್ನು ಕಟ್ಟಿ ಹಾಕಿತು. ಕಾವೇರಿ ವಿಷಯದಲ್ಲಿ ತಮಿಳುನಾಡನ್ನು ಓಲೈಸಿದರು. ಬಾಗೂರು ನವಿಲೆ ರೈತರ ಇವತ್ತಿನ ದುರಂತಕ್ಕೆ ಪರೋಕ್ಷವಾಗಿ ಕಾರಣರಾದರು. ಕೃಷ್ಣಾ ಮೇಲ್ದಂಡೆ ಕಾಮಗಾರಿಗಳನ್ನು ತುಂಡುಗುತ್ತಿಗೆ ಆಧಾರದ ಮೇಲೆ ರಾತ್ರೋರಾತ್ರಿ ನೀಡಿ ದೊಡ್ಡ ಹಗರಣವನ್ನೇ ಸೃಷ್ಟಿಸಿದರು.

ಇದೆಲ್ಲಕ್ಕಿಂತ ಮಿಗಿಲಾಗಿ, ತಮ್ಮನ್ನು ಪೋಷಿಸಿದ ಜನತೆಯ ಬೆಂಬಲ ಮರೆತು, ದೈವವೇ ಕೈಹಿಡಿದು ತಮ್ಮನ್ನೀಸ್ಥಿತಿಗೆ ತಂದಿದೆ ಎಂದು ನಂಬಿದರು. ಗ್ರಹಬಲ ಒಂದಿದ್ದರೆ ಸಾಕು. ಬೇರೆಲ್ಲ ನಗಣ್ಯ ಎಂಬಂತೆ ವರ್ತಿಸಿದರು.

1989ರಲ್ಲಿ ಹೊಳೇನರಸೀಪುರ ಹಾಗೂ ಸಾತನೂರು ವಿಧಾನಸಭಾ ಕ್ಷೇತ್ರಗಳೆರಡರಲ್ಲೂ ಸೋಲುಂಡು ಅಜ್ಞಾತವಾಸ ಅನುಭವಿಸಿದರು. 1991ರಲ್ಲಿ ಹಾಸನ ಇವರನ್ನು ಎತ್ತಿ ಹಿಡಿಯಿತು. ನರಸಿಂಹರಾವ್ ಸರ್ಕಾರ ಉಳಿಸಲು ನೆರವಾಗಿ ಸೊಸೆಯ ಹೆಸರಲ್ಲಿ ಪೆಟ್ರೋಲ್ ಬಂಕ್ ಗಿಟ್ಟಿಸಿಕೊಂಡರು. 1994ರಲ್ಲಿ ಒಳಗಿನ ಸಿಟ್ಟು ನುಂಗಿಕೊಂಡು ಹೆಗಡೆ, ಬೊಮ್ಮಾಯಿ ಜೊತೆ ಕೈಗೂಡಿಸಿದರು. ಅದೃಷ್ಟ ಅವರ ಕಡೆಗಾಯಿತು. ಜನರ ದೈತ್ಯ ಬೆಂಬಲದಿಂದ ಮುಖ್ಯಮಂತ್ರಿಯಾದರು. ಇವರು ಮುಖ್ಯಮಂತ್ರಿ ಆಗಿ ಆಯ್ಕೆ ಆದ ದಿನ ವಿಧಾನಸೌಧದ ಸುತ್ತ ಚಪ್ಪಲಿಗಳ ರಾಶಿ ಬಿದ್ದಿತ್ತು. ರಾಜಭವನದ ಬಳಿ ಕಾಳಗವೇ ನಡೆಯಿತು. ಹೆಗಡೆ ಚಪ್ಪಲಿ ಏಟು ತಿಂದರು.



ಗುರುವಾಯೂರು ಗುಡಿಯ ಮುಂದೆ ಕಾದು ನಿಂತ ಮಾಜಿ ಪ್ರಧಾನಿ

ಇವತ್ತಿಗೂ ಅವರು ತಮ್ಮ ಆಪ್ತರ ಬಳಿ ಮಾತಾಡುವಾಗ 'ಆ ಗಡ್ಡದವನು' ಎಂದೇ ಹೆಗಡೆ ಬಗ್ಗೆ ಮಾತು ಶುರುಮಾಡುತ್ತಾರೆ. ಹೆಗಡೆ ಬಗ್ಗೆ ಅವರಿಗಿದ್ದ, ಇರುವ ಆಕ್ರೋಶ ಎಂಥದೆಂದು ಅರಿವಾಗಬೇಕಾದರೆ, ಅವರು ಪ್ರಧಾನಿ ಪಟ್ಟಕ್ಕೇರಿದ ದಿನವೇ ಹೆಗಡೆಯನ್ನು ಜನತಾದಳದಿಂದ ಉಚ್ಚಾಟಿಸುವಂತೆ ನೋಡಿಕೊಂಡರು ಎಂಬುದು ನೆನಪಾದರೆ ಸಾಕು.

ಈಗ ಎಲ್ಲ ಬದಲಾಗಿದೆ. ಮತ್ತೊಂದು ಹೋರಾಟಕ್ಕೆ, ಪುನರ್ಜನ್ಮಕ್ಕೆ ದೇವೇಗೌಡ ಕಾತರಿಸುತ್ತಿದ್ದಾರೆ. ಪ್ರಧಾನಿ ಪಟ್ಟದಿಂದ ಇಳಿಯುವ ದಿನ ಲೋಕಸಭೆಯಲ್ಲಿ 'ಧೂಳಿನಿಂದ ಮತ್ತೆ ಎದ್ದು ಬರುತ್ತೇನೆ' ಎಂದು ಗುಡುಗಿದ್ದರು. ಅವರಂದ ಹಾಗೆ ಜನತಾದಳ ಧೂಳಾಗಿದೆ. ಆ ಧೂಳಿನ ನಡುವಿನಿಂದ ದೇವೇಗೌಡ ಎದ್ದು ಬರುತ್ತಾರಾ? ಇದು ಪ್ರಶ್ನೆ.

ಇವತ್ತಿಗೂ ಹೊಳೇನರಸೀಪುರ ವಿಧಾನ ಸಭಾ ಕ್ಷೇತ್ರದ ಪ್ರತಿ ಮನೆಯ ಯಜಮಾನನನ್ನು ಹೆಸರಿಡಿದು ಕರೆದೇ ಮಾತಾಡಿಸಬಲ್ಲ, ಆತನ ಅಂಗಳದಲ್ಲಿ ನಿಂತು, ಅಪ್ಪಿ, ಎಲ್ಲ ಕಹಿ ಮರೆಯುವಂತೆ ಮಾಡಬಲ್ಲ, ಅಗತ್ಯ ಬಿದ್ದಾಗ ಕಣ್ಣೀರಿಟ್ಟು ಮನ ಕರಗಿಸಬಲ್ಲ ದೇವೇಗೌಡ, ರಾಜ್ಯ ರಾಜಕಾರಣದ ಅಪರೂಪದ ಮಾದರಿ.

ರಾಜಕೀಯದಲ್ಲಿ ಇಂಥ ವಿಲಕ್ಷಣಗಳಿಗೆ ಮಾನ್ಯತೆ. ಆದರೆ, ತೀರಾ ಸಾಮಾನ್ಯರಲ್ಲಿ ಸಾಮಾನ್ಯರೆನಿಸುವ ದೇವೇಗೌಡರನ್ನು ಪ್ರಧಾನಿ ಗದ್ದುಗೆಗೆ ಕರೆದು ತಂದ ಜನತಂತ್ರವ್ಯವಸ್ಥೆ ನಾಯಕನಲ್ಲಿ ಬಯಸುವ ಗುಣಗಳು ಬೇರೆಯೇ. ಅದು ದೇವೇಗೌಡರಲ್ಲಿ ಇಲ್ಲ. ಅದೇ ನಮ್ಮ ರಾಜಕೀಯದ ವಿಚಿತ್ರ.

■ ಸುಹಾಸ

ಬೆನಜೀರ್‌ಗೂ ಗಂಡನ ಕಾಟ

ಬೆನಜೀರ್ ಪಾಕಿಸ್ತಾನದ ಮಾಜಿ ಪ್ರಧಾನಿ. ಆಕೆ ಪ್ರಧಾನಿ ಆಗಿದ್ದಾಗಲೇ ಗಂಡ ಜರ್ದಾರಿಯಿಂದ ಪೆಟ್ಟು ತಿಂದಳೆಂಬುದು ಈಗ ಬಯಲಾಗಿದೆ. ಅಂತಾರಾಷ್ಟ್ರೀಯ ಮಟ್ಟದ ಮಾತುಕತೆಗೆಂದು ಅಮೆರಿಕಾಕ್ಕೆ ಬಂದಿದ್ದ ಆಕೆ, ತಾನು ಹೇಳಿದ ಮಾತಿಗೆ ಒಪ್ಪಲಿಲ್ಲ ಎಂದು ಸಿಟ್ಟಿಗೆದ್ದ ಜರ್ದಾರಿ ಕೆನ್ನೆಗೆ ಐದೂ ಬೆರಳು ಮೂಡಿಸಿದ್ದು ಕಣ್ಣಾರೆ ಕಂಡವರಿದ್ದಾರೆ. ಅದೀಗ ಪಶ್ಚಿಮದ ಪತ್ರಿಕೆಗಳಲ್ಲಿ ಬಹಳ ದೊಡ್ಡ ಸುದ್ದಿಯಾಗಿದೆ.

ಪೆಟ್ಟಿನ ಗುರುತು ಕಾಣಬಾರದೆಂದು ಬೆನಜೀರ್ ಕಣ್ಣಿಗೆ ಕಪ್ಪು ಕನ್ನಡಕ ಏರಿಸಿ ಮರುದಿನ ಮಾತುಕತೆಯಲ್ಲಿ ಪಾಲ್ಗೊಂಡಿದ್ದನ್ನು, ಆಕೆಯ ಆತ್ಮೀಯರೇ ಬಹಿರಂಗ ಪಡಿಸಿದ್ದಾರೆ.

ಬೆನಜೀರ್ ಪಾಕಿಸ್ತಾನದ ಪ್ರಧಾನಿ ಅಥವಾ ಬಹುದೊಡ್ಡ ರಾಜಕೀಯ ನಾಯಕಿ ಆದರೇನಾಯಿತು! ಗಂಡನ ಪಾಲಿಗೆ ಹೆಂಡತಿ ಅಷ್ಟೇ. ಅದರಲ್ಲೂ ಸಿಂಧ್ ಪ್ರಾಂತ್ಯದ ಜಮೀನ್ದಾರರಲ್ಲಿ ಇದೆಲ್ಲ ಮಾಮೂಲು ಎಂಬ ವಿವರಣೆ ನೀಡುತ್ತಾರೆ.

ಬೆನಜೀರ್ ಅಧಿಕಾರದಲ್ಲಿದ್ದಾಗ ಪ್ರತಿ ವ್ಯವಹಾರಕ್ಕೆ ತನ್ನ ನಿರ್ದಿಷ್ಟ ದಲ್ಲಾಳಿ ಹಣ ಪಡೆಯುತ್ತಿದ್ದ ಜರ್ದಾರಿಯನ್ನು ಪಾಕಿಸ್ತಾನದಲ್ಲಿ ಮಿಸ್ಟರ್ ಫೈವ್ ಪರ್ಸೆಂಟ್ ಎಂದೇ ಕರೆಯಲಾಗುತ್ತಿತ್ತು. ಹೀಗೆ ಗಳಿಸಿದ ಲಂಚದ ಹಣವನ್ನು ಆತ ತುಂಬಾ ಜತನವಾಗಿ ವಿದೇಶದಲ್ಲಿ ತೊಡಗಿಸುತ್ತಿದ್ದ.



ಮನೆಯಲ್ಲಿ ಹೆಂಡತಿಯನ್ನು ಬಡಿಯುವುದು ಜರ್ದಾರಿಗೆ ತೀರಾ ಮಾಮೂಲು ಸಂಗತಿ. ಸಣ್ಣ ಪುಟ್ಟ ಇರಸುಮುರುಸಾದರೂ ಆತ ಹೆಂಡತಿಯನ್ನು ದಂಡಿಸುತ್ತಿದ್ದ. ನ್ಯೂಯಾರ್ಕ್ ನಗರಕ್ಕೆ ಹೋದಾಗ ಹೋಟೆಲು ಸಿಬ್ಬಂದಿ ಮತ್ತು ಕೆಲವು ಆಪ್ತರ ಎದುರೇ ಆತ ಹೆಂಡತಿ ಬೆನಜೀರಳ ಕೆನ್ನೆ ಕಿತ್ತು ಹೋಗುವಂತೆ ಬಾರಿಸಿದ್ದ.

ಆಕೆಯ ಸಹೋದರ ಮುರ್ತುಜಾ ಭುಟ್ಟೋನ ಕೊಲೆ ಆಪಾದನೆ ಮೇಲೆ ಬಂಧಿತನಾಗಿ, ಈಗ ಸೆರೆಮನೆಯಲ್ಲಿದ್ದಾನೆ ಜರ್ದಾರಿ. ಮುರ್ತುಜಾ ಹತ್ಯೆಗೆ ನಿರ್ಧರಿಸಲೂ ಒಂದು ಘಟನೆ ಕಾರಣವಾಯಿತು. ಒಮ್ಮೆ ಇಸ್ಲಾಮಾಬಾದ್‌ನಿಂದ ಕರಾಚಿಗೆ ವಿಮಾನದಲ್ಲಿ ಹೋಗುತ್ತಿರುವಾಗ ಇಬ್ಬರಿಗೂ ದೊಡ್ಡ ಜಗಳವಾಯಿತು. ಕರಾಚಿಯತ್ತ ವಿಮಾನ ಹಾರುತ್ತಾ ಇದ್ದಾಗಲೇ, ಫಸ್ಟ್‌ಕ್ಲಾಸ್ ವಿಭಾಗದಲ್ಲಿ ಜಗಳ ಜೋರಾಯಿತು. ಇಬ್ಬರ ಅಂಗರಕ್ಷಕರು ಎಷ್ಟೇ ಪ್ರಯತ್ನಿಸಿದರೂ, ಮುರ್ತುಜಾ ಜರ್ದಾರಿಯ ಅರ್ಧ ಮೀಸೆಯನ್ನು ಬೋಳಿಸಿ ಹಾಕಿಬಿಟ್ಟ. ಸಿಂಧ್ ಪ್ರಾಂತ್ಯದಲ್ಲಿ ಇಂಥದ್ದನ್ನು ಭಾರೀ ಅಪಮಾನದ ಸಂಗತಿ ಎಂದೇ ಭಾವಿಸಲಾಗುತ್ತದೆ. ಮೀಸೆ ತೆಗೆದು ಹಾಕಿದ ಮುರ್ತುಜಾ ಬದುಕಿರಲೇಬಾರದೆಂದು ಜರ್ದಾರಿ ಫರ್ಮಾನು ಹೊರಡಿಸಲು ಇದೇ ಕಾರಣ ಎನ್ನಲಾಗುತ್ತದೆ.

ಇಂಥ ತಿಕ್ಕಾಟ, ಗಂಡ ಹೆಂಡಿರ ಬಡಿದಾಟ ಕೇವಲ ಬೆನಜೀರ್‌ಗೇ ಸೀಮಿತವಲ್ಲ. ಆಕೆಯ ತಂದೆ ಝುಲ್ಫಿಕರ್‌ಅಲಿಭುಟ್ಟೋ ಕೂಡ ಇಂಥದ್ದೇ ಅಮಾನುಷ ಬರ್ಬರತೆಗೆ ಹೆಸರಾಗಿದ್ದರು. ಬೆನಜೀರ್ ತಾಯಿ ನಸರತ್ ಭುಟ್ಟೋಗೆ ಗಂಡನಿಂದ ಪೆಟ್ಟು ತಿನ್ನುವುದು ಮಾಮೂಲಾಗಿತ್ತು.

ಒಮ್ಮೆ ನಸ್ರತ್ ಗಂಡನ ಪ್ರಣಯ ವಿಲಾಸಗಳಿಗೆ ತಕರಾರು ಮಾಡಿ ಜಗಳ ತೆಗೆದಳೆಂದು, ಓಡುತ್ತಿದ್ದ ಟ್ಯಾಕ್ಸಿಯಿಂದಲೇ ಆಕೆಯನ್ನು ಗಂಡ ತಳ್ಳಿಬಿಟ್ಟಿದ್ದ. ಇಷ್ಟಾದ್ರೂ ಆಕೆ ಗಟ್ಟಿ ಹೆಂಗಸು. ಏನೇ ಆದರೂ, ತನ್ನ ಗಂಡನ ಅನ್ಯ ಹೆಂಗಸರ ಜೊತೆಗಿನ ಪ್ರಣಯ ಮಾತ್ರ ಸಹಿಸುತ್ತಾ ಇರಲಿಲ್ಲ.

ಕರಾಚಿಯ ಪ್ರತಿಷ್ಠಿತ ಹೋಟೆಲೊಂದರ ಕೋಣೆಗೆ ಗಂಡನನ್ನು ಹುಡುಕಿ ಬಂದ ನಸ್ರತ್ ಎಷ್ಟು ಗಲಾಟೆ ಎಬ್ಬಿಸಿದ್ದಳೆಂದರೆ, ಇಡೀ ಹೋಟೆಲಿನ ಸಿಬ್ಬಂದಿ, ಅಲ್ಲಿಗೆ ಬಂದಿದ್ದ ಜನ ಕಂಗಾಲಾಗಿ ನಿಂತುಬಿಟ್ಟರು. ತನ್ನ ಗಂಡ ಇನ್ಯಾರದೋ ಹೆಂಗಸನ್ನು ಕರೆದು ತಂದು ಸುಖ ಸೂರೆಗೊಳ್ಳುತ್ತಿದ್ದಾನೆ ಎಂಬ ಅನುಮಾನವೇ ಇದಕ್ಕೆ ಕಾರಣವಾಗಿತ್ತು. ಈ ಗಲಾಟೆ ನಡೆಯುತ್ತಿರುವಾಗ ಝುಲ್ಫಿಕರ್‌ಅಲಿ ಭುಟ್ಟೋ ಕಿಟಕಿಯೊಂದರಿಂದ ಹಾರಿ, ಹೋಟೆಲಿನ ರಹಸ್ಯ ಮಾರ್ಗದ ಮೂಲಕ ಕಾಣೆಯಾಗಿದ್ದ ಎಂದೂ ಪಶ್ಚಿಮದ ಪತ್ರಿಕೆಗಳು ವರದಿ ಮಾಡಿವೆ. ■

ವರದಿಯಾಗದ ಚುನಾವಣಾ ಸುದ್ದಿಗಳು



ಐದು ವರ್ಷಕ್ಕೊಮ್ಮೆ ಬರುತ್ತಿದ್ದ ಚುನಾವಣೆಗಳು ಈಗ ಪ್ರತಿ ವರ್ಷವೂ ಬರುತ್ತಿವೆ. ಚುನಾವಣೆಗಳನ್ನು ಗೆಲ್ಲಬೇಕೆಂಬ ಹಿರಿಯಾಸೆಯಿಂದ ಮತದಾರರ ಮನ ಒಲಿಸಲು ನಾನಾ ಸರ್ಕಸ್ ಮಾಡುವ ಪುಢಾರಿಗಳು, ತೆರೆಮರೆಯಲ್ಲಿ ನಡೆಸುವ ಹುನ್ನಾರ ಬಹಿರಂಗ ಸತ್ಯ. ಅವರನ್ನು ಓಲೈಸುವ ಅಧಿಕಾರಿಗಳದ್ದೇ ಇನ್ನೊಂದು ಕತೆ. ನೀವು ಹಿಂದೆಂದೂ, ಎಲ್ಲಿಯೂ ಓದಿರದಿದ್ದ ಅಪರೂಪದ ಚುನಾವಣಾ ಚಿತ್ರಗಳು ಇಲ್ಲಿವೆ.

ಚುನಾವಣೆ ಸಮೀಪಿಸುತ್ತಿದ್ದಂತೆಯೇ ಸಂಪಾದಕರು ತಮ್ಮ ಪತ್ರಿಕೆಯ ಹಿರಿಯ ವರದಿಗಾರರನ್ನು ಸಮೀಕ್ಷೆಗೆ ಊರಿಂದೂರಿಗೆ ಛೂ ಬಿಡುತ್ತಲೇ ಇರುತ್ತಾರೆ. ಹಿಂದಿನ ಚುನಾವಣೆಯ ಶೇಕಡವಾರು ಮತದಾನ, ಜಾತಿ-ಮತ ಲೆಕ್ಕಾಚಾರ ಮುಂತಾದ ಅಂಕಿ-ಅಂಶಗಳೊಂದಿಗೆ ವರದಿಗಾರರೂ ಊರಿಂದೂರಿಗೆ ಅಲೆದು, ವಿಚಾರಿಸಬಹುದಾದ ಮಂದಿ, ಮಾತಾಡಿಸಬಾರದ ಜನ-ಹೀಗೆ ಕಂಡಕಂಡವರನ್ನು ಹರಟೆಗೆ ಎಳೆದು ವರದಿ ತಯಾರುಮಾಡುತ್ತಾರೆ. ಆದರೆ ವರದಿ ಮಾಡಲಾಗದಂತಹ, ಎಲ್ಲ ವಾದ, ತರ್ಕವನ್ನು ತಲೆಕೆಳಗು ಮಾಡುವಂತಹ ಘಟನೆಗಳಿಗೆ ಪ್ರತ್ಯಕ್ಷವಾಗಿ ವೀಕ್ಷಕರಾಗಿದ್ದರೂ ಆ ಸಂಗತಿಗಳನ್ನು ಪ್ರಕಟಿಸುವುದರಲ್ಲಿ ವಿಫಲರಾಗುತ್ತಾರೆ. ಅದರಲ್ಲಿ ಒಂದು ಬೋಗಸ್ ಮತದಾನ. ಅದಕ್ಕೆ ಪೂರಕವಾದ ಕ್ರಿಯೆಗಳು. ಇನ್ನೊಂದು; ಮತಗಳ ಎಣಿಕೆ ಸಮಯದಲ್ಲಿ ಅಧಿಕಾರಿಗಳು ಜಾತಿ, ಹಣದ ಮರ್ಜಿ ಅಥವಾ ಯಾವುದೋ ಕಾರಣಗಳಿಗೆ ವರ್ತಿಸುವ ರೀತಿ. ಅವುಗಳ ಸ್ಯಾಂಪಲ್ ಇಲ್ಲಿ ಕೊಡಲಾಗಿದೆ. 1991ರ ಲೋಕಸಭಾ ಚುನಾವಣೆಯ ದಿನ ನಾನು ಹಾಸನದಲ್ಲಿದ್ದೆ. ಎಸ್‌ಜೆಪಿ ಅಭ್ಯರ್ಥಿ ಎಚ್.ಡಿ.ದೇವೇಗೌಡರು ಕಾಂಗ್ರೆಸ್ ಅಭ್ಯರ್ಥಿ ಎಚ್.ಸಿ.ಶ್ರೀಕಂಠಯ್ಯನವರ ವಿರುದ್ಧ ಅಕ್ಷರಶಃ ಸೆಣೆಸಾಡುತ್ತಿದ್ದರು. ಹಾಸನದ ಜನ ಆಡಿಕೊಳ್ಳುವಂತೆ ಅವರಿಬ್ಬರ ಮಧ್ಯೆ ಗುಪ್ತ ಹೊಂದಾಣಿಕೆ ಇಲ್ಲದ ಕಾಲ. ಸುಮಾರು ಒಂದು ಗಂಟೆಯವೇಳೆಗೆ, ಕಾರಿನಿಂದ ಅವಸರ ಅವಸರದಲ್ಲಿ ಇಳಿದ ಹುಡುಗರು ಗೌಡರ ಕಾರ್ಯದರ್ಶಿ ವೈಎಸ್‌ವಿ ದತ್ತರಿಗೆ ಒಂದು ಗಾಭರಿ ಸುದ್ದಿ ತಿಳಿಸಿದರು. ಹಿರಿಸಾವೆ ಹತ್ತಿರದ ಮತಗಟ್ಟೆಯೊಂದರಲ್ಲಿ ಅಧಿಕಾರಿಯೊಬ್ಬ ಅಚ್ಚುಕಟ್ಟಾಗಿ ಮತಗಟ್ಟೆಯ ಬಾಗಿಲನ್ನು ಒಳಗಿಂದ ಜಡಿದು, ಕೇಳಿದವರಿಗೆ ಊಟಕ್ಕೋಸ್ಕರ ವಿರಾಮ ಎಂಬ ಸಬೂಬು ಹೇಳಿ, ಸರಾಗವಾಗಿ ಮತದಾನದ ಪತ್ರದ ಮೇಲೆ ಠಸ್ಸೆ ಹೊಡೆಯುತ್ತ, ಅದಕ್ಕೆ ಸಂಬಂಧಪಟ್ಟ ಹೆಸರುಗಳನ್ನು ತಾನೇ ಬರೆಯುತ್ತಿದ್ದಾನೆಂದರು. ದತ್ತ ಕೂಡ ಅವಸರ ಅವಸರವಾಗಿ ಆ ಮತಗಟ್ಟೆಗೆ ಬಂದಾಗ, ಗೌಡರ ಹಿಂಬಾಲಕರು ಹೇಳಿದಂತೆಯೇ ಇತ್ತು ಪರಿಸ್ಥಿತಿ. ಮತದಾನದ ದಿನ ಊಟಕ್ಕೆ ಎಂದು ಬಾಗಿಲು ಹಾಕುವಂತಿಲ್ಲ; ಬೆಳಿಗ್ಗೆ 7ಕ್ಕೋ, ಎಂಟಕ್ಕೋ ಆರಂಭವಾದರೆ ಸಂಜೆ 5 ಗಂಟೆಯವರೆಗೆ ಅವಿರತವಾಗಿ ಮತದಾನಕ್ಕೆ ಅವಕಾಶವಿದೆ. ಆದರೆ ಈ ಮತಗಟ್ಟೆ ಬಾಗಿಲು ಹಾಕಿತ್ತು. ಪೋಲೀಸರು ಕಳ್ಳನ ಮನೆ ಬಾಗಿಲು ತಟ್ಟುವಂತೆ ಈ ಯುವಕರು ಮತಗಟ್ಟೆಯ

ಬಾಗಿಲು ತಟ್ಟಿದ್ದರು. ಪುರುಸೊತ್ತಾಗಿ ಅಧಿಕಾರಿ ಬಾಗಿಲು ತೆರೆದ. ಅಷ್ಟೂ ಜನರು ಏನಿದು ಅನ್ಯಾಯ, ಹಾಗೆ, ಹೀಗೆ, ದೂರು ಕೊಡುತ್ತೇವೆ ಎಂದೆಲ್ಲ ಒಮ್ಮೆಗೇ ಮುಗಿಬಿದ್ದರು. ಕಣ್ಣರಳಿಸಿ ಗಾಭರಿಯಾಗಿದ್ದ ಅಧಿಕಾರಿ ತಕ್ಷಣವೇ ನಿರಾಳವಾಗಿ ಬಿಟ್ಟ. ''ಇಷ್ಟೇನಾ? ನಾನು ಏನೋ ಆಗಿ ಹೋಯಿತು ಎಂದಿದ್ದೆ. ತಗೊಳ್ಳಿ ಇನ್ನೂ ಮುನ್ನೂರು ವೋಟುಗಳಿವೆ. ನೀವೂ ಹೊಡಿಯಿರಿ'' ಎಂದು ಬ್ಯಾಲಟ್ ಪೇಪರ್, ಮತದಾರರ ಪಟ್ಟಿ, ರಬ್ಬರ್‌ಸ್ಟಾಂಪ್, ಪ್ಯಾಡ್ ಎಲ್ಲ ಮುಂದಿಟ್ಟ. ಈ ವೇಳೆಗೆ ಆ ಅಧಿಕಾರಿ ಶ್ರೀಕಂಠಯ್ಯನ ಪರ ಅದೆಷ್ಟು ಚಚ್ಚಿದ್ದನೋ? ವಿಧಿ ಇಲ್ಲದೆ ದೇವೇಗೌಡರ ಹಿಂಬಾಲಕರೂ ತಮ್ಮ ನಾಯಕನ ಪರ ಒತ್ತಲು ಆರಂಭಿಸಿದರು. ''ಹುಷಾರಾಗಿರಿ, ಮತದಾನ ಶೇಕಡ 95 ದಾಟದಂತೆ ನೋಡಿಕೊಳ್ಳಿ, ದಾಟಿದರೆ ಮರುಮತದಾನವಾದೀತು'' ಎಂದು ಅಧಿಕಾರಿ ಸೂಚನೆಯನ್ನೂ ಕೊಟ್ಟ.

ಆದರೂ ಸಾಲದಾಗಿತ್ತು. ಮತ ಎಣಿಕೆ ದಿನ ಎಲ್ಲರಿಗೂ ರೇಜಿಗೆ, ಅಸಹನೆ. ಎಣಿಕೆಯಲ್ಲೂ ಹೆಚ್ಚು ಕಮ್ಮಿ ಆಗಿತ್ತು. ಬೆರಳೆಣಿಕೆಯಷ್ಟು ಮತಗಳಿಂದ ಶ್ರೀಕಂಠಯ್ಯನವರು ಜಯಶೀಲರಾದರೆಂದು ಘೋಷಿಸಲಾಯಿತು. ಯುಎನ್ಐ ವಾರ್ತಾ ಏಜೆನ್ಸಿ ಸುದ್ದಿಯನ್ನು ಫ್ಲಾಷ್ ಮಾಡಿತ್ತು. ಕಡ್ಡಿ ಗೀರಿದರೆ ಉರಿ ಹತ್ತಿಹೋಗುವಷ್ಟು ವಾತಾವರಣ ಉದ್ವಿಗ್ನವಾಗಿತ್ತು. ಆಗ ತಮ್ಮ ಪಕ್ಷದವರೇ ಆಗಿದ್ದ ಚಂದ್ರಶೇಖರ್ ಪ್ರಧಾನಿ. ದೇವೇಗೌಡರು ನೇರ ಟೆಲಿಫೋನ್‌ನಲ್ಲಿ ಮಾತಾಡಿ ಪರಿಸ್ಥಿತಿಯನ್ನು ವಿವರಿಸಿದರು. ಚಂದ್ರಶೇಖರ್ ನೇರವಾಗಿ ಅಧಿಕಾರಿ ಬಳಿ ಮಾತಾಡಿ ಮರು ಎಣಿಕೆ ಕೂಲಂಕಶವಾಗಿ ಮಾಡಬೇಕೆಂದರು. ಬೆರಳೆಣಿಕೆ ವೋಟುಗಳಲ್ಲಿ ದೇವೇಗೌಡರು ಗೆದ್ದು, ಪ್ರಯಾಸದ ನಿಟ್ಟುಸಿರುಬಿಡಬೇಕಾಯಿತು.

ಮೊದಲಬಾರಿ ಎಣಿಸಿದಾಗ ಶ್ರೀಕಂಠಯ್ಯನವರಿಗೆ ಹೆಚ್ಚು ಮತ ಬಂದಿದ್ದು, ನಂತರ ಮರುಎಣಿಕೆಯಲ್ಲಿ ದೇವೇಗೌಡರಿಗೆ ಹೆಚ್ಚು ಮತ ಹೇಗೆ ಬಂತು?


ನಾನಾ ರೀತಿಯ ಚಾಕಚಕ್ಯತೆ, ಬೇಜವಾಬ್ದಾರಿ ಕೆಲಸಗಳು ಆಗುತ್ತವೆ. ಆಶ್ಚರ್ಯ ಉಂಟಾದದ್ದು ನಾನು ಬೆಂಗಳೂರಿನ ಸರ್ಕಾರಿ ಕಲೆ ಮತ್ತು ವಿಜ್ಞಾನ ಕಾಲೇಜಿನ ಆವರಣದಲ್ಲಿ ನಡೆದ ಒಂದು ಮರುಚುನಾವಣೆ ಮತ ಎಣಿಕೆ ಸಮಯದಲ್ಲಿ ಹಾಜರಾದಾಗ.

ಯಲಹಂಕ ವಿಧಾನಸಭೆ ಮರುಚುನಾವಣೆಯಲ್ಲಿ ಬಿಜೆಪಿಯಿಂದ ಶಿವಲಿಂಗಯ್ಯ ಮತ್ತು ಕಾಂಗ್ರೆಸ್ಸಿನಿಂದ ದಿವಂಗತ ಬಸವಲಿಂಗಯ್ಯನವರ ಮಗ ಪ್ರಸನ್ನಕುಮಾರ್ ಹಣಾಹಣಿಯಲ್ಲಿದ್ದರು. ಆಗಿನ್ನೂ ಉತ್ತರಹಳ್ಳಿ ಕ್ಷೇತ್ರ ಆಗಿರಲಿಲ್ಲ. ಹಾಗಾಗಿ ರಾಜ್ಯದಲ್ಲೇ ಅತಿ ಹೆಚ್ಚು ವೋಟುಗಳಿದ್ದ ವಿಧಾನಸಭೆ ಕ್ಷೇತ್ರವಿದು. ಮರು ಚುನಾವಣೆಯಾದ್ದರಿಂದ ಎಲ್ಲರ ಗಮನ ಇದರ ಮೇಲಿತ್ತು.

ಒಂದು ದೊಡ್ಡ ಬಾವಿಯಂತಿದ್ದ ಕಟ್ಟೆಯೊಂದರಲ್ಲಿ ಎಲ್ಲ ಮತ ಪತ್ರಗಳನ್ನು ಸುರಿದು ಒಂದೊಂದೇ ಮತಪತ್ರವನ್ನು ಅಭ್ಯರ್ಥಿಯ ಏಜೆಂಟಿಗೆ ತೋರಿಸುತ್ತ ಪಕ್ಷಾನುಸಾರವಾಗಿ 25ರ ಕಂತಿಗೆ ರಬ್ಬರ್ ಬ್ಯಾಂಡ್ ಹಾಕಿ, ಮತ್ತೊಂದು ಮಿನಿ ಬಾವಿಗೆ ಎಸೆಯುತ್ತಿದ್ದರು. ಕಾಂಗ್ರೆಸ್ ಪರವಿದ್ದ ಜೂನಿಯರ್ ಅಧಿಕಾರಿಯೊಬ್ಬರು 22-23 ಬಿಜೆಪಿ ಮತಗಳಿಗೆ ಮೇಲೆ ಕಾಣಿಸುವಂತೆ 2-3 ಕಾಂಗ್ರೆಸ್ ಮತಪತ್ರಗಳನ್ನೇ ಜೋಡಿಸಿ, 25ರ ಕಟ್ಟೊಂದನ್ನು ಮಾಡಿ ಮತ್ತೆ ಅದನ್ನು ಎಲ್ಲರಿಗೂ ಕಾಣಿಸುವಂತೆ ತೋರಿಸಿ, ಕೇಳಿಸುವಂತೆ ಹೇಳಿ ಕಾಂಗ್ರೆಸ್ ಬಾವಿಗೆ ಎಸೆಯುತ್ತಿದ್ದ. ಬೆಳಿಗ್ಗೆ ಹತ್ತರಿಂದ ಸಂಜೆ ಐದರವರೆಗೆ ಮೇಲೆ ಕೆಳಗೆ ಕಣ್ಣಾಡಿಸುತ್ತಿದ್ದ ಬಿಜೆಪಿ ಏಜೆಂಟುಗಳೂ ಸುಸ್ತಾಗಿ 'ಎಸ್ ಎಸ್' ಎನ್ನುತ್ತಿದ್ದರು.

ಅಲ್ಲೇ ನಿಂತಿದ್ದ ನಾನು ಬಿಜೆಪಿ ಏಜೆಂಟೊಬ್ಬನಿಗೆ, ನಾನು ಆಗತಾನೆ ಮನೆಯಲ್ಲಿ ನಿದ್ರಿಸಿ, ಫ್ರೆಷ್ ಆಗಿ ಬಂದಿದ್ದರಿಂದ ಕಣ್ಣಿಗೆ ಬಿದ್ದ ಈ ಘಟನೆಯನ್ನು ತಿಳಿಸಿದೆ. ಆ ಏಜೆಂಟ್ ಎಲ್ಲಿ, ಎಲ್ಲಿ ಎಂದ. ಅಲ್ಲೇ ನೋಡಿ ಎಂದು ಈ ಬಾವಿಯಲ್ಲಿರುವ ಈಗತಾನೆ ಎಸೆದ 25ರ ಕಟ್ಟನ್ನು ತೋರಿಸಿದೆ. ಆ ಏಜೆಂಟ್ ಅಧಿಕಾರಿಗೆ ಆ ಕಟ್ಟನ್ನು ತೆಗೆಯಲು ಹೇಳಿದ.

ಸತ್ತವರ ಪಟ್ಟಿಯಲ್ಲಿ ಬದುಕಿದವರ ಹೆಸರು
- ಸುದ್ದಿ



ಚುನಾವಣಾ ಮಾಂತ್ರಿಕರ ಕೆಲಸವಿರಬೇಕು

ನರಿಯಂತಿದ್ದ ಆ ಅಧಿಕಾರಿ, ''ಯಾವುದು ಸಾರ್? ಇದಾ.... ಇದಾ?'' ಎನ್ನುತ್ತ ನಾವು ತೋರಿಸಿದ್ದ ಕಂತೆ ಬಿಟ್ಟು ಮಿಕ್ಕ ಮತಪತ್ರದ ಕಂತೆಯ ಹಿಂಭಾಗದಲ್ಲಿ 'ಕಾಂಗ್ರೆಸ್' ಎಂದು ಬರೆದಿದ್ದ ಕಂತೆಯನ್ನು ತೆಗೆದೂ, ತೆಗೆದೂ ತೋರಿಸುತ್ತಿದ್ದ.

ನಮಗೆ ಬೇಕಾದ ಕಂತೆ ಆ ಮತಪತ್ರಗಳ ಸಾಗರದಲ್ಲಿ ಹೂತು ಹೋಗುತ್ತಿರುವಂತೆ ಅರ್ಧ ಅರ್ಧ ಮಾಯವಾಗುತ್ತಿತ್ತು. ಕಡೆಗೂ ಗಟ್ಟಿಯಾಗಿ, ಅಸಹನೆಯಿಂದ, ''ಅದಲ್ಲರೀ, ಇದು, ಇದು'' ಎಂದು ಬಗ್ಗಿ ಆ ಕಂತೆಯನ್ನು ಏಜೆಂಟ್‌ಗೆ ನಾನು ತೆಗೆದುಕೊಟ್ಟೆ. ಒಬ್ಬ ಪತ್ರಕರ್ತನಿಗೆ ನ್ಯಾಯವಾಗಿ ಅಧಿಕಾರವಿಲ್ಲದ ಕೆಲಸವದು.

ಆದರೆ ಆ ಕಂತೆಯಲ್ಲೂ ಮೇಲಿನ ಎರಡು ಮತಪತ್ರಗಳು ಕಾಂಗ್ರೆಸ್ ಪರವಾದ್ದರಿಂದ ನಮ್ಮ ವಿರುದ್ಧ ವ್ಯಂಗ್ಯವಾಗಿ ನಗುತ್ತ ತೋರಿಸಿದ. ಆದರೆ ಮೂರನೇ ಮತಪತ್ರದಿಂದ ಮಿಕ್ಕ 22 ಮತಗಳು ಬಿಜೆಪಿ ಪರವಿತ್ತು. ಚ್ಚು, ಚ್ಚು ಎಂದು ಲೊಚಗುಟ್ಟಿ ಎರಡು ಬಿಜೆಪಿ ಮತಗಳನ್ನು ಸೇರಿಸಿ, 25ರ ಕಂತನ್ನು ಮತ್ತೆ ಕಾಂಗ್ರೆಸ್ ಬಾವಿಗೇ ಎಸೆದ. ನಾವೆಲ್ಲರೂ ಜೋರಾಗಿ ನಕ್ಕಾಗ, 'ಸ್ಸಾರಿ' ಎಂದು ಆ ಮತ ಕಂತೆಯನ್ನು ಬಿಜೆಪಿ ಬಾವಿಗೆ ಎಸೆದ. ಇದೇ ರೀತಿ ನಡೆಯುತ್ತಲೇ ಇತ್ತು.

ಲಕ್ಷಾಂತರ ಮತಗಳಿಂದ ಒಬ್ಬ ಅಭ್ಯರ್ಥಿ ಗೆದ್ದಾಗ, ಈ ರೀತಿಯ ಈ ನೂರಿನ್ನೂರು 'ಪಕ್ಷಾಂತರಿ' ಮತಗಳನ್ನು ಗಂಭೀರವಾಗಿ ಪರಿಗಣಿಸಬೇಕಾಗಿಲ್ಲ. ಆದರೆ ರಾತ್ರಿ ಹನ್ನೊಂದರ ವೇಳೆಗೆ ಫಜೀತಿಯಾಗಿ ಗೆದ್ದ ಅಭ್ಯರ್ಥಿಯನ್ನು ನಿರ್ಧರಿಸಲಾಗದ ಪರಿಸ್ಥಿತಿ ಇದೇ ನೂರಿನ್ನೂರು ವೋಟುಗಳ ಅಂತರದಿಂದಲೇ ಆದದ್ದು. ಡಿಸಿ, ಸ್ಪೆಷಲ್ ಡಿಸಿ, ಇತರ ಅಧಿಕಾರಿಗಳ ದಂಡು. ಒಂದು ಕಡೆ ಪತ್ರಕರ್ತರು. ಇಡೀ ಆವರಣದಲ್ಲಿದ್ದ ಒಂದೇ ಒಂದು ಕ್ಯಾಲ್‌ಕ್ಯುಲೇಟರ್‌ಗೆ ಒದ್ದಾಡುತ್ತಿದ್ದ ನೂರು ಮಂದಿ ಸಿಬ್ಬಂದಿ. ಗಮ್ಮೆಂದು ನಾರುತ್ತಿದ್ದ ಪ್ರಸನ್ನ ಕುಮಾರ್‌ರ ಹಿಂಬಾಲಕರು. ಮೊಸರನ್ನ, ಚಿತ್ರಾನ್ನ ತಿಂದು ಬಳಲಿ, ಸೋತಿದ್ದರಿಂದ ಇನ್ನಷ್ಟು ಬಳಲಿದ್ದ ಬಿಜೆಪಿ ಹಿಂಬಾಲಕರೆಲ್ಲರೂ ಅಪೂರ್ವ ವಾದ ನಿರ್ಧಾರಕ್ಕೆ ಕಾಯುತ್ತಿದ್ದರು. ಇದರ ಮಧ್ಯೆ ಶಿವಲಿಂಗಯ್ಯನವರು, ಕೋರ್ಟಿನಲ್ಲಿ ಮಾತನಾಡುವಂತೆ, ಯುವರ್ ಆನರ್ ಎನ್ನುತ್ತ ಒಂದು ಕ್ಲಾರಿಫಿಕೇಷನ್ ಕೇಳುತ್ತಿದ್ದರು. ''ಕೆಲವು ಮತಪತ್ರಗಳಲ್ಲಿ ಬಿಜೆಪಿ, ಕಾಂಗ್ರೆಸ್ ಅಭ್ಯರ್ಥಿ ಇಬ್ಬರಿಗೂ ಒತ್ತಿದ್ದರೆ, ಅದನ್ನು ಏನೆಂದು ಪರಿಗಣಿಸಬೇಕು?'' ಎಂದರು. ನೇರವಾಗಿ ಅವು ಕುಲಗೆಟ್ಟ ಮತಗಳು ಎಂದು ಹೇಳಬಹುದಿತ್ತು. ಅದರ ಬದಲಾಗಿ, ಡಿಸಿ ಅವರು ''ಸಾಹೇಬರಿಗೆ ನಮ್ಮ ಮ್ಯಾನುಯಲ್ ತೋರಿಸಪ್ಪಾ'' ಎಂದು ಆದೇಶವಿತ್ತರು. ಪ್ರಾಥಮಿಕ ಶಾಲೆಯ, ''ಇವಳು ಕಮಲ, ಅವನು ಬಸವ'' ಮಟ್ಟದ ಪಠ್ಯಪುಸ್ತಕದಂತಹ ಒಂದು ಕಿರುಹೊತ್ತಿಗೆ ಯನ್ನು ಸಿಬ್ಬಂದಿ ತರಲು ಸುಮಾರು ವೇಳೆಯಾಗಿತ್ತು. ಇವೆಲ್ಲದರ ಅವಶ್ಯಕತೆ ಇಲ್ಲ ಎಂಬಂತೆ ಡಿಸಿ ಸಾಹೇಬರೇ ಮತ್ತೆ ಅಂತಹ ಮತಗಳು ಕುಲಗೆಟ್ಟವು ಎಂದರು. ಶಿವಲಿಂಗಯ್ಯನವರು, ''ಅಯ್ಯಯ್ಯೋ, ಯುವರ್ ಆನರ್, ದಯವಿಟ್ಟು ನನ್ನ ಕಂಪ್ಲೇಂಟ್ ದಾಖಲಿಸಿಕೊಳ್ಳಿ, ಈ ಕಿರಿಯ ಅಧಿಕಾರಿ (ಎರಡು ಕಾಂಗ್ರೆಸ್ ಮತಗಳನ್ನು 23 ಬಿಜೆಪಿ ಮತಕ್ಕೆ ಸೇರಿಸಿ, ಕಾಂಗ್ರೆಸ್ಸಿಗೆ 25ರ ಕಂತೆಯನ್ನು ಬಿಸಾಡಿದವನೇ!) ನನಗೆ, ಪ್ರಸನ್ನಕುಮಾರ್ ಇಬ್ಬರಿಗೂ ಒತ್ತಿದ ಮತಗಳು ಬಂದಾಗ, ಒಂದು ಇಂಚುಪಟ್ಟಿಯಿಂದ ಅಳೆದು ಯಾವ ರಬ್ಬರ್ ಸ್ಟಾಂಪ್ ಗುರುತು ಅಭ್ಯರ್ಥಿಯ ಹೆಸರಿಗೆ ಹತ್ತಿರವಿರುತ್ತೋ ಆ ಪಕ್ಷಕ್ಕೆ ಮತ ಎಂದು ಪರಿಗಣಿಸುತ್ತಿದ್ದಾನೆ'' ಎಂದರು. ಆ ರೀತಿ ಎಷ್ಟಾದವು ಎಂದು ಡಿಸಿ ಕೇಳಿದರು. ಸುಮಾರು ಇಪ್ಪತ್ತು, ಮುವತ್ತು ಎಂದರು ಶಿವಲಿಂಗಯ್ಯ. ಆ ಕಿರಿಯ ಅಧಿಕಾರಿ, ಶಿವಲಿಂಗಯ್ಯನವರ ಕಡೆ ಕೈ ತೋರುತ್ತ, ''ಸಾಹೇಬರಿಗೆ ವಿಷಯವೇ ತಿಳಿಯಲ್ಲ, ಏನೇನೋ ದೂರು ಕೊಡುತ್ತಾರೆ'' ಎನ್ನುತ್ತಿದ್ದ. ಡಿಸಿ ಯಾಂತ್ರಿಕವಾಗಿ ''ದೂರನ್ನು ಬರಹದಲ್ಲಿ ಕೊಡಿ'' ಎಂದರು.

ಕಡೆಗೆ ಈ ಚುನಾವಣೆಯಲ್ಲಿ ಅಂತರ ಬಂದಿದ್ದು 230 ವೋಟುಗಳು ಮಾತ್ರ. ಬೆಂಗಳೂರು ಉತ್ತರದಲ್ಲೊಮ್ಮೆ ಜಾಫರ್ ಷರೀಫ್ ಲೋಕಸಭೆಗೆ ಸ್ಪರ್ಧಿಸಿದ್ದಾಗ, ಅವರ ಪರವಿದ್ದ ವೋಟುಗಳ ನಕಲಿ ಬ್ಯಾಲೆಟ್‌ಬಾಕ್ಸ್‌ಗಳು 'ದುರದೃಷ್ಟ' ವಶಾತ್ ಅಸಲಿ ಬಾಕ್ಸ್‌ಗಳೊಂದಿಗೆ ಸೇರಿ ಬಿಟ್ಟು, ಬೆಂಗಳೂರು ಉತ್ತರ ಕ್ಷೇತ್ರದ ಮತದಾರರ ಸಂಖ್ಯೆ 1.5 ಲಕ್ಷದಷ್ಟು ಹೆಚ್ಚಾಗಿಬಿಟ್ಟಿತ್ತು. ಆದರೂ ರಿಟರ್ನಿಂಗ್ ಆಫೀಸರುಗಳು ಷರೀಫ್ ಸಾಹೇಬರು ಈ 1.5 ಲಕ್ಷ ಮತವಿಲ್ಲದಿದ್ದರೂ ಗೆಲ್ಲುತ್ತಿದ್ದರೆಂದು ಹೇಳಿ ಷರೀಫರನ್ನು ಗೆದ್ದ ಅಭ್ಯರ್ಥಿ ಎಂದೇ ಘೋಷಿಸಿ, ಮಾರನೇದಿನ ಪ್ರೆಸ್‌ಕಾನಫರೆನ್ಸ್‌ನಲ್ಲಿ ಇದು 'ಒಂದು arithmetical error' ಎಂದು ಸಬೂಬು ಕೊಟ್ಟು ಬಚಾವಾದರು.

ಹಾಸನದಲ್ಲಿ ನಡೆದಂತೆಯೇ ಬೆಂಗಳೂರು ಉತ್ತರಹಳ್ಳಿ ಕ್ಷೇತ್ರದಲ್ಲಿ ಗಲಭೆ ಆದಾಗ ಫೋನಿನ ಮೂಲಕ ಸುದ್ದಿಕೊಟ್ಟು ಆಗಿನ್ನೂ ಬಿಜೆಪಿ ಸೇರದ ಎಂ. ಶ್ರೀನಿವಾಸ್ ಫೊಟೋಗ್ರಾಫರ್ ಸಮೇತ ಬರಲು ಹೇಳಿದರು. ನಕಲಿ ಮತದಾನ ತಡೆಯಲು ಪ್ರತಿಭಟಿಸಿದಾಗ ಎಸ್.ರಮೇಶ್ ಕಡೆಯವರು ತಮಗೆ ಹೊಡೆದು ಗಾಯವಾಗಿದೆ ಎಂದೂ, ತಕ್ಷಣವೇ ಬಂದರೆ ರಕ್ತ ಸಿಕ್ತವಾಗಿರುವ ಕಲೆಗಳನ್ನು ಕಾಣಬಹುದು ಎಂದರು. ನಾನು ಫೊಟೋಗ್ರಾಫರ್‌ರೊಂದಿಗೆ ಹೋಗುವಷ್ಟರಲ್ಲಿ ಫ್ರೆಶ್ ಆಗಿ ಸ್ನಾನಮಾಡಿ ಕೂತಿದ್ದ ಶ್ರೀನಿವಾಸ್, ಕ್ಯಾಮರಾಮನ್ ಕಂಡಾದ ಮೇಲೆ ಗರಿ ಗರಿ ಜುಬ್ಬ ತೆಗೆದು ರಕ್ತಮಯವಾದ ಜುಬ್ಬ ಧರಿಸಿ ತೋಳಿನ ಬಳಿ ಆದ ಗಾಯ ಕಾಣುವಂತೆ ಕೂತರು.

ಘಟನೆಯನ್ನು ಕನ್‌ಫರ್ಮ್ ಮಾಡಿಕೊಳ್ಳಲು ರಮೇಶ್‌ರನ್ನು ಸಂಪರ್ಕಿಸಿದಾಗ ಅವರು ಹೇಳಿದ್ದು ಇಷ್ಟು. ಬೆಳಿಗ್ಗೆಯಿಂದ ಸುಮಾರು ಹನ್ನೊಂದು-ಒಂದು ಗಂಟೆ ವೇಳೆಗೆ ಎಲ್ಲ ವರ್ಗದವರು ಮತ ಚಲಾಯಿಸಿ, ಕೆಲವು ರೂರಲ್ ಮತಗಟ್ಟೆಗಳು ಬಿಕೋ ಎನ್ನುತ್ತಿರುವುವೆಂದೂ, ಒಂದೊಂದು ಮತಗಟ್ಟೆಗೆ ಒಂದು ಸಾವಿರ ವೋಟುಗಳಿದ್ದು, ಮಿಕ್ಕ ಮುನ್ನೂರು, ನಾನೂರು ವೋಟುಗಳನ್ನು ಎರಡು ಪ್ರಮುಖ ಅಭ್ಯರ್ಥಿಗಳು ಸಮಬಲದಲ್ಲಿ, ಇಬ್ಬರೂ ಮಾತಾಡಿಕೊಂಡು ಈ ವೋಟುಗಳನ್ನು ಸಮ-ಸಮವಾಗಿ ಹಂಚಿಕೊಳ್ಳುವುದು ವಾಡಿಕೆ ಎಂದೂ ತಿಳಿಸಿದರು. ನಿಮಿಷಗಳಲ್ಲಿ ಭಿಕ್ಷುಕರು, ಹೆಳವರು, ಮುದುಕರು ಇಂಥವರನ್ನು ಎರೆಡೆರಡು ಸಾಲಿನಲ್ಲಿ ನಿಲ್ಲಿಸಿ ಕ್ರಮವಾಗಿ, ಇನ್ನೂರು-ಇನ್ನೂರು ಮತ ಪಡೆಯುವುದು ಶ್ರೀನಿವಾಸರಿಗೆ ಹೊಸದೇನು ಅಲ್ಲವೆಂದೂ ಈ ರೀತಿ ವಾತಾವರಣವಾದಾಗ, ಅಲ್ಲೇ ಇದ್ದ ಒಬ್ಬ ಪೋಲೀಸ್‌ಪೇದೆ ತನ್ನ ಭಾರವಾದ ಗನ್ನನ್ನು ಎತ್ತಿಕೊಂಡು ಗೋಡೆಕಡೆ ತಿರುಗುವನೆಂದೂ, ಇದ್ದ ಅಧಿಕಾರಿಗಳು ಕಿಟಕಿಕಡೆ ಮುಖಮಾಡಿ ನೇಸರದ ಸೊಬಗನ್ನು ವೀಕ್ಷಿಸುವವರೆಂದೂ ಎಲ್ಲೋ ಒಂದು ಕಡೆ ಹೆಚ್ಚುಕಮ್ಮಿ ಆದಾಗ ಅದನ್ನೇ ದೊಡ್ಡದು ಮಾಡಿ ಪತ್ರಿಕೆಗಳಿಗೆ ಸುದ್ದಿ ಮುಟ್ಟಿಸಿ ತಮ್ಮ ಮೇಲೆ ಗೂಬೆ ಕೂರಿಸುವ ಪ್ರಯತ್ನವೆಂದೂ ತಿಳಿಸಿದರು. ನನಗಂತೂ ಏನು ವರದಿ ಮಾಡಬೇಕೆಂದೇ ತಿಳಿಯದೆ ಕ್ರೈಮ್ ಸುದ್ದಿ ವರದಿ ಮಾಡುವ ಶೈಲಿಯಲ್ಲಿ ವರದಿ ಬರೆದೆ. ಗಾಯಗೊಂಡಿದ್ದ ಶ್ರೀನಿವಾಸರ ಚಿತ್ರವೂ ಕೆಲವು ಪತ್ರಿಕೆಗಳಲ್ಲಿ ಪ್ರಕಟವಾಯಿತು.



ಅವರು.... ಬಹಳ ಶ್ರಮ ಜೀವಿ ಕಣೋ...
ಚುನಾವಣೆ ಮೊದಲು ಸಹಮತಕ್ಕಾಗಿ ದುಡಿದು
ಈಗ ಭಿನ್ನಮತದ ರೂವಾರಿ...!!!

ಹೊಸಕೋಟೆ, ಲಿಂಗರಾಜಪುರ, ಭಾರತೀನಗರದಂತಹ ಕ್ಷೇತ್ರಗಳಲ್ಲಿ (ಮಿಕ್ಕ ಕಡೆಯೂ ಇರಬಹುದು) ಮತದಾನದಂದು ಭೇಟಿ ಮಾಡಿದರೆ ಮತಗಟ್ಟೆಗೆ ಸ್ವಲ್ಪ ದೂರದ ಮೈದಾನದಲ್ಲಿ ಗಾಳಿಗೆ ಟಪ, ಟಪ ಬಡಿಯುತ್ತಿರುವ ಶಾಮಿಯಾನಗಳು ಕಂಡು ಬರುತ್ತವೆ. ಇಲ್ಲಿ ಸಾವಿರ, ಸಾವಿರ ಮಂದಿಗೆ ಬಿರಿಯಾನಿ ಬಡಿಸಲಾಗುತ್ತದೆ. ಈ ಬಿರಿಯಾನಿ ತಿಂದು ಮತಗಟ್ಟೆಗೆ ಹೋದ, ಯಾರಿಗೂ ಬೇರೆ ಅಭ್ಯರ್ಥಿಗೆ ವೋಟು ಹಾಕುವ ಮನಸ್ಸೇ ಬರುವುದಿಲ್ಲವಂತೆ. ಡೈರಿ ರಾಜಣ್ಣ ಅಂತವರ ದೊಡ್ಡಗುಣ ಎಂದರೆ, ಮತಚಲಾಯಿಸಿ ಬಂದಾದ ಮೇಲೂ ಬಿರಿಯಾನಿ ಕೊಡುವುದು. ಸಾಮಾನ್ಯವಾಗಿ ಹಳ್ಳಿಗಳಲ್ಲಿ ಮನೆಯಿಂದ ಟ್ಯಾಕ್ಸಿಯಲ್ಲಿ ಕರೆದುಕೊಂಡು ಹೋದವರು ಮತದಾನವಾದ ಮೇಲೂ ಮನೆಗೆ ವಾಹನದಲ್ಲಿಯೇ ಹಿಂದಿರುಗಿಸುವುದು ಕಾಂಗ್ರೆಸ್ಸಿನ ದೊಡ್ಡಗುಣ. ಜನತಾದಳ, ಬಿಜೆಪಿ ಮತದಾನವಾದ ಮೇಲೆ ಕ್ಯಾರೇ ಎನ್ನದ ಮನೋಭಾವ ಹೊಂದಿದ್ದು, ಚುನಾವಣೆ ಅನುಭವದಲ್ಲಿ ಇನ್ನೂ ಕಲಿಯುವುದಿದೆ.

ಬೆಂಗಳೂರು ಉತ್ತರದ ಕೆಲವು ಮತದಾರರು ಇನ್ನೂ ಕೆಲವು ಸೂಕ್ಷ್ಮಗಳನ್ನು ತಿಳಿಸಿದರು. ಇಲ್ಲಿ ಜಾಫರ್ ಸೋತು ಜನತಾದಳದ ಸಿ. ನಾರಾಯಣ ಸ್ವಾಮಿ ಗೆದ್ದಾಗ ಅವರು ಹೇಳಿದ್ದು : ಕಾಂಗ್ರೆಸ್ ಕೆಲವು ಬಾರಿ ಓವರ್‌ಕಾನ್‌ಫಿಡೆನ್ಸ್‌ನಲ್ಲಿ ಕೆಲವು ಪ್ರದೇಶದ ನಾಯಕರಿಗೆ ಹಣಕೊಟ್ಟು ಅದನ್ನು ಮತದಾರರಿಗೆ ತಲುಪಿಸಿ ಎಂದು ಹೇಳಿ ಕೈ ತೊಳೆದುಕೊಂಡಾಗ, ಹಣದ ಮೊತ್ತ ಮತದಾರರಿಗೆ ತಲುಪದೇ, ತಲುಪಿದರೂ ನಿಗದಿಮಾಡಿದಷ್ಟು ತಲುಪದೇ, ಕಾಂಗ್ರೆಸ್ ಸೋತಿತು. ಬೆಳಿಗ್ಗೆ ಮನೆ ಬಾಗಿಲು ತೆರೆಯುತ್ತಿದ್ದಂತೆಯೇ ಆ ಮನೆಯಲ್ಲಿದ್ದ ವೋಟು ಒಂದಕ್ಕೆ 50ರೂ ನೋಟಿಟ್ಟಿದ್ದು, ಅದು ಗಾಳಿಗೆ ಹಾರದಂತೆ ಅದರ ಮೇಲೆ ಪುರುಷರ ವೋಟಿಗೊಂದರಂತೆ ವಿಸ್ಕಿ ಬಾಟಲ್ಲೂ, ಸ್ತ್ರೀಯರ ವೋಟಿಗೊಂದರಂತೆ ಬ್ಲೌಸು ಪೀಸುಗಳು ಇಟ್ಟಿದ್ದ ದಳದ ಅಭ್ಯರ್ಥಿ ಗೆದ್ದರು.

ಈ ವರ್ಷವಂತೂ ಬಳ್ಳಾರಿಯಲ್ಲಿ ಹಳ್ಳಿ ಹಳ್ಳಿಗಳಲ್ಲಿ ಅರಿಷಿಣ, ಕುಂಕುಮ ಹಚ್ಚಿದ್ದ ರವಿಕೆ, ಕಣ ಮತ್ತು 25 ರೂ. ಹಣವನ್ನು ಬಿಜೆಪಿ ಹಂಚಿದೆಯಂತೆ. ಕಾಂಗ್ರೆಸ್ ಮಾತ್ರ ಕೇವಲ 500 ರೂ ನೋಟುಗಳನ್ನು ಕೆಲವೆಡೆ ಹಂಚಿದೆ. ಏನಾದರೇನಂತೆ, ಯಾರಾದರೇನಂತೆ, ಚುನಾವಣೆ ಶೈಲಿ. ಅಭ್ಯರ್ಥಿ ಯಾರೇ ಆಗಲಿ, ಶೈಲಿ ಮಾತ್ರ ಬದಲಾವಣೆ ಆಗಿಲ್ಲ.


■ ರಾಮು

ಬಳ್ಳಾರಿಯ ಇಬ್ಬರು ಗಿಡ್ಡರು ನುಂಗಿದ ಇಪ್ಪತ್ತೆರಡು ಕೋಟಿ ?

ಇಬ್ಬರು ದೈತ್ಯರ ಸೆಣೆಸಾಟಕ್ಕೆ ಕಣವಾದ ಬಳ್ಳಾರಿಯಲ್ಲಿ ಚುನಾವಣಾ ಸಂದರ್ಭದ ಮಸಾಲೆ ಸುದ್ದಿಗಳಿಗೆ ಕೊರತೆಯೇ ಇರಲಿಲ್ಲ. ಅಲ್ಲಿ, ದಿಲ್ಲಿ ಅಮ್ಮಂದಿರು ತಂದಿಳಿಸಲಿರುವ ಥೈಲಿಗಳಿಗಾಗಿ ನಾಲಗೆ ತೇವವಾಗಿಸಿಕೊಂಡವರ ಹಿಂಡೇ ನೆರೆದಿತ್ತು. ಕೊನೆಗೂ ಯಾರು ಎಷ್ಟು ಉಂಡರು, ಯಾರು ಎಷ್ಟು ಕೊಂಡರು ಎಂಬುದರ ಚಿತ್ರ ಮಾತ್ರ ಬಿಚ್ಚಿಕೊಳ್ಳಲಿಲ್ಲ. ಆದಾಗ್ಯೂ ಒಂದು ದಟ್ಟ ವದಂತಿ ಮಾತ್ರ ಇಂದಿಗೂ ಬಳ್ಳಾರಿಗರ ಬಾಯಲ್ಲಿ ತೇಲಾಡುತ್ತಿದೆ. ಸೋನಿಯಾ ಸ್ಪರ್ಧೆ ಖಚಿತವಾದ ಕೂಡಲೆ ಗಡಬಡಸಿ ಎದ್ದ ಬಳ್ಳಾರಿಯ ಮಾಜಿ ಸಂಸದ ಕೊಂಡಯ್ಯ ಹಾಗೂ ಕೋಳೂರು ಬಸವನಗೌಡ ಎಂಬ ವಾಮನಮೂರ್ತಿಗಳು ಸೋನಿಯಾ ಪ್ರಚಾರದ ಉಸ್ತುವಾರಿಗೆ ಟೊಂಕಕಟ್ಟಿ ನಿಂತರು. ಆದರೆ ದೆಹಲಿಯಿಂದ ಬಂದ ಇಪ್ಪತ್ತೆರಡು ಕೋಟಿ ರೂಪಾಯಿ ಗಂಟನ್ನು ಮಾತ್ರ ಬಿಚ್ಚಲಿಲ್ಲ ಎಂದು ಊರೆಲ್ಲಾ ಆಡಿಕೊಳ್ಳುತ್ತಿದೆ. ಈ ಇಬ್ಬರು ಗಿಡ್ಡರು ಶುಚಿಯಾಗಿ ಕೈ ಬಾಯಿ ತೊಳೆದುಕೊಂಡು ತಿಂದ ಸುಳಿವೇ ಸಿಗದಂತೆ ಮುಗುಮ್ಮಾಗಿದ್ದಾರೆ. ಸೋನಿಯಾ ಗೆಲುವು ಗ್ಯಾರಂಟಿ ಆಗಿರುವಾಗ ಹಣವನ್ನೇಕೆ ಪೋಲು ಮಾಡುವುದೆಂದು ಈ ಜಾಣರು ಪಕ್ಷದ ಹಣವನ್ನು ತಮ್ಮ ತಮ್ಮ ಕಪಾಟಿನಲ್ಲಿ ಜೋಪಾನವಾಗಿಟ್ಟಿರಬಹುದೇ? ■

ವಾಸ್ತು

ಎಷ್ಟು ನಿಜ ! ಎಷ್ಟು ಸುಳ್ಳು !



ವಾಸ್ತುವಿನ ಭೂತಬಡಿದ ಜನ ಹೆಚ್ಚಾಗುತ್ತಿದ್ದಾರೆ. ರೋಗ, ಸಾವು, ನಷ್ಟದ ಭೀತಿಯಿಂದ ಅವರನ್ನು ಸುಲಿದು ತಿನ್ನುವ ವಾಸ್ತು ವಿಶಾರದರು ದೀಢೀರೆಂದು ಹುಟ್ಟಿಕೊಂಡಿದ್ದಾರೆ. ಅಂಜಿದವನ ಮೈಮೇಲೆ ಕಪ್ಪೆ ಎಸೆದಂತೆ, ಏನಾದರೊಂದು ದೋಷ ತೋರಿಸಿ, ಅದರಿಂದಾಗುತ್ತದೆನ್ನುವ ಅನಾಹುತಗಳನ್ನು ಭಾರಿಯಾಗಿ ಬಣ್ಣಿಸುವ ಈ ತಜ್ಞರಿಗೂ, ಜಾದೂ ಆಟ ತೋರಿಸುತ್ತಾ ಮಕ್ಕಳನ್ನು ಹೆದರಿಸಿ ಕಾಸು ಕಿತ್ತುಕೊಳ್ಳುವ ಹಾವಾಡಿಗರಿಗೂ ಅಂಥ ವ್ಯತ್ಯಾಸ ಏನೂ ಕಾಣುವುದಿಲ್ಲ

ಇತ್ತೀಚಿನ ದಿನಗಳಲ್ಲಿ ವಾಸ್ತುಶಾಸ್ತ್ರದ ಪ್ರಸ್ತುತತೆ, ವೈಜ್ಞಾನಿಕ ಆಧಾರದ ಬಗೆಗೆ ಸಾಕಷ್ಟು ಲೇಖನ ಹಾಗೂ ಚರ್ಚೆಗಳು ಬರುತ್ತಿವೆ. ವಾಸ್ತು ಆಧರಿಸಿ ಕಟ್ಟಿದ ಕಟ್ಟಡದಿಂದ, ಆರೋಗ್ಯ-ಐಶ್ವರ್ಯ ಹಾಗೂ ಎಲ್ಲ ರೀತಿಯ ನೆಮ್ಮದಿ ದೊರೆಯುತ್ತಿದ್ದಲ್ಲಿ ಎಲ್ಲರೂ ಏಕೆ ವಾಸ್ತು ಪ್ರಕಾರ ಕಟ್ಟುತ್ತಿಲ್ಲ? ಆ ರೀತಿ ಆಗಿದ್ದಲ್ಲಿ ಜೀವನದಲ್ಲಿ ಕಷ್ಟಗಳೇ ಇಲ್ಲದೆ ಸರಳವಾಗಿ ಸಾಗಬಹುದಿತ್ತಲ್ಲವೆ? ಚಂದ್ರನ ಮೇಲೆ ಮಾನವ ಕಾಲಿಡುವವರೆಗೆ ದೇವರೆಂದು ಪೂಜಿಸಲ್ಪಟ್ಟ, ಸೂರ್ಯಗ್ರಹಣ ನೋಡುವುದರಿಂದ ಹಾನಿಯಿಲ್ಲವೆಂದು ತೋರಿಸಿಕೊಟ್ಟ ಮೇಲೆ ಜ್ಯೋತಿಷಿಗಳೆಲ್ಲ ತಲೆತಗ್ಗಿಸಿದರು. ಶಸ್ತ್ರಚಿಕಿತ್ಸೆಯ ಮೂಲಕ ಹೆರಿಗೆ ಹೆಚ್ಚಾಗಿ ಆಗುತ್ತಿರುವ ಈ ದಿನಗಳಲ್ಲಿ, ಮಗುವನ್ನು ತಾಯಿಯ ಶರೀರದಿಂದ ಹೊರತೆಗೆಯಲೂ ಒಳ್ಳೆಯ ಮುಹೂರ್ತ ತೆಗೆಯಿಸಿಕೊಂಡು ಬರುವ ಜನರಿದ್ದಾರೆ. ಇದರಿಂದ ಎಷ್ಟು ಜನರಿಗೆ ಒಳ್ಳೆಯದಾಗಿದೆಯೆಂದು ಜ್ಯೋತಿಷ್ಯ ನಂಬಿದವರು ಆತ್ಮಶೋಧನೆ ಮಾಡಿಕೊಳ್ಳಲಿ. ಗ್ರಹ, ನಕ್ಷತ್ರಗಳ ಚಲನೆ, ಬ್ರಹ್ಮಾಂಡ, ಪ್ರಭಾವಲಯ ಎಂದು ಸಾಮಾನ್ಯರಿಗೆ ಅರ್ಥವಾಗದ ಸಾವಿರಾರು ಪದಗಳಿಂದ ಮೋಡಿ ಮಾಡುತ್ತಿರುವ ಜ್ಯೋತಿಷಿಗಳು ತಮ್ಮ ಉದ್ದಿಮೆಯಲ್ಲಿ ಲಾಭ ದೊರೆಯದೇ ಹೋದಾಗ, 'ವಾಸ್ತು'ವನ್ನು ಜ್ಯೋತಿಷ್ಯದೊಂದಿಗೆ ಜೋಡಿಸಿಕೊಂಡರು. ಇದು ಅವರ ಉಪಜೀವನಕ್ಕೇನೊ ಸಾಕಷ್ಟು ಆದಾಯ ತಂದುಕೊಟ್ಟರೂ, ವಾಸ್ತು ಬೆನ್ನಟ್ಟಿದ ಗ್ರಾಹಕರು ಇದ್ದುದನೆಲ್ಲ ಕಳೆದುಕೊಳ್ಳುತ್ತಿದ್ದಾರೆ. ಈ ಪಂಡಿತರು ತಮ್ಮ ಹೆಸರುಗಳ ಹಿಂದೆ ವಾಸ್ತುಪ್ರವೀಣ, ವಾಸ್ತು ಶಿಖಾಮಣಿ, ವಾಸ್ತು ವಿದ್ವಾನ್ ಮೊದಲಾದ ಬಿರುದುಗಳನ್ನು ಹೆಣೆದುಕೊಂಡು ಜನತೆಯ ಮುಗ್ಧತೆಯನ್ನು ತಮ್ಮ ಬಂಡವಾಳ ಮಾಡಿಕೊಂಡಿದ್ದಾರೆ.

ಬೇರೆ ಬೇರೆ ಪಂಡಿತರ ಕಡೆ ವಾಸ್ತು ಬೇರೆ ಬೇರೆ ರೀತಿ ನಿರ್ಣಯಿಸಲ್ಪಟ್ಟರೂ ಆಶ್ಚರ್ಯಪಡಬೇಕಾದ್ದಿಲ್ಲ. ಏಕೆಂದರೆ ಪ್ರತಿಯೊಬ್ಬರಿಗೂ ತಾವು ಇನ್ನೊಬ್ಬರಿಗಿಂತ ಹೆಚ್ಚಿನವರೆಂದು ತೋರಿಸಿಕೊಳ್ಳಬೇಕೆಂಬ ಹಂಬಲ ಇದ್ದೇ ಇರುತ್ತದೆ. ಉದಾಹರಣೆಗೆ ಯಾವಾಗಲೂ ಒಬ್ಬ ಕ್ಷೌರಿಕನ ಕಡೆ ಹೋಗುತ್ತಿದ್ದ ವ್ಯಕ್ತಿ ಒಂದು ಬಾರಿ ಬೇರೆ ಕಡೆಗೆ ಹೋಗಿಬಂದಲ್ಲಿ 'ಏನ್ಸಾರ್, ಕಟಿಂಗ್ ಸರಿಯಾಗಿ ಆಗಿಲ್ಲ! ಎಲ್ಲ ಹೆಚ್ಚು ಕಡಿಮೆ ಮಾಡಿದ್ದಾನೆ' ಎಂದು ಹೇಳಿ ತನ್ನ ಗರಿಮೆ ತೋರುವುದು ನಿಮ್ಮ ಅನುಭವಕ್ಕೂ ಬಂದಿರಬಹುದು. ನೀವು ಎಷ್ಟೇ ಸರಿಯಾಗಿ ವಾಸ್ತು ಆಧಾರಿತ ಕಟ್ಟಡ ಕಟ್ಟಿದರೂ, ಏನಾದರೂ ಹಾನಿ ಸಂಭವಿಸಿದಲ್ಲಿ, ನಿಮಗೆ ಸಲಹೆ ನೀಡಿದ ಅದೇ ಪಂಡಿತ ಬೇರೆ ಏನನ್ನೋ ತಪ್ಪೆಂದು ತೋರಿಸಲು ಕಟ್ಟಡದಲ್ಲಿ ಹುಳುಕು ಹುಡುಕುತ್ತಿರುತ್ತಾನೆ.

ವಾಸ್ತುವಿನಲ್ಲೂ ಅನೇಕ ಪ್ರಕಾರಗಳಿವೆ. ಗೃಹವಾಸ್ತು, ರಾಜಗೃಹವಾಸ್ತು, ಗ್ರಾಮವಾಸ್ತು, ಪಟ್ಟಣವಾಸ್ತು, ನಗರ ವಾಸ್ತು, ರಾಜ್ಯವಾಸ್ತು, ದೇಶ ವಾಸ್ತು.... ಇನ್ನೂ ಹುಡುಕುತ್ತ ಹೋದಲ್ಲಿ ವಿಚಿತ್ರವಾದ ವಾಸ್ತುಗಳು ಸಿಗುತ್ತವೆ.

★ ★ ★

ವಾಸ್ತು ಬಗ್ಗೆ ನನಗೆ ತಿಳಿದಾಗಿನಿಂದ ಅನೇಕ ಲೇಖನಗಳನ್ನು ಓದುತ್ತ ಬಂದಿರುವೆ. ನವವಾಸ್ತು ಪಂಡಿತರ ಒಂದೊಂದು ಸಲಹೆ ಓದಿದಂತೆಲ್ಲ ಅದರ ಬಗ್ಗೆ ವಿಚಾರ ಮಾಡಲೆತ್ನಿಸಿದಾಗ ತಲೆ ಗಿರ್ರ್... ಎಂದು ತಿರುಗಲಾರಂಭಿಸುತ್ತದೆ. ಹಿಂದೆ ಅರಮನೆ ದೇವಾಲಯಗಳ ನಿರ್ಮಾಣಕ್ಕಾಗಿ ಕೆಲವು ಸಲಹೆಗಳನ್ನು ಜ್ಞಾನಿಗಳು (ಈಗಿನ ಇಂಜನಿಯರ್‌ರಂತೆ) ವೇದ, ಆಗಮ, ಸಂಹಿತೆಗಳಲ್ಲಿ ಬರೆದಿದ್ದರು. ಅವರು ಕೂಡಾ ಗಾಳಿಯ ಚಲನೆಯ ದಿಕ್ಕು, ಪರಿಸರ ಆಧರಿಸಿ ಈ ಸಲಹೆಗಳನ್ನು ನೀಡಿರಬಹುದು. ಆ ಗ್ರಂಥಗಳ ಕೆಲವು ಶ್ಲೋಕಗಳ ತುಂಡುಗಳನ್ನು ಹಿಡಿದು ನವವಾಸ್ತು ಪಂಡಿತರು, ಕಕ್ಕಸಿಗೆ ಹೋದಾಗ ಯಾವ ಕಡೆ ಮುಖಮಾಡಿ ಕುಳಿತುಕೊಳ್ಳಬೇಕೆಂದೂ ಸೂಚಿಸುವ ಹೊತ್ತಿಗೆಗಳನ್ನು ಸಿದ್ಧಪಡಿಸಿದ್ದಾರೆ.

ಪಂಚಭೂತಗಳು, ಸೂರ್ಯನ ಚಲನೆ, ಭೂಮಿಯ ಅಯಸ್ಕಾಂತೀಯ ಗುಣ, ಅಷ್ಟದಿಕ್ಕುಗಳು, ವಾಸ್ತುಪುರುಷ ಮಂಡಲವನ್ನಾಧರಿಸಿ ವಾಸ್ತು ರೂಪುಗೊಂಡಿದೆಯೆಂದು ಹೇಳಿಕೆ. ವಾಸ್ತು ಮಂಡಲದಲ್ಲಿ ವಾಸ್ತು ಪುರುಷನು ಈಶಾನ್ಯಕ್ಕೆ ತಲೆಮಾಡಿ, ನೈರುತ್ಯಕ್ಕೆ ಕಾಲಿಟ್ಟು, ಬಲಗೈಯನ್ನು ವಾಯುವ್ಯ ಮೂಲೆಯಲ್ಲಿಟ್ಟು, ಎಡಗೈಯನ್ನು ಆಗ್ನೇಯದಲ್ಲಿಟ್ಟು, ಹೊಟ್ಟೆಯನ್ನು ಮಧ್ಯದಲ್ಲಿಟ್ಟು ಕುಳಿತಿದ್ದಾನೆ. ಇದನ್ನು ಆಧರಿಸಿಯೇ ಮನೆ ಕಟ್ಟಬೇಕು.

ಕಟ್ಟಡ ನಿರ್ಮಿಸುವಾಗ ಯಾವ ದಿಕ್ಕಿನಿಂದ ಯಾವ ರೀತಿಯ ಅನುಕೂಲತೆ ದೆಯೆಂದು ವಾಸ್ತು ಈ ರೀತಿ ನಿರ್ಣಯಿಸುತ್ತದೆ. ಪೂರ್ವ-ಪುರುಷ ಸಂಬಂಧಿ ಥವಾ ಪಿತೃ ಸ್ಥಾನ; ಆಗ್ನೇಯ - ಆರೋಗ್ಯದ ಮೂಲ; ದಕ್ಷಿಣ - ಧನ, ಬೆಳೆ ಗೂ ಸಂತೋಷ; ನೈರುತ್ಯ - ಗುಣನಡತೆ; ಪಶ್ಚಿಮ-ಹೆಸರು ಪ್ರಸಿದ್ಧಿ ಹಾಗೂ ಮೃದ್ಧಿ; ವಾಯುವ್ಯ - ವ್ಯಾಪಾರ, ಸ್ನೇಹ ಹಾಗೂ ವೈರತ್ವ; ಉತ್ತರ - ಸ್ತ್ರೀ ಬಂಧಿ ಅಥವಾ ಮಾತೃಸ್ಥಾನ; ಈಶಾನ್ಯ-ಆರೋಗ್ಯ, ಧನ ಹಾಗೂ ಸಮೃದ್ಧಿ.

ಈ ಕೆಲವು ನಿಯಮಗಳನ್ನಾಧರಿಸಿ ನವವಾಸ್ತು ಪಂಡಿತರು ರೂಪಿಸಿರುವ ದ್ಧಾಂತಗಳನ್ನು ವಾಸ್ತು ತಿಳಿಯದಿರುವವರಿಗೆ (ನಿಜಕ್ಕೂ ಅವರು ಪುಣ್ಯಾತ್ಮರು) ಮೊದಲು ತಿಳಿಸಬಯಸುವೆ.

- ಕಟ್ಟಡದ ಮುಖ್ಯದ್ವಾರ ಈಶಾನ್ಯಕ್ಕಿರಬೇಕು.
- ಭೂಮಿಯ ಒಳಗಿನ ನೀರಿನ ಟ್ಯಾಂಕ್ ಈಶಾನ್ಯಕ್ಕಿರಬೇಕು.
- ಪೂಜಾ ಕೋಣೆ ಈಶಾನ್ಯಕ್ಕಿರಬೇಕು.
- ಸೆಪ್ಟಿಕ್ ಟ್ಯಾಂಕ್ ವಾಯುವ್ಯಕ್ಕಿರಬೇಕು. ನೈರುತ್ಯಕ್ಕಿದ್ದಲ್ಲಿ ಎತ್ತರದಲ್ಲಿರಬೇಕು.
- ಓವರ್‌ಹೆಡ್ ಟ್ಯಾಂಕ್ ನೈರುತ್ಯಕ್ಕಿರಬೇಕು.
- ಭಾರವಾದ ವಸ್ತುಗಳು, ಮನೆಯ ಯಜಮಾನನ ಕೋಣೆ ದಕ್ಷಿಣಕ್ಕಿರಬೇಕು.
- ಅಡುಗೆಮನೆ ಆಗ್ನೇಯಕ್ಕಿರಬೇಕು. ಪೂರ್ವಕ್ಕೆ ಮುಖಮಾಡಿ ಅಡುಗೆ ಮಾಡಬೇಕು.
- ಮೆಟ್ಟಿಲುಗಳು ಪೂರ್ವದಿಂದ ಪಶ್ಚಿಮಕ್ಕೆ ಅಥವಾ ಉತ್ತರದಿಂದ ದಕ್ಷಿಣಕ್ಕೆ ಹತ್ತುವಂತಿರಬೇಕು.
- ನಿವೇಶನದ ಉತ್ತರ ಹಾಗೂ ಪೂರ್ವಕ್ಕೆ, ದಕ್ಷಿಣ ಹಾಗೂ ಪಶ್ಚಿಮಕ್ಕಿಂತ ಹೆಚ್ಚು ಖಾಲಿ ಜಾಗವಿರಬೇಕು.
- ದಕ್ಷಿಣ ಹಾಗೂ ಪಶ್ಚಿಮದ ಕಡೆಗೆ ಹೆಚ್ಚು ಕಿಡಕಿಗಳಿರಬಾರದು.
- ಕಟ್ಟಡದ ಪಶ್ಚಿಮ ಹಾಗೂ ದಕ್ಷಿಣದ ಗೋಡೆಗಳು, ಪೂರ್ವ ಹಾಗೂ ಉತ್ತರದ ಗೋಡೆಗಳಿಗಿಂತ ದಪ್ಪವಿರಬೇಕು.
- ತಿಜೋರಿಯನ್ನು ಉತ್ತರ ದಿಕ್ಕಿನಲ್ಲಿಡಬೇಕು.
- ಪಾಯಖಾನೆಯ ಸೀಟು ಪೂರ್ವ-ಪಶ್ಚಿಮಕ್ಕೆ ಮುಖಮಾಡಿ ಕುಳಿತುಕೊಳ್ಳುವಂತೆ ಇರಬಾರದು.
- ಉತ್ತರ ಹಾಗೂ ವಾಯುವ್ಯಕ್ಕೆ ಮಲಗುವ ಕೋಣೆಗಳಿರಬಾರದು.

ಇವೆಲ್ಲ ಸ್ಯಾಂಪಲ್ ಅಷ್ಟೆ. ಆ ಗ್ರಂಥಗಳನ್ನು ಓದಿದಲ್ಲಿ, ಇನ್ನೂ ಹೆಚ್ಚಿನ ಾಹಿತಿ ದೊರೆಯುತ್ತದೆ. ಮೇಲಿನ ಕಟ್ಟುಪಾಡುಗಳು ನಿಮ್ಮ ಟ್ಟಡದಲ್ಲಿಲ್ಲದಿದ್ದಲ್ಲಿ, ನಿಮಗೆ ಅನಾರೋಗ್ಯ, ಧನಹಾನಿ ಕಾಡಬಹುದು. ಯಾವ ಬಗೆಯ ನ್ಯೂನತೆಗೆ ಯಾವ ರೀತಿಯ ರೋಗ ತಗಲುವುದೆಂಬುದನ್ನೂ ಗ್ರಂಥಗಳಲ್ಲಿ ವಿವರಿಸಿದ್ದಾರೆ. ಇದರ ಬಗ್ಗೆ ಸಲಹೆ ಬೇಕೆಂದಲ್ಲಿ ಎಲ್ಲ ಊರುಗಳಲ್ಲೂ ದೊರೆಯುವ ವಾಸ್ತು ವಿದ್ವಾನ್‌ರಲ್ಲಿ (ಮನುಷ್ಯರ ರೋಗ ಪಾಸಣೆಗೆ ಡಾಕ್ಟರ್‌ಗಳಿದ್ದಂತೆ. ಮನೆಗಳ ರೋಗ ತಪಾಸಣೆಗೆ ಇವರು ಾಕ್ಟರ್‌ಗಳು) ಕೇಳಿದಷ್ಟು ದಕ್ಷಿಣೆ ಇಟ್ಟು ಕಾಣಬಹುದು.

★ ★ ★

ಭಾರತ ಮೊದಲಿನಿಂದಲೂ ಅನೇಕ ಮೇಧಾವಿಗಳಿಗೆ ಜನ್ಮಕೊಟ್ಟ ದೇಶ. ಮ್ಮ ಪೂರ್ವಜರು ಮೂಢರೂ ಅಲ್ಲ, ಮೂರ್ಖರೂ ಅಲ್ಲ. ಅನುಭವದ ಮೂಲಕ ಅಂದಿನ ಕಟ್ಟಡಗಳಿಗಾಗಿ ಕೆಲವು ನೀತಿ ಸಂಹಿತೆಗಳನ್ನು ಾಪಿಸಿರಬಹುದು. ಅವುಗಳಲ್ಲಿ ಕೆಲವು ನೀತಿಗಳ ವೈಜ್ಞಾನಿಕ ವಿಶ್ಲೇಷಣೆಯನ್ನು ೀಡುವ ಪ್ರಯತ್ನ ಮಾಡಲಾಗಿದೆ.

ಮೊದಲಿಗೆ ಹೆಚ್ಚಾಗಿ ಪೂರ್ವಕ್ಕೆ (ಸೂರ್ಯ ಉದಯಿಸುವ ದಿಕ್ಕು) ುಖ್ಯದ್ವಾರದ ಮನೆಗಳು ಇದ್ದುದರಿಂದ, ಸ್ನಾನದ ಕೋಣೆ, ಪಾಯಖಾನೆಗಳು ೊನೆಗೆ ಇರಬೇಕೆಂದು ಪಶ್ಚಿಮಕ್ಕೆ ಈ ಕೋಣೆಗಳನ್ನು ಸೂಚಿಸಿದ್ದರು. ಈಗ ಯಾವುದೇ ದಿಕ್ಕಿಗೆ ಮುಖ್ಯದ್ವಾರವಿದ್ದರೂ; ವಾಯುವ್ಯ ಅಥವಾ ನೈರುತ್ಯಕ್ಕೆ ್ನಾನದ ಕೋಣೆ, ಪಾಯಖಾನೆಗಳು ಇರಬೇಕೆಂದು ಹೇಳುತ್ತಾರೆ. ಪಶ್ಚಿಮಕ್ಕೆ ಸ್ತೆಯಿರುವ ಮನೆಯವರು, ಮನೆಯ ಎದುರಿಗೇ ಈ ಕೋಣೆಗಳಿರುವಂತೆ ಮಾಡಿ ಕಟ್ಟಡದ ಅಂದವನ್ನು ಹದಗೆಡಿಸಿಕೊಂಡು ಬಿಡುತ್ತಾರೆ.

ಹಿಂದೆ ತೆರೆದ ಬಾವಿಗಳಿದ್ದವು. ಬೆಳಗಿನ ಸೂರ್ಯನ ನೇರಳಾತೀತ ಕಿರಣಗಳು (Ultraviolet rays) ಕ್ರಿಮಿಗಳನ್ನು ನಾಶಗೊಳಿಸಿ ನೀರನ್ನು ಶುದ್ಧಮಾಡಲೆಂದು, ಹೆಚ್ಚು ಉಪಯೋಗ ಮಾಡದ ಪೂರ್ವಕ್ಕಿರುವ ಈಶಾನ್ಯ ದಿಕ್ಕನ್ನು ಬಾವಿಗಳಿಗಾಗಿ ಸೂಚಿಸಿದ್ದರೇನೋ? ಈಗಿನ ಸೂರ್ಯ ಕಿರಣಗಳನ್ನೇ ಕಾಣದ ಸದಾ ಮುಚ್ಚಿರುವ ಅಂಡರ್‌ಗ್ರೌಂಡ್ ನೀರಿನ ಟ್ಯಾಂಕ್ ಈಶಾನ್ಯಕ್ಕೆ (ವಾಸ್ತು ಆಧರಿತ) ಎಷ್ಟು ಸೂಕ್ತ?

ಹಿಂದಿನ ದಿನಗಳಲ್ಲಿ ಕಟ್ಟಡ ನಿರ್ಮಾಣದಲ್ಲಿ ಕಟ್ಟಿಗೆಯನ್ನು ಅಧಿಕ ಪ್ರಮಾಣದಲ್ಲಿ ಬಳಸುತ್ತಿದ್ದರು. ಅಡುಗೆಗೂ ಕಟ್ಟಿಗೆಯೇ ಇಂಧನ ಆಗಿತ್ತು. ಸಾಮಾನ್ಯವಾಗಿ ಬೇಸಿಗೆಯಲ್ಲಿ ನೈರುತ್ಯದಿಂದ ಬೀಸುವ ಗಾಳಿಗೆ ಹೊಗೆ ಹೋಗಲೆಂದು ಹಾಗೂ ಕಿಡಿಗಳಿಂದ ಕಟ್ಟಡಕ್ಕೆ ಹಾನಿಯಾಗದಿರಲೆಂದು ಆಗ್ನೇಯದ ಒಲೆಗೆ ಪ್ರಾಶಸ್ತ್ಯ ಸೂಚಿಸಿರಬಹುದು. ಈಗಿನ ಆರ್.ಸಿ.ಸಿ. ಕಟ್ಟಡ, ಗ್ಯಾಸ್ ಒಲೆಗಳಿಗೆ ಈ ವಾಸ್ತು ಸೂತ್ರ ಅಗತ್ಯವೆ?

ನೈರುತ್ಯ ದಿಕ್ಕಿನಲ್ಲಿ ಧಾನ್ಯ ಸಂಗ್ರಹಿಸುವುದರಿಂದ (ಫಸಲು ಕೈಗೆ ಬಂದ ಸಮಯದಲ್ಲಿ ಸೂರ್ಯ ದಕ್ಷಿಣಾಯಣದಲ್ಲಿರುತ್ತಾನೆ. ಆಗ ನೈರುತ್ಯದ ಕಡೆಗೆ ಬಿಸಿಲು ಜಾಸ್ತಿ) ಕೆಡದಂತೆ ಉಳಿಯುವವು ಹಾಗೂ ಅದರ ಪಕ್ಕದಲ್ಲಿ ಮಾಲಕ ರಕ್ಷಣೆಗಾಗಿ ಇರಬೇಕೆಂದು ವಾಸ್ತುವಿನಲ್ಲಿ ಸೂಚಿಸಿರಬಹುದು. ಇದನ್ನೇ ತಿರುಚಿ ಭಾರವಾದ ವಸ್ತುಗಳು ಹಾಗೂ ಮಾಲಕನ ಕೋಣೆ ಕಟ್ಟಡದ ದಕ್ಷಿಣಕ್ಕೆ ಇರಬೇಕೆಂದು ಹೇಳುತ್ತಾರೆ. ಮಾಲಕನ ಕೋಣೆ ಉತ್ತರಕ್ಕಿದ್ದರೆ ಸಾವು ಖಚಿತವೆಂದು ಭವಿಷ್ಯ ಹೇಳುತ್ತಾರೆ.

ಬೇರೆ ಬೇರೆ ದಿಕ್ಕುಗಳಲ್ಲಿ ಒಂದೊಂದು ಕೋಣೆ ಸೂಚಿಸಿದ ನಂತರ ಖಾಲಿ ಉಳಿದ ಈಶಾನ್ಯ ದಿಕ್ಕನ್ನು ಪ್ರಶಾಂತವಾಗಿಡಲೆಂದು ದೇವರ ಕೋಣೆಗೆ ಸೂಚಿಸಿರಬಹುದು. ಈಗ ಎರಡು ರೂಮುಗಳ ಮನೆಯನ್ನು ಕಟ್ಟಿಸಲು ಕೂಡ ದೊಡ್ಡದಲ್ಲದ 30 ಅಡಿ X 40 ಅಡಿ ಅಳತೆಯ ನಿವೇಶನಗಳಲ್ಲಿ, ಈಶಾನ್ಯಕ್ಕೇ ದೇವರ ಕೋಣೆ ತುರುಕಲು ಯತ್ನಿಸಿದಲ್ಲಿ ಮನೆಯಲ್ಲಿ ಇರುವ ಸ್ವಲ್ಪ ಜಾಗವೂ ಅನಾನುಕೂಲಕರವಾಗಿಬಿಡುತ್ತದೆ.

ಹಿಂದೆ ಕಕ್ಕಸಿಗೆ ಹೆಚ್ಚಾಗಿ ಬಯಲಿನಲ್ಲಿ ಹೋಗುತ್ತಿದ್ದರು. ಆಗ ಸೂರ್ಯನನ್ನು ನೋಡುತ್ತ ಕುಳಿತುಕೊಳ್ಳಬಾರದೆಂದು ಪೂರ್ವ-ಪಶ್ಚಿಮಕ್ಕೆ ಮುಖಮಾಡಿ ಕುಳಿತುಕೊಳ್ಳಬಾರದೆಂದು ತಿಳಿಸಿರಬಹುದು. ಈಗ ಸೂರ್ಯನನ್ನೇ ಕಾಣದ ಪಾಯಖಾನೆಗಳಲ್ಲಿ ಈ ವಾಸ್ತು ಸೂಕ್ತಿ ಎಷ್ಟು ಪ್ರಸ್ತುತ?

ಕೈಗಾರಿಕೆಗಳಿಗೂ ವಾಸ್ತುವನ್ನು ಸೂಚಿಸುವ ನವವಾಸ್ತು ಪ್ರವೀಣರು, ಇದಕ್ಕೆ ಹಿಂದಿನ ಯಾವ ಶ್ಲೋಕ, ಗ್ರಂಥ ಅವಲಂಬಿಸಿದ್ದಾರೆಂದು ಕೇಳಿ ನೋಡಿ. ವೇದಗಳ ಕಾಲದಲ್ಲೂ ಕೈಗಾರಿಕೆಗಳು ಇದ್ದವೆಂದು ತಿಳಿದುಬಂದಲ್ಲಿ, ಅದು ಒಂದು ದೊಡ್ಡ ಸಂಶೋಧನೆ ಆದಂತಾಗುವುದು !

★ ★ ★

ನಾಸ್ತಿಕ ಮನಃಶಾಂತಿಗಾಗಿ ದೇವರನ್ನಲ್ಲದಿದ್ದರೂ ಬೇರೆ ಏನನ್ನಾದರೂ ಆಶ್ರಯಿಸಿರುತ್ತಾನೆ. ಆಸ್ತಿಕ ದೇವರನ್ನು ನಂಬಿರುತ್ತಾನೆ. ಒಟ್ಟಿನಲ್ಲಿ ಜೀವನದಲ್ಲಿ ಎಲ್ಲರೂ ಬಯಸುವುದು ಸಂತೋಷ, ಶಾಂತಿಯನ್ನು. ಅವನ್ನು ದೊರಕಿಸಿಕೊಡುತ್ತೇವೆಂದು ದುರ್ಬಲ ಮನಸ್ಸಿರುವ ಜನರನ್ನು ವಾಸ್ತುವಿನ ಬಲೆಯಲ್ಲಿ ಸಿಲುಕಿಸಿ, ಅವರು ನರಳುವುದರಲ್ಲೇ ತಮ್ಮ ಸುಖ ಅರಸಿಕೊಳ್ಳುವ ಇಂತಹ ಪ್ರಖಾಂಡ ಪಂಡಿತರ ಅಗತ್ಯ ನಮಗಿದೆಯೆ? ಮಧ್ಯಮ ವರ್ಗದ ಜನ ಒಂದು ಮನೆ ಪೂರ್ಣಗೊಳಿಸುವಲ್ಲಿಯೇ ಸಾಕಷ್ಟು ಸಾಲಮಾಡಿ ಅದನ್ನು ತೀರಿಸುವುದಕ್ಕಾಗಿಯೇ ಮುಂದಿನ ದಿನಗಳಲ್ಲಿ ಹೆಣಗಾಡುತ್ತಿರುತ್ತಾರೆ. ಇಂಥವರ ಬಳಿ ಹೋಗಿ ಮನೆಯ ವಾಸ್ತು ಸರಿಯಿಲ್ಲವೆಂದು ತಲೆ ತುಂಬಿದಲ್ಲಿ, ಮುಂದೆ ನಿಂತಿರುವ ಸಾಲದ ಭಾರ ಹಾಗೂ ಮನದಲ್ಲಿ ತುಂಬಿದ ವಾಸ್ತು ಭೀತಿ ಎರಡೂ ಸೇರಿ ಅವರನ್ನು ಜೀವನದ ಅಧೋಗತಿಗೆ ತಳ್ಳುವ ಪಾಪಕೃತ್ಯ ಕರುಣೆಯಿರುವ ಯಾರಿಂದಲೂ ನೋಡಲಾಗದು. ಪದ್ಮಶ್ರೀ ಪ್ರಶಸ್ತಿ ವಿಜೇತ ವಾಸ್ತು ಶಿಲ್ಪಿ (ಆರ್ಕಿಟೆಕ್ಟ್) ಅಚ್ಯುತ್ ಹೇಳುವಂತೆ, 'ವಾಸ್ತು ಪರಿಣತರು ಇದು ಇಲ್ಲಿ ಇರಬೇಕು, ಅದು ಅಲ್ಲಿ ಬರಬೇಕು ಎಂದು ಹೇಳುತ್ತಾರೆಯೇ ಹೊರತು ಅದಕ್ಕೆ ಕಾರಣ ಕೊಡುವುದಿಲ್ಲ. ಆದರೆ ಅವರು ಹೇಳಿದ್ದನ್ನು ಮಾಡದಿದ್ದಲ್ಲಿ ಏನಾದರೂ ಅಹಿತಕರ ಘಟನೆಗಳು ನಡೆಯುತ್ತವೆಂಬ ಭವಿಷ್ಯ ಹೇಳುತ್ತಾರೆ. ಇದಕ್ಕೆ ಜನ ಹೆದರಿ ವಾಸ್ತುವಿಗೆ ಬಲಿಯಾಗುತ್ತಾರೆ. ವಾಸ್ತು ಪರಿಣತರು ತಮ್ಮ

ಸಲಹೆಗಳಿಗೆ ಸರಿಯಾದ ಕಾರಣ ಕೊಟ್ಟಲ್ಲಿ ಈ ವೇಳೆಗಾಗಲೇ ವಾಸ್ತು ವಿಶ್ವಾದ್ಯಂತ ಪಸರಿಸುತ್ತಿತ್ತು'.

ಈ ಸಂದರ್ಭದಲ್ಲಿ ನಿಮಗೆ ವಿಶೇಷವಾಗಿ ತಿಳಿಸಬಯಸುವುದೇನೆಂದರೆ, ನಮ್ಮ ದೇಶದ ವಾಸ್ತುವೇ ಸರಿಯಾಗಿಲ್ಲ. ಪಶ್ಚಿಮಕ್ಕೆ ಸಾಗರ, ಈಶಾನ್ಯಕ್ಕೆ ಪರ್ವತವಿರುವ ಭಾರತ ಯಾವಾಗಲೂ ಕಾಡಾಟಗಳಿಂದ ತುಂಬಿದೆ. ಆದ್ದರಿಂದ ನಾವೆಲ್ಲ ಸಂಕಷ್ಟದಲ್ಲಿ ಸಿಲುಕಿ ಬಳಲುತ್ತಿರುವುದಕ್ಕೆ ಹೆಚ್ಚು ಚಿಂತಿಸಬೇಕಿಲ್ಲ!

ವಾಸ್ತು ಒಂದು ಸುಂದರವಾದ ಕಲ್ಪನೆ. ಜ್ಞಾನಿಗಳು ಸಾಕಷ್ಟು ಅನುಭವದಿಂದ ಹಿಂದಿನ ಕಾಲದ ಕಟ್ಟಡಗಳಿಗೆ ವಾಸ್ತು ಸೂಚಿಸಿರಬಹುದು. ಈ ಕಲಿಯುಗದಲ್ಲಿ ಆ ಸಲಹೆಗಳು ಎಷ್ಟು ಅಗತ್ಯವಾಗಿವೆಯೆಂದು ಅರ್ಥೈಸಿ ನೋಡಬೇಕು. ಅದರಿಂದ ಒಳ್ಳೆಯ ಕಟ್ಟಡ ನಿರ್ಮಾಣವಾಗುವುದಿದ್ದಲ್ಲಿ ವಾಸ್ತು ಬಳಸಲಿ. ವಾಸ್ತು ಪ್ರಚಲಿತಕ್ಕೆ ಬರುವ ಮೊದಲು ಇಂಜಿನಿಯರ್, ಆರ್ಕಿಟೆಕ್ಟ್‌ರು ಸಾಕಷ್ಟು ಯೋಚಿಸಿಯೇ ಕಟ್ಟಡಗಳ ನಕ್ಷೆ ತಯಾರಿಸುತ್ತಿದ್ದರು. ಈಗಲೂ ತಯಾರಿಸುತ್ತಾರೆ. 'ಅಲ್ಪಜ್ಞಾನ, ಮಹಾಗರ್ವಿ' ಎಂಬಂತಿರುವ ಜ್ಯೋತಿಷಿ, ವಾಸ್ತು ಪಂಡಿತರು ಜನತೆಯಲ್ಲಿ ಭೀತಿ ತುಂಬಿ ಆರ್ಥಿಕ ಹಾಗೂ ಮಾನಸಿಕವಾಗಿ ನೆಮ್ಮದಿಯಿಲ್ಲದಂತೆ ಮಾಡುತ್ತಿರುವ ಇಂದಿನ ಭಾರತದಲ್ಲಿ, ಪ್ರಜ್ಞಾವಂತರು ಭೀತಿ-ಹೋಗಲಾಡಿಸುವ ಪ್ರಯತ್ನ ಮಾಡಬೇಕಿದೆ. ಕೆಲವು ಇಂಜಿನಿಯರ್‌ಗಳೂ 'ವಾಸ್ತು ಬೇಸ್ಡ್ ಇಂಜನಿಯರ್', 'ವಾಸ್ತು ಬೇಸ್ಡ್ ಆರ್ಕಿಟೆಕ್ಟ್' ಎಂದು ಬೋರ್ಡ್ ಬರೆದುಕೊಂಡು ನವವಾಸ್ತುಪಂಡಿತರೊಂದಿಗೆ ರಾಜಿಯಾಗಿರುವುದು ಪ್ರಗತಿಪರ ಸಮಾಜದಲ್ಲಿ ನಾಚಿಕೆಪಡಬೇಕಾದ ವಿಷಯ.

★ ★ ★

ಸುಳ್ಳನ್ನು ಹತ್ತು ಸಾರಿ ಹೇಳಿದಲ್ಲಿ ಅದೇ ಸತ್ಯವಾಗುತ್ತದೆ. ಸುಳ್ಳನ್ನು ನಂಬಿದಷ್ಟು ಸರಳವಾಗಿ ಸತ್ಯವನ್ನು ಸ್ವೀಕರಿಸುವುದಿಲ್ಲ. ಏಕೆಂದರೆ ಸತ್ಯ ಕಹಿಯಾಗಿರುತ್ತದೆ. ನನ್ನ ಲೇಖನ, ಸಲಹೆಗಳು ಸರಿಯೆನ್ನಿಸಿ, ಮನದಲ್ಲಿನ ವಾಸ್ತುಭೂತ ದೂರ ಹೋಗಿ ಮನಃಶಾಂತಿ ದೊರೆಯಲು ಸಹಕಾರಿಯಾಗಿದ್ದಲ್ಲಿ ಬರೆದದ್ದು ಸಾರ್ಥಕ. ಇದೆಲ್ಲ ತಪ್ಪು, ವಾಸ್ತು ಪಾಲಿಸುವುದೇ ಒಳ್ಳೆಯದೆನಿಸಿದಲ್ಲಿ ನವವಾಸ್ತು ಪಂಡಿತರ ಬಳಿಗೆ ಬೇಗ ಹೋಗಿ. ನಿಮ್ಮ ಹತ್ತಿರ ಸುಳಿಯುತ್ತಿರುವ ಸಾವನ್ನು ವಾಸ್ತು ಚಿಕಿತ್ಸೆಯಿಂದ ದೂರ ಓಡಿಸುತ್ತಾರೆ!

■ ಟಿ. ಸಿದ್ದಲಿಂಗಸ್ವಾಮಿ

ಮೂಢನಂಬಿಕೆ

ಪ್ರಯಾಣ ಹೊರಟಿದ್ದವರೊಬ್ಬರು ಒಂದು ಆಟೋಗಾಗಿ ಕಾಯುತ್ತಿದ್ದರು. ಹೋಗಿ ಬರುತ್ತಿದ್ದ ಆಟೋಗಳನ್ನು ನಿಲ್ಲಿಸಲು ಯತ್ನಿಸುತ್ತಿದ್ದರು. ಆದರೆ ಪಕ್ಕದಲ್ಲೇ ಖಾಲಿಯಾಗಿ ನಿಂತಿದ್ದ ಆಟೋವೊಂದನ್ನು ಕೇಳದೇ ಸುಮ್ಮನಿದ್ದರು.


ಹಾದಿಹೋಕರೊಬ್ಬರು ಅವರನ್ನು "ಹೀಗೇಕೆ?" ಎಂದು ಕೇಳಿದ್ದಕ್ಕೆ ಆ ಪ್ರಯಾಣಿಕರು, 'ನಾನೊಬ್ಬ ವರನನ್ನು ಹುಡುಕಲು ಹೊರಟಿದ್ದೇನೆ. ಇಲ್ಲಿ ನಿಂತಿರುವ ಆಟೋ ನಂಬರು 711, ಆದ್ದರಿಂದ ಅದು ಬೇಡ'. (ಹಲವರ ನಂಬಿಕೆಯಂತೆ ಏಳು ಹನ್ನೊಂದು ಅಶುಭ).

ಗಾಂಧೀನಾಡಿನ ತಪಸ್ವಿ

ಲಾರೀ ಬೇಕರ್

ಗಾಂಧೀಜಿಯ ಮೋಡಿ ಅಂಥದ್ದು ಬೊಚ್ಚು ಬಾಯಿಯ ಆ ನಗೆ, ಮಾತಿನ ಸರಳತೆಯಲ್ಲಿ ಜನರನ್ನು ಅವರು ಕಟ್ಟಿ ಹಾಕುತ್ತಿದ್ದರು. ಯಾಕೆಂದರೆ ಅವರು ಸದಾ ಮನುಷ್ಯ ಕಾಳಜಿಯಿಂದ, ತಾವರಿತ ಸತ್ಯಗಳ ಹಿನ್ನೆಲೆಯಲ್ಲೇ ಮಾತಾಡುತ್ತಿದ್ದರು.

ಇಂಗ್ಲೆಂಡಿನ ವಾಸ್ತುಶಿಲ್ಪಿ ಲಾರೀ ಬೇಕರ್ ಗಾಂಧೀಜಿಯ ಮಾತಿಗೆ ಕಟ್ಟು ಬಿದ್ದಿದ್ದು ಆಕಸ್ಮಿಕ. ಆದರೆ ಹುಟ್ಟಿದ ನಾಡು ಬಿಟ್ಟು, ಗಾಂಧೀಜಿಯ ಕನಸುಗಳಿಗೆ ಆಕಾರ ನೀಡಲು ಇಲ್ಲಿಗೆ ಬಂದು ನಿಂತರಲ್ಲ ಅದು ಪವಾಡ ಅಲ್ಲ. ಅದೊಂದು ತಪಸ್ಸು.



ಮೊಮ್ಮಗನ ಜೊತೆ

ಗಾಂಧೀಜಿ ದೇಶದ ಮಹತ್ತಾದ ಕಲ್ಪನೆ ಹೊಂದಿದ್ದವರು. ಅವರಿಗೆ, ಎಲ್ಲ ಕ್ರಿಯೆಗಳ ಕೇಂದ್ರವಾದ ಮನುಷ್ಯ ತೀರಾ ಮುಖ್ಯ. ಆತನ ಬದುಕು, ಚಿಂತನೆ ಅರ್ಥಪೂರ್ಣ ಮತ್ತು ನೆಮ್ಮದಿಯಿಂದ ಕೂಡಿರಬೇಕು ಎಂದು ಚಿಂತಿಸಿದವರು.

ಎರಡು ಹೊತ್ತಿನ ಊಟಕ್ಕೆ, ಪೂರ್ತಿಯಾಗಿ ಮೈ ಮುಚ್ಚಿಕೊಳ್ಳುವ ಬಟ್ಟೆಗಾಗಿ ಪರದಾಡುವ ಅಸಂಖ್ಯ ಜನರಿರುವ ಇಲ್ಲಿ ಶಿಕ್ಷಣ, ಆರೋಗ್ಯ, ಉದ್ಯೋಗ, ಮನೆ ಮುಖ್ಯ ಕಾಳಜಿಗಳಾಗಬೇಕು ಎಂದು ಅರಿತಿದ್ದರು.

ಗಾಂಧೀಜಿ ಜನರ ಮನೆಗಳ ಬಗ್ಗೆ ಹೊಂದಿದ್ದ ಕಾಳಜಿ ಕಂಡು ಆಕರ್ಷಿತರಾದವರು ಇಂಗ್ಲೆಂಡಿನ ಲಾರೀ ಬೇಕರ್. ಆತ ವೃತ್ತಿಯಿಂದ ಆರ್ಕಿಟೆಕ್ಟ್. 1937ರಲ್ಲಿ ಬರ್ಮಿಂಗ್ ಸ್ಕೂಲ್ ಆಫ್ ಆರ್ಕಿಟೆಕ್ಚರ್‌ನಲ್ಲಿ ಡಿಗ್ರಿ ಪಡೆದವರು. ಬ್ರಿಟಿಷ್ ಸೈನ್ಯ ಸೇರಿ ಚೀನಾ, ಜಪಾನ್‌ಗಳಿಗೆ ಬಂದಿದ್ದವರು. ಹಿಂದಿರುಗುವ ದಾರಿಯಲ್ಲಿ ಭಾರತದ ಮುಂಬಯಿಗೆ ಬಂದರು. ಅಲ್ಲಿಂದ ಅವರು ಹಡಗು ಹತ್ತಿ ಇಂಗ್ಲೆಂಡಿಗೆ ಹೋಗಬೇಕಿತ್ತು. ಆಗ ಈಗಿನ ಹಾಗೆ ನಿತ್ಯವೆಂಬಂತೆ ಹಡಗುಗಳ ಸಂಚಾರ ಇರಲಿಲ್ಲ. ದೇಶಕ್ಕೆ ಕರೆದೊಯ್ಯುವ ಹಡಗಿಗಾಗಿ ಹಲವು ದಿನ ಕಾಯುತ್ತ ಇರುವಾಗ, ಮುಂಬಯಿಯಲ್ಲೇ ಇರುತ್ತಿದ್ದ ಗಾಂಧೀಜಿಯ ಸಂಪರ್ಕಕ್ಕೆ ಬಂದರು. ಆಗ ಗಾಂಧೀಜಿ ಮುಂಬಯಿಯ ಗಿರಿಗಾಂವ್‌ನ ಚಾಪಾಟಿಯ ಹತ್ತಿರ ಒಂದು ಮನೆಯಲ್ಲಿ ಇರುತ್ತಿದ್ದರು. ಅಲ್ಲಿಗೆ ಸಮೀಪವೇ ಇರುವ ಆಝಾದ್ ಕ್ರಾಂತಿ ಮೈದಾನ ವೇದಿಕೆಯಿಂದಲೇ ಅವರು 'ಕ್ವಿಟ್ ಇಂಡಿಯಾ' ಚಳವಳಿಗೆ ಕರೆ ನೀಡಿದ್ದು. ಆರ್ಕಿಟೆಕ್ಚರ್‌ನಲ್ಲಿ ಪದವಿ ಪಡೆದ ಇಂಗ್ಲಿಷ್ ಮನುಷ್ಯನೊಬ್ಬನಿಗೆ, ಗಾಂಧೀಜಿಯ ಮಾತು ವಿಚಿತ್ರ ಅನ್ನಿಸಲಿಲ್ಲ. ಪಠ್ಯಗಳಲ್ಲಿನ ಓದಿಗಿಂತ ಭಿನ್ನವಾದ ಚಿಂತನೆ ಆ ತರುಣನನ್ನು ಕಟ್ಟಿ ಹಾಕಿತು. 'ಮನೆ ಸರಳವಾಗಿರಬೇಕು. ಸಹಜವಾಗಿರಬೇಕು. ಮನೆ ಕಟ್ಟುವ ಸಾಮಗ್ರಿ ಸ್ಥಳೀಯವಾಗಿರಬೇಕು. ಇಪ್ಪತ್ತು ಮೈಲಿ ಆಚೆಯಿಂದ ಯಾವ ಸಾಮಗ್ರಿಯನ್ನೂ ತರಬಾರದು' ಎಂದು ಗಾಂಧೀಜಿ ಹೇಳಿದ್ದು ಕಾಲೇಜಿನಲ್ಲಿ ಕಲಿತಿದ್ದ ಲಾರಿ ಬೇಕರ್ ಅವರನ್ನು ಚಿಂತನೆಗೆ ಹಚ್ಚಿತು. ಇಂಗ್ಲೆಂಡಿಗೆ ಹೋಗಿ ವಿಶ್ರಾಂತಿ ಪಡೆಯುತ್ತಿದ್ದ ಬೇಕರ್, ಗಾಂಧೀಜಿಯ ಮಾತಿನ ಮೋಡಿಯಲ್ಲಿಯೇ ಮುಳುಗಿಬಿಟ್ಟರು.

ಅದರ ಪರಿಣಾಮ ಎಂದರೆ ಭಾರತಕ್ಕೆ ಹಿಂದಿರುಗಬೇಕು ಎಂಬ ತುಡಿತ. ಕುಷ್ಠರೋಗಿಗಳ ಸೇವೆಯಲ್ಲಿದ್ದ ಸಂಸ್ಥೆಯೊಂದು ಭಾರತದ ಹಳ್ಳಿ, ಗುಡ್ಡಗಾಡುಗಳಲ್ಲಿ ದುಡಿಯಲು ಆರ್ಕಿಟೆಕ್ಟ್ ಒಬ್ಬರು ಬೇಕು ಎಂದು ಪ್ರಕಟಿಸಿದಾಗ, ಇಷ್ಟದ ಮಿಠಾಯಿಯನ್ನು ಜಿಗಿದು ಹಿಡಿದುಕೊಳ್ಳುವ ಮಗುವಿನ ಹಾಗೆ ಅದನ್ನು ಬಾಚಿಕೊಂಡರು. ಹಾಗೆ 1945ರಲ್ಲಿ ಇಲ್ಲಿಗೆ ಬಂದ ಬೇಕರ್‌ಗೆ ಭಾರತವೇ ತವರಾಯಿತು. ಈಗ ಎಂಬತ್ತು ದಾಟಿರುವ ಲಾರಿ ಬೇಕರ್‌ಗೆ ಇನ್ನೂ ತಗ್ಗದ ಜೀವನೋತ್ಸಾಹ. ಗಾಂಧೀಜಿಯ ಕಲ್ಪನೆಯ ಮನೆಗಳಿಗೆ ಇಲ್ಲಿ ಇಟ್ಟಿಗೆ, ಗಾರೆ, ಕಲ್ಲು, ಮಣ್ಣುಗಳಿಂದ ಆಕಾರ ಕೊಡುವ ಉತ್ಸಾಹಪೂರ್ಣ ಕಾಯಕ.


ಕುಷ್ಠರೋಗಿಗಳಿಗೆ ಎಂದು ವಾಸದ ಮನೆ, ಅವರ ಚಿಕಿತ್ಸೆಗೆಂದು ಆಸ್ಪತ್ರೆಯ ಕೊಠಡಿಗಳನ್ನು ಕಟ್ಟುತ್ತಾ ಹಿಮಾಲಯದ ಗಿರಿ ಕಂದರಗಳಲ್ಲಿ, ಈಶಾನ್ಯದ ಗುಡ್ಡದ ಓರೆಕೋರೆಗಳಲ್ಲಿ ತಿರುಗಾಡಿದ ತರುಣ ಬೇಕರ್, ಇಡೀ ಭಾರತದ ಉದ್ದಗಲಕ್ಕೆ ಕನಸು ಹೊತ್ತು ದೆವ್ವದ ಹಾಗೆ ತಿರುಗಿದವರು. ಅಂಥ ಒಂದು ತಿರುಗಾಟದ ವೇಳೆ ಹೈದರಾಬಾದಿನಲ್ಲಿ ಬಾಳ ಸಂಗಾತಿಯ ಭೇಟಿಯೂ ಆಯಿತು. ಆಕೆ ಕೇರಳದವರು. ಹೆಂಡತಿ ಮತ್ತು ಭಾರತದ ಪ್ರೀತಿಯಿಂದಾಗಿ ತಿರುವನಂತಪುರದ ಹೊರವಲಯದಲ್ಲಿ ಮನೆ ಮಾಡಿದರು. ಮಳೆರಾಚುವ ನಿಸರ್ಗ ಸಿರಿಯ ಕೇರಳದಲ್ಲಿ ಕೇವಲ ಇಟ್ಟಿಗೆ, ಮಣ್ಣಿನಿಂದ ಕಟ್ಟಿದ ಇಳಿ ಮಾಡಿನ ಕಟ್ಟಡಗಳ ಸೌಂದರ್ಯ, ಅವುಗಳ ತಾಳಿಕೊಳ್ಳುವ ಗುಣ, ನೆಲದಿಂದ ಎದ್ದು ನಿಂತ ಸುಂದರ ಕಲಾಕೃತಿಯಂಥ ಕಟ್ಟಡಗಳಿಂದ ಮೋಹಗೊಂಡರು.

ಓದಿಕೊಂಡಿದ್ದ ಪುಸ್ತಕದ ಬದನೇಕಾಯಿ ಒತ್ತಟ್ಟಿಗಿಟ್ಟು, ಕರಣೆ ಕೈಲಿ ಹಿಡಿದು ಮನೆ ಕಟ್ಟಲು ನಿಂತರು. ತಿರುವನಂತಪುರ, ಕೊಚ್ಚಿಯಲ್ಲಿ ಈ ಬಿಳೀ ಮನುಷ್ಯ ಕೈಕೆಸರಾಗಿಸಿಕೊಂಡು, ಬಿಸಿಲು, ಮಳೆ, ಗಾಳಿಯಲ್ಲಿ ದುಡಿಯುತ್ತಿದ್ದುದು ಕಂಡು ಹುಬ್ಬೇರಿಸಿದ್ದ ಜನಕ್ಕೆ, ಆಕಾರ ಪಡೆದು ನಿಂತ ಸರಳ, ಸುಂದರ ಮಣ್ಣು, ಗಾರೆಯ ಮನೆಗಳನ್ನು ಕಂಡಾಗ ತೀರಾ ಅಚ್ಚರಿ. ಅವನ್ನು ಕೆಲವೇ ಸಾವಿರ ರೂಪಾಯಿ ಖರ್ಚಲ್ಲಿ ಕಟ್ಟಿದ್ದೆಂದು ತಿಳಿದಾಗ ನಂಬಿಕೆಯೇ ಆಗದಂಥ ಸ್ಥಿತಿ.

ಗಾಂಧೀಜಿಯ ಹಾಗೆ ಬಡಕಲು ಶರೀರ, ಅರೆಬರೆ ಬಟ್ಟೆತೊಟ್ಟ ಜನಕ್ಕೆ ತಲೆಯ ಮೇಲೊಂದು ಸೂರು ಕಟ್ಟಿಕೊಡುವ ಕಾಯಕಕ್ಕೆ ನಿಂತ ಲಾರಿಬೇಕರ್‌ಗೆ ಬೊಂಬು, ಬಿದಿರು ಅಗ್ಗ. ಆದರೆ ಕಟ್ಟಡ ನಿರ್ಮಾಣದಲ್ಲಿ ಕಬ್ಬಿಣದಷ್ಟೇ ಬಾಳಿಕೆ, ತಾಳಿಕೆ ಎಂದು ಅರಿಯುವುದು ಕಷ್ಟವಾಗಲಿಲ್ಲ. ಮಣ್ಣು, ಗಾರೆ ಸಿಮೆಂಟಿಗಿಂತ ಕಡಿಮೆಯೇನಲ್ಲ ಎಂದು ತೋರಿಸಿದ್ದಾರೆ.

ಇಂಥ ಮಾತು ಬಂದಾಗ, ಇದ್ಯಾವುದೋ ಓಬಿರಾಯನ ಕಾಲದ ಗಿರಾಕಿ ಎಂದು ಮೂಗು ಮುರಿಯುವ ಜನ ಇಲ್ಲದೇ ಇಲ್ಲ. ಮಣ್ಣು, ಗಾರೆಯನ್ನೇ ಉಪಯೋಗಿಸಲು ಬೇಕರ್‌ಗೆ ಬೇರೆ ಕಾರಣಗಳೂ ಇವೆ. ಸಿಮೆಂಟಿನಲ್ಲಿ ಇರುವುದೂ, ಗಾರೆಯಲ್ಲಿ ಇರುವುದೂ ಒಂದೇ ಸಾಮಗ್ರಿ; ಸುಣ್ಣ ಮತ್ತು

ಮರಳು. ಸಿಮೆಂಟ್ ತಯಾರಿಕೆಗೆ ಸುಣ್ಣ ಮತ್ತು ಮರಳು ಕಾಯಿಸಿ, ಕರಗಿಸಬೇಕು. ಅದಕ್ಕೆ ಅಪಾರ ಪ್ರಮಾಣದಲ್ಲಿ ವಿದ್ಯುತ್ತೋ, ಕಲ್ಲಿದ್ದಲೋ ಬೇಕು. ಕಾರ್ಖಾನೆಯಿಂದ ನಾವಿರುವ ಊರಿಗೆ ಸಾಗಿಸಲು ಲಾರಿಗಳಿಗೆ ಇಂಧನ ಬೇಕು. ಬೆಲೆ ಸಹಜವಾಗಿಯೇ ಹೆಚ್ಚಾಗುತ್ತದೆ. ಅಷ್ಟೇ ಅಲ್ಲ ಕಾಡು, ಕಲ್ಲಿದ್ದಲು, ಪೆಟ್ರೋಲಿಯಂ ಖರ್ಚಾಗುತ್ತದೆ.



ಸ್ಥಳದಲ್ಲೇ ದೊರಕುವ ಸಾಮಗ್ರಿಗಳಿಂದ ಬೇಕರ್ ಕಟ್ಟಿದ ಮನೆ

ಕಾಡಿನ ಮರ ಮತ್ತೆ ಹುಟ್ಟಬಹುದು. ಕಲ್ಲಿದ್ದಲು, ಪೆಟ್ರೋಲಿಯಂ ಹಾಗಲ್ಲ. ಒಮ್ಮೆ ಬಳಸಿದರೆ ಮುಗಿಯಿತು.

ಗಾರೆ ತಯಾರಿಸಲು ಸುಣ್ಣದ ಕಲ್ಲು ಸುಡಬೇಕು. ಆದರೆ ಅದಕ್ಕೆ ಬೇಕಾಗುವ ಇದ್ದಿಲು ತೀರಾ ಅಲ್ಪ ಪ್ರಮಾಣದ್ದು. ಗಾರೆಯನ್ನು ಬೇಕಾದಾಗ, ಬೇಕಾದಷ್ಟು ಸ್ಥಳದಲ್ಲೇ ತಯಾರಿಸಬಹುದು. ಅದು ಸಿಮೆಂಟಿನಷ್ಟೇ ಗಟ್ಟಿ.

ಬೇಕರ್ ದೃಷ್ಟಿಯಲ್ಲಿ ಮನೆ ಎನ್ನುವುದು ಅಲ್ಲಿ ವಾಸಿಸುವವರ ಅನುಕೂಲಕ್ಕೆ ಆಗಬೇಕು. ಶ್ರೀಮಂತಿಕೆ, ಸೋಗಿನ ಅಭಿರುಚಿಯ ಪ್ರದರ್ಶನಕ್ಕೆ ಅಲ್ಲ. ಸುಳ್ಳು, ಸೋಗು ಅಲ್ಲಿ ಇರಬಾರದು. ಸಣ್ಣ ಉದಾಹರಣೆ ನೋಡಿ. ಎಷ್ಟೋ ಜನ ಇಟ್ಟಿಗೆ ಜೋಡಿಸಿ ಮನೆ ಕಟ್ಟುತ್ತಾರೆ. ಅದರ ಮೇಲೆ ಸಿಮೆಂಟು ಪ್ಲಾಸ್ಟರ್. ಪ್ಲಾಸ್ಟರ್ ಮೇಲೆ ಇಟ್ಟಿಗೆಗಳ ಚಿತ್ರ ರಚಿಸಿ ಪೇಂಟು ಬಳಿಯುತ್ತಾರೆ. ಇಟ್ಟಿಗೆ ಕಾಣುವಂತೆ ಇರಬೇಕಾದರೆ ಮೊದಲು ಜೋಡಿಸಿದ ಇಟ್ಟಿಗೆಯೇ ಯಾಕೆ ಕಾಣಬಾರದು. ಇದು ಅನಗತ್ಯ ವೆಚ್ಚಕ್ಕೆ ದಾರಿ. ಆಗಿಂದಾಗ್ಗೆ ಮತ್ತೆ ಪೇಂಟ್ ಮಾಡಿಸುವ ವೆಚ್ಚ ಬೇರೆ. ಇನ್ನೂ ಕೆಲವರಿರುತ್ತಾರೆ. ಇಟ್ಟಿಗೆಯ ಗೋಡೆಗೆ ಪ್ಲಾಸ್ಟರ್ ಮಾಡಿ ಅದರ ಮೇಲೆ ಚಿತ್ರ ವಿಚಿತ್ರ ಆಕಾರದ ಕಲ್ಲುಗಳನ್ನು ಜೋಡಿಸುತ್ತಾರೆ. ಯಾವುದೇ ಅಡಸಾಬಡಸಾ ತಯಾರಿಸಿದ ಫುಟ್‌ಪಾತ್ ಒಂದು ಗೋಡೆ ಏರಿ ಕುಳಿತಿದೆಯೇನೋ ಎಂಬ ಹಾಗೆ ಅಸಹ್ಯ. ಇಂಥ ವಿಚಿತ್ರ, ಸೋಗುಗಳ ಮನೆ ಎಂದರೆ ಬೇಕರ್ ಮಾರು ದೂರ ಉಳಿಯುತ್ತಾರೆ.

ಮನೆಯವರ ಊಟದ ರೀತಿ, ಓದುವ, ಬರೆಯುವ ಹವ್ಯಾಸ, ಗಿಡ ಮರಗಳನ್ನು ಬೆಳೆಸುವ, ನೋಡಿಕೊಳ್ಳುವ ಅಭ್ಯಾಸ, ಮುದ್ದಿನ ಪ್ರಾಣಿಗಳನ್ನು ಸಾಕುವ ಹವ್ಯಾಸ ಎಲ್ಲ ಗಮನದಲ್ಲಿ ಇಟ್ಟುಕೊಂಡೇ ಮನೆ ಕಟ್ಟಬೇಕು ಎನ್ನುತ್ತಾರೆ ಬೇಕರ್.

ಓದುವ, ಬರೆಯುವ ಅಭ್ಯಾಸದ ಲಾರೀ ಬೇಕರ್ ತಮ್ಮ ಮನೆಯ ಬೆಡ್‌ರೂಮಿನಲ್ಲೇ ಒಂದು ಕಡೆ ಟೇಬಲ್, ಚೇರ್ ಹಾಕಿಕೊಂಡಿದ್ದಾರೆ. ಇನ್ನೊಂದು ಮೂಲೆಯಲ್ಲಿ ಹೆಂಡತಿ ಹೊಲಿಗೆ ನಡೆಸುವ ಸ್ಯೂಯಿಂಗ್ ಮಷೀನ್‌ಗೆ ಜಾಗವೂ ಇದೆ. ತಮ್ಮ ಇಷ್ಟದ ಅಭ್ಯಾಸಕ್ಕೆ ಎದ್ದು ಮನೆಯ ಇನ್ನೊಂದು ಮೂಲೆ ಹುಡುಕಿಕೊಂಡು ಹೋಗಬೇಕಿಲ್ಲ. ಬೇಸರವಾದರೆ ಎರಡು ಹೆಜ್ಜೆ ನಡೆದರೆ ಅಲ್ಲೇ ಹಾಸಿಗೆ.

ಮನೆ ಗಾಂಧೀಜಿ ಹೇಳಿದ ಹಾಗೆ ಸಹಜವಾಗಿರಬೇಕು, ಸರಳವಾಗಿರಬೇಕು. ಪ್ರಕೃತಿಯ ಜೊತೆ ಒಂದಾಗಿರಬೇಕು. ಪ್ರಕೃತಿ ಎಂದ ಕೂಡಲೇ ಗಿಡ, ಮರ, ಬೆಟ್ಟ, ಕಾಡು ಎಂದೇ ನಮ್ಮ ಕಲ್ಪನೆ. ಯಾಕೆ ಮನುಷ್ಯ ಕೂಡ ಪ್ರಕೃತಿಯ ಭಾಗವಲ್ಲವೇ? ಎಂದು ಬೇಕರ್ ಕೇಳುವಾಗ ''ಹೌದಲ್ಲವೇ!' ಎಂದು ಯಾರಿಗಾದರೂ ಅನ್ನಿಸದೇ ಇರದು.

ಮನುಷ್ಯನ ವಿಚಿತ್ರ ನೋಡಿ. ಆತನಿಗೆ ಬಹಿರಂಗವಾಗಿ ವ್ಯಕ್ತವಾಗುವ ಪ್ರಕೃತಿಯೊಂದಿದೆ. ಅಂತರಂಗದ ಪ್ರಕೃತಿಯೂ ಇದೆ. ಗುಣ, ಸ್ವಭಾವ, ಆಚಾರ, ವಿಚಾರ ಇವೆಲ್ಲ ಅವನ ಅಂತರಂಗದ ಪ್ರಕೃತಿ. ಇದೆಲ್ಲಕ್ಕೆ ತಾಳೆಯಾಗುವಂತಹ ಮನೆ ಇರಬೇಕಲ್ಲವೇ!

ಒಟ್ಟಿಗೆ ಕೂತು ಊಟ ಮಾಡುವ, ಹರಟುವ ಜನರಿಲ್ಲದ ಮನೆಯಲ್ಲಿ ಡೈನಿಂಗ್ ಹಾಲ್ ಕಟ್ಟಿದರೆ! ಇಂಥ ಆಭಾಸಗಳನ್ನು ನಾವು ಇತ್ತೀಚಿನ ಮನೆಗಳಲ್ಲಿ ಧಾಳಾಗಿ ಕಾಣುತ್ತೇವೆ.

ಬೇಕರ್ ಬಳಿ ಯಾರಾದರೂ ಬಂದು ಮನೆ ಕಟ್ಟಿಕೊಡಲು ಕೇಳಿಕೊಂಡರೆ ಅವರ ಅಗತ್ಯಗಳನ್ನು ಮೊದಲು ತಿಳಿಯುತ್ತಾರೆ. ಮನೆ ಕಟ್ಟಿಸುವ ವ್ಯಕ್ತಿ, ಸಂಸ್ಥೆಗಳ ಆಂತರಿಕ ವಿಚಾರವೇನು? ಮನೆ ಅಥವಾ ಕಟ್ಟಡ ಯಾವ್ಯಾವ ಅನುಕೂಲತೆ ಹೊಂದಿರಬೇಕೆಂದು ಅರಿಯುತ್ತಾರೆ. ಅಲ್ಲಿ ಇರುವವರ ಅಭ್ಯಾಸ, ಹವ್ಯಾಸಗಳನ್ನು ಕೂಲಂಕಷವಾಗಿ ತಿಳಿದುಕೊಳ್ಳುತ್ತಾರೆ. ಮನೆ ಕಟ್ಟುವ ಜಾಗ ಕೂಡ ಅಷ್ಟೇ ಮುಖ್ಯ. ಅಲ್ಲಿನ ಗಾಳಿ ಬೀಸುವ ದಿಕ್ಕು, ಬೆಳಕು ಬರುವ ದಿಕ್ಕು, ನೀರಿನ ಲಭ್ಯತೆಯ ಹಾಗೆಯೇ ಜಾಗದ ಹಾಸು ಬೀಸು ಕಣ್ಣಿಟ್ಟು ನೋಡುತ್ತಾರೆ. ಇಳಿಜಾರಾಗಿದ್ದರೆ, ಸಮತಟ್ಟು ಇದ್ದರೆ, ಗಿಡ ಮರಗಳಿಂದ ಕೂಡಿದ್ದರೆ, ಸಹಜವಾದ ಜಾಗದ ವಿನ್ಯಾಸ ಕೆಡದಂತೆಯೇ ಮನೆಯ ವಿನ್ಯಾಸ ರೂಪಿಸುವುದೂ ಮುಖ್ಯ ಅವರಿಗೆ.

ಬೇಕರ್ ವಿನ್ಯಾಸ ಮಾಡುವ ಮನೆ ಮೇಲುನೋಟಕ್ಕೆ ತೀರಾ ಸರಳ, ಸಹಜ. ಆ ಕಾರಣಕ್ಕೇ ಅದು ಸುಂದರ ಕೂಡ. ಇದರ ಜೊತೆಗೇ ಹಲವಾರು ಬಗೆಯ ಕಾಳಜಿಗಳನ್ನೂ ಆ ಮನೆ ಸಾರುತ್ತದೆ ಎಂಬುದೂ ಮುಖ್ಯ.

ನಮ್ಮ ಮನೆಗಳಲ್ಲಿ ಎಷ್ಟು ಬಾಗಿಲುಗಳಿವೆ? ನಾವು ಯೋಚಿಸುವುದೇ ಇಲ್ಲ. ಅಂಥ ಪ್ರಶ್ನೆ ಎದುರಾದಾಗ, ಮುಂಬಾಗಿಲು, ಪ್ರತಿ ರೂಮು, ಅಡುಗೆ ಮನೆ, ಬಚ್ಚಲು ಮನೆಗೆ ಒಂದೊಂದು ಬಾಗಿಲು, ಎಲ್ಲಾ ಕಡೆ ಹಾಗೆ ತಾನೇ ಇರುವುದು ಅಂದುಕೊಳ್ಳುತ್ತೇವೆ. ಒಂದು ಮನೆಯಲ್ಲಿ ಇಷ್ಟೆಲ್ಲ ಬಾಗಿಲುಗಳು ಅಗತ್ಯವೇ? ಎಂದು ಕೂಡ ಯೋಚಿಸುವ ಗೋಜಿಗೆ ನಾವು ಹೋಗುವುದಿಲ್ಲ. ಹೀಗಾಗಿಯೇ ನಮ್ಮ ಮನೆಗಳಲ್ಲಿ ಅಗತ್ಯವಿರಲಿ, ಬಿಡಲಿ ಕನಿಷ್ಠ ಐದಾರು ಬಾಗಿಲುಗಳು ಇರುತ್ತವೆ. ಸಾಮಾನ್ಯವಾಗಿ ಎಲ್ಲ ಮರದ ಬಾಗಿಲುಗಳು, ಈಗಿನ ಕಬ್ಬಿಣ ಮತ್ತು ಅಲ್ಯುಮಿನಿಯಂ ಹಾಗು ಅಲ್ಯುಮಿನಿಯಂ ಕಟ್ಟಿನ ಗಾಜಿನ ಬಾಗಿಲುಗಳೂ ಇರಬಹುದು. ಇವೆಲ್ಲ ಬೇಕೇ ಬೇಕೆ? ಇದು ಲಾರಿ ಬೇಕರ್ ಕಾಳಜಿಯಿಂದ ಕೇಳುವ ಪ್ರಶ್ನೆ.

ಯಾಕೆ ಗೊತ್ತೆ? ಬಾಗಿಲು ಮಾಡಲು ಮರಬೇಕು. ಮರ ಕಡಿದರೆ ನೆಟ್ಟು ಬೆಳೆಸಬಹುದು. ಒಂದಷ್ಟು ಕಾಲ ಕಾಯಬೇಕು. ಕಡಿದು ಉರುಳಿಸಿದಷ್ಟು ಶೀಘ್ರ ಅವು ಬೆಳೆದು ನಿಲ್ಲುವುದಿಲ್ಲ ಎಂಬುದೇನೋ ನಿಜ. ಆದರೆ ನಾವು ಬಳಸುವ ಲೋಹದ ಬಾಗಿಲುಗಳ ವಿಚಾರ ಹಾಗಲ್ಲ. ಅವಕ್ಕೆ ಅದಿರು ಬೇಕು. ಭೂಮಿಯ ಗರ್ಭದಿಂದ ತೆಗೆದ ಅದಿರು ಕಾಯಿಸಿ ಕರಗಿಸಬೇಕು. ಅದಕ್ಕೆ ಉರುವಲು ಬೇಕು. ಹಾಗೆ ತಯಾರಾದ ಲೋಹದ ಶೀಟು ಸಾಗಿಸಲು ವಾಹನಗಳಿಗೆ ಇಂಧನ ಬೇಕು. ಒಮ್ಮೆ ಅದಿರು ತೆಗೆದರೆ ಮತ್ತೆ ನಾವದನ್ನು ಸೃಷ್ಟಿಸಲು ಬರುವುದಿಲ್ಲ.

ಇಷ್ಟಕ್ಕೂ ಒಂದೊಂದು ಬಾಗಿಲಿಗೆ ಸಾವಿರ ರೂಪಾಯಿ ಕನಿಷ್ಠ

ಅಂದುಕೊಂಡರೆ ಐದರಿಂದ ಹತ್ತು ಸಾವಿರ ರೂಪಾಯಿ ಬಾಗಿಲಿಗೆ ಖರ್ಚಾಗುತ್ತದೆ. ಕಿಟಕಿಗಳನ್ನು ಬಿಟ್ಟು ಮಾಡಿದ ಲೆಕ್ಕ ಇದು. ಅದಕ್ಕೆ ತೀರಾ ಅಗತ್ಯ ಇರುವಲ್ಲಿ ಬಾಗಿಲು ಇಡಿಸಿ ಎಂದು ಸೂಚಿಸುತ್ತಾರೆ ಬೇಕರ್. ರೂಮಿಗೆ ಬಾಗಿಲ ಬದಲು ಸಣ್ಣದೊಂದು ಗೇಟು ಇಟ್ಟರೆ ಹೇಗೆ?

ಕಿಟಕಿಗಳಿಗೆಂದೇ ಫ್ರೇಮು, ಬಾಗಿಲುಗಳಿಗಾಗಿ ಹಣ ವ್ಯಯಿಸುವ ಬದಲು ಇಟ್ಟಿಗೆಯಿಂದಲೇ ಜಾಲಗಳನ್ನು ನಿರ್ಮಿಸಿದರೆ ಖರ್ಚು ಉಳಿಯಿತು. ಇಡೀ ಕಟ್ಟಡಕ್ಕೆ ಅದೊಂದು ಶೋಭೆ ತಂದೀತು. ನಿರ್ವಹಣಾ ವೆಚ್ಚವಂತೂ ಆಗಾಗ ಮಾಡುವುದು ತಪ್ಪುತ್ತದೆ.


ಮನೆ ಕಟ್ಟುವ ಜಾಗದಲ್ಲೇ ದೊರೆಯುವ ಮಣ್ಣಿಂದ ಇಟ್ಟಿಗೆ ಮಾಡಿಕೊಂಡರೆ, ಅಲ್ಲಿಯೇ ಬಿದ್ದ ಕಲ್ಲುಗಳಿಂದ ಗೋಡೆ ಕಟ್ಟಿದರೆ ಆಯಿತು. ಎಲ್ಲಿಂದಲೋ ಮೊಸಾಯಿಕ್, ಗ್ರಾನೈಟ್ ಎಂದೆಲ್ಲ ದುಬಾರಿ ವೆಚ್ಚ ಮಾಡಿ ತಂದರೆ, ಸ್ಥಳೀಯ ವಾತಾವರಣದಿಂದ ಭಿನ್ನವಾದ ಅವು ವಿಕಾರವಾಗಿ ಎದ್ದು ಕಾಣುತ್ತವೆ. ಇದು ಬೇಕರ್ ಪಾಲಿಗೆ ಬೇಡದ ಸಾಮಗ್ರಿ.

ಲಾರೀ ಬೇಕರ್ ತಮ್ಮ ಕಟ್ಟಡ ಕಟ್ಟುವ ವಿಚಾರವನ್ನು ಬದುಕಿನ ತಪಸ್ಸು ಮಾಡಿಕೊಂಡರು. ಉತ್ಸಾಹದಿಂದ ಕಲಿಯಲು ಬಂದ ಎಳೆಯರಿಗೆ ಕಲಿಸಿಕೊಟ್ಟರು. ಹೀಗೇ ಮಾಡಿ ಎಂದಲ್ಲ, ಈ ದಿಕ್ಕಿನಲ್ಲಿ ಚಿಂತಿಸಿ ಎಂಬಂಥ ಮಾರ್ಗದರ್ಶನ.

ಹಾಗಾಗಿಯೇ ಬೆಂಗಳೂರಂಥ ನಗರದಲ್ಲಿ ಇವತ್ತು ಲಾರಿಬೇಕರ್ ಮತ್ತು ಗಾಂಧಿ ವಿಚಾರ ಧಾರೆಯ ಕನಸುಗಳನ್ನು ಸಾಕಾರಗೊಳಿಸುವ ಹಲವು ಆರ್ಕಿಟೆಕ್ಟ್ ಇದ್ದಾರೆ. ಇವರಲ್ಲಿ ಒಬ್ಬರಾದ ಚಿತ್ರಾ ವಿಶ್ವನಾಥ್ ನಾನೀಗ ವಾಸಿಸುತ್ತಿರುವ ಮನೆಯನ್ನು ಕಟ್ಟಿ ಕೊಟ್ಟಿದ್ದಾರೆ. ಹಲವು ವರ್ಷಗಳಿಂದ ಈ ಮನೆಯಲ್ಲಿ ವಾಸಿಸುತ್ತಾ ಪ್ರಕೃತಿಯ ಜೊತೆ ಇರುವುದೆಂದರೆ ಏನೆಂಬುದು ನನಗೀಗ ಅರ್ಥವಾಗುತ್ತಿದೆ. ಮನೆಯ ಕೆಂಪು ಇಟ್ಟಿಗೆಯ ಮಣ್ಣು, ಅವುಗಳ ಬಣ್ಣ, ಜೋಡಿಸಿ ಇರಿಸಿದ ವಿನ್ಯಾಸ ಎಲ್ಲ ನೋಡುತ್ತಾ, ಮನುಷ್ಯನಿಗೆ ತೀರಾ ಹತ್ತಿರವಾದ ಪ್ರಕೃತಿಯ ಸೃಷ್ಟಿ ಎಂದರೆ ಮಣ್ಣು ಎಂಬುದು ನನ್ನ ಆಳದ ಅರಿವಿಗೆ ದಕ್ಕಿದೆ.

ಇವತ್ತು ಸ್ವದೇಶಿ, ವಿದೇಶಿ ಎಂಬ ರಾಜಕಾರಣದ ಬೊಬ್ಬೆ ದಿನ ನಿತ್ಯ ನನ್ನ ಕಿವಿಗೆ ಬೀಳುತ್ತಿದೆ. ಇಂಗ್ಲೆಂಡಿನಲ್ಲಿ ಹುಟ್ಟಿದ ಲಾರೀ ಬೇಕರ್, ಅಪ್ಪಟ ಸ್ವದೇಶಿ ಎನಿಸಿದ ಗಾಂಧೀಜಿ ಮೋಡಿಗೆ ಸಿಕ್ಕು ತವರು ತೊರೆದು ಬಂದಿದ್ದು ಪವಾಡದ ಹಾಗೆ ನನಗೆ ಕಾಣುತ್ತದೆ. ಬೇಕರ್‌ಗೆ ಹುಟ್ಟೂರು, ದೇಶ ಮರೆತೇ ಹೋಗಿದೆ.

ಎಲ್ಲರ ತಲೆಯ ಮೇಲೊಂದು ಸೂರು ಒದಗಿಸುವುದು ಕಷ್ಟ ಏನಲ್ಲ. ಆದರೆ ಇಲ್ಲಿನ ವ್ಯವಸ್ಥೆ ಅದಕ್ಕೆ ಬಿಡುವುದಿಲ್ಲ. ಐವತ್ತು ವರ್ಷಗಳಿಗೂ ಹೆಚ್ಚು ಕಾಲ ಈ ನೆಲದಲ್ಲಿ ಜೀವಿಸುತ್ತಾ ಬಂದ ಇಂಗ್ಲಿಷ್ ಮನುಷ್ಯ ಲಾರೀ ಬೇಕರ್ ಇವತ್ತು 'ಈ ನನ್ನ ದೇಶದಲ್ಲಿ ಇವತ್ತಿಗೂ ನಲವತ್ತೈದರಿಂದ ಐವತ್ತು ಕೋಟಿ ಜನಕ್ಕೆ ತಮ್ಮದೆಂಬ ಮನೆಯಿಲ್ಲ' ಎಂದು ನಿಟ್ಟುಸಿರುಬಿಟ್ಟು ಹೇಳುವಾಗ, ಇದು ಸಾಧ್ಯವಾಗಬಹುದಿತ್ತು, ಸಾಧ್ಯವಾಗಲಿಲ್ಲ ಎಂಬ ಕೊರಗಿನ ಹಾಗೆ, ಅಸಹಾಯಕತೆಯೂ ಇದೆ. ಎಲ್ಲಕ್ಕಿಂತ ಮುಖ್ಯವಾಗಿ, ತರುಣ ವಯಸ್ಸಿನಲ್ಲಿ ಒಂದು ತಪಸ್ಸು ನೆಚ್ಚಿ ಬಂದ ಮನುಷ್ಯನ ಮುಖದಲ್ಲಿ ತಾನು ಮಾಡಬಹುದಾದಷ್ಟು ಮಾಡಿದೆ ಎಂಬ ಸಮಾಧಾನವಿದೆ. ಗಾಂಧೀಜಿ ಇವತ್ತು ನಮ್ಮೊಡನಿಲ್ಲ. ಅವರ ಕಲ್ಪನೆ, ಕನಸು ಸಾಕಾರಗೊಳಿಸುವುದನ್ನೇ ಬದುಕಿನ ತಪಸ್ಸು, ಧ್ಯಾನವಾಗಿಸಿಕೊಂಡ ಲಾರೀ ಬೇಕರ್ ಇದ್ದಾರೆ. ಇವತ್ತಿಗೂ ತಮ್ಮ ಇಳಿ ವಯಸ್ಸಿನಲ್ಲಿ ತಿರುವನಂತಪುರದ ಹೊರ ವಲಯದಲ್ಲಿ ಉತ್ಸಾಹದಿಂದ ಪುಟಿಯುತ್ತಾ ತಿರುಗಾಡುವ ಬೇಕರ್ ಅವರಂಥವರು ನಮ್ಮೊಡನೆ ಇದ್ದಾರಲ್ಲ ಎಂಬುದೇ ನನ್ನಂಥವನಿಗೆ ಬಹು ದೊಡ್ಡ ಸಮಾಧಾನ. ಕತ್ತಲೆಯ ನಡುವೆ ಒಂದು ಬೆಳಕಿನ ಕುಡಿ ಕಂಡ ಹಾಗೆ.



ಮನೆಯ ಮೊಗಸಾಲೆಯೊಳಗೇ ಪ್ರಕೃತಿಗೂ ಜಾಗ-ಬೇಕರ್ ಕಟ್ಟಿದ ಒಂದು ಮನೆ


■ ಕೆ.ಎನ್. ಅರುಣ್.

ಮದುವೆ ಮೆರವಣಿಗೆಗೆ ಬಾರದೇ ಕೈಕೊಟ್ಟ ಬ್ಯಾಂಡ್ ಸೆಟ್ ಕಂಪೆನಿಯೊಂದು ಈಗ ದಂಡ ತೆರಬೇಕಾಗಿ ಬಂದಿದೆ. ಅಮೃತಸರದ ಜಗದೀಶ್ ಸಿಂಗ್ ಮಗನ ಮದುವೆ ಮೆರವಣಿಗೆಗೆಂದು ಅಲ್ಲಿನ ಪ್ರಸಿದ್ಧ 'ಜಗಮೋಹನ್ ಕಾ ಅಸಲಿ ಲಾಹೋರ್ ಬ್ಯಾಂಡ್ ಸೆಟ್' ಗೊತ್ತು ಮಾಡಿದ್ದರು. ಮದುವೆ ಮೆರವಣಿಗೆ ಹೊರಡುವ ಸಮಯಕ್ಕೆ ಬ್ಯಾಂಡ್‌ಸೆಟ್ ಬರಲಿಲ್ಲ. ತೀರಾ ಪರದಾಡಿ ಕೊನೆಗಳಿಗೆಯಲ್ಲಿ ಇನ್ನೊಂದು ಬ್ಯಾಂಡ್‌ಸೆಟ್ ವ್ಯವಸ್ಥೆ ಮಾಡಲಾಯಿತು.

ಇಷ್ಟಕ್ಕೇ ಸುಮ್ಮನಾಗದ ಜಗದೀಶ್‌ಸಿಂಗ್ ಅಮೃತಸರದ ಗ್ರಾಹಕ ವೇದಿಕೆಗೆ ಬ್ಯಾಂಡ್‌ಸೆಟ್ ವಿರುದ್ಧ ದೂರಿತ್ತರು. ಅಹವಾಲು ವಿಚಾರಿಸಿದ ವೇದಿಕೆ ಮುಂಗಡವಾಗಿ ಪಡೆದಿದ್ದ ಎಂಟುನೂರು ರೂಪಾಯಿ ಹಿಂದಿರುಗಿಸುವಂತೆ ಬ್ಯಾಂಡ್‌ಸೆಟ್ ಮಾಲೀಕರಿಗೆ ತಿಳಿಸಿತು. ಇದರಿಂದ ತೃಪ್ತರಾಗದ ಜಗದೀಶ್ ಸಿಂಗ್ ರಾಜ್ಯಮಟ್ಟದ ವೇದಿಕೆಗೆ ಅಪೀಲ್ ಮಾಡಿದರು. ಅಲ್ಲಿ ಮುಂಗಡ ಹಣ ವಾಪಸು ಮಾಡುವುದರ ಜೊತೆಗೇ ಒಂದು ಸಾವಿರ ರೂ. ದಂಡವನ್ನೂ ನೀಡಬೇಕೆಂದು ತೀರ್ಪು ಹೊರಬಿದ್ದಿದೆ.

ಮದುವೆ ವ್ಯಕ್ತಿಯೊಬ್ಬನ ಬದುಕಿನ ಅಪರೂಪದ ಪ್ರಸಂಗ. ಮೆರವಣಿಗೆಯಲ್ಲಿ ಬ್ಯಾಂಡ್‌ಸೆಟ್ ಕಡ್ಡಾಯ. ಮುಂಗಡ ಹಣ ಪಡೆದು ತಪ್ಪಿಸಿದ ಬ್ಯಾಂಡ್‌ಸೆಟ್ ತಪ್ಪೆಸಗಿತು ಎಂಬುದು ವೇದಿಕೆಯ ತೀರ್ಪು.

⌘



ತಾರಿ

ಕತೆ

ವಾಸುದೇವ ಶೆಟ್ಟಿ

ದೋಣಿ ಬಂದು ದಡಕ್ಕೆ ತಾಗಿದ ಕೂಡಲೆ ಹೊನ್ನ ಉಸ್ ಎಂದು ದೀರ್ಘ ಉಸಿರೆಳೆದುಕೊಂಡ. ದೋಣಿಯಲ್ಲಿದ್ದವರೆಲ್ಲ ಒಬ್ಬೊಬ್ಬರಾಗಿ ಇಳಿದ ಮೇಲೆ ಸೊಂಟಕ್ಕೆ ಸಿಕ್ಕಿಸಿಕೊಂಡ ಸಂಚಿ ತಗೆದ. ಎಲೆಗೆ ಸುಣ್ಣ ಒರೆಸಿ ಮಧ್ಯದಲ್ಲೊಂದು ಅಡಿಕೆ ಹೋಳನ್ನು ಹಾಕಿದ. ಅಡಗದ ಮೇಲೆ ಅದನ್ನಿಟ್ಟು ಮೆಟ್ಟುಹಲಗೆಯ ಕೆಳಗೆ ಇದ್ದ ಸಣ್ಣ ಕಲ್ಲನ್ನು ತೆಗೆದು ಕುಟ್ಟಿಕುಟ್ಟಿ ಸಣ್ಣದಾಗಿ ಮಾಡಿ ನಂತರ ಬಾಯಲ್ಲಿ ಹಾಕಿಕೊಂಡು ಅಗಿಯಲಾರಂಭಿಸಿದ. ಚಿಕ್ಕ ಹೊಗೆಸೊಪ್ಪಿನ ತುಣುಕಿಗೆ ಸುಣ್ಣ ಒರೆಸಿ ಬಾಯಲ್ಲಿ ಎಸೆದುಕೊಂಡ ಕವಳ ಕೆಂಪಾಗುತ್ತಿದ್ದಂತೆ ಪಿಚಕ್ಕೆಂದು ನೀರಿನಲ್ಲಿ ಉಗುಳಿದ. ಮೀನು ಮರಿಗಳು ಅದನ್ನು ಮುತ್ತುವುದನ್ನು ನೋಡುತ್ತ ಒಂದು ಕ್ಷಣ ಕುಳಿತ.

ಜಲವಳ್ಳಿ ಕಡೆಯಿಂದ 'ಕೂSS' ಹಾಕಿದ ಧ್ವನಿ ಕೇಳಿಸಿತು. ಕತ್ತು ಹೊರಳಿಸಿ ಆ ಕಡೆ ನೋಡಿದ. ನಾಲ್ಕೈದು ಜನ ನಿಂತಿದ್ದರು. ಇಲ್ಲಿಂದ ಆಚೆ ಹೋಗುವವರು ಯಾರೂ ಇಲ್ಲ. ವಿಷ್ಣುನಾಯ್ಕರ ಚಾದಂಗಡಿ ಕಡೆ ನೋಡಿದ. ಮೂರ್ನಾಲ್ಕು ಜನ ಚಾ ಕುಡಿಯುತ್ತಿದ್ದರು. ಜಲವಳ್ಳಿಗೆ ಬರುವವರು ಅವರಲ್ಲಿ ಒಬ್ಬರೂ ಕಾಣಲಿಲ್ಲ. ಶಾನುಭಾಗರ ಕಿರಾಣಿ ಅಂಗಡಿಯಲ್ಲಿ ನೋಡಿದ. ಸಣಕೂಸ, ಮಂಜಪ್ಪ ಇದ್ದರು. ಅವರು ಬರುತ್ತಾರೆ ಎಂದು ಖಾತ್ರಿ ಆಯ್ತು. ದೋಣಿ ಬಿಡುತ್ತೇನೆ ಎಂಬುದನ್ನು ಸೂಚಿಸುವವನಂತೆ ಹೊನ್ನ 'ಕೂS' ಹಾಕಿದ.

'ನಾಬತ್ನೋ' ಎಂದು ಸಣಕೂಸ ಅಂಗಡಿಯೊಳಗಿನಿಂದಲೇ ಕೂಗಿದ. ಕೆಲಸಿ ಮಾದುನ ಮಗನ ಮುಂದೆ ಗಡ್ಡ ಕೆರಿಸಿಕೊಳ್ಳುತ್ತ ಕುಳಿತಿದ್ದ ಮಂಜಯ್ಯನೂ 'ತಾನು ಬರುತ್ತೇನೆ' ಎಂಬಂತೆ ಕುಳಿತಲ್ಲೇ ಸನ್ನೆ ಮಾಡಿದ.

'ಬಿರ್‍ರನೆ ಬರ್‍ರೋ, ಆಚೆ ನಿಂತವ್ರ ಜೀಂವ ಹೋಗ್ತದೆ' ಎಂದ ಹೊನ್ನ ತನ್ನ ಯಾವತ್ತಿನ ಧ್ವನಿಯಲ್ಲಿ.

ಒಬ್ಬೊಬ್ಬರಾಗಿ ಬಂದು ದೋಣಿ ಹತ್ತಿದರು. ಹೊನ್ನ ದೋಣಿ ಹೊರಗೆ ಮಾಡಿದ. ಹತ್ತು ಮಾರು ಮುಂದೆ ಹೋಗಲಿಲ್ಲ, ಅಷ್ಟರಲ್ಲೇ ನಾಕಾ ಕಡೆಯಿಂದ ಒಬ್ಬ 'ಕೂS' ಹಾಕುತ್ತ ಓಡಿ ಬಂದ. ಮುಂದೆ ಹೋದವನಿಗೆ ಹಿಂದೆ ಬರುವುದಕ್ಕೆ ಮನಸ್ಸಿಲ್ಲ. ಬಿಟ್ಟು ಹೋದರೆ ಇನ್ನರ್ಧತಾಸು ಬಯ್ಯುತ್ತ ಕೂಡುತ್ತಾನೆ ಎಂದು ಗೊಣಗುತ್ತಲೆ ಹೊನ್ನ ದೋಣಿಯನ್ನು ಹಿಂದೆ ತಂದ. ಅವನನ್ನೂ ಹತ್ತಿಸಿಕೊಂಡು ಹೊರಟ.

ಜಲವಳ್ಳಿ-ಬಳಕೂರು ನಡುವೆ ಶರಾವತಿ ನದಿಯ ಈ ತಾರಿ ದಾಟಿಸುವ ಕಾರ್ಯ ಹೊನ್ನನ ಕುಟುಂಬದವರಿಗೆ ವಂಶಪಾರಂಪರ್ಯವಾಗಿ ಬಂದದ್ದು. ಎಷ್ಟು ತಲೆಗಳ ಹಿಂದೆ ಅವರಿಗೆ ಈ ತಾರಿ ದಾಟಿಸುವ ಕೆಲಸ ಗಂಟುಬಿತ್ತೋ ಗೊತ್ತಿಲ್ಲ.

ಬಳಕೂರು, ಜಲವಳ್ಳಿ, ಇಡಗುಂಜಿ, ಕರಿಕೂರ್ವೆ, ಹೊಸಾಡು, ಪಡುಕುಳಿ,

ಮರಬಳ್ಳಿ ಹೀಗೆ ಸುತ್ತ ನಾಲ್ಕೂರಿನ ಜನರು ಇಲ್ಲಿ ದಾಟಾಡುತ್ತಾರೆ. ಆದರೆ ಅವರು ತಾರಿಯವನಿಗೆ ದುಡ್ಡಕೊಡುತ್ತಿರಲಿಲ್ಲ. ಅವರೆಲ್ಲ ಕೊಡುವುದು ಮೈರಿ. ಮೈರಿಯೆಂದರೆ ಒಂದು ಕುಟುಂಬ ವರ್ಷದಲ್ಲಿ ಒಂದು ಬಾರಿ ಧಾನ್ಯದ ರೂಪದಲ್ಲಿ ಕೂಲಿ ಕೊಟ್ಟುಬಿಡುವುದು. ಇಲ್ಲಿ ಮೈರಿ ತಾರಿಯವರಿಗೆ ಮಾತ್ರವಲ್ಲ, ತಲೆ ಬೋಳಿಸುವ, ಗಡ್ಡಕೆರೆಸುವ ಕೆಲಸಿ, ಕತ್ತಿಗಳಿಗೆ ಹಲ್ಲುಹಾಕಿ, ಹಿಡಿಕೆ ಹಾಕಿಕೊಡುವ, ಕುಟಾರಿ, ಪಿಕಾಸುಗಳಿಗೆ ಕಾವುಹಾಕಿ ಕೊಡುವ ಆಚಾರಿಗೂ ಮೈರಿಯೇ. ತಾರಿಗೆ ಮೈರಿ ಕೊಡುವ ಕುಟುಂಬದವರು ಕಾಸುಕೊಡದೆ ಎಷ್ಟುಬಾರಿ ಬೇಕಾದರೂ ದಾಟಬಹುದು. ಪರಸ್ಥಳದಿಂದ ಬಂದವರು ಮಾತ್ರ ದುಡ್ಡುಕೊಟ್ಟು ದಾಟಬೇಕು. ಚವತಿ ಹಬ್ಬ, ಇಡಗುಂಜಿ ಮತ್ತು ಬಳಕೂರು ತೇರಿನ ದಿನಗಳಲ್ಲಿ ಮಾತ್ರ ಮೈರಿಯವರೂ ದುಡ್ಡುಕೊಟ್ಟು ದಾಟಬೇಕು.

ಕೆಲವು ಜಿಪುಣರು ಅಂಥ ದಿನಗಳಲ್ಲೂ, 'ಹೊನ್ನಣ್ಣ ನಾಳೆ ಕೊಡ್ತೆ, ಬೂರಣ್ಣ ಚಿಲ್ಲರೆ ಇಲ್ಲ', ಹೀಗೆ ಸಬೂಬು ಹೇಳಿ ತಪ್ಪಿಸಿಕೊಳ್ಳುವರು.

ಮೈರಿಯಾದರೂ ಸುರಳೀತ ದಕ್ಕುತ್ತದೆಯೆ? ಕೊಡುವ ಎರಡು ಕೊಳಗ ಬತ್ತಕ್ಕೆ ಎಂಟು ಸಲ ಅಲೆಯಬೇಕು. ಅಂಗಳದಲ್ಲಿ ಹೊಲಿರಾಶಿ ಬಿದ್ದಿದ್ದರೂ, 'ನಾಕುದಿನ ಬಿಟ್ಟು ಬಾ ಹೊನ್ನಣ್ಣ' ಎನ್ನುವವರೇ ಜಾಸ್ತಿ. ಇವೆಲ್ಲ ಅನುಭವಿಸಿ ಹೊನ್ನನಿಗೆ ತಾರಿ ದಾಟಿಸುವ ಕೆಲಸದ ಮೇಲೆಯೇ ಬೇಜಾರು ಬಂದಿತ್ತು. ''ಹರಕು ಬಲೆ ತೆಗೆದುಕೊಂಡು ಬೀಸಿದರೂ ಇದಕ್ಕಿಂತ ಹೆಚ್ಚು ಗಳಿಸಬಹುದು'' ಎಂದು ಅವನಿಗೆ ಒಮ್ಮೊಮ್ಮೆ ಸೂರ್ಯ ನಡುನೆತ್ತಿಗೆ ಬಂದಾಗ ಅನ್ನಿಸಿಬಿಡುವುದು.

ಹೊನ್ನನ ತಮ್ಮ ಬೂರ ಇದೇ ರೀತಿ ಬೇಜಾರು ಬಿಟ್ಟುಕೊಂಡಿದ್ದ. ತಾರಿನೂ ಸಾಕು, ವರ್ಷದ ಕೊನೆಗೆ ಬೇಡೂದೂ ಸಾಕು ಎಂದುಕೊಂಡು ಗಣಪಯ್ಯ ಮೇಸ್ತರ ಮಚ್ವೆಗೆ ಹೋಗಿದ್ದ. ಗೋವಾ, ಮುಂಬಯಿ, ಮಂಗಳೂರು, ಕೊಚ್ಚಿ ಎಂದು ಎರಡು ವರ್ಷ ಖುಷಿಯಿಂದಲೇ ಓಡಾಡಿದ್ದ. ಮೂರನೆ ವರ್ಷ ಮಚ್ವೆಗೆ ಹೋದ ಬೂರ ವಾಪಸ್ಸು ಬರಲಿಲ್ಲ. ಸಮುದ್ರ ಮಧ್ಯದಲ್ಲಿ ಮಚ್ವೆ ತುಫಾನಿಗೆ ಸಿಕ್ಕಿ ಬೂರ ನೀರಿಗೆ ಬಿದ್ದ ಎಂದರು. ಅವನ ಹೆಣ ಮಾತ್ರ ಸಿಗಲಿಲ್ಲ.

ಬೂರನ ಹೆಂಡತಿ ಕುಂಕುಮ ಅಳಿಸಲಿಲ್ಲ. ಬಳೆ ಒಡೆದುಕೊಳ್ಳಲಿಲ್ಲ. ಗಂಡನ ಹೆಣ ನೋಡದೆ ಅಂವ ಸತ್ತಿದ್ದಾನೆ ಎಂದು ತಿಳಿಯುವುದು ಹೇಗೆ? ಎಂದು ಅವಳು ಮುತ್ತೈದೆಯಂತೆ ಇರಲು ನಿರ್ಧರಿಸಿದಳು. ತನ್ನ ಗಂಡ ಪವಾಡ ಸದೃಶವಾಗಿ ಹೇಗೋ ಪಾರಾಗಿದ್ದಾನೆ. ಎಲ್ಲೋ ಹೊರದೇಶದಲ್ಲಿ ಇರಬಹುದು. ಇಂದಲ್ಲ ನಾಳೆ ಬಂದೇ ಬರ್ತಾನೆ ಎಂದು ವಿಶ್ವಾಸದಿಂದ ಹೇಳುತ್ತಾಳೆ. ಇದಾಗಿ ಸುಮಾರು ಹತ್ತು ವರ್ಷವೇ ಕಳೆದು ಹೋದವು. ಬೂರ ಮಾತ್ರ ಇವತ್ತಿಗೂ ಬಂದಿಲ್ಲ.

ಬೂರನ ಮಕ್ಕಳು ಈಗ ಹೊಂತ್ಕಾರಿಗಳಾಗಿದ್ದಾರೆ. ಬಲೆ ಬೀಸುವುದು, ಗಾಳ ಹಾಕುವುದು, ಕಂಟ್ಲೆ ಬಿಡುವುದು ಇತ್ಯಾದಿ ಮಾಡುತ್ತಾರೆ. ಅವರು ಹಿಡಿದ ಮೀನು ತಿನ್ನಲು ಹತ್ತಾರು ಕಾಯಂ ಗಿರಾಕಿಗಳೇ ಇದ್ದಾರೆ. ಕಿರಿಯ ಮಗನಿಗೆ ಗೋವಾಕ್ಕೆ ಮಿನುಲಾಂಚಿಗೆ ಹೋಗುವ ಆಸೆ. ಅವನ ಸರೀಕರೆಲ್ಲ ಗೋವಾಕ್ಕೆ ಹೋಗಿ ಸಾವಿರಾರು ರೂಪಾಯಿ ತರುವುದು ಅವನ ಕಣ್ಣಿಗೂ ಬೀಳುತ್ತಿದೆ. ಆದರೆ ಅವನ ಅವ್ವ ಮಾತ್ರ ಹರಗೀಸು ಹೋಗುವುದೇ ಬೇಡ ಎಂದು ತಾಕೀತು ಮಾಡಿದ್ದಳು. ಗಂಡನನ್ನು ಸಮುದ್ರ ನುಂಗಿದ ಬಳಿಕ ತನ್ನ ಮಕ್ಕಳನ್ನು ಮತ್ತೆ ಸಮುದ್ರಕ್ಕೆ ಕಳುಹಿಸಲು ಅವಳ ಮನಸ್ಸು ಅಳುಕುತ್ತಿತ್ತು.

ಜಲ್ಲ ಮುಟ್ಟದಷ್ಟು ಆಳ. ಹೊನ್ನ ಜಲ್ಲವನ್ನು ಬದಿಗಿಟ್ಟು ಹುಟ್ಟು ಕೈಯಲ್ಲಿ ಹಿಡಿದು ತೊಳಿಸಿದ. ಮೂಡುಗಾಳಿ ಜೋರು. ಗಾಸು ಜೋರಾಗಿತ್ತು. ಒಂದು ಗಾಸಂತೂ ದೋಣಿಯಲ್ಲೇ ಬಿತ್ತು. ದೋಣಿಯಲ್ಲಿ ಕುಳಿತವರೆಲ್ಲ ಹೊಸಬರೇನಲ್ಲ. ಪ್ಯಾಟಿಯವರು ಯಾರಾದರೂ ಇದ್ದಿದ್ದರೆ 'ಅಯ್ಯೋ' ಎಂದು ಕೂಗೇ ಬಿಡೋರು.

ಹೊನ್ನ ದೋಣಿ ನಡೆಸುವುದರಲ್ಲಿ ಎತ್ತಿದಕೈ. ಮಳೆಗಾಲದಲ್ಲಿ ಶರಾವತಿಗೆ ನೆಗಸು ಬಂದಾಗ ಹೊಯ್ಲು ಅದೆಷ್ಟು ಅಂತೀರಿ. ಅಂಥದರಲ್ಲೂ ಅಳುಕದೆ ಹೊನ್ನ ಆಚೆ ಈಚೆ ದೋಣಿ ನಡೆಸುತ್ತಾನೆ.

ಶರಾವತಿಗೆ ನೆಗಸು ಬಂದು ಹೊಯ್ಲು ಜೋರಾಯಿತು ಎಂದರೆ ಹೊನ್ನನಿಗೆ ಮತ್ತೊಂದು ರೀತಿ ಕೊಯ್ಲು. ಗೇರುಸಪ್ಪಾ ಕಡೆಯಿಂದ ರಭಸದಿಂದ ಬರುವ ನೀರಿನ ಜೊತೆಯಲ್ಲೇ ಕಟ್ಟಿಗೆ ತುಂಡುಗಳು, ದೊಡ್ಡ ದೊಡ್ಡ ಮರದ ದಿಮ್ಮಿಗಳು ಬಳಿ ಬರುತ್ತಿದ್ದವು. ಅವನ್ನು ಹಿಡಿದು ಯಾರಿಗಾದರೂ ಮಾರಿ ನಾಲ್ಕು ಕಾಸು ಮಾಡಿಕೊಳ್ಳುತ್ತಿದ್ದ.

ಜಲವಳ್ಳಿ-ಬಳಕೂರು ನಡುವೆ ಕರಿಕೂರ್ವೆ ಪುಟ್ಟ ದ್ವೀಪ. ಅರವತ್ತು ಎಪ್ಪತ್ತು ಮನೆಗಳು ಅಲ್ಲಿ, ಮೊದಲಾದರೆ ಕೂರ್ವೆ ತುದಿಯಲ್ಲಿ ಯಾರಾದರೂ ನಿಂತಿದ್ದರೆ ಬಳಕೂರಲ್ಲೂ ಕಾಣುತ್ತಿತ್ತು. ಈಗ ಅದನ್ನು ಬಳಸಿ ದುಗ್ಗದ ಬೇಲಿ ಹೊರೆದುಬಿಟ್ಟಿದೆ, ಹೊರೆದ ಬೇಲೆಗೆ ಯಾರ‍್ಯಾರೋ ಬಂದು ಬೇಲಿ ಹಾಕಿದ್ದಾರೆ. ಹಿಂಡಾಗಿ ಬೆಳೆದ ಬೇಲಿಯಿಂದಾಗಿ ಕರಿಕೂರ್ವೆ ಮರೆಯಾಗಿದೆ. ಅವರ ಬೇಲಿಯನ್ನೆಲ್ಲ ಸುತ್ತಿ ಬಳಸಿ ಬರುವುದರಿಂದ ಹೊನ್ನನಿಗೆ ಮತ್ತೆ ಹತ್ತು ಜಲ್ಲು ಹೆಚ್ಚಿಗೆ ಒತ್ತುವ ತ್ರಾಸು.

ಜಮೀನು ಮಾಡುವವರ ಮನೆ ಹಾಳಾಗ್ಲಿ ಎಂದು ಅವನು ಮನಸ್ಸಿನಲ್ಲೇ ಬೈದುಕೊಳ್ಳುತ್ತಾನೆ. ಬೇಲಿದೇ ದೊಡ್ಡ ಪುರಾಣ ಇದೆ. ಕಬ್ಜಾ ಮಾಡಿದವರಲ್ಲೇ ತಕರಾರು, ಜಗಳ, ಬಡಿದಾಟ ಆಗಿ ಪೋಲೀಸು, ಕೋರ್ಟು ಅಂತೆಲ್ಲ ಆಗಿ ಬಿಟ್ಟಿದೆ.

ದೋಣಿಬಂದ ಸಳಪಳ ಸದ್ದು ಕೇಳಿ ಕೂರ್ವೆ ತುದಿಯಲ್ಲಿ ನಿಂತವರು ''ಕೂSS' ಹಾಕಿ ತಮ್ಮ ಅಸ್ತಿತ್ವ ತೋರಿಸಿಕೊಂಡರು. ಹೊನ್ನ ಕರಿಕೂರ್ವೆಗೆ ದೋಣಿ ತಂದು ನಿಲ್ಲಿಸಿ ಅವರನ್ನು ಹತ್ತಿಸಿಕೊಂಡ.

ಜಲವಳ್ಳಿಗೆ ದೋಣಿ ತಂದು ತಾಡಿ ಒಂದು ಕವಳ ಕುಟ್ಟುವಷ್ಟರಲ್ಲಿ ಬಳಕೂರು ಕಡೆಯಿಂದ 'ಕೂS' ಕೇಳಿಸಿತು. ಎದ್ದು ಸಾವರಿಸಿಕೊಂಡು ದೋಣಿಯೊಳಗಿನ ನೀರನ್ನೆಲ್ಲ ಅಡಿಕೆ ಮರದ ಹಾಳೆಯಿಂದ ಮೊಗೆದು ಹೊರಚೆಲ್ಲಿದ. ದೋಣಿ ಲಟ್ಟಾಗಿದೆ. ಹದಿನೆಂಟು ಕಡೆ ಹೊಲಿಕೆ. ನೀರುಬರುವುದು ನಿಲ್ಲುವುದಿಲ್ಲ. ಹೊನ್ನನ ಹಿರಿಯಮಗನಿಗೆ ಆದಷ್ಟು ಪ್ರಾಯ ಈ ದೋಣಿಗೆ ಆಗಿದೆ. ಗಟ್ಟಿ ಜಾತಿ ಮರದ ದೋಣಿ ಆಗಿದ್ರೆ ತಾಳಿಕೆ ಬರ‍್ತಿತ್ತು.

ಒಂದ್ಸಲ ನೆಗಸು ಬಂದು ಸಾವಿರಾರು ಮನೆ ನೆಲಕಚ್ಚಿದವು. ಸರಕಾರದವರು ಆಗ ಪರಿಹಾರ ಕೊಟ್ಟಿದ್ದರು. ಕೆಲವರು ಹೊನ್ನನಿಗೆ ಸರಕಾರದಿಂದ ಒಂದು ದೋಣಿಗಾಗಿ ಅರ್ಜಿಹಾಕು ಎಂದರು. ಮನಸ್ಸಿಲ್ಲದೆ ಮನಸ್ಸಿನಿಂದ ಹೊನ್ನ ಅರ್ಜಿ ಹಾಕಿದ. ಸರಕಾರದ ಹಂಗು ಏಕೆ? ಎಂಬ ತರ್ಕ ಅವನದು. ಅದೇನು ಸುರಳೀತ ಸಿಗುತ್ತದೆಯೇ? ಕೆಲಸ ಬಿಟ್ಕೊಂಡು ಮಂದಿ ಮನೆ ಬಾಗಿಲು ಕಾಯುವ ಕೆಲಸ ಮಾಡಬೇಕು. ಅಂಥದ್ದೆಲ್ಲ ಹರಗೀಸ ಅವನಿಗೆ ಆಗೂದಿಲ್ಲ.

ಅರ್ಜಿಯೇನೋ ಹಾಕಿದ. ಅವನ ತಾರಿ ಎರಡು ಪಂಚಾಯ್ತಿ ವ್ಯಾಪ್ತಿಯಲ್ಲಿ ಬರುವ ಕಾರಣ., ಒಂದು ಪಂಚಾಯ್ತಿಯವರು 'ಅವರು' ಕೊಡಲಿ ಎಂದೂ, ಇನ್ನೊಂದು ಪಂಚಾಯ್ತಿಯವರು 'ಅವರು' ಕೊಡಲಿ ಎಂದೂ ಜಗ್ಗಾಡಿ, ಅರ್ಜಿ ವಿಲೆಗೆ ಹಾಕಿದ್ದರು. ಹೊನ್ನನಿಗೆ ಅದೇ ಹಳೆದೋಣಿ.

ದೋಣಿಗೆ 'ಸುಣ್ಣ' ಮಾಡುವಾಗ ಶೆಟ್ಟರ ಮನೆಯ ದೋಣಿಯನ್ನು ಬಾಡಿಗೆಗೆ ತಂದುಕೊಳ್ಳುತ್ತಿದ್ದ. ಅವರದೂ ನೂರಾರು ಅಚಿಗಳು. ಅಡಗದ ಮೇಲೆ ಜನರನ್ನು ಕೂಡಿಸಬೇಡ, ಬಾಣಿಗೆ ಮೇಲೆ ಹುಟ್ಟು ಹೊಡೆಯಬೇಡ, ದೋಣಿ ತಾಡುವಾಗ ಕಲ್ಲಿಗೆ ಬಡಿಸಬೇಡ ಹೀಗೆ ಇನ್ನೂ ಏನೇನೋ.

ಜನರು ತುಂಬಿದ ದೋಣಿಯನ್ನು ಹೊನ್ನ ಬಳಕೂರು ಕಡೆ ತಿರುಗಿಸಿದ. ಹೊನ್ನನದೇನು ದೊಡ್ಡ ಸಂಸಾರವಲ್ಲ. ಇಬ್ಬರು ಗಂಡು ಮಕ್ಕಳು, ಮೂವರು ಹೆಣ್ಣು ಮಕ್ಕಳು. ಇಬ್ಬರು ಹೆಣ್ಣು ಮಕ್ಕಳ ಮದುವೆಯಾಗಿದೆ. ಹಿರಿಯಮಗನಿಗೆ ಇಡಗುಂಜಿ ಗಣಪತಿಯ ಹೆಸರನ್ನೇ ಇಟ್ಟಿದ್ದ. ಆದರೆ ಎಲ್ಲರೂ ಅವನನ್ನು ಗಣು ಎಂದೇ ಕರೆಯುತ್ತಿದ್ದರು. ಎರಡನೇ ಮಗನಿಗೆ ಗುಣವಂತೆ ದೇವರ ಹೆಸರೆಂದು ಈಶ್ವರ ಎಂದಿಟ್ಟಿದ್ದ. ಗಣ್ಣು ತನ್ನ ಹೆಣ್ಣು ತಾನೇ ನೋಡ್ಕಂಡು ಮದ್ವೆ ಮಾಡಿಕೊಂಡಿದ್ದ. ಹೀಗಾಗಿ ಅಪ್ಪ ಅವಿಗೆ ಅವನ ಮೇಲೆ ಸ್ವಲ್ಪ ಬೇಜಾರೇ. ಅವನ ಹೆಂಡತಿ ಸ್ವಭಾವನೂ ಸ್ವಲ್ಪ ಒರಟೇ. ಹೀಗಾಗಿ ಹಿರಿಯ ಮಗನನ್ನು ಅವರು ಹೊರಗೆ ಇಟ್ಟಿದ್ದರು. ಇವರ ಮನೆಯ ಬದಿಯಲ್ಲೇ ಅವನದೂ ಬಿಡಾರ ಇದೆ. ಎರಡನೆ ಮಗ ಈಶ್ವರ ಅಪ್ಪ ನೋಡಿದ ಹೆಣ್ಣನ್ನೇ ಮದ್ವೆಯಾಗಿದ್ದ. ಮನೆಯಲ್ಲೇ ಇದ್ದು ಕೆಲಸದಲ್ಲಿ ಅಪ್ಪನಿಗೆ ನೆರವಾಗುತ್ತಿದ್ದ. ಒಂದೊಂದು ದಿನ ಅವನೂ ತಾರಿ ದಾಟಿಸಲು ಬರುತ್ತಿದ್ದ. ಇನ್ನು ಕಿರಿಯಮಗಳೊಬ್ಬಳ ಮದುವೆ ಮಾಡಿಬಿಟ್ಟರೆ ತಾನು ಗೆದ್ದೆ ಅಂದುಕೊಂಡಿದ್ದಾನೆ ಹೊನ್ನ. ಕಳೆದ ಬೇಸಿಗೆಯಲ್ಲಿ ಒಂದೆರಡು ಕಡೆಯ ನೆಂಟಸ್ತಿಕೆಯೂ ಬಂದಿತ್ತು. ಸರಿಯಾದ ಜಾಗ ಅಲ್ಲ ಎಂದು ಇವರೇ ಮನಸ್ಸು ಮಾಡಿರಲಿಲ್ಲ.

ದೋಣಿ ಬಳಕೂರಿಗೆ ಬಂದು ತಾಡಿತು. ದೂರದೂರಿನಿಂದ ಬಂದ ಒಂದಿಬ್ಬರು ಕೊಟ್ಟ ಕಾಸನ್ನು ಸೊಂಟಕ್ಕೆ ಸಿಕ್ಕಿಸಿಕೊಂಡ. ವಿಷ್ಣುನಾಯ್ಕರ ಅಂಗಡಿಯಲ್ಲಿ ಚಾ ಕುಡಿಯುತ್ತಿದ್ದ ಸುಬ್ರಾಯನಾಯ್ಕ 'ಬಾರೋ ಹೊನ್ನಣ್ಣ, ಚಾ ಹೇಳಿನಿ' ಎಂದ. 'ಈಗ ಎಂಥಕ್ಕಾಗಿತ್ತೋ' ಎಂದು ಹೇಳುತ್ತಲೆ, ದೋಣಿಯ ಲಂಗರು ಕಲ್ಲು ಮೇಲೆಸೆದು ಹೊನ್ನ ಚಾದಂಗಡಿ ಕಡೆ ನಡೆದ. ದಿನದಲ್ಲಿ ಹೀಗೆ ಎಂಟ್ಹತ್ತು ಚಾ, ಸಂಕ್ರಪೊಳೆ ಅವನ ಹೊಟ್ಟೆಗೆ ಇಳಿಯುತ್ತಿತ್ತು. ಚಾ ಹೆಚ್ಚಾಗಿ ಊಟವೇ ಹೊಟ್ಟೆಗೆ ಇಳಿತಿರಲಿಲ್ಲ. ಸಂಜೆ ಮನೆಗೆ ಹೋಗಬೇಕಿದ್ದರೆ ಶಿಸ್ತಾಗಿ ಅರ್ಧ ಬಾಟ್ಲಿ ಕಳ್ಳು ಇಳಿಸುತ್ತಿದ್ದ.

ಮನೆಗೆ ಹೋದ ಮೇಲಾದರೂ ಸುಖವಾಗಿ ನಿದ್ದೆ ಇದೆಯೆ? ಯಾರ್‍ಯಾರೋ ಬರುವವರು. 'ಹೊನ್ನಣ್ಣ ಬಗೀಲೆ ಆಚೆ ಹಾಕೋ' ಎನ್ನುವರು. ಕೋಳಿಪಡೆಗೆ ಹೋದವರು, ತೇರಿಗೆ ಹೋದವರು ಆಸ್ಪತ್ರೆಗೆ ಹೋದವರು, ಘಟ್ಟಕ್ಕೆ ಹೋಗಿ ತಡವಾಗಿ ಬಂದವರು ಹೀಗೆ ಯಾರ್‍ಯಾರೋ. ರಾತ್ರಿ ತಾರಿ ದಾಟಿಸಿದ್ದಕ್ಕಾಗಿ ಮೈರಿಯವರಿದ್ದರೂ ಕಾಸು ಕೊಡುತ್ತಿದ್ದರು. ಕೆಲವರು ಬಾಯಲ್ಲಷ್ಟೇ ದೊಡ್ಡಸ್ತಿಕೆ ತೋರಿಸುತ್ತ, ದೋಣಿ ಇಳಿದು ಹೋಗಬೇಕಿದ್ದರೆ, ''ಹೊನ್ನಣ್ಣ, ನಾಳೆ ಬೆಳಗಾಗೆ ಸಿಕ್ರೋ'' ಅಂತಿದ್ದರೂ ದಿನಾ ಮುಖ ನೋಡಬೇಕಾದವರ ಜೊತೆ ಮುಖ ಮುರಿದುಕೊಳ್ಳಲು ಆಗುತ್ತದೆಯೇ? ಮನಸ್ಸಿನಲ್ಲೇ ಸಿಟ್ಟು ಬಂದರೂ 'ಕಾಸೇನು ಓಡಿ ಹೋಗ್ತದಾ?' ಎಂದು ದೇಶಾವರಿ ಮಾತನಾಡುತ್ತಿದ್ದ.

ವಿಷ್ಣು ನಾಯ್ಕರ ಅಂಗಡಿಯಲ್ಲಿ ಚಾಕುಡಿದು ಹೊನ್ನ ದೋಣಿಗೆ ಬರುವುದರೊಳಗೆ ನಾಲ್ಕಾರು ಜನ ದೋಣಿ ಏರಿದ್ದರು. ಇಡಗುಂಜಿ ದೇವಸ್ಥಾನಕ್ಕೆ ಹೋಗಿ ಬಂದ ಸಣಕೂಸ ಹೊನ್ನನಿಗೆ ಪಂಚಖಾದ್ಯ ಹೂವಿನ ಎಸಳು ಕೊಟ್ಟ. ಪಂಚಖಾದ್ಯ ಬಾಯಲ್ಲಿ ಹಾಕಿಕೊಂಡು ಮುಂಡಾಸ ಎತ್ತಿ ಅದರ ಅಡಿಗೆ ಹೂವಿನ ಎಸಳು ಹಾಕಿಕೊಂಡ.



ದೋಣಿಯಲ್ಲಿ ದೇವರಾಯನ ಕಂಡ ಹೊನ್ನ 'ಘಟ್ಟದಿಂದ ಈಗ ಬಂದ್ಯಾ?' ಎಂದು ಕೇಳಿದ. ಅವನು ಹೌದು ಎಂದ, 'ನಿನ್ನ ಹೆಂಡ್ತಿ ಬೆಳಗಾ ಮುಂಚಿನ ತಾರಿಗೆ ಈಚೆ ಬಂದು ಔಷಧ ತಗಂಡಿ ಹೋಯ್ತು. ನಿನ್ನ ಮಗ್ನಿಗೆ ಸೀಕಂತೆ' ಎಂದ ಹೊನ್ನ ದೇವರಾಯನಿಗೆ. 'ಹೌದೋ ಹೊನ್ನಣ್ಣ. ಅದು ಪತ್ರ ಬರಿಸಿ ಹಾಕಿತ್ತು. ಜ್ವರ, ತಂಡಿ ಎಂದಿತ್ತು. ನಾನು ಬಂದದ್ದೂ ಅದ್ಕೇ' ಅಂದ.

ದೋಣಿ ಜಲವಳ್ಳಿಗೆ ಬಂತು. ಎಲ್ಲರೂ ಇಳಿದರು. ದಡದಲ್ಲಿ ಗೋಯ್ದನ ಹೆಂಡ್ತಿ ನಿಂತಿದ್ದಳು. ಹೊನ್ನನ ಕೈಯಲ್ಲಿ ಒಂದು ಚೀಲ ಮತ್ತು ಹತ್ತು ರೂಪಾಯಿ ನೋಟುಕೊಟ್ಟು, 'ಹೊನ್ನಣ್ಣ ನಮ್ಮನಿ ಗಂಡಸ್ರು ಮನೀಲಿ ಇಲ್ಲ. ಶಾನುಭಾಗರ ಅಂಗಡಿಯಿಂದ ಎರಡು ರೂಪಾಯಿ ಮೆಣ್ಸು, ಕಾಲುಕಿಲೋ ಉದ್ದಿನ ಬೇಳೆ ತಂದುಕೊಡು. ನಿನ್ನ ದೋಣಿ ಬರಬೇಕಿದ್ರೆ ನಾ ಇಲ್ಲೇ ನಿಂತಿರ್ತೆ', ಎಂದಳು.

ಇಂಥ ಬಿಟ್ಟಿ ಕೆಲಸ ಆಕೆ ಒಬ್ಬಳೇ ಏಕೆ? ಇನ್ನು ಕೆಲವರು ಹೊನ್ನನಿಗೆ ಹಚ್ಚುತ್ತಿದ್ದರು. ಅದಕ್ಕಾಗಿ ಅವರ್‍ಯಾರೂ ಬಿಡೆ ಮಾಡಿಕೊಳ್ಳುತ್ತಿರಲಿಲ್ಲ. ಬೆಳಿಗ್ಗೆ ಮೊದಲಿನ ತಾರಿಗೇ ದುರ್ಗಪ್ಪನಾಯ್ಕ ಹಿತ್ತಾಳೆ ಬಾಸ್ಕೆಟಿನಲ್ಲಿ ಎರಡು ಶಿದ್ದೆ ಎಮ್ಮೆ ಹಾಲು ಹಾಕಿಕೊಂಡು ಬಂದು ಹೊನ್ನನ ಕೈಯಲ್ಲಿ ಕೊಟ್ಟು 'ಹೊನ್ನಣ್ಣ ಇದ ಬಗೀಲೆ ವಿಷ್ಣು ನಾಯ್ಕರ ಚಾದಂಗಡಿಗೆ ಕೊಟ್ಟುಬಿಡು' ಅಂತಿದ್ದ. ಸೂರ್ಯ ನೆತ್ತಿಗೆ ಬರುವಾಗ ವೆಂಕಮ್ಮ ದೊಣ್ಣೆ ಊರುತ್ತ ಬಂದು, 'ಹೊನ್ನ, ನನ್ನ ಮೊಮ್ಮಕ್ಕಳು ಹೈಸ್ಕೂಲಿಗೆ ಹೋದವರು ಊಟಕ್ಕೆ ಬಿಟ್ಟಾಗ ಬರ್ತಾರೆ, ಅಲ್ಲೇ ವಿಷ್ಣು ನಾಯ್ಕರ ಚಾದಂಗಡಿಯಲ್ಲಿ ಈ ಊಟದ ಡಬ್ಬಿ ಇರ್ಸು' ಎಂದು ಕೊಡುತ್ತಿದ್ದಳು.

ಕೆಲವು ಸಲ ಬಳಕೂರಿಗೆ ಬಂದ ಕರಿಕೂರ್ವೆ ಜಾಕಿ ಎರಡು ಕೋವೆ ಮೀನು ತಕ್ಕಂಡು, 'ಹೊನ್ನ ಇದು ನಮ್ಮ ಕಳ್ಳಂಗಡಿಯಲ್ಲಿ ಕೊಡು' ಅಂತಿದ್ದ. ಜಾಕಿ ಕೆಲಸ ಬಿಟ್ಟಿ ಎಂದು ಹೊನ್ನನಿಗೆ ಅನಿಸುತ್ತಿರಲಿಲ್ಲ. ಕಳ್ಳಂಗಡಿಯಲ್ಲಿ ಜಾಕಿನೇ ಇದ್ದಾಗ ಹೊನ್ನನಿಗೆ ಒಂದು ಪಾವು ಪುಕ್ಕಟೆ ಎಷ್ಟೋ ಕೊಟ್ಟದ್ದು ಇದೆ.

ತಾರಿ ದಾಟಲು ಬಂದವರು ಕಾಲುಗಂಟೆ ಅವಧಿಯಲ್ಲಿ ಹೊನ್ನನನ್ನು ತಮ್ಮ ಬಳಗದ ಒಬ್ಬ ಸದಸ್ಯ ಎಂದೇ ಭಾವಿಸಿ ತಮ್ಮ ಸುಖ ದುಃಖ ಅವನೊಂದಿಗೆ ತೋಡಿಕೊಳ್ಳುತ್ತಿದ್ದರು. ಏನಾದರೂ ಹೇಳಿಕೊಂಡು, 'ಹೊನ್ನಣ್ಣ ನೀನೇ ಹೇಳು ನೋಡ್ವಾ' ಅಂತಿದ್ದರು.

ಬೆಂಕಿ ಹಚ್ಚುವ ಕೆಲಸ ಮಾತ್ರ ಹೊನ್ನ ಮಾಡುತ್ತಿರಲಿಲ್ಲ. 'ಈ ಕಿವೀಲಿ ಕೇಳಿ ಆ ಕಿವಿಲಿ ಬಿಟ್ಟ' ಎಂಬಂತೆ ಇರುತ್ತಿದ್ದ. ಊರು ಎಂದಮೇಲೆ ಗುಂಪುಗಾರಿಕೆ ಇದ್ದದೇ. ದಾಯಾದಿಗಳಲ್ಲಿ ಸಂಬಂಧಿಗಳಲ್ಲಿ ಮತ್ಸರ, ಜಗಳ ಇವೆಲ್ಲ ಸಾಮಾನ್ಯ. ತಾರಿ ದಾಟುವಾಗ ಜನರು ಅವರಲ್ಲೇ ಆಡಿಕೊಳ್ಳುತ್ತಿದ್ದ ಎಷ್ಟೋ ಮಾತುಗಳು ಹೊನ್ನನ ಕಿವಿಯ ಮೇಲೆ ಬೀಳುತ್ತಿದ್ದವು. ಹೊನ್ನ ಪರಕೀಯ, ನಾವು ಹೇಳಿದ ಮಾತನ್ನು ಅವನು ಕೇಳಬಾರದು ಎಂಬ ಭಾವನೆ ಯಾರಲ್ಲೂ ಬರುತ್ತಿರಲಿಲ್ಲ. ಒಬ್ಬರಿಂದ ಕೇಳಿದ ಮಾತುಗಳನ್ನು ಅವರಿಗೆ ಆಗದವರಿಗೆ ಹೊನ್ನ ಎಂದೂ ಹೇಳುತ್ತಿರಲಿಲ್ಲ. ಯಾರಾದರೂ ಬಂದು ಮಾತನಾಡಿ, 'ನೀನೇ ಹೇಳು ಹೊನ್ನಣ್ಣ' ಎಂದು ಅವನ ಅಭಿಪ್ರಾಯ ಕೇಳಿದರೆ, 'ನೀವೆಲ್ಲ ಒಂದೇ ಅಲ್ವೇನೋ, ಸುಧಾರಿಸಿಕೊಂಡ್ರೆ, ಆಯ್ತು. ತೋಲು ಮಿಗಹರಿಯುದು ಯಾರ್‍ಗೂ ಚಲೋ ಅಲ್ಲ' ಅಂತಿದ್ದ. ಯಕ್ಷಗಾನ ಪ್ರಸಂಗಗಳಲ್ಲಿ ಬರುವ ಋಷಿಗಳ ಮಾತಿನಂತೆ ಇರುತ್ತಿತ್ತು ಅವನ ಮಾತು. ಆಜುಬಾಜು ಊರಲ್ಲಿ ಎಲ್ಲಾದರೂ ಯಕ್ಷಗಾನ ಪ್ರಸಂಗ ಇತ್ತೆಂದರೆ ರಾತ್ರಿಯೂ ಹೊನ್ನ ತಾರಿ ದಾಟಿಸಬೇಕು. ಕಾಸುಕೊಟ್ಟವರು ಕೊಟ್ಟರು. ಇಲ್ಲದವರು ಇಲ್ಲ ಕೊಡಿ ಎಂದು ಬಾಯಿಬಿಟ್ಟು ಕೇಳಿದವನಲ್ಲ ಅವನು.

ಒಂದು ದಿನ ಹೊನ್ನ ತಾರಿ ಮುಗಿಸಿ ಮನೆಗೆ ಹೋಗಿದ್ದಾನೆ. ಜಾಕಿ ಕಳ್ಳಂಗಡಿಯಲ್ಲಿ ಸ್ವಲ್ಪ ಜಾಸ್ತಿಯಾಗೇ ಕಳ್ಳು ಏರಿಸಿದ್ದ. ಊಟ ಮಾಡಿ ಮಲಗುವಾಗ ಎದೆಯಲ್ಲಿ ಚಂಡೆ ಬಡಿದ ಹಾಗೆ ಆಗತೊಡಗಿತ್ತು. ಚಳಿ, ಚಳಿ ಎನ್ನುತ್ತ ಕಂಬಳಿ ಹೊದ್ದು ಮಲಗಿಬಿಟ್ಟ.

ಬೆಳಿಗ್ಗೆ ಹೊನ್ನ ಏಳಲಿಲ್ಲ. ನಾಲ್ಕೂರಿನ ಜನರಿಗೆ ಹೊಳೆ ದಾಟಿಸುತ್ತಿದ್ದ ಹೊನ್ನ ಸ್ವತಃ ಭವಸಾಗರ ದಾಟಿದ್ದ. ಹೊತ್ತು ಎರಡು ಮೂರು ಮೇಲೇರಿದರೂ ಅಂದು ತಾರಿ ಆರಂಭವಾಗಲೇ ಇಲ್ಲ. ವಿಷ್ಣು ನಾಯ್ಕರ ಅಂಗಡಿಗೆ ದುರ್ಗಪ್ಪನ ಹಾಲುಬರಲಿಲ್ಲ. ಗೋಯ್ದನ ಹೆಂಡತಿ ಅರಸಿಗೂ, ಹುಣಸಿಹಣ್ಣು ತರಿಸುವುದು ಹಾಗೇ ಉಳಿಯಿತು. ವೆಂಕಮ್ಮನ ಮೊಮ್ಮಕ್ಕಳು ಹೈಸ್ಕೂಲಿಗೆ ರಜೆ ಮಾಡಬೇಕಾಯ್ತು. ದೇವಪ್ಪ ನಾಯ್ಕ, ಮಂಜಯ್ಯ ಕೋಳಿ ಪಡೆಗೆ ಹೋಗುವುದನ್ನು ನಿಲ್ಲಿಸಿದರು. ಆ ಕಡೆಯವರು ಆ ಕಡೆಗೇ ಉಳಿದರು. ಈ ಕಡೆಯವರು ಈ ಕಡೆಗೇ ಉಳಿದರು. ಕರಿಕೂರ್ವೆ ಕೂರ್ವೆಯಾಗಿಯೇ ಉಳಿಯಿತು.

ತಾರಿಗಾಗಿ ಆ ಕಡೆ ಈ ಕಡೆ ಕಾಯ್ದು ನಿಂತವರಿಗೆ ಹೊನ್ನ ಆಗಾಗ ಆಯಾಸ ನೀಗಲು ಹಾಡಿಕೊಳ್ಳುತ್ತಿದ್ದ.

ಸೂರಿನಾರಾಯಣನಿಗೆ ಹೇಮಾಲಿ ಡಾಂಬಲಾ
ನಾವೆಲ್ಲಾ ಕೈ ಮುಗ್ದು ಹೇಮಾಲಿ ಡಾಂಬಲಾ
ಮುಂದೆ ಹೋಗ್ಲಿ ನಮ್ಮ ದೋಣಿ ಹೇಮಾಲಿ ಡಾಂಬಲಾ....

ಸಾಲುಗಳು ಗಾಳಿಯಲ್ಲೆಲ್ಲೋ ತೇಲಿ ಬಂದಂತೆ ಭಾಸವಾಯಿತು.

■

ಹೀಗೊಬ್ಬ ಬಾಲಕಲಾವಿದೆ

‘**ಚ**ಲ್ಲಂಗ ಚೇರಿಂದಿ’ ಎಂದು ತೆಲುಗು ಜಾನಪದವೊಂದು ಶುರುವಾಗುತ್ತದೆ. ಇದೊಂದು ತೀವ್ರಗತಿಯ ಪದ. ಹದಿ ಹರೆಯದ ಹೆಣ್ಣು ಗಂಡಿನ ನಡುವಿನ ಸಂಭಾಷಣೆಯೇ ಪದವಾಗಿದೆ. ಈ ಜಾನಪದಕ್ಕೆ ಜನಪದ ಶೈಲಿಯ ನೃತ್ಯ ಮಾಡಿ ಪ್ರೇಕ್ಷಕರನ್ನು ಬೆರಗುಗೊಳಿಸಿ ಬಿಡುತ್ತಾಳೆ ಹನ್ನೆರಡು ವರ್ಷದ ಬಾಲೆ. ಆ ಬಾಲ ಕಲಾವಿದೆಯ ಹೆಸರು ವಿಜಯಲಕ್ಷ್ಮಿ.



ಜಾನಪದ ನೃತ್ಯದಲ್ಲಿ ವಿಜಯಲಕ್ಷ್ಮಿ

ಬಳ್ಳಾರಿಯ ಸಂತ ಜೋಸೆಫರ ಆಂಗ್ಲ ಮಾಧ್ಯಮ ಶಾಲೆಯಲ್ಲಿ 6ನೇ ತರಗತಿಯಲ್ಲಿ ಓದುತ್ತಿರುವ ವಿಜಯಲಕ್ಷ್ಮಿ ವಿದ್ಯಾಭ್ಯಾಸದಲ್ಲಿ ಹಿಂದೆ ಬಿದ್ದಿಲ್ಲ. 545 ಅಂಕಗಳನ್ನು ಪಡೆದು ಸೈ ಎನ್ನಿಸಿಕೊಂಡಿದ್ದಾಳೆ. ಈ ಹುಡುಗಿಗೆ ಡಾಕ್ಟರ್ ಆಗುವ ಬಯಕೆ.

ಈ ಹುಡುಗಿಯ ಅಜ್ಜಿ ನಾರಾಯಣಮ್ಮಗೆ ದೂರದರ್ಶನದಲ್ಲಿ ಪ್ರಸಾರವಾಗುವ ನೃತ್ಯ ಕಾರ್ಯಕ್ರಮಗಳೆಂದರೆ ಬಲು ಇಷ್ಟ. ನಾರಾಯಣಮ್ಮನಿಗೆ ಮೊಮ್ಮಗಳು ನೃತ್ಯಗಾತಿಯಾಗುವುದು ಸಂತಸದ ಸಂಗತಿ. ವಿಜಯಲಕ್ಷ್ಮಿಯನ್ನು ಜಿಲಾನಿ ಬಾಷಾ ಎಂಬವರ ಬಳಿ ಕೂಚಿಪುಡಿ ನೃತ್ಯಾಭ್ಯಾಸಕ್ಕೆ ಬಿಟ್ಟಿದ್ದಾಳೆ. ಅಜ್ಜಿಯ ಆಸಕ್ತಿ ಈ ಹುಡುಗಿಯ ಕಾಲಿಗೆ ಗೆಜ್ಜೆಕಟ್ಟುವುದಕ್ಕೆ ಹಿನ್ನೆಲೆಯಾಗಿದೆ.


ಈ ಹುಡುಗಿಗೆ ನೃತ್ಯ ಪ್ರದರ್ಶನಗಳ ಸ್ಪರ್ಧೆಯಲ್ಲಿ ಭಾಗವಹಿಸುವುದೆಂದರೆ ತುಂಬಾ ಇಷ್ಟ. ಸುಮಾರು 15ಕ್ಕೂ ಹೆಚ್ಚು ನೃತ್ಯ ಪ್ರದರ್ಶನಗಳನ್ನು ನೀಡಿ ಪ್ರೇಕ್ಷಕರ ಮತ್ತು ಹಿರಿಯ ಕಲಾವಿದರ ಮೆಚ್ಚುಗೆ ಗಿಟ್ಟಿಸಿದ್ದಾಳೆ. ಹೈದ್ರಾಬಾದಿನ ಮನೋರಂಜನಿ ಆರ್ಟ್ಸ್‌ರವರು ಈ ಬಾಲೆಗೆ ‘ನಾಟ್ಯಸುಧಾ’ ಪ್ರಶಸ್ತಿ ನೀಡಿ ಗೌರವಿಸಿದ್ದಾರೆ. ಆಂಧ್ರ ಪ್ರದೇಶದ ಕಡಪ ಜಿಲ್ಲೆಯ ಶ್ರೀ ನಿತ್ಯ ಕಲಾ ನಿಲಯಂರವರು ವಿಶಿಷ್ಟ ಬಾಲ ನೃತ್ಯ ಪ್ರಶಸ್ತಿಯನ್ನು ನೀಡಿ ಈ ಪುಟ್ಟ ಕಲಾವಿದೆಯ ಬೆನ್ನು ತಟ್ಟಿದ್ದಾರೆ. ಬೆಂಗಳೂರಿನಲ್ಲಿ ಜರುಗಿದ ಉತ್ತರ ಕರ್ನಾಟಕ ಉತ್ಸವದಲ್ಲಿ ಭಾಗವಹಿಸಿ ಪ್ರಶಂಸೆಗೆ ಪಾತ್ರವಾಗಿದ್ದಾಳೆ.

■ ಬಾದಾಮಿ ಶಿವಲಿಂಗ.




ಕೂಚುಪುಡಿ ನೃತ್ಯದ ಒಂದು ಭಂಗಿ

ಹಿಂದೂ ಪರಂಪರೆಯ ಕಲಾಸೃಷ್ಟಿಯಲ್ಲಿ ಮುಸ್ಲಿಂ ಕಲಾವಿದ



. ಕಮಾಲ್ ಎಂ. ಆಹಮ್ಮದ್

ಪ್ರಾಚೀನ, ಸಾಂಪ್ರದಾಯಿಕ ಕಲೆ ಎಂದರೇ ಮೂಗು ಮುರಿಯುವ ಪ್ರವೃತ್ತಿ ಒಂದೆಡೆ. ಪ್ರಾಚೀನ ಹಾಗೂ ಪಾರಂಪರಿಕವಾದುದೆಲ್ಲ ಶ್ರೇಷ್ಠ ಎಂದು ಪ್ರತಿಪಾದಿಸುವ ಗುಂಪು ಮತ್ತೊಂದೆಡೆ. ಇದರ ನಡುವೆಯೇ ತಮ್ಮದೇ ಶೈಲಿ ರೂಢಿಸಿಕೊಂಡು ಚಿತ್ರ, ಕಲಾಕೃತಿಗಳನ್ನು ರಚಿಸುತ್ತಾ ಹೋಗುವ ಕೆಲವೇ ಕಲಾವಿದರು ನಮ್ಮಲ್ಲಿದ್ದಾರೆ. ಇಂಥವರ ಪ್ರತಿಭೆಯನ್ನು




ಪಾಶ್ಚಿಮಾತ್ಯ ರಾಷ್ಟ್ರಗಳು ಗುರುತಿಸಿದ ಮೇಲೇ, ಇಂಥ ಕಲಾವಿದನೊಬ್ಬ ನಮ್ಮ ನಡುವೆ ಇದ್ದಾನೆಂದು ಕಣ್ಣು ತೆರೆದು ನೋಡುವುದು ನಮ್ಮಲ್ಲಿ ಸಾಮಾನ್ಯ. ಅಂಥ ಒಬ್ಬ ಅಪರೂಪದ ಕಲಾವಿದ ಗದಗಿನ ಕಮಾಲ್ ಎಂ. ಅಹಮ್ಮದ್.

ಗದಗಿನಲ್ಲಿಯೇ ಹುಟ್ಟಿ ಬೆಳೆದು, ಇಲ್ಲಿಯೇ ಚಿತ್ರ ಕಲೆಯಲ್ಲಿ ಡಿಪ್ಲೊಮಾ ಮತ್ತು ಪದವಿಗಳೆರಡನ್ನೂ ಪಡೆದ ಕಮಾಲ್, ರಾಜಾಸ್ಥಾನದಲ್ಲಿ ಒಂದು ಕಾಲಕ್ಕೆ ಬಸೂಲಿ ಶೈಲಿಯಲ್ಲಿ ಕಲಾಕೃತಿ ರಚಿಸುವುದರಲ್ಲಿ ಪರಿಣತಿ ಪಡೆದಿದ್ದಾರೆ. ಅಣ್ಣನ ಪ್ರೋತ್ಸಾಹದಿಂದ ಪ್ರೌಢ ಶಾಲೆಯಲ್ಲಿ ವ್ಯಾಸಂಗ ಮಾಡುವಾಗಲೇ ಕಲೆಯ ಪ್ರವಾಹದ ಸುಳಿಗೆ ಸಿಲುಕಿ, ಕಲಾ ಸ್ಪರ್ಧೆಯಲ್ಲಿ ಭಾಗವಹಿಸಿ ಹಲವಾರು ಪ್ರಶಸ್ತಿ ಪಡೆದುಕೊಂಡ ದಿನ ಕಮಾಲ್‌ರ ಕಲಾ ಭವಿಷ್ಯ ನಿರ್ಧಾರವಾಯಿತು. ಕಲಾಶಿಕ್ಷಣದ ಪ್ರಾಥಮಿಕ ಹಂತದಲ್ಲಿಯೇ ಅಖಿಲ ಭಾರತ, ಅಂತರಾಷ್ಟ್ರೀಯ ಮಟ್ಟದ ಕಲಾ ಪ್ರದರ್ಶನದಲ್ಲಿ ಭಾಗವಹಿಸುವುದರೊಂದಿಗೆ ಪ್ರತಿ ವರ್ಷವೂ ಒಂದಲ್ಲ ಒಂದು ಪ್ರದರ್ಶನದಲ್ಲಿ ಕಮಾಲ್‌ರ ಕಲೆಯನ್ನೇ ಅರಸಿಕೊಂಡು ಬಂದ ಚಿನ್ನದ ಪದಕ, ಪ್ರಶಸ್ತಿ-ಪುರಸ್ಕಾರಗಳು ಹಲವಾರು. ಇಂದಿಗೂ ಇವರನ್ನು ಕೇವಲ ಕಿರುರೂಪ ಚಿತ್ರಕಲಾವಿದರೆಂದೇ ಗುರುತಿಸುವುದುಂಟು.

ಇದೀಗ ಗದಗಿನ ಪರಿಸರದಲ್ಲಿ ಹಿರಿಯ ತಲೆಮಾರಿನ ಉತ್ತರ ಕರ್ನಾಟಕದ ರವಿವರ್ಮರೆಂದೇ ಪ್ರಖ್ಯಾತಿ ಪಡೆದ ಎಂ.ಎ, ಚಿಟ್ಟಿಯವರನ್ನು ಮಾನಸಿಕ ಗುರುವೆಂದೇ ಗೌರವಿಸುವ ಕಮಾಲ್‌ರ ಬಣ್ಣದ ಮೇಲಿನ ಪ್ರಭುತ್ವ ಹಾಗೂ ವರ್ಣಸಂಯೊಜನೆಯಲ್ಲಿ ಗುರುವಿನ ಛಾಯೆ ದಟ್ಟವಾಗಿ ಕಾಣುತ್ತದೆ. ಕಮಾಲ್ ಅಹಮ್ಮದ್ ಶ್ರೀಕೃಷ್ಣನ ಸದ್ಭಕ್ತ. ಮುಸ್ಲಿಂ ಧರ್ಮದವರಾದರೂ ಭಗವದ್ಗೀತೆಯ ನಿತ್ಯ ಪಠಣ ಮಾಡುತ್ತಾರೆ. ''ಭಗವದ್ಗೀತೆಯ ಓದಿನಿಂದಾಗಿ, ಹಿಂದೂ ತತ್ವಜ್ಞಾನ ನನ್ನ ಅಂತರಂಗದಲ್ಲಿ ಹೊಸ ಬೆಳಕು ಮೂಡಿಸಿತು'' ಎಂಬ ಭಾವನೆ ಅವರಿಗಿದೆ.

ಅವರ ಮನೆ ಕಲಾದೇಗುಲವಿದ್ದಂತೆ. ಅಲ್ಲಿ ಶ್ರೀಕೃಷ್ಣನ ನಾನಾ ಲೀಲೆಗಳು,



ಅವತಾರೆಗಳು ಮತ್ತು ರಾಮಾಯಣ-ಮಹಾಭಾರತ, ಭಾಗವತ ಪುರಾಣಗಳ ಚಿಕಣಿ ಚಿತ್ರಗಳ ಸಾಲುಗಳನ್ನು ಕಂಡಾಗ ಭಯ ಭಕ್ತಿ ಮೂಡುತ್ತದೆ. ಇವರ ತಂದೆ ಎಮ್. ದಸ್ತಗೀರ್‌ರವರು ಹೆಸರಾಂತ ಸಾಹಿತಿಗಳಲ್ಲೊಬ್ಬರು. ಹಾಗಾಗಿ ಮನೆಯಲ್ಲಿ ಮಗನಿಗೆ ಎಲ್ಲಾ ಧರ್ಮದ ಬಗ್ಗೆ ಒಳ್ಳೆಯ ಮಾರ್ಗದರ್ಶನ ನೀಡಿದ್ದಾರೆ. ಬಾಲ್ಯದಲ್ಲಿರುವಾಗಲೇ ಮಹಾಭಾರತ - ರಾಮಾಯಣಗಳ ಕಥೆಗಳನ್ನು ಹೇಳುತ್ತಿದ್ದರು. ಇಂದಿಗೂ ಸಹ ಚಿತ್ರ ರಚನೆಗೆ ಬೇಕಾದ ಮೂಲ ಕಥಾ ವಸ್ತುವಿನ ಹಂದರವನ್ನು ಅವರೇ ತಿಳಿಹೇಳುತ್ತಾರೆ. ಆರಂಭಿಕ ಹಂತದಲ್ಲಿ ನೇರವಾಗಿ ಬಸೂಲಿ ಶೈಲಿ ಅನುಸರಿಸುತ್ತಾ ಇದ್ದರಾದರೂ ಕಾಲಕ್ರಮೇಣ ತಮ್ಮ ಕಲಾಕೃತಿಯಲ್ಲಿ ಬಸೂಲಿ ಶೈಲಿಯಿಂದ ವಿಭಿನ್ನವಾಗಿರಲು, ಯತ್ನಿಸಿ ಸಫಲರಾಗಿದ್ದಾರೆ. ಬಸೂಲಿ ಚಿತ್ರ ಸಂಪ್ರದಾಯವು ಸುಮಾರು 17-18ನೆಯ ಶತಮಾನಗಳಲ್ಲಿ ಕಂಡು ಬರುವಂಥ ಶೈಲಿ. ರಜಪೂತ ಶೂರರ ರಾಜ್ಯಗಳಲ್ಲಿ ವಿಶ್ವಸ್ಥಳಿ ಅಥವಾ ಬಸೂಲಿ ರಾಜ್ಯವೂ ಒಂದಾಗಿತ್ತು. ಹಿಂದೆ ಅಲ್ಲಿ ಜಾನಪದ ಶೈಲಿಯ ಚಿತ್ರ ಕಲೆ ಇತ್ತು. ಅದೇ ರಾಜ್ಯದಲ್ಲಿ ಆಶ್ರಯ ಪಡೆದ ಮೊಗಲ್ ಮತ್ತು ರಜಪೂತ ಕಲಾವಿದರು ಅದಕ್ಕೆ ನವಜೀವನವನ್ನು ತುಂಬಿದರು. ಈ ಕಲೆಯ ಸ್ಫೂರ್ತಿಯ ಮೂಲವು ವೈಷ್ಣವ ಧರ್ಮದ್ದಾಗಿತ್ತು. ಬಸೂಲಿ ಶೈಲಿಯಲ್ಲಿ ಗೀತಗೋವಿಂದ ಕಾವ್ಯದ ಸನ್ನಿವೇಶ, ರಾಮಾಯಣ, ಭಾಗವತ ಪುರಾಣಗಳ ಚಿತ್ರಗಳು ಹೆಚ್ಚಾಗಿ ಇವೆ. ಅಲ್ಲಿ ಮೂಲ ವರ್ಣಗಳಾಗಿ ಕೆಂಪು, ಹಳದಿ, ನೀಲವರ್ಣಗಳನ್ನು ಹೆಚ್ಚಾಗಿ ಉಪಯೋಗಿಸಿದುದನ್ನು ಕಾಣಬಹುದಾಗಿದೆ. ವರ್ಣಗಳನ್ನೇ ಸಂಕೇತಗಳಾಗಿ ಬಳಸುವುದರೊಂದಿಗೆ, ಕೆಂಪು ಬಣ್ಣವನ್ನು ಪ್ರೇಮ ದೇವತೆಯ ಸಂಕೇತವಾಗಿ, ಹಳದಿ ಬಣ್ಣ ವಸಂತ ಋತುವಿನ

ಉತ್ತರ ಕರ್ನಾಟಕದ ಮುಸ್ಲಿಂ ಕಲಾವಿದನೊಬ್ಬ ಹಿಂದೂ ಪರಂಪರೆಯಲ್ಲಿ ಕಲಾಕೃತಿಗಳನ್ನು ರಚಿಸುವುದು ಹಲವರ ಹುಬ್ಬೇರಿಸಬಹುದು. ಗದಗಿನ ಕಲಾವಿದ ಕಮಾಲ್ ಎಂ. ಆಹಮ್ಮದ್ ಸಾಂಪ್ರದಾಯಿಕ ಕಲಾಕೃತಿಗಳ ರಚನೆಯಲ್ಲಿ ಸಿದ್ಧಹಸ್ತನಷ್ಟೇ ಅಲ್ಲ, ತನ್ನದೇ ಶೈಲಿಯೊಂದನ್ನು ಆತ ಸಿದ್ಧಿಸಿಕೊಂಡಿದ್ದಾನೆ. ಕೇವಲ ರಾಷ್ಟ್ರೀಯ ಮಟ್ಟದಲ್ಲಿ ಮಾತ್ರವಲ್ಲ, ಆತನ ಕಲಾಕೃತಿಗಳು ಅಂತಾರಾಷ್ಟ್ರೀಯ ಮಟ್ಟದಲ್ಲಿಯೂ ಭಾರೀ ಬೇಡಿಕೆ ಪಡೆದುಕೊಂಡಿವೆ.
ಗದಗಿನಂಥ ಸಣ್ಣ ಊರಲ್ಲಿ ಕುಳಿತು ಇಂಥದೊಂದು ಹಿರಿದಾದ ಸಾಧನೆ ಮಾಡುತ್ತಿರುವ ಈ ಕಲಾವಿದನ ಚಿತ್ರ ರಚನೆ, ವರ್ಣ ಸಂಯೋಜನೆ ಕನ್ನಡದ ಜನಕ್ಕೆ ವ್ಯಾಪಕವಾಗಿ ತಿಳಿಯಲಿ ಎಂಬುದೇ ಈ ಲೇಖನದ ಉದ್ದೇಶ.










ಕಲಾವಿದ ಕಮಾಲ್ ಕುಂಚದಿಂದ ಅರಳಿದ ಹಿಂದೂ ಪರಂಪರೆಯ ಚಿತ್ರಗಳು



ವ್ಯಕ್ತಿಚಿತ್ರ ಟ್ಯಾಗೋರ್



ಲಕ್ಕುಂಡಿಯ ದೇವಸ್ಥಾನ ಜಲವರ್ಣ ಚಿತ್ರ




ಸಂಕೇತವಾಗಿ, ವಿಶಾಲವಾದ ಪ್ರದೇಶದಲ್ಲಿ ವಿಶೇಷವಾಗಿ ಬಿಸಿಲು ಬಿದ್ದಂತೆ ತೋರಿಸಲು ಬಳಸಲ್ಪಟ್ಟಿದೆ. ನೀಲಿ ವರ್ಣವಂತೂ ಶ್ರೀಕೃಷ್ಣನ ಬಣ್ಣ. ಕೆಲವೊಮ್ಮೆ ಇದೇ ನೀಲಿ, ಭೂಮಿಯನ್ನು ಸಂಪನ್ನವಾಗಿ ಮಾಡುವ ಮೋಡಗಳ ಬಣ್ಣವಾಗಿದೆ. ಅಲ್ಲಿ ಬರುವಂಥ ಪಾತ್ರವೆಲ್ಲವೂ ದೈವಿಕವಾಗಿದ್ದರೂ, ದೇವ-ದೇವತೆಗಳಿಗೆ ಆ ಕಾಲದಲ್ಲಿ ಮೊಗಲ್ ಪ್ರಭಾವವಿದ್ದರಿಂದ, ಮೊಗಲ್ ಕಾಲದ ವೇಷ ಭೂಷಣಗಳನ್ನು ವ್ಯಕ್ತಪಡಿಸಿದ್ದಾರೆ.



ಕಮಾಲ್‌ಗೆ ಖುಷಿ ಕೊಡುವ ಮಾಧ್ಯಮ ಜಲವರ್ಣ. ಕೆಲವೊಮ್ಮೆ ಜಲವರ್ಣದೊಂದಿಗೆ ಪೋಸ್ಟರ್ ಮಾಧ್ಯಮ ಬಳಕೆ ಸಹ ಪ್ರತಿ ಕಲಾಕೃತಿಯಲ್ಲಿ ಸಮ್ಮಿಶ್ರಗೊಂಡು ಹೊಸತನವನ್ನು ಬಿಂಬಿಸುತ್ತದೆ. ಕರ್ನಾಟಕ ಲಲಿತಕಲಾ ಅಕಾಡೆಮಿ ಬೆಂಗಳೂರು, ಕೇಂದ್ರೀಯ ಲಲಿತಕಲಾ ಅಕಾಡೆಮಿ ನವದೆಹಲಿ, ದಕ್ಷಿಣ ಮಧ್ಯವಲಯ ಸಾಂಸ್ಕೃತಿಕ ಕೇಂದ್ರ, ನಾಗಪುರ, ಸರಕಾರಿ ಮ್ಯೂಜಿಯಂ ದಾವಣಗೆರೆ, ತಾಸ್ಮಿಯ ಕಲಾನಿಲಯ ಶಹಬಾದ್ ಹಾಗೂ ದೇಶ ವಿದೇಶಗಳ ಖಾಸಗಿ ಸಂಗ್ರಹಾಲಯದಲ್ಲಿ ಇವರ ಹಲವಾರು ಕಲಾಕೃತಿಗಳು ವಿರಾಜಿಸುತ್ತಿವೆ.

■ ಕಾವೆಂಶ್ರೀ



ಕವಿಗೋಷ್ಠಿಗಳೆಂಬ ಪ್ರಸಂಗಗಳು

ಲಲಿತ ಪ್ರಬಂಧ

■ ಚಂದ್ರಶೇಖರ ಪಾಟೀಲ

ಇತ್ತೀಚೆಗೆ ರಾಜಧಾನಿಯಲ್ಲಿ ಒಂದು ಪ್ರಶಸ್ತಿ ಸಮಾರಂಭದ ಅಧ್ಯಕ್ಷತೆ ವಹಿಸಬೇಕಾದ ಪ್ರಸಂಗ. ಪ್ರಶಸ್ತಿ ಕೊಟ್ಟದ್ದಾಯಿತು. ಅಭಿನಂದನ ಭಾಷಣ ಮಾಡಿದ್ದಾಯಿತು. ಪ್ರಶಸ್ತಿ ವಿಜೇತರು ಅದಕ್ಕೆ ಉತ್ತರ ಕೊಟ್ಟದ್ದೂ ಆಯಿತು. ವಿಡಿಯೋ ಕ್ಯಾಮರಾದವರು, ದೂರದರ್ಶನದವರು ಏನು ಬೇಕೋ ಅದನ್ನು ಹೊಡೆದುಕೊಂಡು ಹೋದದ್ದೂ ಆಯಿತು. ನನ್ನ ಅಧ್ಯಕ್ಷ ಭಾಷಣ ಕೇಳಿ ಪತ್ರಕರ್ತರು ಜಾಗೆ ಖಾಲಿ ಮಾಡಿದ್ದಾಯಿತು.ಆದರೂ ಆ ಸಭಾಭವನದಲ್ಲಿ ಇನ್ನೂ ಸಭಿಕರು ಗಣನೀಯ ಸಂಖ್ಯೆಯಲ್ಲಿ ಉಳಿದೇ ಇದ್ದುದ್ದು ನೋಡಿ ನನಗೆ ಗಾಬರಿ, ಸಂತೋಷ, ಆಶ್ಚರ್ಯ.

ಆ ಮೇಲೆ ಮೆಲ್ಲ ಮೆಲ್ಲನೆ ಅನಾವರಣಗೊಂಡ ಸತ್ಯ; ಅವರೆಲ್ಲ ಕಾರ್ಯಕ್ರಮದ ಕೊನೆಯ ಹಂತದಲ್ಲಿ ಏರ್ಪಡಿಸಲಾಗಿದ್ದ ಕವಿಗೋಷ್ಠಿಯಲ್ಲಿ ಪಾಲುಗೊಳ್ಳಲಿದ್ದ ಕವಿಗಳಾಗಿದ್ದರು !

ಕೆಲವು ವರ್ಷಗಳ ಹಿಂದೆ ಬಂಡಾಯ ಸಾಹಿತ್ಯ ಸಂಘಟನೆಯ ಪರವಾಗಿ ರಾಜ್ಯದಾದ್ಯಂತ ಪುಸ್ತಕ ಜಾಥಾ ಏರ್ಪಡಿಸಿದ್ದೆವು. ಬೇರೆ ಬೇರೆ ಕಡೆಯಿಂದ ಹೊರಟಿದ್ದ ತುಕಡಿಗಳು, ಎಲ್ಲಾ ಕಡೆಯ ಅಲೇದೇವರುಗಳು ಒಂದೇ ಕಡೆ ಸೇರುವಂತೆ, ಬಳ್ಳಾರಿ ಜಿಲ್ಲೆಯ ಹರಪನಹಳ್ಳಿಯಲ್ಲಿ ಜಮಾಯಿಸಿದ್ದವು. ಜಾಥಾ ಸಂದರ್ಭದಲ್ಲಿ ಕಥೆ, ಕಾದಂಬರಿ, ನಾಟಕ, ವೈಚಾರಿಕ ಪುಸ್ತಕ ಎಲ್ಲವೂ ಮಾರಾಟವಾಗಿ, ಹರಪನಹಳ್ಳಿಗೆ ಬರುವಷ್ಟು ಹೊತ್ತಿಗೆ ಉಳಿದ ಟೈಟಲ್ಲುಗಳೆಂದರೆ ಕವನ ಸಂಕಲನಗಳು ಮಾತ್ರ.

ಅವತ್ತಿನ ಸಮಾರಂಭದಲ್ಲಿ ಒಬ್ಬ 'ಕವಿ'ಯಾಗಿ ನಾನು ಜಗತ್ತಿಗೆ ಸಾರಿ ಸಾರಿ ಹೇಳಿದೆ. ''ಸಂಗಾತಿಗಳೇ, ಇದರಿಂದ ಸಿದ್ಧವಾಗುವುದು ಏನು ಗೊತ್ತೇ? ಜಗತ್ತಿನಲ್ಲಿ ಕೊನೆಗೂ ಉಳಿಯುವುದು - ಕಾವ್ಯ ಒಂದೇ''. ಅಧ್ಯಕ್ಷತೆ ವಹಿಸಿದ್ದ ಮತ್ತೊಬ್ಬ 'ಕವಿ' ಕಂಬಾರನಿಗೆ ನನ್ನ ವಾಣಿಯನ್ನು ಕೇಳಿ ರೋಮಾಂಚನವಾಗಿತ್ತು.

ಸಮ್ಮೇಳನ - ಗಿಮ್ಮೇಳನ ಮಾಡುವವರಿಗೆ ಇದು ನಿತ್ಯನೂತನ ಅನುಭವ. ಯಾರ್‍ಯಾರು ಬರಬೇಕು ಅಂತ ದೊಡ್ಡ ಪಟ್ಟಿ ತಯಾರಾಗುತ್ತದೆ. ಸ್ವಾಗತ, ಉದ್ಘಾಟನೆ, ಆಶಯ ಭಾಷಣ, ಗೋಷ್ಠಿಯಲ್ಲಿ ಪ್ರಬಂಧ ಮಂಡನೆ, ಅಧ್ಯಕ್ಷ ಭಾಷಣ, ಸಮಾರೋಪ, ಆಭಾರಮನ್ನಣೆ ಎಲ್ಲ ಭರ್ತಿಯಾದ ಮೇಲೂ ಇನ್ನೂ ಅನೇಕ ಹೆಸರುಗಳು ಇವೆ. ಏನು ಮಾಡಬೇಕು? ಏನೂ ಮಾಡಬೇಕಾಗಿಲ್ಲ. ಕವಿಗೋಷ್ಠಿಯಲ್ಲಿ ಅವರನ್ನೆಲ್ಲ ಅಕಾಮಡೇಟ್ ಮಾಡಿಬಿಟ್ಟರಾಯಿತು. ....ಅವರಲ್ಲಿ ಕೆಲವರು ಕವನ ಬರೆದಿರಲಿಕ್ಕಿಲ್ಲ. ಆದರೇನು? ಸಮ್ಮೇಳನ ಬರುವ ಹೊತ್ತಿಗೆ ಅವರು ಬರೆದೇ ಬರೆಯುತ್ತಾರೆ!

ನಾನು ಹಿಂದೊಮ್ಮೆ ಈ ಕವಿಗೋಷ್ಠಿಗಳನ್ನು ಗೌರೀಶಂಕರ ಯಾತ್ರಾ ಕಂಪನಿಗೆ ಹೋಲಿಸಿದ್ದೆ. ಟ್ರೇನು ತುಂಬಿ ತುಳುಕುತ್ತಿದ್ದರೂ ಅದರಲ್ಲಿ ಮತ್ತೊಬ್ಬರಿಗೆ ಜಾಗೆ ಇದ್ದೇ ಇರುತ್ತದೆ. ರಾವಣನ ಪುಷ್ಪಕ ವಿಮಾನದ ಹಾಗೆ. ಅವನು ಮನಸ್ಸು ಮಾಡಿದ್ದರೆ ಸೀತಾಪಹರಣ ಮಾಡಿದ ಮೇಲೆ ದಾರಿಯಲ್ಲಿ ಅಲ್ಲಲ್ಲಿ ಹಾಲ್ಟ್ ಮಾಡಿ ಇನ್ನೂ ಐದಾರು ಪರಪತ್ನಿಯರನ್ನು ಹಾರಿಸಿಕೊಂಡು ಹೋಗಬಹುದಿತ್ತು. ಇಷ್ಟು ಚಾಣಾಕ್ಷತನ ಅವನಿಗೆ ಇದ್ದಿದ್ದರೆ ಅವನೇಕೆ ರಾಮಾಯಣಕ್ಕೆ ಸ್ಫೂರ್ತಿಯಾಗುತ್ತಿದ್ದ?

ಕವಿಗೋಷ್ಠಿಯ ಪಟ್ಟಿಯಲ್ಲಿ ಇದ್ದವರು ಎಲ್ಲರೂ ಬರುವರೆಂಬ ಗ್ಯಾರಂಟಿ ಇರುವುದಿಲ್ಲ. ಖಾಲಿ ಬಿದ್ದ ಜಾಗೆಗಳನ್ನು ತುಂಬಲು ಸ್ಥಳೀಯ ಪ್ರತಿಭೆಗಳು ಇದ್ದೇ ಇರುತ್ತವೆ. ಸಂಘಟನೆಗೆ ಸಂಬಂಧಪಟ್ಟ ಪದಾಧಿಕಾರಿಗಳ ಪರಿಚಿತರು, ಪತ್ನಿಯರು, ಪ್ರೇಯಸಿಯರು ಕೊನೆಗಳಿಗೆಯಲ್ಲಿ ತೂರಿಕೊಂಡು ಕಾವ್ಯ ರಸಿಕರನ್ನು ಕಾವ್ಯ ಸಾಗರದಲ್ಲಿ ತೇಲಿಸುವುದು ಅಥವಾ ಮುಳುಗಿಸುವುದು ಹೀಗೆಯೇ. ಅವರೇನೂ ನಿಮ್ಮಿಂದ ಟಿ.ಎ.ಡಿ.ಎ. ಬಯಸುವವರಲ್ಲ.

ಮೊನ್ನೆ ಮೊನ್ನೆ ಗಡಿನಾಡಿನ ಕವಿಗೋಷ್ಠಿಯೊಂದರಲ್ಲಿ ಈ ರೀತಿ ಅವಕಾಶ ಪಡೆದ ಕವಿಯೊಬ್ಬರು ಕಾವ್ಯ ವಾಚನ ಮುಗಿಸಿ ಹೊರ ಬಂದರು. ಅವರ ಕೊರಗು ಇಷ್ಟೇ. 'ನೋಡ್ರಿ, ಸಾಹೇಬ್ರ, ಮೂವತ್ತು ವರ್ಷದಿಂದ ಕವಿತಾ ಬರ್‍ಯಾಕಹತ್ತೀನಿ, ಯಾರೂ ನನ್ನನ್ನು ಕವಿಗೋಷ್ಠಿಗೆ ಕರಿಯೋದಿಲ್ಲ.'

ನಾನಂದೆ: ಮತ್ತ ಈಗ ಕವನಾ ಓದಿ ಬಂದಿರೆಲ್ಲ!

ಅವರು : ಆಮಂತ್ರಣ ಪತ್ರಿಕೆಯೊಳಗ ಅಧಿಕೃತವಾಗಿ ನನ್ನ ಹೆಸರು ಇಲ್ವಲ್ರೀ, ಸಾಹೇಬ್ರ. ನಾನs ನುಗ್ಗಬೇಕು. ಎಪ್ಪಾ ಎಣ್ಣಾ ಅಂತ ಹೆಸರು ಬರೆಸಿ ಕವನಾ ಓದಬೇಕು. ಇದೆಲ್ಲೀ ತನಕಾ? ನೀವು ನನಗ ಸಂಭಾವನಾ ಕೊಡೋದು ಬ್ಯಾಡ. ಬೇಕಂದರ ನಾನs ನಿಮಗ ಸಂಭಾವನಾ ಕೊಡತsನಿ. ನನ್ನ ಹೆಸರು ಒಮ್ಮೆ ಪ್ರಿಂಟಾದರ ಸಾಕು ನೋಡ್ರಿ.

ಈ ಕವಿಯ ಉತ್ಸಾಹ ಮತ್ತು ಕೊರಗು ನನಗೆ ಅರ್ಥಪೂರ್ಣ ಅನ್ನಿಸಿತು. ನಾನು ಕವಿಯಾಗಬೇಕು - ಎಂಬ ಆಕಾಂಕ್ಷೆಯೇ ಕ್ರಾಂತಿಯ ಮೂಲ ಬೀಜ. ಕವಿಯಾಗುವ ಮೊದಲು ಅನ್ನಿಸಿಕೆ, ಅನುಭವ ಬೇಕು. ಇದನ್ನೆಲ್ಲ ಹಂಚಿಕೊಳ್ಳಬೇಕು - ಎಂಬ ಒಳಗಿನ ಒತ್ತಡ ಬೇಕು. ಏಕಾಂಗಿ ಮನುಷ್ಯ ಸಮಾಜ ಜೀವಿಯಾಗಬಯಸುವ ಮೊದಲ ಅವಸ್ಥೆ ಇದು. ಅನುಭವಕ್ಕೆ ಭಾಷೆಯ ಮೂಲಕ ಆಕಾರ ಕೊಡಬೇಕು. ಎಲ್ಲರೂ ಮೆಚ್ಚುವಂತೆ, ಎಲ್ಲರಿಗೂ ಒಳ್ಳೆಯದಾದುದನ್ನೇ ಹೇಳಬೇಕು ಎಂಬ ಹಂಬಲ ಎಂಥ ಸ್ವಾರ್ಥಿಯನ್ನು ಕೂಡ ಮಾನವೀಯನನ್ನಾಗಿ ಮಾಡುವಂಥದು. ಇದೆಲ್ಲ ಸ್ವಾಗತಾರ್ಹವೇ ಅಲ್ಲವೇ?

ಪರಿಸ್ಥಿತಿ ಹೀಗಿರುವಾಗ ಕೆಲವರು, ''ಏನು, ಈಗೀಗ ಕವಿಗಳ ಸಂಖ್ಯೆ ವಿಪರೀತವಾಗಿದೆಯಲ್ಲ!'' ಎಂದು ಏರು ಹುಬ್ಬಿನ ಸಿನಿಕತನದಿಂದ ಹೀಯಾಳಿಸುವುದು ಸರಿಯಲ್ಲ ಅಂತ ನನ್ನ ವಾದ. ನನ್ನ ವಾದ ಬಹಳ ಸಿಂಪಲ್ಲಾಗಿದೆ. ಒಂದು ಊರಿಗೆ ಡಾಕ್ಟರು ಬೇಕು, ಶಿಕ್ಷಕ ಬೇಕು, ಗೌಡ ಬೇಕು, ಶಾನುಭೋಗ ಬೇಕು, ಪೊಲೀಸ ಬೇಕು, ಕ್ಷೌರಿಕ ಬೇಕು, ಅಗಸ ಬೇಕು, ಪೂಜಾರಿ ಬೇಕು, ಬಟ್ಟೆಯವ ಬೇಕು, ಚಹದಂಗಡಿಯವ ಬೇಕು... ಇವರೆಲ್ಲರ ಅನುಭವಕ್ಕೆ ಆಕಾರ ಕೊಡಲು, ಇಡೀ ಸಮುದಾಯದ ಬದುಕಿಗೆ ಬಾಯಿ ಕೊಡಲು, ನೋವು ನಲಿವು ಹತಾಶೆ ಕನಸುಗಳಿಗೆ ರೂಪ ಕೊಡಲು ಒಂದು ಊರಿಗೆ ಒಬ್ಬ 'ಕವಿ' ಬೇಡವೇ! ಒಂದು ಊರಿನ ಭೂಮಿಗೆ, ಆಕಾಶಕ್ಕೆ, ಗುಡ್ಡ ಬೆಟ್ಟಗಳಿಗೆ, ಹೊಳೆ-ಹಳ್ಳಗಳಿಗೆ, ಭೂತ-ವರ್ತಮಾನ-ಭವಿಷ್ಯಗಳಿಗೆ ಒಬ್ಬ ಕವಿಯನ್ನು ಸಲಹುವ, ದಕ್ಕಿಸಿಕೊಳ್ಳುವ ತಾಕತ್ತಿರಬಾರದೆ?..... ಅರ್ಥಾತ್, ಕನ್ನಡ ನಾಡಿನಲ್ಲಿ ಎಷ್ಟು ಗ್ರಾಮ ನಗರಗಳಿವೆಯೋ ಅಷ್ಟು ಸಂಖ್ಯೆಯಲ್ಲಿ ಕನ್ನಡ ಕವಿಗಳು ಮೂಡಿ ಬಂದರೂ ಅದೇನೂ ಅನಿಷ್ಟಕಾರಿ ಬೆಳವಣಿಗೆ ಅಲ್ಲ.

ಅಂತೂ ಮಿಕ್ಕಿ ಎಲ್ಲರೂ ಬರೆದದ್ದನ್ನು ಎಲ್ಲರೂ ಓದಲೇಬೇಕು ಎಂಬ ನಿಯಮವೇನೂ ಇಲ್ಲ. ಬಾನು ಸುರಿದ ನೀರು ಎಲ್ಲವೂ ಅಂತರ್ಜಲವಾಗಬೇಕಿಲ್ಲ. ಉಳಿಯಬೇಕಾದ್ದು ಉಳಿದು ಉಳಿದದ್ದೆಲ್ಲ ಅಳಿದು ಹೋಗುವುದು ನಿಸರ್ಗದ ನಿಯಮವಾಗಿರುವಾಗ ಕವಿ ಸಂಖ್ಯೆಯ ಬಾಹುಳ್ಯದಿಂದ ಕಾವ್ಯಲೋಕಕ್ಕೆ ಯಾವ ಗಂಡಾಂತರ ಪರಿಸ್ಥಿತಿಯೂ ಪ್ರಾಪ್ತವಾಗುವುದಿಲ್ಲ.

ಸಮಸ್ಯೆ ಇರುವುದು - ಇಷ್ಟು ಸಂಖ್ಯೆಯ ಕವಿಗಳನ್ನು ಕಟ್ಟಿಕೊಂಡು ಕವಿಗೋಷ್ಠಿ ಹೇಗೆ ಹಮ್ಮಿಕೊಳ್ಳುವುದು ? ಅಂತ.

★

ಈ ಸಮಸ್ಯೆಗೆ ಅನೇಕ ಪರಿಹಾರಗಳು ಲಭ್ಯ. ಮೂರು ದಿನದ ಸಮ್ಮೇಳನ ಇದ್ದರೆ ಮೂರು ದಿನ ಒಂದೊಂದು ಕವಿಗೋಷ್ಠಿ ಇಡುವುದು ಒಂದು ಸುಲಭ ಪರಿಹಾರ. ನಮ್ಮ ಬಂಡಾಯ ಸಾಹಿತ್ಯ ಸಮ್ಮೇಳನಗಳಲ್ಲಿ ಇದನ್ನು ಯಶಸ್ವಿಯಾಗಿ ಪ್ರಯೋಗಿಸಲಾಗಿದೆ. ಸಾಹಿತ್ಯ ಪರಿಷತ್ತಿನವರು ಕಂಡುಕೊಂಡ ಒಂದು ಮಾರ್ಗವೆಂದರೆ, ರಾಜ್ಯ ಮಟ್ಟದ ಕವಿಗೋಷ್ಠಿಯೊಂದಿಗೆ ಸ್ಥಳೀಯ ಮಟ್ಟದ ಮತ್ತೊಂದು ಕವಿಗೋಷ್ಠಿ. ಆದರೆ ಇವರಿಂದ ಕವಿಗಳಲ್ಲಿಯೇ ಅಸಮಾನತೆಯ, ಅದರಿಂದಾಗಿ ಮೇಲರಿಮೆ - ಕೀಳರಿಮೆಗಳ ಭಾವ ಉಂಟಾಗಿದ್ದರಿಂದ ಈ ಕ್ರಮ ಕೈಬಿಡಲಾಗಿದೆ.



ರೀ, ಮನೆಯಲ್ಲಿ ತುಂಬಾ ಬೇಜಾರಾಗುತ್ತೆ. ಅದಕ್ಕೆ ನನಗೊಂದು ಯಾವುದಾದರು ಮಂತ್ರಿ ಪದವಿ ಕೊಡಿ....

ನಾನು ಈ ಕೆಳಗೆ ಸೂಚಿಸಲಿರುವ ಉಪಾಯಗಳು ಸಮಯದ ಉಳಿತಾಯದ ದೃಷ್ಟಿಯಿಂದ ಪ್ರಯೋಗಾರ್ಹ ಅನ್ನಿಸಿವೆ.

ಆ ಪ್ರತಿ ಎರಡು ವಿಚಾರಗೋಷ್ಠಿಗಳ ನಡುವಿನ ಖಾಲೀ ಸಮಯದಲ್ಲಿ ಐವರು ಕವಿಗಳ ಕಾವ್ಯವಾಚನ ಏರ್ಪಡಿಸಬಹುದು. ಇಂಥ ಮಿನಿ ಕವಿಗೋಷ್ಠಿಗಳಲ್ಲಿ ಬೇರೆ ಬೇರೆ ವಯಸ್ಸಿನ ಕವಿಗಳಿರಬೇಕು. ಉದಯೋನ್ಮುಖ ಕವಿ, ಅಸ್ತೋನ್ಮುಖ ಕವಿ, ಗಮನಾರ್ಹ ಕವಿ, ಸಹನಾರ್ಹ ಕವಿ, ಓದು ಕವಿ , ಹಾಡು ಕವಿ ಹೀಗೆ ಸರಿಯಾದ ಕಾಂಬಿನೇಶನ್ ಬೇಕು. ಪರಿಸ್ಥಿತಿ ನೋಡಿಕೊಂಡು 2-3 ಚುಟುಕು ಕವಿಗಳನ್ನೂ ತುರುಕಬಹುದು.

ಆ ಸಮ್ಮೇಳಕ್ಕೊಂದೇ ಕವಿಗೋಷ್ಠಿ ಎನ್ನುವುದಾದರೆ ಸಮ್ಮೇಳನದ ಎಲ್ಲ ದಿಕ್ಕುಗಳಲ್ಲಿ 10- 12 ವೇದಿಕೆಗಳನ್ನು ನಿರ್ಮಿಸಿ, ಎಲ್ಲ ಕವಿಗಳೂ ಒಂದೇ ಕಾಲಕ್ಕೆ ತಮ್ಮ ಕವನಗಳನ್ನು ವಾಚನ ಮಾಡುವಂತೆ, ಮೈಕು, ವಿಡಿಯೋ ಇತ್ಯಾದಿ ವ್ಯವಸ್ಥೆ ಮಾಡಬೇಕು. ಇದರಿಂದ ಶ್ರೋತೃಗಳಿಗೆ ತಮಗಿಷ್ಟವಾದ ಕಡೆ ಹೋಗುವ ಅಥವಾ ಗೋಣು ಹೊರಳಿಸುವ ಆಯ್ಕೆಯ ಸ್ವಾತಂತ್ರ್ಯವಿರುತ್ತದೆ. ಲಂಡನ್ನಿನ ಹೈಡ್ ಪಾರ್ಕಿನಲ್ಲಿ ಈ ವ್ಯವಸ್ಥೆ ಇದೆ. ಇದರಿಂದ ಕವಿಗಳಿಗೂ ತಮ್ಮ ಕಾವ್ಯ ಪ್ರತಿಭೆಯ ಹಾಗೂ ಗಂಟಲಿನ ಸಾಮರ್ಥ್ಯದ ಇತಿಮಿತಿಯ ಅರಿವು ಉಂಟಾಗಿ ಅದರಲ್ಲಿ ಕೆಲವರಾದರೂ ಲೋಕ ಕಲ್ಯಾಣಕ್ಕಾಗಿ ಭವಿಷ್ಯದಲ್ಲಿ ಕಾವ್ಯಮಾರ್ಗ ತ್ಯಜಿಸುವ ಸಾಧ್ಯತೆ ಇದೆ.

★

ನಾನು ಯಾವ ಸಮ್ಮೇಳನಕ್ಕೆ ಹೋದರೂ ಅದರ ಅತ್ಯಂತ ವರ್ಣರಂಜಿತ ಅವಿಭಾಜ್ಯ ಅಂಗವಾದ ಕವಿಗೋಷ್ಠಿಯನ್ನು ತಪ್ಪಿಸಿಕೊಳ್ಳುವುದಿಲ್ಲ. ಕವಿಗೋಷ್ಠಿಯಲ್ಲಿ ಕೇಳುವುದಕ್ಕಿಂತ ಹೆಚ್ಚಾಗಿ ನೋಡುವುದೇ ನನಗೆ ಮುಖ್ಯ ಅನ್ನಿಸುತ್ತದೆ. ಕವಿಯೊಬ್ಬ ಓದಲು ಪ್ರಾರಂಭಿಸಿದಾಗ ಆ ಪ್ರಖರ ವಿಡಿಯೋ ಬೆಳಕಿನಲ್ಲಿ ತಾನೊಬ್ಬನೇ ಅಥವಾ ತಾನೊಬ್ಬಳೇ ಇಡೀ ಜಗತ್ತಿನ ಗಮನದ ಏಕಾಗ್ರ ಬಿಂದು ಎಂಬ ಅರಿವಿನಿಂದ ಉಜ್ವಲವಾಗಿ ಬೆಳಗುವ ಆ ಮುಖ; ಶ್ರೋತೃಗಳ ಚಪ್ಪಾಳೆಗಳ ಲಯಕ್ಕನುಗುಣವಾಗಿ ಉಳಿದ ಕವಿಗಳ ಮುಖದ ಮೇಲೆ ಮೂಡಿ ಮಾಯವಾಗುವ ಗೆರೆಗಳು; ಚಪ್ಪಾಳೆಯ ಸದ್ದೇ ಇಲ್ಲದಿದ್ದಾಗ ಮುಖ ಮುಚ್ಚು ಕಾರ್ಮೋಡ; ಶ್ರೋತೃಗಣದಲ್ಲಿ ಕಂಡ ಅಥವಾ ಕಾಣದ ಯಾವುದೋ ಸ್ನೇಹದ ಮುಖ ನೋಡಿ ಹಾಯ್ ಎಂದು ಕೈಯೆತ್ತುವ ಭಂಗಿ ಇವೆಲ್ಲ ನಾನು ಗಮನಿಸುವ ಅಂಶಗಳು.

ಕಾವ್ಯ ಓದುವ ಶೈಲಿಗಳೂ ವಿಭಿನ್ನ ಹಾಗೂ ವೈವಿಧ್ಯಮಯ. ಕೆಲವರು ನಿಧಾನ, ಕೆಲವು ತರಾತುರಿ. ಬಹಳ ಜನ ಕವಿಗಳು ಅನಗತ್ಯವಾಗಿ ಸಾಲು ರಿಪೀಟು ಮಾಡುತ್ತ ಬೋರು ಹೊಡೆಸುತ್ತಾರೆ. ಒಬ್ಬರು ಒಂದೇ ಕವನ ಓದಬೇಕು ಎಂಬ ನಿಯಮವಿದ್ದರೂ ಕೆಲವರು ಟೈಟಲ್ ಹೇಳದೆ 3-4 ಕವನ ಜಡಿದುಬಿಡುತ್ತಾರೆ. ಒಬ್ಬಿಬ್ಬರು ಗಂಭೀರವಾಗಿ 'ಅಧ್ಯಕ್ಷರ ಅಪ್ಪಣೆ ಮೇರೆಗೆ' ಅಂತ ಅನಧಿಕೃತವಾಗಿ ಹೇಳಿ ಮತ್ತೊಂದು ಓದುತ್ತಾರೆ. ಗಂಭೀರ ಕವನಗಳನ್ನು ಹಗುರವಾಗಿ ವಾಚಿಸುತ್ತಾರೆ. ಮತ್ತೆ ಕೆಲವರು, ''ನಿನ್ನ ಮರಿಯೂ ಮಾತು ಮರೆತು ಬಿಡು ನೀನು'' ಎಂಬಂತಹ ಏಕಾಂತದ ಆತ್ಮೀಯ ಪಿಸುಮಾತುಗಳನ್ನು ಕೂಡ ಯುದ್ಧ ಘೋಷಣೆಯಂತೆ ಮೈಕಿನಲ್ಲಿ ಎಸೆಯುತ್ತಾರೆ.

ಪ್ರತಿಯೊಂದು ಕವಿಗೋಷ್ಠಿಯಲ್ಲೂ ಒಂದಾದರೂ 'ಬಾಬಾ' ಕವನ ಇರುವುದು ನಾನು ಈ ನಲುವತ್ತು ವರ್ಷಗಳ ಅನುಭವದಲ್ಲಿ ಕಂಡುಕೊಂಡ **ಸತ್ಯ ಬುದ್ಧ** ಗಾಂಧಿ, ಬಸವಣ್ಣ, ಅಂಬೇಡ್ಕರ ಇವರನ್ನೆಲ್ಲ ''ಮತ್ತೊಮ್ಮೆ ಹುಟ್ಟಿ ಬಾ'' ಎಂದು ಮೊರೆ ಇಡುತ್ತ ಕರೆಯುವ ಕವನಗಳಿವು. ಮೊನ್ನೆ ತಿರುಳ್ ಗನ್ನಡ ನಾಡಿನ ಖ್ಯಾತ ಕವಿಯೊಬ್ಬರು ಈ ಸಂಪ್ರದಾಯವನ್ನು ಭಂಗಗೊಳಿಸಿ, ಜಯಲಲಿತಾಳನ್ನು ''ಬರಬೇಡ ತಾಯಿ ಬರಬೇಡ'' ಎಂದು ಪ್ರಾರ್ಥಿಸಿದರು. ಅವಳು ಕೇಳಬೇಕಲ್ಲ! ಬಂದೇ ಬಿಟ್ಟಳು ಮತ್ತು ಕೇಂದ್ರ ಸರಕಾರವನ್ನು ಕೆಳಗೆ ತಂದೇ ಬಿಟ್ಟಳು. ನಮ್ಮ ಕವಿಯನ್ನು ಗವಿಸಿದ್ಧೇಶ್ವರನೇ ಕಾಪಾಡಬೇಕು!

ರಾಜ್ಯಮಟ್ಟದ್ದಿರಲಿ ಗ್ರಾಮ ಪಂಚಾಯಿತಿ ಮಟ್ಟದ್ದಿರಲಿ, ಕವಿಗೋಷ್ಠಿಗಳಲ್ಲಿ ಹಳಗನ್ನಡ, ನಡುಗನ್ನಡ, ಹೊಸಗನ್ನಡ, ರಸಗನ್ನಡ, ಕಸಗನ್ನಡ ಹೀಗೆ ಎಲ್ಲಾ ನಮೂನೆಯ ಕವನಗಳು ವಾಚಿಸಲ್ಪಡುತ್ತವೆ. ಲಂಡನಿನ್ನ ಮುಖ್ಯ ಬೀದಿಯೊಂದರ ಆಜೂ ಬಾಜೂ ರಂಗಮಂದಿರಗಳಲ್ಲಿ 16ನೆಯ ಶತಮಾನ ದಿಂದ ಹಿಡಿದು 20ನೆಯ ಶತಮಾನದ ತೀರ ಇತ್ತೀಚಿನ ಅತ್ಯಾಧುನಿಕ ನಾಟಕಗಳು ಪ್ರದರ್ಶನಗೊಳ್ಳುವುದನ್ನು ಕಣ್ಣಾರೆ ಕಂಡಿರುವ ನನಗೆ ಕನ್ನಡ ಕಾವ್ಯದ ಈ ಪರಿಯ ದರ್ಶನ ಅಚ್ಚರಿಯೇನೂ ಉಂಟು ಮಾಡುವುದಿಲ್ಲ. ಅದೇ ಹೇಳಿದೆನಲ್ಲ; ಹೇಳುವ ಸ್ವಾತಂತ್ರ್ಯ ಕವಿಗಳದು, ಕೇಳುವ ಸ್ವಾತಂತ್ರ್ಯ ನಮ್ಮ ಕಿವಿಗಳದು. ಕವಿಗೋಷ್ಠಿ ನಡೆದಾಗ ನೀವು ಪೆಂಡಾಲು ಸುತ್ತುತ್ತ ಪುಸ್ತಕ ಖರೀದಿಸಬಹುದು. ಅಂಗಡಿಗೆ ಹೋಗಿ ಐಸ್ ಕ್ರೀಮು ತಿನ್ನಬಹುದು ಅಥವಾ ಮುಂದಿನ ಸಮ್ಮೇಳನಕ್ಕಾಗಿ ನೀವೇ ಒಂದು ಕವನವನ್ನೂ ಗೀಚಬಹುದು. ಅಥವಾ ಆರಾಮಾಗಿ ಗೊರಕೆ ಹೊಡೆಯಬಹುದು.

★

ನಿಜವಾದ ಶಿಕ್ಷೆ ಅನುಭವಿಸಬೇಕಾದ ವ್ಯಕ್ತಿ ಕವಿಗೋಷ್ಠಿಯ ಅಧ್ಯಕ್ಷನಾದವನು ಮಾತ್ರ. ಅದು ಅವನ ಕರ್ಮ. ಯಾರೂ ಏನೂ ಮಾಡುವಂತಿಲ್ಲ. ಮೂರು ನಾಲ್ಕು ತಾಸು ಕುಂತಲ್ಲೇ ಕೂಡ್ರಬೇಕು. ಕವನಗಳನ್ನು ಕೇಳಿಸಿಕೊಳ್ಳಬೇಕು. ಟಿಪ್ಪಣಿ ಮಾಡಿಕೊಳ್ಳಬೇಕು. ಕೊನೆತನಕ ಸಭಿಕರು ಕುಂತಾರೆಂಬ ಗ್ಯಾರಂಟಿ ಇರದಿದ್ದರೂ ಅಧ್ಯಕ್ಷೀಯ 'ಭಾಷಣ' ಮಾಡಿ ಕನ್ನಡ ಕಾವ್ಯದ ಹಿಂದು ಇಂದು-ಮುಂದುಗಳ ಬಗ್ಗೆ ಮುಕ್ತಾಫಲ ಉದುರಿಸಬೇಕು. ಕೊನೆಗೆ ತನ್ನ ಕವನವನ್ನೂ ಓದಬೇಕು.

ಇಂಥ ಶೋಚನೀಯ ಪರಿಸ್ಥಿತಿಯನ್ನು ನಾನೂ ಅನುಭವಿಸಿದ್ದೇನೆ. ಮೈಸೂರಿನಲ್ಲಿ ಚುಟುಕು ಸಾಹಿತ್ಯ ಪರಿಷತ್ತಿನ ಕವಿಗೋಷ್ಠಿಗೆ ನಾನೇ ಅಧ್ಯಕ್ಷ. ಮುಂಜಾನೆ ಹತ್ತೂವರಿಗೆ ಸುರುವಾಯಿತು. ಕವಿಗಳ ಸಂಖ್ಯೆ? ಹತ್ತಲ್ಲ, ಐವತ್ತಲ್ಲ, ತೊಂಬತ್ತಲ್ಲ, ಪುಟ್ಟಾ ಪೂರಾ ನಾಲ್ಕು ನೂರು. ಅಷ್ಟು ಚುಟುಕುಗಳು ಚಟಪಟನೆ ಉರಿದು ಪಟಪಟನೆ ನನ್ನ ಕಣ್ಣೆದುರಿಗೇ ಹಾರಾಡಿದವು.

ಅಂತೂ ಅಧ್ಯಕ್ಷ ಭಾಷಣದ ಪಾಳೆ ಹತ್ತಿದಾಗ ಸಂಜೆ ನಾಲ್ಕುವರೆ. ನಾನು ಅಭಿಮಾನದಿಂದ ಹೇಳಿದೆ ''ನಾಲ್ಕು ನೂರು ಕವನ ಕೇಳಿದ್ದೇನೆ. ಜೀವನದಲ್ಲಿ ಇನ್ನು ಮುಂದೆ ಎಂಥ ಗಂಡಾಂತರ ಬಂದರೂ ಎದುರಿಸಬಲ್ಲೆನೆಂಬ ಆತ್ಮ ವಿಶ್ವಾಸ ನನಗೆ ಬಂದಿದೆ''

★

ಆದರೆ ಕವಿಗೋಷ್ಠಿಯ ಅಧ್ಯಕ್ಷತೆಗೆ ಈ ಪರಿ ಅಂಜಿಕೊಳ್ಳಬೇಕಾಗಿಲ್ಲ - ಎಂಬ ಭಾವನೆ ನನಗೆ ಬಂದಿದ್ದು, ಇತ್ತೀಚೆಗೆ ನಾನು ಕಂಡ ಕವಿಗೋಷ್ಠಿಯೊಂದರಿಂದ. ಗೋಷ್ಠಿಗೆ ಅಧ್ಯಕ್ಷರಾಗಿ ಆಯ್ಕೆಯಾಗಿದ್ದವರು, ನಾನು ಪ್ರೀತಿಯಿಂದ 'ನವ್ಯೋತ್ತರ ಕುಮಾರ' ಎಂದು ಹೆಸರಿಟ್ಟಿರುವ ಬಂಗಾರದ ಗಣಿ ಸೀಮೆಯ ಒಬ್ಬ ಸ್ನೇಹಿತರು. ಸಾಕಷ್ಟು ತಯಾರಿ ಮಾಡಿಕೊಂಡೇ ಬಂದಿದ್ದ ಅವರು ಗಂಟಲು ಶುದ್ಧಿಗಾಗಿ ಸ್ವಲ್ಪ 'ಔಷಧಿ' ತಗೊಂಡಿದ್ದರಂತೆ. ಇನ್ನೂ ಸರಿಯಾಗಿರಲಿ ಅಂತ ಮತ್ತೆ ಮತ್ತೆ 'ಔಷಧಿ' ತಗೊಂಡಾಗ, ಕೊನೆಗೆ ಆಗಿದ್ದು ; ಗಂಟಲು ಬಿದ್ದು ಹೋಯಿತು. ಕವಿಗೋಷ್ಠಿ ಅಧ್ಯಕ್ಷರಾಗಿ ಕನ್ನಡ ಕಾವ್ಯಕ್ಕೆ ದಿಕ್‌ಸೂಚಿಯಾಗಬಲ್ಲ ಭಾಷಣ ಮಾಡಬೇಕಾಗಿದ್ದ ವ್ಯಕ್ತಿ ದಿಕ್ಕೇ ತಪ್ಪಿದಂತಾಗಿ ಮೌನ ಪ್ರೇಕ್ಷಕನಾಗಿ ಕೂಡ್ರ ಬೇಕಾಯಿತು (ಅವರಿಗಾಗದ ಕೆಲವರು ಅಧ್ಯಕ್ಷರ ಮೌನವೇ ಚೆನ್ನಾಗಿತ್ತೆಂದೂ ಅದರಿಂದ ಕನ್ನಡ ಸಾಹಿತ್ಯಕ್ಕೆ ಉಪಕಾರವೇ ಆಯಿತೆಂದೂ ಹೇಳುತ್ತಿದ್ದರು). ಕೊನೆಗೆ, ಅಧ್ಯಕ್ಷರ ಕೆಲವು ಪಿಸುಮಾತಿನ ಆತ್ಮೀಯ ಕವನಗಳನ್ನು ಅವರ ಆತ್ಮೀಯ ಮಿತ್ರರೊಬ್ಬರು ದುರ್ಯೋಧನ ಪಾತ್ರಧಾರಿಯಂತೆ ಯಕ್ಷಗಾನದ ಶೈಲಿಯಲ್ಲಿ ಅಟ್ಟಹಾಸದಿಂದ ಓದಿ ಇಡೀ ಕವಿಗೋಷ್ಠಿಯ ಮಟ್ಟವನ್ನೇ ಚಟ್ಟಕ್ಕೇರಿಸಿ ಬಿಟ್ಟರು.

ಸಾಹಿತ್ಯ ಸಮ್ಮೇಳನಗಳಲ್ಲಿ ಸಾಹಿತಿಗಳು ಪರಸ್ಪರ ಭೆಟ್ಟಿಯಾದಾಗ ''ಇತ್ತೀಚೆಗೆ ಏನು ಬರೆದಿದ್ದೀರಿ?'' ಅಂತ ಕೇಳುವುದು ಒಂದು ಶಿಷ್ಟಾಚಾರ. ಹೀಗೆ ಕೇಳದಿದ್ದರೆ ಸಾಹಿತಿಗಳು ತಪ್ಪು ತಿಳಿಯುವುದುಂಟು. ಕತೆ, ಕಾದಂಬರಿ, ನಾಟಕ, ವಿಮರ್ಶೆ ಬರೆಯುವವರನ್ನು ಸಲೀಸಾಗಿ ಯಾವ ರಿಸ್ಕೂ ಇಲ್ಲದೆ ಈ ಪ್ರಶ್ನೆ ಕೇಳಬಹುದು. ಆದರೆ ನಾನು ಮಾತ್ರ 'ಕವಿ'ಗಳು ಭೆಟ್ಟಿಯಾದಾಗ ಅಪ್ಪಿ ತಪ್ಪಿ ಕೂಡ ಇಂಥ ಪ್ರಶ್ನೆ ಕೇಳುವುದಿಲ್ಲ. ಏಕೆಂದರೆ ಕೇಳುವುದೇ ತಡ, ಅವರು ಬಗಲಚೀಲದೊಳಗಿಂದ ಒಂದು ಸಣ್ಣ ಪೆಂಡಿ ಹಿರಿಯುತ್ತಾರೆ. ತೀರ ಇತ್ತೀಚಿನ ಕವನಗಳು! ಹಸಿ ಹಸಿಯಾಗಿ ಹಾಳೆ ಕೂಡ ತೊಯ್ದಿರುತ್ತದೆ. ಬಂಡಾಯ ಕವನವಾಗಿದ್ದರೆ ಬಿಸಿ ಬಿಸಿಯಾಗಿ ಹಾಳೆ ಅಲ್ಲಲ್ಲಿ ಸುಟ್ಟು ಹೋಗಿರುತ್ತದೆ. ಪ್ರಶ್ನೆ ಕೇಳಿದವರು ನೀವು. ಕವನ ಓದುವುದು ಅವನ ಧರ್ಮ. ಕೇಳುವುದು ನಿಮ್ಮ ಕರ್ಮ.

ನನ್ನ ನಿಲುವಿಗೆ ಆಧಾರ ನನ್ನ ಅನುಭವವೇ. 1960ರ ದಶಕ ಅದು. ಗಿರಡ್ಡಿ, ಪಟ್ಟಣಶೆಟ್ಟಿ, ನಾನು ಸಂಕ್ರಮಣ ಪ್ರಾರಂಭಿಸಿದ್ದೆವು. ನಮಗೆಲ್ಲ ಬಹಳ ಆತ್ಮೀಯನಾದ ಸ್ನೇಹಿತ ಸುಮತೀಂದ್ರ ನಾಡಿಗ. ಅವನಿಗೆ ಆಗ ಗೋವಾದಲ್ಲಿ ನೌಕರಿ. ಬೆಂಗಳೂರಿನಿಂದ ಸಕುಟುಂಬ ಗೋವಾಕ್ಕೆ ಹೋಗುವಾಗ ಧಾರವಾಡದಲ್ಲಿ ಒಂದು ದಿನ ಕ್ಯಾಂಪು. ಮೂರು ಮನೆಗಳಲ್ಲಿ ಒಂದು ಕಡೆ ಊಟ - ಉಪಚಾರ ಸಾಂಗವಾಗುತ್ತಿತ್ತು. ಬರೋಬರಿ. ಆದರೆ ನಮಗೆ ಜೀವದ ಸುತ್ತ ಬರುತ್ತಿದ್ದುದು ನಾವೆಲ್ಲ ಭೋಜನ ಪೂರ್ವ ಅಥವಾ ಭೋಜನೋತ್ತರ ಸಮಯದಲ್ಲಿ ಹರಟೆಗೆಂದು ಕುಳಿತಾಗ. ತನ್ನ ಬಗಲ ಚೀಲದೊಳಗಿಂದ ಸುಮತೀಂದ್ರ ತನ್ನ ತಾಜಾ ತಾಜಾ ಕವನಗಳನ್ನು ಹೊರಗೆ ಹಿಡಿದು ನಮಗೆ ಓದಲು ಹಚ್ಚುತ್ತಿದ್ದ. ಸಾಲಿನಿಂದ ಸಾಲಿಗೆ ನಮ್ಮ ಕಣ್ಣುಗಳು ಓಡಾಡುತ್ತಿರುವಾಗ ಸುಮತೀಂದ್ರ ತನ್ನ ಮಂಟ ಬೆಕ್ಕಿನಂಥ ಮುಖವನ್ನು ಬಿಗಿಯಾಗಿ ಹಿರಿದು ಮರಿಕವಿಗಳಾದ ನಮ್ಮನ್ನು ಕುರಿ ಕಾಯುವವನಂತೆ ವಾಚ್ ಮಾಡುತ್ತಿದ್ದ. ಒಂದು ಕವನ ಓದುತ್ತಿದ್ದಂತೆ ಅದನ್ನು ಇಸಗೊಂಡು ಮತ್ತೊಬ್ಬರಿಗೆ ಕೊಡುವುದು, ಅವನದನ್ನು ಇವನಿಗೆ ಕೊಡುವುದು, ಮತ್ತೆ ಮಂಟಬೆಕ್ಕಿನಂತೆ ಕೂಡುವುದು ಮಾಡುವುದು ನಾಡಿಗನ ಚಾಳಿ.

ನಮ್ಮ ಪಾಲಿನ ಕರ್ತವ್ಯವೆಂದರೆ ; ಸಾಲು ಓದುವುದು, ಮತ್ತೆ ಸಾಲುಗಳ ನಡುವೆ ಏನಾದರು ಕಾವ್ಯ ಇದೆಯೇ ಅಂತ ಹುಡುಕಲು ಪ್ರಯತ್ನಿಸುವುದು. ಎಲ್ಲ ಆದಮೇಲೆ ನಮ್ಮ ಅಭಿಪ್ರಾಯ ಬೇರೆ ಹೇಳಬೇಕು ಅವನಿಗೆ. ನಮ್ಮ ಅಭಿಪ್ರಾಯ ಕೇಳಿ, ಕೊನೆಗೆ ತನ್ನದೇ ಅಭಿಪ್ರಾಯ ಹೇಳಿ, ಅದೇ ಸರಿಯಾದ 'ವಿಮರ್ಶೆ' ಅಂತ ನಮಗೆ ತಿಳಿ ಹೇಳುವುದು ನಾಡಿಗನ ಶೈಲಿ....ಹೀಗೆ ಈ ಮಂಟಬೆಕ್ಕು ನಮ್ಮನ್ನು ಕಾಡಿದ ರೀತಿ ಒಂದಲ್ಲ, ಎರಡಲ್ಲ. ನಾನು, ಪಟ್ಟಣಶೆಟ್ಟಿ ಪಾರಾಗಿದ್ದೇವೆ. ಗಿರಡ್ಡಿ ಮಾತ್ರ ಅಲರ್ಜಿಗೊಂಡು ವಿಮರ್ಶಕನಾಗಿ ಪರಿವರ್ತನೆಗೊಂಡದ್ದು.

ಸಮ್ಮೇಳನವೊಂದರ ಪ್ರಾಂಗಣದಲ್ಲಿ ಹಾಯಾಗಿ ಕುಳಿತಿದ್ದೆ ಒಮ್ಮೆ. ಕವಿಯೊಬ್ಬ ಬಂದು ಕವನ ಕೊಟ್ಟು ಅಭಿಪ್ರಾಯ ಕೇಳಿದ. ''ಇಲ್ಲಪ್ಪ, ನಾನು ಕವನ ಓದುವುದು ಏಕಾಂತದಲ್ಲಿ ಮಾತ್ರ ಅಂದೆ. ಅವನು ಬಿಡಲಿಲ್ಲ. ''ನೀವು ಏಕಾಂತದಲ್ಲಿಯೇ ಇರ್ರಿ, ಸಾರ್'' ಎಂದು ನನ್ನೊಬ್ಬನನ್ನೇ ಬಿಟ್ಟು ಹೋದ. ಹದಿನೈದು ಮಿನಿಟು ಬಿಟ್ಟು ಬಂದ. ನಾನು ಒಂದು ಹಾಳೆಯ ಮೇಲೆ ನನ್ನ ಅಭಿಪ್ರಾಯ ಬರೆದು ಕೊಟ್ಟೆ. ಆಸಕ್ತಿಯಿಂದ ಅದನ್ನು ಓದಿದ ಕವಿ. ಅವತ್ತಿನಿಂದ ಇವತ್ತಿನವರೆಗೆ ಮತ್ತೆ ಅವನ ಭೆಟ್ಟಿ ಆಗಿಲ್ಲ. ಆಗುವ ಸಂಭವವೂ ಇಲ್ಲ.

ನಾನು ಬರೆದದ್ದು ; ''ಕವನದ ಮೊದಲ ಎಂಟು ಸಾಲು ಮತ್ತು ಕೊನೆಯ ಆರು ಸಾಲು ಬಿಟ್ಟರೆ ಇದು ಅತ್ಯಂತ ಶ್ರೇಷ್ಠ ಕಾವ್ಯವಾಗಿದೆ. ನಿಮಗೆ ಶುಭವಾಗಲಿ''.

ಅವನು ಬರೆದದ್ದು ಒಂದು ಸಾನೆಟ್ ಆಗಿತ್ತು. ಹದಿನಾಲ್ಕು ಸಾಲಿನ ಸಾನೆಟ್.

[ಸೌಜನ್ಯ : ಸಂಕ್ರಮಣ, ಏಪ್ರಿಲ್ 1999]

ಕ್ರೀಡೆಗಳಲ್ಲಿ ಡ್ರಗ್ಸ್ ಪಿಡುಗು



ಜಮೈಕಾದ ಓಟದ ರಾಣಿ ಮೆರ್ಲಿನ್ ಓಟ್ಟೀ

ನಿಮಗೆ ನೆನಪಿರಬಹುದು. ಕೆಲವೇ ವರ್ಷಗಳ ಹಿಂದೆ, ಟಿವಿ ಪರದೆಯ ಮೇಲೆ ಒಲಿಂಪಿಕ್ಸ್ ಸಾಹಸ ನೋಡುತ್ತಾ ಇರುವಾಗ, ಮೈ ತುಂಬಿಕೊಂಡ ಗೂಳಿಯಂತೆ ಓಡಿಬಂದ ಬೆನ್ ಜಾನ್ಸನ್ ಹತ್ತು ಸೆಕೆಂಡಿನೊಳಗೆ ನೂರು ಮೀಟರ್ ಕ್ರಮಿಸಿ ವಿಶ್ವ ದಾಖಲೆ ಸ್ಥಾಪಿಸಿದ್ದ. ಹತ್ತು ಸೆಕೆಂಡಿನೊಳಗೆ ನೂರು ಮೀಟರ್! 'ನೋ, ಇಂಪಾಸಿಬಲ್' ಎಂದು ಜಗತ್ತಿಡೀ ಬೆರಗಿಂದ ಪ್ರತಿಕ್ರಿಯಿಸುತ್ತಿದ್ದಾಗ ಬೆನ್ ಜಾನ್ಸನ್ ಕೊರಳಲ್ಲಿ ಚಿನ್ನದ ಪದಕ ರಾರಾಜಿಸುತ್ತಿತ್ತು.

ಆದರೆ ಇದಕ್ಕಿಂತ ಆಶ್ಚರ್ಯದ ಸಂಗತಿ ಘಟಿಸಿತು. ಬೆನ್ ಜಾನ್ಸನ್ ಉದ್ದೀಪನ ಮದ್ದು ಸೇವಿಸಿರುವುದು ಪತ್ತೆಯಾಯಿತು. ಆತನಿಂದ ಚಿನ್ನದ ಪದಕ ಕಿತ್ತುಕೊಳ್ಳಲಾಯಿತು. ಆತನನ್ನು ಅಂತಾರಾಷ್ಟ್ರೀಯ ಅಥ್ಲೆಟಿಕ್ಸ್‌ನಿಂದ ಬಹಿಷ್ಕರಿಸಲಾಯಿತು. ಎಚ್ಚರಿಕೆ ನೀಡಲಾಯಿತು. ಮತ್ತೆ ಇಂಥದ್ದು ಮರುಕಳಿಸಿದರೆ ಚೆನ್ನಾಗಿರುವುದಿಲ್ಲ ಎಂದೇನೋ ಹೇಳಲಾಯಿತು. ಆದರೇನು? ಎರಡು ವರ್ಷದ ಅಂತರದಲ್ಲಿ ಆತ ಮತ್ತೊಮ್ಮೆ ಸಿಕ್ಕಿಬಿದ್ದ. ಈಗ ಅವನನ್ನು ಜೀವನವಿಡೀ ಅಂತಾರಾಷ್ಟ್ರೀಯ ಅಥ್ಲೆಟಿಕ್ಸ್‌ನಿಂದ ಬಹಿಷ್ಕರಿಸಲಾಗಿದೆ.

ನಿಮಗೆ ಇದೂ ನೆನಪಿರಬಹುದು. 1994ರ ವಿಶ್ವಕಪ್ ಫುಟ್‌ಬಾಲ್ ಪಂದ್ಯಾವಳಿಯಲ್ಲಿ ಆ ಕ್ರೀಡೆಯ ದೇವತೆ ಎಂದೇ ಪರಿಗಣಿಸಲಾಗಿದ್ದ ಡಿಯಾಗೋ ಮರಡೋನಾ, ಅರ್ಜೆಂಟೀನಾದ ಆರಾಧ್ಯ ದೈವ ಕೆಲವೇ ವರ್ಷಗಳಲ್ಲಿ ಮಣ್ಣು ಮುಕ್ಕಿದ. ಕೊಕೇನ್ ಸೇವನೆಯ ದುಶ್ಚಟ ಅವನಿಗಿತ್ತು. ಕೊಕೇನ್ ಉದ್ದೀಪನ ವಸ್ತು ಅಲ್ಲ. ಅದು ಕೇವಲ ಭ್ರಮೆ ಹುಟ್ಟಿಸುತ್ತದೆ ಅಷ್ಟೆ. ಆದರೂ ಫುಟ್‌ಬಾಲ್‌ನ ಆರಾಧ್ಯದೈವ ಎನಿಸಿದ್ದ ವ್ಯಕ್ತಿಯೊಬ್ಬ ಇಂಥದೊಂದು ದುಶ್ಚಟಕ್ಕೆ ಗುರಿಯಾಗಿದ್ದಾನೆ ಎಂಬುದು ಆತನ ಆರಾಧಕರಿಗೆ ಶಾಕ್ ನೀಡಿತು. ಮರಡೋನಾ ಜನಪ್ರಿಯತೆ ಕಳೆದುಕೊಂಡ. ಆಟದ ಮೇಲಿನ ಹಿಡಿತವೂ ಹೋಯಿತು.

ಇಂಥ ಕಥೆಗಳು ಜನಕ್ಕೆ ಹೊಸದಲ್ಲ. ಇತ್ತೀಚೆಗೆ ಪ್ರತಿ ಅಂತಾರಾಷ್ಟ್ರೀಯ ಕ್ರೀಡಾಕೂಟ ನಡೆದಾಗ ಇದು ಮಾಮೂಲಿನಂತೆ ವರದಿಯಾಗುತ್ತದೆ. ದೊಡ್ಡ ಕೋಲಾಹಲ ಏಳುತ್ತದೆ. ಮತ್ತೆ ಎಲ್ಲ ಮರೆಯಾಗುತ್ತದೆ.

ಈಚೆಗೆ ಕೆನಡಾದ ವಿನಿಪೆಗ್ ನಗರದಲ್ಲಿ ಪಾನ್ ಅಮೆರಿಕನ್ ಕ್ರೀಡಾಕೂಟ ನಡೆಯಿತು. ಕ್ರೀಡಾಕೂಟ ನಡೆಯುತ್ತಿರುವಾಗಲೇ ಕ್ಯೂಬಾದ ಏಳು ಜನ ಕ್ರೀಡಾಪಟುಗಳು ಹಾಗೂ ಒಬ್ಬ ಪತ್ರಕರ್ತ ದೇಶಾಂತರವೆಸಗಿ ಅಮೆರಿಕಾದಲ್ಲಿ ಆಶ್ರಯ ಪಡೆದರು. ಅದು ದೊಡ್ಡ ಸುದ್ದಿಯಾಗಲಿಲ್ಲ. ಆದರೆ ಕ್ಯೂಬಾದ ಕ್ರೀಡಾಪಟು ಹಾಗೂ ಒಲಿಂಪಿಕ್ ಕೂಟದ ಛಾಂಪಿಯನ್ ಜೇವಿಯರ್ ಸೋಟೀಮೇಯರ್ ಕೊಕೇನ್ ಸೇವನೆ ನಡೆಸಿದ್ದು ಪತ್ತೆಯಾಗಿ ಆತನನ್ನು ಪದಕಕ್ಕೆ ಅನರ್ಹ ಎಂದು ಘೋಷಿಸಿದ್ದು ಬಹಳ ದೊಡ್ಡ ಸುದ್ದಿಯಾಯಿತು. ಕೋಲಾಹಲ ಉಂಟುಮಾಡಿತು.

ಒಂದು ಹಂತದಲ್ಲಿ ಅಮೆರಿಕಾವನ್ನು ಹಿಂದೆ ಹಾಕಿ ಕೂಟದ ಛಾಂಪಿಯನ್ ಎನಿಸಬಹುದಾದ ಸ್ಥಿತಿಯಲ್ಲಿದ್ದ ಕ್ಯೂಬಾ ಏಕಾಏಕಿ ಖಳನಾಯಕ ಎನಿಸಿಕೊಂಡಿದ್ದು ವಿಪರ್ಯಾಸ.

ಇದೇ ವರ್ಷದ ಆಗಸ್ಟ್‌ನಲ್ಲಿ ನೂರುಮೀಟರ್ ಓಟದಲ್ಲಿ ಒಲಿಂಪಿಕ್ ಛಾಂಪಿಯನ್ ಆಗಿದ್ದ ಲಿನ್‌ಫರ್ಡ್ ಕ್ರಿಸ್ಟೀ ನ್ಯಾಂಡ್ರೋರೀನ್ ಎಂಬ ಅನಬಾಲಿಕ್ ಸ್ಟೆರಾಯ್ಡ್ ಬಳಸುತ್ತಾನೆಂಬುದು ಪತ್ತೆಯಾಗಿ ದೊಡ್ಡ

ಸುದ್ದಿಯಾಗಿತ್ತು. ಕ್ರಿಸ್ಟಿಯಂತೆ ಜಮೈಕಾದಲ್ಲಿಯೇ ಹುಟ್ಟಿದ ಮೆರ್ಲಿನ್ ಓಟ್ಟೇ ಕೂಡ ಇದೇ ಸ್ಟೆರಾಯ್ಡ್ ಸೇವಿಸಿದ್ದಳೆಂಬುದು ಸ್ವಿಟ್ಜರ್‌ಲ್ಯಾಂಡ್ ಕೂಟದ ವರದಿ ಬಂದಾಗ ಇಡೀ ದೇಶ ತಲ್ಲಣಿಸಿತು. ಅದರಿಂದಾಗಿ ಜಮೈಕಾ ತಂಡಕ್ಕೆ ಆಯ್ಕೆಯಾಗಿದ್ದ ಆಕೆ ಸಿಯೊಲ್‌ನಲ್ಲಿ ನಡೆಯಲಿದ್ದ ವಿಶ್ವ ಛಾಂಪಿಯನ್ ಕೂಟದಿಂದ ನಿರ್ಗಮಿಸಿದಳು. ಇಡೀ ಜಮೈಕಾ ಆಕ್ರೋಷದಿಂದ ಚೀರಾಡಿತು. ಟಿವಿಯ ಟಾಕ್ ಶೋಗಳಲ್ಲೆಲ್ಲ ಇದೇ ಚರ್ಚೆ. ಅಮೆರಿಕಾದ ಪ್ರಾಬಲ್ಯವಿರುವ ಅಂತಾರಾಷ್ಟ್ರೀಯ ಅಮೆಚೂರ್ ಅಥ್ಲೆಟಿಕ್ಸ್ ಒಕ್ಕೂಟದ ಪಿತೂರಿ ಇದು ಎಂದು ಎಲ್ಲ ಒಕ್ಕೊರಲಿಂದ ಚೀರಿದರು.

ನೀವೇ ಗಮನಿಸಿ. ಇದುವರೆಗೆ ಇಂಥ ಉದ್ದೀಪನ ವಸ್ತು ಸೇವನೆಯ ಆರೋಪ ಹೊತ್ತವರಲ್ಲಿ ಹೆಚ್ಚಾಗಿ ಅಮೇರಿಕೇತರ ಕ್ರೀಡಾಪಟುಗಳು. ಅದು ಅರ್ಜೆಂಟೀನಾದ ಮರಡೋನಾ ಇರಬಹುದು. ಜಮೈಕಾ ಸಂಜಾತ ಲಿನ್‌ಫರ್ಡ್ ಕ್ರಿಸ್ಟೀ, ಬೆನ್‌ಜಾನ್ಸನ್ ಇರಬಹುದು. ಇವತ್ತಿಗೂ ಜಮೈಕಾ ತಂಡದ ಪರವಾಗಿಯೇ ಪಾಲ್ಗೊಳ್ಳುತ್ತಿದ್ದ ಮೆರ್ಲಿನ್ ಒಟ್ಟೇ ಇರಬಹುದು.

ಜಮೈಕಾ ಸ್ಪ್ರಿಂಟರುಗಳ ಸ್ವರ್ಗ ಎಂದೇ ಹೇಳಲಾಗುತ್ತದೆ. ಸ್ವಲ್ಪ ಹೆಸರು ಮಾಡುತ್ತಿದ್ದ ಹಾಗೆ ಇಲ್ಲಿನ ಕ್ರೀಡಾಪಟುಗಳು ಅಮೆರಿಕಾ, ಕೆನಡಾಗಳಿಗೆ ವಲಸೆ ಹೋಗುತ್ತಾರೆ. ಆ ದೇಶಗಳು ಇವರಿಗೆ ಎಲ್ಲ ರೀತಿಯ ಅನುಕೂಲ, ಹಣ ಕಲ್ಪಿಸಿ ತಮ್ಮ ರಾಷ್ಟ್ರದ ಪರವಾಗಿ ಒಲಿಂಪಿಕ್ ಮತ್ತಿತರ ವಿಶ್ವ ಕ್ರೀಡಾಕೂಟಗಳಲ್ಲಿ ಪಾಲ್ಗೊಳ್ಳಲು ವ್ಯವಸ್ಥೆ ಮಾಡುತ್ತವೆ. ತರಬೇತು ಅವಧಿಯಲ್ಲಿ ವಿಟಮಿನ್ ಮತ್ತು ಪ್ರೋಟೀನ್‌ಗಳೆಂಬ ಹೆಸರಿನಲ್ಲಿ ನೀಡಲಾಗುವ ಸ್ಟೆರಾಯ್ಡ್‌ಗಳನ್ನು ಆಯಾ ದೇಶಗಳೇ ಒದಗಿಸಿರುತ್ತವೆ. ಆದಷ್ಟು ಇಂಥ ಸ್ಟೆರಾಯ್ಡ್‌ಗಳ ಬಳಕೆ



ಲಿಂಗ ಪರಿವರ್ತನೆ ಶಸ್ತ್ರ ಚಿಕಿತ್ಸೆಗೆ ಒಳಗಾಗಿ ಗಂಡಾದ ಹೆಣ್ಣು : ಜರ್ಮನಿಯ ಹೈಡೀ ಕ್ರೀಗರ್

ಪತ್ತೆಯಾಗದಂತೆ ನೋಡಿಕೊಳ್ಳುವ ವ್ಯವಸ್ಥೆ ಮಾಡಲಾಗಿರುತ್ತದೆ. ಅಪರೂಪಕ್ಕೊಮ್ಮೆ ಇದು ಬಯಲಾದಾಗ, ಅವರು ಪ್ರತಿನಿಧಿಸುವ ಅಮೆರಿಕಾ, ಕೆನಡಾ ದೇಶಗಳನ್ನು ಯಾರೂ ಬೈಯುವುದಿಲ್ಲ. ಬದಲಿಗೆ, ಅವರ ಹುಟ್ಟಿನ ದೇಶಗಳಾದ ಜಮೈಕಾ, ಆಫ್ರಿಕಾದ ದೇಶಗಳಿಗೆ ಕಪ್ಪು ಅಂಟುತ್ತದೆ.

ಕ್ಯೂಬಾದ ಜೇವಿಯರ್ ಬಗ್ಗೆ ಆದದ್ದೂ ಇದೇ. ಪಾಶ್ಚಿಮಾತ್ಯ ರಾಷ್ಟ್ರಗಳ ಮಾಧ್ಯಮಗಳು ಕ್ಯೂಬಾದ ಆಟಗಾರರು ಅಮೆರಿಕಾಕ್ಕೆ ದೇಶಾಂತರ ಮಾಡಿದ್ದನ್ನು ಖುಷಿಯಿಂದ, ಫಿಡೆಲ್ ಕ್ಯಾಸ್ಟ್ರೋ ಆಡಳಿತದ ವೈಫಲ್ಯಕ್ಕೆ ಇಲ್ಲಿದೆ ಉದಾಹರಣೆ ಎಂಬಂತೆ ಬಣ್ಣಿಸಿದವು. ಆದರೆ ಹಾಗೆ ಪಕ್ಷಾಂತರಕ್ಕೆ ಮುಂದಾಗದ ಜೇವಿಯರ್ ಸೋಟೋಮೇಯರ್ ಕೊಕೇನ್‌ನಂಥ ಉದ್ದೀಪನಕಾರಿಯಲ್ಲದ ವಸ್ತು ಸೇವಿಸಿದ್ದನ್ನು ಕೂಡ ಭಾರೀ ದೊಡ್ಡ ಖಳನ ಕ್ರಿಯೆಯಂತೆ ಬಣ್ಣಿಸಲಾಯಿತು.

ಜರ್ಮನಿಯ ಸ್ಟುಟ್‌ಗಾರ್ಟ್‌ನಲ್ಲಿ ನಡೆದ 1993ರ ವಿಶ್ವ ಛಾಂಪಿಯನ್‌ಶಿಪ್‌ನಲ್ಲಿ ಚಿನ್ನದ ಪದಕ ಗಳಿಸಿದ ಮೆರ್ಲಿನ್ ಓಟ್ಟೇ ಸಾಧನೆ ಕಂಡು ಇಡೀ ಜಮೈಕಾ ಹುಚ್ಚೆದ್ದು ಕುಣಿದಿತ್ತು. 'ನೀನು ದೇಶಕ್ಕೆ ಚಿನ್ನದ ಪದಕ ಗಳಿಸಿ ತಂದಿದ್ದೀಯ. ನಿನ್ನ ಸಂತಸದಲ್ಲಿ ಇಡೀ ದೇಶ ಭಾಗಿಯಾಗಿದೆ' ಎಂದು ದೇಶದ ಪ್ರಧಾನಿಯೇ ಅವತ್ತು ನುಡಿದಿದ್ದರು. ಆಕೆಗೆ ಬರೆದ ಪತ್ರದಲ್ಲಿ ದಾಖಲಾಗಿದ್ದ ಮಾತುಗಳಿವು.

ಇದೇ ಮೆರ್ಲಿನ್ ಬಗ್ಗೆ ಅಮೆರಿಕಾದ ಪತ್ರಿಕೆಗಳು 'ಕಂಚಿನ ರಾಣಿ' ಎಂದು ಗೇಲಿ ಮಾಡುತ್ತಿದ್ದವು. ಸದಾ ಮೂರನೆ ಸ್ಥಾನಗಿಟ್ಟಿಸಲೂ ತೀವ್ರ ಶ್ರಮವಹಿಸುತ್ತಿದ್ದ ಮೆರ್ಲಿನ್ ಸಾಧನೆ ದೊಡ್ಡದು. ಮುಖ್ಯ: ಆಕೆ ಉಳಿದ ಅಥ್ಲೀಟ್‌ಗಳ ಹಾಗೆ ದೇಶ ಬಿಟ್ಟು ಹೋಗಿ ಹೆಚ್ಚಿನ ಹಣ, ಅನುಕೂಲದ ಆಮಿಷಳಿಗೆ ಬಲಿಯಾಗಿರಲಿಲ್ಲ. ಹಾಗಾಗಿಯೇ ಜಮೈಕಾದ ಜನತೆ ಆಕೆಯನ್ನು ಪ್ರೀತಿಸುತ್ತಾ ಇದ್ದರು. ಆರಾಧಿಸುತ್ತಾ ಇದ್ದರು. ಮುಂದಿನ ಒಲಿಂಪಿಕ್ಸ್‌ನಲ್ಲಿ ಬಹುದೊಡ್ಡ ಸಾಧನೆ ಮಾಡಬಹುದೆಂದು ಆಕೆಯ ಬಗ್ಗೆ ಇಡೀ ದೇಶಕ್ಕೆ ನಿರೀಕ್ಷೆ ಇತ್ತು.

ಇಷ್ಟಾಗಿ ನೀವ್ಯಾರೂ ನಂಬುವುದಿಲ್ಲ ಮೆರ್ಲಿನ್ ಓಟ್ಟೇಗೆ ಈಗ 39 ವರ್ಷ. ಎಂಥ ದುರಂತ ಅಲ್ಲವೇ?

ಆಕೆ ಮತ್ತು ಬಹುಪಾಲು ಜಮೈಕಾದ ಓಟಗಾರರ ಫಿಸಿಸಿಯನ್ ಆಗಿರುವ ಡಾ|| ಪಾಲ್‌ರೈಟ್, ಮೆರ್ಲಿನ್ ಅನರ್ಹತೆ ಪ್ರಕಟವಾದಾಗ ಪ್ರತಿಕ್ರಿಯಿಸಿದ್ದು ಹೀಗೆ ''ಇವತ್ತು ಅಂತಾರಾಷ್ಟ್ರೀಯ ಅಥ್ಲೆಟ್‌ಗಳಲ್ಲಿ ಶೇಕಡಾ 90ರಷ್ಟು ಜನ ಡ್ರಗ್ಸ್ ಬಳಸುತ್ತಾರೆ. ಒಂದಲ್ಲ ಒಂದು ದಿನ ಅವರು ಒಬ್ಬೊಬ್ಬರಾಗಿ ಸಿಕ್ಕಿ ಬೀಳುತ್ತಾರೆ....''

ನಿಮಗೆ ಗೊತ್ತಿದೆಯೋ ಇಲ್ಲವೋ! ಪೂರ್ವ ಜರ್ಮನಿ ಇರುವಷ್ಟು ಕಾಲ ಅಲ್ಲಿನ ವಿಜ್ಞಾನಿ, ವೈದ್ಯರು ಕ್ರೀಡೆಗಳಲ್ಲಿ ಅತಿಹೆಚ್ಚಿನ ಸಾಧನೆ ಮಾಡುವುದಕ್ಕಾಗಿ

ಒಂದು ಯೋಜನೆಯನ್ನು ರಾಷ್ಟ್ರೀಯ ಕಾರ್ಯಕ್ರಮವಾಗಿ ಹಮ್ಮಿಕೊಂಡಿದ್ದರು. ಅದರ ಪರಿಣಾಮವಾಗಿ ಒಲಿಂಪಿಕ್ಸ್ ಮತ್ತು ಅಂತಾರಾಷ್ಟ್ರೀಯ ಕ್ರೀಡಾಕೂಟಗಳಲ್ಲಿ ಪೂರ್ವ ಜರ್ಮನಿ ಚಿನ್ನ ಬಾಚಿಕೊಂಡಿತು. ಇನ್ನೊಂದು ವಿಚಿತ್ರವೆಂದರೆ, ಅಥ್ಲೆಟಿಕ್ಸ್‌ಗಳ ಡ್ರಗ್ಸ್ ದುರ್ಬಳಕೆ ಸಾಬೀತುಗೊಳಿಸುವ ಪ್ರಯೋಗಾಲಯಗಳು ಇದ್ದುದೇ ಪೂರ್ವ ಜರ್ಮನಿಯಲ್ಲಿ. ಬೇರೆಲ್ಲರ ನ್ಯೂನ್ಯತೆ ಪತ್ತೆ ಹಚ್ಚುತ್ತಿದ್ದ ಈ ಪ್ರಯೋಗಾಲಯಗಳು ತಮ್ಮ ದೇಶದವರು ಗೊತ್ತಿದ್ದೂ ದುರ್ಬಳಕೆ ಮಾಡುತ್ತಿದ್ದರೂ, ಅವರ್ಯಾರೂ ಡ್ರಗ್ ಬಳಸುತ್ತಿಲ್ಲ ಎಂಬ ಸರ್ಟಿಫಿಕೇಟ್ ನೀಡುತ್ತಾ ಇದ್ದವು. ಪೂರ್ವ ಜರ್ಮನಿ ಅಳಿದು ಇತ್ತೀಚೆಗೆ ಏಕೀಕೃತ ಜರ್ಮನಿ ಆದ ಮೇಲೆ ಈ ಎಲ್ಲ ವಿಚಾರ ಬೆಳಕಿಗೆ ಬಂದಿದೆ. ಪಶ್ಚಿಮ ಜರ್ಮನಿಯ ವೆರ್ನರ್ ಫ್ರ್ಯಾಂಕ್ ಎಂಬ ವಿಶ್ವಖ್ಯಾತಿಯ ಮಾಲಿಕ್ಯುಲರ್ ಬಯಾಲಜಿಸ್ಟ್ ಈ ಹಗರಣ 1990ರಲ್ಲಿ ಬಯಲಿಗೆಳೆದ. ಆನಂತರ ಸುಮಾರು ವರ್ಷ ಡ್ರಗ್ಸ್ ಬಳಕೆ, ಅದಕ್ಕೆ ಸರ್ಕಾರವೇ ಮಾಡಿದ್ದ ವ್ಯವಸ್ಥೆ, ಅದರಿಂದ ಕ್ರೀಡಾಪಟುಗಳ ಮೇಲೆ ಆದ ದುಷ್ಪರಿಣಾಮ ಒಂದೊಂದಾಗಿ ಬಯಲಾಗುತ್ತಾ ಹೋದವು. ಈ ಸಾಹಸದಲ್ಲಿ ವೆರ್ನರ್ ಪತ್ನಿ ಮಾಜಿ ಕ್ರೀಡಾಪಟು ಬ್ರಿಜೆಟ್ ಸಹಕಾರ ಅವಿಸ್ಮರಣೀಯ.

ಸ್ಟೆರಾಯ್ಡ್‌ಗಳ ಬಳಕೆಯಿಂದ ದೈಹಿಕ ಸ್ವರೂಪವೇ ವಿಕೃತಗೊಂಡಿತ್ತು. ಭಾರ ಎತ್ತುವ ಸ್ಪರ್ಧೆಗಳು ಸ್ನಾಯುಗಳು ಬೆಳೆಯಲೆಂದು ತೆಗೆದುಕೊಂಡ ಸ್ಟೆರಾಯ್ಡ್ ಎಂಥ ವಿಚಿತ್ರ ಪರಿಣಾಮ ಬೀರಿತ್ತೆಂದರೆ, ಗಂಡಸರಿಗೆ ಹೆಂಗಸರಂತೆ ಸ್ತನಗಳು ಮೂಡಿದವು. ಎಷ್ಟೋ ಕ್ರೀಡಾಪಟುಗಳು ಶಸ್ತ್ರ ಚಿಕಿತ್ಸೆಯಿಂದ ಅವನ್ನು ತೆಗೆಸಿಕೊಳ್ಳಬೇಕಾಯಿತು. ಮಹಿಳಾ ಕ್ರೀಡಾಪಟುಗಳಿಗೆ ಮುಟ್ಟು ನಿಂತಿದ್ದೇ ಅಲ್ಲದೆ, ಮುಖ, ಮೈತುಂಬಾ ಕೂದಲು ಬೆಳೆದಿದ್ದೂ ಇದೆ. ಶಾಟ್‌ಪುಟ್ ಕ್ರೀಡಾಪಟು ಹೈಡೀಕ್ರೀಗರ್ ಎಂಬಾಕೆ ಚಿನ್ನದ ಪದಕ ಸೂರೆ ಮಾಡಿದಳಾದರೂ, ಆಕೆಗೆ ತಾನು ಸ್ಟೆರಾಯ್ಡ್ ಸೇವನೆಯಿಂದಾಗಿ ಹೆಣ್ಣಾಗಿ ಉಳಿದಿಲ್ಲ ಎಂದು ಮನವರಿಕೆ ಆಯಿತು. ಆಕೆ ತೀರಾ ಇತ್ತೀಚೆಗೆ ಲಿಂಗ ಪರಿವರ್ತನೆ ಶಸ್ತ್ರ ಚಿಕಿತ್ಸೆಗೆ ಒಳಗಾಗಿ ಗಂಡಾದದ್ದೂ ಇದೆ.

ಸ್ಟೆರಾಯ್ಡ್ ಸೇವನೆಯಿಂದ ಪೂರ್ವ ಜರ್ಮನಿಯ ಎಷ್ಟೋ ಅಥ್ಲೀಟ್‌ಗಳು ಸಾವಿಗೀಡಾದದ್ದೂ ಇದೆ. ಅಂಥ ಪ್ರಕರಣಗಳನ್ನು ಸರ್ಕಾರ ಯಶಸ್ವಿಯಾಗಿ ಮುಚ್ಚಿಹಾಕಿಬಿಟ್ಟಿತ್ತು. ಹೀಗಾಗಿ ಸ್ಟೆರಾಯ್ಡ್ ಸೇವನೆಯಿಂದಾಗಿ ಮೃತರಾದ ಕ್ರೀಡಾಪಟುಗಳ ನಿಖರ ಸಂಖ್ಯೆ ತಿಳಿದಿಲ್ಲ.

ಸರ್ಕಾರದ ಈ ವಂಚನೆಯಲ್ಲಿ ಕ್ರೀಡಾಪಟುಗಳು ಮನಸ್ಸಿಲ್ಲದಿದ್ದರೂ ಪಾಲ್ಗೊಳ್ಳಬೇಕಿತ್ತು. ಅಸಹಕಾರ ತೋರಿದರೆ, ಸ್ಟೆರಾಯ್ಡ್ ಸೇವನೆಗೆ ಪ್ರತಿಭಟಿಸಿದರೆ ಅಲ್ಲಿನ ಕಮ್ಯುನಿಸ್ಟ್ ಸರ್ಕಾರ, ಅಂಥವರನ್ನು ದೇಶದ್ರೋಹಿ ಎಂದು ಹಣೆಪಟ್ಟಿ ಹಚ್ಚಿ ಕೀಳಾಗಿ ನಡೆಸಿಕೊಳ್ಳುತ್ತಿತ್ತು. 1968ರಿಂದ ಪೂರ್ವ ಜರ್ಮನಿ ಗಳಿಸಿದ್ದ ಎಲ್ಲ ಚಿನ್ನದ ಪದಕಗಳೂ ಸ್ಟೆರಾಯ್ಡ್‌ನ ಕೊಡುಗೆ ಎಂದೇ ವೆರ್ನರ್ ತಮ್ಮ ವರದಿಯಲ್ಲಿ ಹೇಳಿದ್ದಾರೆ. ವರದಿ ಬಯಲಾಗಿ ಅಲ್ಲಿನ ಕ್ರೀಡಾ ವೈದ್ಯಕೀಯ ಸೇವಾ ವಿಭಾಗಕ್ಕೆ ಭಾರಿ ದಂಡ ವಿಧಿಸಲಾಯಿತು. 109 ಪ್ರಕರಣಗಳಲ್ಲಿ ಕ್ರೀಡಾ ಸಾಮರ್ಥ್ಯ ವೃದ್ಧಿಗಾಗಿ ಸ್ಟೆರಾಯ್ಡ್ ಬಳಸಿದ ಕಾರಣ ಈ ದಂಡ ಎಂದು ತಿಳಿಸಲಾಯಿತು. ವಿಷಯ ಬಹಿರಂಗವಾದ ಮೇಲೆ ಒಲಿಂಪಿಕ್ಸ್‌ನಲ್ಲಿ ಚಿನ್ನದ ಪದಕ ಗೆದ್ದಿದ್ದ ಮೂವರು ಕ್ರೀಡಾಪಟುಗಳು, ತಾವು ಅನ್ಯಾಯದ ಮಾರ್ಗದಲ್ಲಿ ಪಡೆದ ಚಿನ್ನದ ಪದಕ ಹಿಂದಿರುಗಿಸುವುದಾಗಿ ಘೋಷಿಸಿದರು.

ಕ್ರೀಡಾಪಟುಗಳ ಡ್ರಗ್ ಸೇವನೆಯ ದುಸ್ಸಾಹಸ ಬಹಳಷ್ಟು ಸಂದರ್ಭಗಳಲ್ಲಿ ಅವರವರ ವೈಯಕ್ತಿಕ ದುಷ್ಟತನ ಎಂಬಂತೆ ಬಿಂಬಿಸಲಾಗುತ್ತದೆ. ವಾಸ್ತವ ಏನೆಂದರೆ, ಅವರನ್ನು ನಾನಾ ಸ್ಪರ್ಧೆಗಳಿಗೆ ಅಣಿಗೊಳಿಸುವ ರಾಷ್ಟ್ರ, ಅವರ ತರಬೇತುದಾರರು, ವೈದ್ಯರು ಖಳನಾಯಕರಾಗಿರುತ್ತಾರೆ. ಆರೋಗ್ಯ, ಪುಷ್ಟಿ ಮತ್ತು ಶಕ್ತಿಗಾಗಿ ಅವರಿಗೆ ನೀಡಲಾಗುವ ಟಾನಿಕ್, ಇಂಜೆಕ್ಷನ್‌ಗಳಲ್ಲಿ ಕ್ರೀಡಾಪಟುಗಳ ಅರಿವಿಗೇ ಬಾರದಂತೆ ಸ್ಟೆರಾಯ್ಡ್‌ಗಳನ್ನು ಸೇರಿಸಲಾಗಿರುತ್ತದೆ. ಅಂತಿಮವಾಗಿ ಸಿಕ್ಕುಬಿದ್ದಾಗ, ಕ್ರೀಡಾಪಟುಗಳೇ ಮಹಾ ಅಪರಾಧಿಗಳು ಎಂಬಂತೆ ಬಿಂಬಿಸಲಾಗುತ್ತದೆ. ಅದರಲ್ಲೂ ಯೂರೋಪಿಯನ್ ಮತ್ತು ಅಮೆರಿಕನ್ ಕ್ರೀಡಾಪಟುಗಳನ್ನು ಬಿಟ್ಟು ಬೇರೆ ಯಾರೇ ಸಿಕ್ಕಿಹಾಕಿಕೊಂಡರೂ ಪತ್ರಿಕೆಗಳವರು ಜಾಕ್‌ಪಾಟ್ ಹೊಡೆದವರಂತೆ ಆಡುತ್ತಾರೆ.

ಬಹುಪಾಲು ಅಮೆರಿಕಾದ ಕ್ರೀಡಾಪಟುಗಳು ಜಮೈಕಾ, ಆಫ್ರಿಕಾ ಮೂಲದವರು. ಮರ್ಲಿನ್ ಪ್ರಕರಣವನ್ನೇ ನೋಡಿ. ಪಶ್ಚಿಮ ಜಮೈಕಾದ ಸಣ್ಣ ಹಳ್ಳಿಗಾಡಿಂದ ಬಂದ ಆಕೆ ಶಾಲಾ ಕೂಟಗಳಲ್ಲಿ ಓಡುವ ಶೈಲಿಯಿಂದ ಗಮನ ಸೆಳೆದಳು. ನೆಬ್ರಾಸ್ಕಾ ವಿಶ್ವವಿದ್ಯಾಲಯದಲ್ಲಿ ಹೆಚ್ಚಿನ ತರಬೇತಿಗಾಗಿ ಹೋಗಿದ್ದಾಗ ಕಾಲೇಜಿನ ಅತಿಶ್ರೇಷ್ಠ ಓಟಗಾತಿ ಎನಿಸಿಕೊಂಡಳು. ಅಂತಾರಾಷ್ಟ್ರೀಯ ಮಟ್ಟದಲ್ಲಿ ಎಷ್ಟೇ ಯತ್ನಿಸಿದರೂ ಆಕೆಯನ್ನು ಮುಂದುವರಿದ ರಾಷ್ಟ್ರಗಳ ಕ್ರೀಡಾಪಟುಗಳು ಹಿಂದೊತ್ತಿ ಚಿನ್ನ, ಬೆಳ್ಳಿ ಪಡೆದುಬಿಡುತ್ತಿದ್ದರು. ಜಮೈಕಾದಂಥ ಬಡ ರಾಷ್ಟ್ರದ ಈಕೆ ಕಂಚಿನ ಪದಕಕ್ಕೆ ತೃಪ್ತಿಗೊಳ್ಳಬೇಕಿತ್ತು. ಇಂಥ ಅಸಹಾಯಕತೆಯನ್ನು ಕೂಡ ಶ್ರೀಮಂತ ರಾಷ್ಟ್ರಗಳು ಆಕೆಯನ್ನು 'ಕಂಚಿನ ರಾಣಿ' ಎಂದು ಗೇಲಿ ಮಾಡುತ್ತಿದ್ದವು.

ಈಗ ಆಕೆಯ ಮೇಲೆ ಸ್ಟೆರಾಯ್ಡ್ ಸೇವನೆಯ ಕಳಂಕ ಬಂದಿದ್ದೇ ಎಲ್ಲ ಹಿಗ್ಗಿ ಹೀರೇಕಾಯಾಗಿ ಬಣ್ಣಿಸುತ್ತಿದ್ದಾರೆ. ನಾವೆಲ್ಲ ಇದನ್ನು ನಿರೀಕ್ಷಿಸುತ್ತಾ ಇದ್ದೆವು. ಬಡ ರಾಷ್ಟ್ರದ ಹೆಣ್ಣುಮಗಳೊಬ್ಬಳು ಅಂತಾರಾಷ್ಟ್ರೀಯ ಮಟ್ಟಕ್ಕೇರುವುದೆಂದರೇನು? ಅಲ್ಲೇನೋ ಹುನ್ನಾರ ಇದ್ದೇ ಇರಬೇಕು ಅಂದುಕೊಂಡಿದ್ದೆವು, ಎಂಬ ಧಾಟಿಯಲ್ಲೇ ಮಾತಾಡುತ್ತಾರೆ. ದೇಶ, ದೇಶಗಳ ನಡುವಿನ ಪೈಪೋಟಿಯಲ್ಲಿ ಅಮಾಯಕ ಕ್ರೀಡಾಪಟುಗಳು, ಅದರಲ್ಲೂ ಬಡ ಮತ್ತು ತೃತೀಯ ವಿಶ್ವದ ರಾಷ್ಟ್ರಗಳ ಅಥ್ಲೀಟ್‌ಗಳು ಬಲಿಪಶುಗಳಾಗುತ್ತಿರುವುದು ಎಂಥ ವಿಪರ್ಯಾಸ ಅಲ್ಲವೆ?


■ **ಸುಹಾಸ**

ಬೆಕ್ಕಿನಿಂದ ಪರಿಸರಕ್ಕೆ ಧಕ್ಕೆ ಎಂದರೆ ನಂಬುತ್ತೀರಾ?

ನಂಬುವುದಿಲ್ಲವಾದರೆ ಮುಂದಿನ ವಿವರಗಳನ್ನು ನೀವು ಓದಲೇಬೇಕು. ಉತ್ತರ ಅಮೆರಿಕಾದಲ್ಲಿ ಒಂದು ಕೋಟಿಯಷ್ಟು ಸಾಕಿದ ಬೆಕ್ಕುಗಳೇ ಇವೆ. ಈ ಬೆಕ್ಕುಗಳು ಪ್ರತಿವರ್ಷ ನೂರು ಕೋಟಿ ಹಕ್ಕಿಗಳನ್ನು, ಅಷ್ಟೇ ಪ್ರಮಾಣದಲ್ಲಿ ಸಣ್ಣ ಪುಟ್ಟ ಪ್ರಾಣಿಗಳನ್ನು ಕೊಂದು ಹಾಕುತ್ತವೆ. ವಾಸಸ್ಥಾನಗಳು ನಾಶವಾಗುವುದರಿಂದ ಅಳಿಯುವ ಪಕ್ಷಿಗಳಿಗಿಂತ, ಪ್ರಪಂಚದಲ್ಲಿ ಬೆಕ್ಕಿನಿಂದ ಹತ್ಯೆಗೀಡಾಗುವ ಪಕ್ಷಿಗಳ ಸಂಖ್ಯೆಯೇ ಜಾಸ್ತಿ ಎಂದು ಅಂದಾಜು ಮಾಡಲಾಗಿದೆ.

★

'ಇಂಡಿಕಾ' ಸದ್ದಿಲ್ಲದ ಕಾರು ಎಂದೇ ಹೆಸರಾಗಿದೆ. ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆ ಅಭಿವೃದ್ಧಿಪಡಿಸಿದ ತಂತ್ರಜ್ಞಾನ ಬಳಸಿ ಟಾಟಾ ಸಂಸ್ಥೆ ಈ ಸಾಧನೆ ಮಾಡಿದೆ. ಇನ್ನು ಮುಂದೆ ಬೇರೆ ಬೇರೆ ವಾಹನ, ಉಪಕರಣಗಳು ಹೊಮ್ಮಿಸುವ ಶಬ್ದದ ಪ್ರಮಾಣ ಎಷ್ಟೆಂಬುದನ್ನು ತಯಾರಕರು ಘೋಷಿಸಬೇಕಾಗುತ್ತದೆ. ಇದರಿಂದಾಗಿ ಹೆಚ್ಚುತ್ತಿರುವ ಶಬ್ದ ಮಾಲಿನ್ಯ ನಿಯಂತ್ರಿಸಲು ಸಾಧ್ಯ ಎಂದು ಭಾವಿಸಲಾಗಿದೆ. ಮಿಕ್ಸರ್‌ಗಳಿಂದ ಹಿಡಿದು ಬುಲ್‌ಡೋಜರ್‌ಗಳವರೆಗೆ, ಅವು ಹೊಮ್ಮಿಸುವ ಶಬ್ದದ ಪ್ರಮಾಣ ಪ್ರಕಟಿಸಲಾಗಿರುತ್ತದೆ. ಇದರಿಂದಾಗಿ ಗ್ರಾಹಕರಿಗೆ ಕಡಿಮೆ ಶಬ್ದ ಮಾಲಿನ್ಯದ ವಾಹನ ಅಥವಾ ಉಪಕರಣ ಆರಿಸಲು ಸಾಧ್ಯವಾಗುತ್ತದೆ.



ಸುಸ್ಪಷ್ಟ ಚಿತ್ರಕ್ಕೆ ದುಬಾರಿ ಟಿವಿ

ನೂರಾರು ಚಾನೆಲ್‌ಗಳು. ಇಷ್ಟಬಂದ ಚಾನೆಲ್ ಸರ್ಫ್ ಮಾಡಲು ಕೈಯಲ್ಲೊಂದು ರಿಮೋಟ್. ಆದರೂ ಏನೋ ಒಂದು ಸಣ್ಣ ಕೊರತೆ. ಟಿವಿಯಲ್ಲಿ ನೋಡಿದ್ದು ಸಿನಿಮಾ ನೋಡಿದಂತೆ ಆಗುವುದಿಲ್ಲ. ಆದಕ್ಕಾಗಿ ಈಗ ಬಂದಿದೆ ಫ್ಲಾಟ್ ಸ್ಕ್ರೀನ್ ಟಿವಿ. ನೋಡುಗರ ಕಣ್ಣು, ಮನ ತಣಿಸುವ ಈ ಹೊಸ ಟಿವಿ ಈಗೀಗ ಜನಪ್ರಿಯ. ಅದರ ಹಿಂದಿರುವ ತಂತ್ರಜ್ಞಾನ ಎಂಥದ್ದು ನಿಮಗೆ ಗೊತ್ತೇ?

ನಮ್ಮಲ್ಲಿ ಟಿವಿ ಜನಪ್ರಿಯವಾದದ್ದು ಎಂಬತ್ತರ ದಶಕದಲ್ಲಿ. ಒಂಬತ್ತನೇ ಏಷಿಯನ್ ಗೇಂ ಟಿವಿಯಲ್ಲಿ ನೋಡಬೇಕೆಂಬ ಸಡಗರ. ಆಗ ಇದ್ದುದು ಕಪ್ಪು ಬಿಳುಪು ಟಿವಿ. ಬೆಂಗಳೂರು ದೂರದರ್ಶನದ ಒಂದೆರಡು ಗಂಟೆಗಳ ಕಾರ್ಯಕ್ರಮ.

ಇಪ್ಪತ್ತು ವರ್ಷ ತುಂಬಿಲ್ಲ. ಆಗಲೇ ಏನೆಲ್ಲ ಬದಲಾವಣೆ. ಕಪ್ಪು-ಬಿಳುಪು ಚಿತ್ರ ಮಾಯವಾಗಿ ಬಣ್ಣ ತುಂಬಿಕೊಂಡಿದೆ. ವಿಸಿಪಿ, ವಿಸಿಆರ್‌ಗಳು ಹಳೆಯ ಮಾತಾಗಿವೆ. ಒಂದೇ ಒಂದು ಚಾನೆಲ್ ಇದ್ದುದು ಈಗ ನೂರಿಪ್ಪತ್ತು ಚಾನೆಲ್‌ಗಳವರೆಗೆ ವಿಸ್ತರಿಸಿದೆ.

ಇದಕ್ಕೆಲ್ಲ ಮುಕುಟವಿಟ್ಟಂತೆ ಈಗ ಬಂದಿದೆ ಫ್ಲಾಟ್ ಸ್ಕ್ರೀನ್ ಟಿವಿ. ಚಿತ್ರ ಸುಸ್ಪಷ್ಟ. ಕಣ್ಣಿಗೆ ಆಯಾಸವಾಗದು. ಮನೆಯ ಯಾವ ಭಾಗದಿಂದ ನಿಂತು ಟಿವಿ ನೋಡಿದರೂ ಚಿತ್ರದ ಸ್ವರೂಪದಲ್ಲಿ ವ್ಯತ್ಯಾಸ ಇಲ್ಲ. ಅಂಚುಗಳು ಅಸ್ಪಷ್ಟವಿಲ್ಲ. ಮುಖ್ಯ; ನಮ್ಮ ಮನೆಗಳ ಜಾಗ ತಿನ್ನುವ ದೆವ್ವ ಗಾತ್ರದ ಪೆಟ್ಟಿಗೆಯಾಗಿಲ್ಲ ಟಿವಿ. ಅದರ ದಪ್ಪ ತೀರಾ ಹೆಚ್ಚೆಂದರೆ ನಾಲ್ಕು ಇಂಚು. ಬೇಕಾದರೆ ಫೋಟೋದ ಹಾಗೆ ಗೋಡೆಗೆ ನೇತು ಹಾಕಬಹುದು. ಸ್ಟ್ಯಾಂಡ್ ಇಟ್ಟು ಎಲ್ಲಿ ಬೇಕೆಂದರೆ ಅಲ್ಲಿ ನಿಲ್ಲಿಸಬಹುದು.

ದೊಡ್ಡ ಗಾತ್ರದ ಸ್ಕ್ರೀನು ಇರುವುದರಿಂದ ಸಿನಿಮಾ ಮಂದಿರದಲ್ಲಿ ಕುಳಿತು ಚಿತ್ರ ನೋಡಿದ ಹಾಗೆ. ಈಗಾಗಲೇ ಇದು ಹೋಟೆಲು, ಕಾರ್ಪೊರೇಟ್ ಆಫೀಸುಗಳಲ್ಲಿ ಕಾಣಿಸಿಕೊಂಡಿದೆ. ಕೆಲವೇ ಶ್ರೀಮಂತರ ಮನೆಯ ಗೋಡೆ, ಲಿವಿಂಗ್ ರೂಂ ಅಲಂಕರಿಸಿದೆ. ಸಾಮಾನ್ಯರ ಪಾಲಿಗೆ ಇನ್ನೂ ಕೈಗೆಟುಕುವಂತಿಲ್ಲ.

ಕಾರಣ ಇಷ್ಟೇ. ಅದರ ಬೆಲೆ ಕೇವಲ ಎರಡೂವರೆ ಲಕ್ಷದಿಂದ ಒಂಬತ್ತು ಲಕ್ಷ ರೂಪಾಯಿಗಳು. ಮುಂದೊಂದು ದಿನ ಇದೂ ಟಿವಿ ಮತ್ತು ಟ್ರಾನ್ಸಿಸ್ಟರ್‌ಗಳ ಹಾಗೆ ಅಗ್ಗವಾದರೂ ಆಶ್ಚರ್ಯವಿಲ್ಲ. ಇದು ಇಷ್ಟು ದುಬಾರಿಯಾಗಲು, ಅದರಲ್ಲಿ ಬಳಸಿರುವ ವಿಶೇಷ ರೀತಿಯ ತಂತ್ರಜ್ಞಾನ ಕಾರಣ. ಅದರ ಗಾತ್ರ ತೆಳುವಾಗಲೂ ಇದೇ ತಂತ್ರಜ್ಞಾನವೇ ಕಾರಣ.


ನಮ್ಮ ಮನೆಗಳಲ್ಲಿರುವ ಟಿವಿ ಕೆಲಸ ಮಾಡುವುದು ಶೂನ್ಯ ತುಂಬಿಕೊಂಡಿರುವ ದೊಡ್ಡ ಗಾತ್ರದ ಗಾಜಿನ ಬುರುಡೆಯಿಂದ. ಅದೇ ಟಿವಿ ಪರದೆಯ ಮೇಲೆ ಚಿತ್ರ ಮೂಡಿಸಲು ಸಾಧನ. 1897ರಲ್ಲಿ ಜರ್ಮನಿಯ ಡಾ॥ ಕಾರ್ಲ್ ಫರ್ಡಿನ್ಯಾಂಡ್ ಬ್ರಾನ್ ಈ ಸಾಧನ ಕಂಡು ಹಿಡಿದ. ಅದರ ಹೆಸರೇ 'ಕ್ಯಾಥೋಡ್ ರೇ ಟ್ಯೂಬ್'. ಅದರಿಂದಾಗಿಯೇ 1920ರಲ್ಲಿ ಟಿವಿ ಪ್ರಸಾರ ಸಾರ್ವಜನಿಕವಾಗಿ ಮೂಡಿಬರಲು ಸಾಧ್ಯವಾಯಿತು. ಆಗ ಆರಂಭವಾದದ್ದು ಕಪ್ಪು ಬಿಳುಪು ಕಾರ್ಯಕ್ರಮಗಳ ಪ್ರಸಾರ. ಬಣ್ಣದಲ್ಲಿ ಕಾರ್ಯಕ್ರಮ ಮೂಡಲು ಮತ್ತೆ ಮೂವತ್ತು ವರ್ಷಗಳೇ ಬೇಕಾದವು. ಇದೆಲ್ಲ ಸರಿ, ಟಿವಿಯ ಗಾತ್ರ ಮತ್ತು ಟಿವಿ ಪರದೆಯ ಮೇಲೆ ಮೂಡುವ ಚಿತ್ರಗಳ ಗುಣಮಟ್ಟ ಸುಧಾರಿಸಬೇಕೆಂಬ ಹಂಬಲ ಅವತ್ತಿನಿಂದಲೂ ಆರಂಭವಾಯಿತು.

ಕೊನೆಗೆ 1966ರಲ್ಲಿ ಪ್ಲಾಸ್ಮಾ ತಂತ್ರಜ್ಞಾನದ ಆವಿಷ್ಕಾರ ಆಯಿತು. ಎರಡು ವರ್ಷದ ನಂತರ ಇಲಿನಾಯ್ಸ್ ವಿಶ್ವವಿದ್ಯಾಲಯದಲ್ಲಿ ಈ ತಂತ್ರಜ್ಞಾನ ಯಾವ್ಯಾವುದಕ್ಕೆ ಬಳಸಬಹುದೆಂಬ ಯಶಸ್ವಿ ಪ್ರಯೋಗ ನಡೆಯಿತು. ಇದನ್ನು ಟೆಲಿವಿಷನ್ ಪ್ರಸಾರಕ್ಕೆ ಅತ್ಯುತ್ತಮ ಸಾಧನವಾಗಿ ಬಳಸಬಹುದೆಂಬ ವಿಚಾರ ವ್ಯಕ್ತವಾದದ್ದು ಈ ಪ್ರಯೋಗಗಳಿಂದಲೇ.


ಅದೇ ಸಮಯಕ್ಕೆ ಜಪಾನಿನ ಫ್ಯುಜಿಟ್ಸು ಕಂಪೆನಿ ಈ ತಂತ್ರಜ್ಞಾನ ಬಳಸಲು ನಾನಾ ರೀತಿಯ ಸಂಶೋಧನೆ ಕೈಗೊಂಡು 1996ರಲ್ಲಿ ಮೊತ್ತ ಮೊದಲ ಬಾರಿಗೆ ಫ್ಲ್ಯಾಟ್ ಸ್ಕ್ರೀನ್ ಟಿವಿಯನ್ನು ಮಾರುಕಟ್ಟೆಗೆ ತಂದಿತು. ಈಗ ಇಂಥ ಟಿವಿಗಳನ್ನು ಭಾರತಕ್ಕೆ ಮೊದಲ ಬಾರಿಗೆ ಫಿಲಿಪ್ಸ್ ಕಂಪೆನಿ ತಂದಿದೆ.

ನಮ್ಮ ಟಿವಿಗಳಲ್ಲಿ ಇರುವ ಕ್ಯಾಥೋಡ್ ರೇ ಟ್ಯೂಬ್‌ನಲ್ಲಿ, ನಾವು ಅದಕ್ಕೆ ಪೂರೈಕೆ ಮಾಡುವ ಚಿತ್ರಕ್ಕೆ ಅನುಗುಣವಾಗಿ ಕ್ಯಾಥೋಡ್ ಕಿರಣ ಚಿಮ್ಮಿ ಬರುತ್ತದೆ. ಅದು ರಂಜಕ ಲೇಪಿತ ಪರದೆಯ ಮೇಲೆ ಬಿದ್ದಾಗ ನಾವು ಕಾಣುವ ಚಿತ್ರ ಮೂಡುತ್ತದೆ. ಚಿತ್ರಗಳ ಚಲನೆ ಮೂಡಿಬರಲು ಸ್ಕ್ಯಾನಿಂಗ್ ತಂತ್ರ ಬಳಸಲಾಗುತ್ತದೆ. ಒಂದು ಟಿವಿ ಪರದೆಯಲ್ಲಿ ಮೇಲಿಂದ ಕೆಳಗಿನವರೆಗೆ 525 ಸಾಲುಗಳು ಇರುತ್ತವೆ. ಕ್ಯಾಥೋಡ್ ಕಿರಣಗಳು ಮೇಲಿನ ಸಾಲಿನಿಂದ ಆರಂಭಿಸಿ ಕೆಳಗಿನ ಸಾಲಿನವರೆಗೆ ಸ್ಕ್ಯಾನ್ ಮಾಡುತ್ತಾ ಚಿತ್ರ ಮೂಡಿಸುತ್ತವೆ. ಒಂದು ಸೆಕೆಂಡಿಗೆ ಮೂವತ್ತು ಬಾರಿ ಈ ರೀತಿಯ ಸ್ಕ್ಯಾನಿಂಗ್ ನಡೆಯುವುದರಿಂದ ಮೂಡಿಬರುವ ಪಾತ್ರಗಳ ಚಲನೆ ಕಣ್ಣಿಗೆ ಕಟ್ಟುವಂತಾಗುತ್ತದೆ.


ಈ ತಂತ್ರದಲ್ಲಿ ಎರಡು ಮುಖ್ಯ ತೊಂದರೆಗಳು. ಮೂಡಿ ಬರುವ ಚಿತ್ರಗಳ ಅಂಚು ಅಸ್ಪಷ್ಟ ಹಾಗೂ ಸೆಕೆಂಡಿಗೆ ಮೂವತ್ತು ಬಾರಿಯಂತೆ ಈ ಸ್ಕ್ಯಾನಿಂಗ್



ಕ್ಯಾಥೋಡ್ ರೇ ಟ್ಯೂಬ್



ಫ್ಲ್ಯಾಟ್ ಸ್ಕ್ರೀನ್ ಟಿವಿ ಕೆಲಸ ಮಾಡುವ ಬಗೆ



ಟಿವಿ ಪರದೆಯ ಮೇಲೆ ಚಿತ್ರ ಮೂಡಿಸುವ 525 ಗೆರೆಗಳು



ಮನೆಯಲ್ಲಿ ಫೋಟೊದಂತೆ ತೂಗಿ ಹಾಕಬಲ್ಲ ಫ್ಲ್ಯಾಟ್ ಸ್ಕ್ರೀನ್ ಟಿವಿ

ನಡೆಯುವುದರಿಂದ, ಇದನ್ನು ತನ್ನ ಮಿತಿಯೊಳಗೆ ಗ್ರಹಿಸಬೇಕಾದ ಕಣ್ಣಿಗೆ ಆಯಾಸವಾಗುತ್ತದೆ. ಇದೆಲ್ಲಕ್ಕಿಂತ ಮುಖ್ಯ ತೊಂದರೆ ಎಂದರೆ ಕ್ಯಾಥೋಡ್ ರೇ ಟ್ಯೂಬಿನ ಗಾತ್ರ ತಗ್ಗಿಸುವಂತಿಲ್ಲ.

ಇವೆಲ್ಲ ದೋಷ ನಿವಾರಣೆ ಆಗಿ, ನಮ್ಮ ಟಿವಿಗಳ ಬಾಗಿದ ಗಾಜಿನ ತೆರೆ ಮಾಯವಾಗಿ ಸಪಾಟಾದ ಗಾಜಿನ ತೆರೆ ಮೂಡಿ ನಿಂತಿದೆ. ಗಾತ್ರ ಕೂಡ ತೀರಾ ಚಿಕ್ಕದು. ಇದನ್ನು ಸಾಧ್ಯವಾಗಿಸಿದ್ದು ಪ್ಲಾಸ್ಮಾ ತಂತ್ರಜ್ಞಾನ.

ಇಲ್ಲಿ ಎರಡು ಗಾಜುಗಳ ನಡುವೆ ಸಣ್ಣ ಸಣ್ಣ ಟ್ಯೂಬ್‌ಲೈಟ್ ಜೋಡಿಸಿಟ್ಟಂತೆ ಒಂದು ವ್ಯವಸ್ಥೆಯಿದೆ. ಫ್ಲ್ಯಾಟ್‌ಸ್ಕ್ರೀನ್ ಟಿವಿಯ ಪರದೆಯ ಹಿಂದೆ ಹತ್ತು ಲಕ್ಷಕ್ಕೂ ಹೆಚ್ಚು ಇಂಥ ಟ್ಯೂಬ್‌ಲೈಟ್‌ನಂಥ ಪಾಕೀಟುಗಳು ಇರುತ್ತವೆ. ಪ್ರತಿ ಪಾಕೀಟಿನೊಳಗೂ ಅಯಾನೀಕೃತ ನಿಯಾನ್ ಅಥವಾ ಕ್ಸೆನಾನ್ ಅನಿಲ ತುಂಬಿರುತ್ತದೆ. ಒಂದು ಮಿಲಿಮೀಟರ್ ಜಾಗದಲ್ಲಿ ಒಂದು ದಶಲಕ್ಷಕ್ಕೂ ಹೆಚ್ಚು ಇಂಥ ಚುರುಕಾದ ಅಯಾನೀಕೃತ ಅನಿಲದ ಕಣಗಳನ್ನು ಕೂಡಿಹಾಕಲಾಗಿರುತ್ತದೆ. ಇದರ ಮೇಲೆ ಬೀಳುವ ವಿದ್ಯುತ್ ಅತಿ ನೇರಳೇ ಕಿರಣವಾಗಿ ಹೊಮ್ಮಿ ಪರದೆಯ ಗಾಜಿನ ಮೇಲೆ ಬಿದ್ದಾಗ ಟಿವಿ ಪರದೆಯ ಆಕೃತಿ ಮೂಡುತ್ತದೆ. ನಮ್ಮ ಮಾಮೂಲಿ ಟಿವಿಯಲ್ಲಿನ ಹಾಗೆ ಸ್ಕ್ಯಾನಿಂಗ್ ಮೂಲಕ ಚಿತ್ರ ಮೂಡದೇ, ಇಡೀ ಚಿತ್ರ ಒಟ್ಟಾರೆಯಾಗಿ ಮೂಡುವುದರಿಂದ ಚಿತ್ರ ಸುಸ್ಪಷ್ಟ. ಕಣ್ಣಿಗೆ ಆಯಾಸವಾಗುವುದಿಲ್ಲ. ಅಂಚುಗಳು ಮಸುಕಾಗುವುದಿಲ್ಲ. ಎರಡು ಗಾಜಿನ ಹಾಳೆಗಳ ನಡುವೆ ಅನಿಲ ತುಂಬಿರುವುದರಿಂದ ಇಲ್ಲಿ ಇಡೀ ಟಿವಿಯ ಗಾತ್ರ ಕೇವಲ ಕೆಲವೇ ಇಂಚುಗಳು ಮಾತ್ರ. ಬದಲಾಗುತ್ತಿರುವ ತಂತ್ರಜ್ಞಾನದ ಸಾಧನೆ ಇದು.

ಇನ್ನಷ್ಟು ಉತ್ತಮ, ಇನ್ನಷ್ಟು ಅಗ್ಗದ, ಎಲ್ಲರಿಗೂ ದಕ್ಕಬಹುದಾದ ಇಂಥ ಉಪಕರಣಗಳನ್ನು ಮಾರುಕಟ್ಟೆಗೆ ತರುವ ಜಪಾನ್ ಈ ಬಾರಿಯೂ ಮುಂಚೂಣಿಯಲ್ಲಿದೆ.

ಟ್ರಾನ್ಸಿಸ್ಟರ್ ಮೊದಲ ಬಾರಿಗೆ ಮಾರುಕಟ್ಟೆಗೆ ತಂದಾಗ, ಅಮೆರಿಕನ್ನರು ಅದನ್ನು ವಿಚಿತ್ರ ವಸ್ತು ಎಂಬಂತೆ ನೋಡಿದ್ದರು. ಅವರ ಬೃಹತ್ ಗಾತ್ರದ ಮನೆಗಳಲ್ಲಿ ದೈತ್ಯಗಾತ್ರದ ರೇಡಿಯೋಗಳೇ ಇರುವಾಗ, ಈ ಜೇಬಿನಲ್ಲಿ ಇರಿಸಿಕೊಳ್ಳಬಹುದಾದ ಟ್ರಾನ್ಸಿಸ್ಟರ್ ಏಕೆ ಬೇಕು? ಎಂಬುದು ಅವರ ಪ್ರಶ್ನೆಯಾಗಿತ್ತು. ಈಗ ರೇಡಿಯೋಗಳು ಮರೆಯಾಗಿ ಬರೀ ಟ್ರಾನ್ಸಿಸ್ಟರ್‌ಗಳೇ ಎಲ್ಲೆಡೆ ತುಂಬಿವೆ. ನಾಳೆಯ ದಿನ ಈ ಫ್ಲ್ಯಾಟ್‌ಸ್ಕ್ರೀನ್ ಟಿವಿ ಕೂಡ ಅಷ್ಟೇ ಜನಪ್ರಿಯವಾಗುವುದರಲ್ಲಿ ಸಂದೇಹವಿಲ್ಲ.

■ ಎಂ. ಉಲ್ಲಾಸ್

ನಗರ ಜಾನಪದ : ಎರಡು ನಮೂನೆ

ಸಾವಿರಾರು ವರ್ಷಗಳ ಇತಿಹಾಸ, ಲಿಖಿತ ಚರಿತ್ರೆ ಇರುವ ಚೀನಾ, ಭಾರತ, ಇಂಗ್ಲೆಂಡ್, ಫ್ರಾನ್ಸ್ ನಂತಹ ದೇಶಗಳಲ್ಲಿ ಶಿಷ್ಟ ಸಾಹಿತ್ಯ ಬೆಳೆದಂತೆ ಜತೆ ಜತೆಗೇ ಜನಪದ ಸಾಹಿತ್ಯ ವಿಕಾಸವಾಗುತ್ತಲೇ ಇರುವುದನ್ನು ಜನಸಾಮಾನ್ಯರು, ವಿದ್ವಾಂಸರು ಗುರ್ತಿಸಿಯೇ ಇದ್ದಾರೆ. ಆದರೆ ಕೇವಲ ನೂರಿನ್ನೂರು ವರ್ಷಗಳ ಹುಟ್ಟು - ಬೆಳವಣಿಗೆ ಇರುವ ಅಮೆರಿಕೆಯಂತಹ ದೇಶಕ್ಕೂ ಜನಪದ ಸಾಹಿತ್ಯವಿದೆಯೇ? ಇದೆ! ಅದೇ 'ನಗರ ಜಾನಪದ'. ಇದೊಂದು ವಿರೋಧಾಭಾಸದಂತೆ ಭಾಸವಾಗುತ್ತದೆ. ಆಧುನಿಕ ಸಂವೇದನೆ, ಬದುಕಿನ ಓಟ - ನೋಟ ಇದ್ದರೂ ಮೂಲ ಆಸರೆಯಾದ ಭಾವಕೋಶ ಪಾರಂಪರಿಕವಾಗಿರುವುದು ವಿಲಕ್ಷಣವೇನೂ ಅಲ್ಲ. ಇದಕ್ಕೆ ನಮ್ಮದೇ ಉದಾಹರಣೆ ಬೇಕಾದರೆ, ನೀವು ಚಂಡೀಗಡಕ್ಕೆ ಹೋಗಿ. ಅಲ್ಲಿ ಎಲ್ಲ ಚಚ್ಚೌಕವಾಗಿ ವಿಂಗಡಿಸಿದ ಸೆಕ್ಟರ್‌ಗಳು. ಅಲ್ಲಿ ಟ್ರಾಕ್ಟರ್, ಇಂಟರ್‌ನೆಟ್, ಇ-ಕಾಮರ್ಸ್ ಎಲ್ಲ ಇದೆ. ಆದರೆ ಅವರ ಬಾಂಗ್ಡಾ ಹಾಡು, ನೃತ್ಯ, ಸರ್‌ದಾರ್‌ಜಿ ಜೋಕುಗಳು ಜೀವಂತವಾಗಿವೆ. ಅದೇ ನಗರ ಜಾನಪದ! ಅಷ್ಟೇಕೆ, ಸಿಲಿಕಾನ್ ಸಿಟಿ ಬೆಂಗಳೂರಿನಲ್ಲೇ ನೋಡಿ. ಶಿವಾಜಿನಗರದಲ್ಲಿ ಈ ಸಂಭಾಷಣೆ ನಿಮ್ಮ ಕಿವಿಗೆ ಬೀಳಬಹುದು. 'ವೇರ್ ಯೂ ಗೋಯಿಂಗ್ ಡಾ?' 'ಚುಮ್ಮಾ.... ಮಾರಿ ಟೆಂಪಲ್ ಮ್ಯಾನ್! ಟುಡೇ ಫ್ರೈಡೇ ನೋ?'... ನಗರ ಜಾನಪದದ ಎರಡು ಕತೆಗಳ (ಅಥವಾ ಚುಟುಕಕತೆ ಅಂತೀರಾ) ನಮೂನೆ ಇಲ್ಲಿವೆ.

ದೇವನಹಳ್ಳಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಅದೇ ತಾನೇ ಕೆನಡದಿಂದ ಬಂದಿಳಿದ ಮೂವರು ಸಾಫ್ಟ್‌ವೇರ್ ಇಂಜನಿಯರುಗಳು - ಸಿಟಿ ಟ್ಯಾಕ್ಸಿ ಹತ್ತಿದರು. ಅವರು ಇಂದಿರಾನಗರಕ್ಕೆ ಹೋಗಬೇಕಾಗಿತ್ತು. ಬೆಂಗಳೂರಿನಲ್ಲಿ ಈಗೆಲ್ಲಾ ಡಜನ್‌ಗಟ್ಟಲೆ ಫ್ಲೈ ಓವರ್‌ಗಳು, ಗ್ರೇಡೆಡ್ ರಸ್ತೆಗಳು, ಮೇಲ್ ರಸ್ತೆಗಳು ರಚಿತವಾಗಿದ್ದು ಹಿಂದಿನ ಶತಮಾನದಷ್ಟು ಸಂಚಾರ ದುರ್ಗಮವಾಗಿಲ್ಲ - ಎಂದು ಆಂಟಿ ಕಳಿಸಿದ್ದ ಇ-ಮೇಲ್ ಭರವಸೆ ನೀಡಿತ್ತು.

ದಾರಿ ಸವೆಸಲು ಮೊದಲ ಪ್ರಯಾಣಿಕ ಅಪ್ರಮೇಯ ಕ್ಯಾಬ್‌ಪೈಲಟ್‌ಗೆ (ಹಿಂದೆ ಇವರಿಗೆ ಟಾಕ್ಸಿಡ್ರೈವರ್ ಎನ್ನುತ್ತಿದ್ದರಂತೆ) ಕೇಳಿದ 'ಏ ಮ್ಯಾನ್ ಸಿಲಿಕಾನ್ ಸಿಟಿಯಲ್ಲಿದ್ದಿ. ನಿನಗೆ ಸಾಫ್ಟ್‌ವೇರ್ ಪ್ಯಾಕುಗಳ ಬಗ್ಗೆ ಏನಾದ್ರೂ ತಿಳೀತದಾ?' ಪೈಲಟ್ ಸಂಣತಿಂಮ ಅಡ್ಡಡ್ಡ ತಲೆ ಅಲ್ಲಾಡಿಸಿದ. ಮೂವರೂ ಇಂಜನಿಯರು ಗೊಳ್ಳೆಂದು ನಕ್ಕರು. 'ಹೋಗಲಿ, ಲೇಸರ್ ಡಿಸ್ಕ್ ಪಾಮ್‌ಕಂಪ್ಯೂಟರ್ ನೋಡಿದ್ದೀಯಾ' ಎಂದು ಕೇಳಿದ ನಚಿಕೇತ. ಆ ವೇಳೆಗಾಗಲೇ ಟಾಕ್ಸಿ ಮೇಕ್ರಿ ಸರ್ಕಲ್ ಫ್ಲೈ ಓವರ್ ದಾಟಿತ್ತು. ಈ ಪ್ರಶ್ನೆಗೂ ಸಂಣತಿಂಮನಲ್ಲಿ ಉತ್ತರವಿರಲಿಲ್ಲ.

ಮೂರನೆಯಾತ ಚಿನ್ಮಯಾನಂದನಿಗೆ ಕರುಣೆಬಂದಿತೇನೋ. ಅವನು ಕೇಳಿದ ಪೈಲಟ್‌ಗೆ 'ಏನಪ್ಪ, ಬೆಂಗಳೂರಲ್ಲಿದ್ದೀಯೇ ಸಾಫ್ಟ್‌ವೇರ್, ಐಟಿ ತಿಳಿಯದೇ ಹೇಗೆ ಬದುಕುತ್ತೀ'. ಸಣ್ಣತಿಂಮ 'ನಿಜ ನಿಜ. ಎಂದಷ್ಟೇ ಲೊಚಗುಟ್ಟಿದ. ಆ ವೇಳೆಗೆ ಟ್ಯಾಕ್ಸಿ GPO ಸರ್ಕಲ್ ತಲುಪಿತ್ತು. ಮೂವರೂ ಇಂಜನಿಯರರು ಲೊಚಗುಟ್ಟಿದರು. 'ನಿನ್ನ ಅರ್ಧ ಜೀವನ ವ್ಯರ್ಥವಾಯಿ ತಲ್ಲಯ್ಯಾ!' ಅದೇ ವೇಳೆಗೆ ಒಂದು ದೊಡ್ಡ ಮೆರವಣಿಗೆ ಅಲ್ಲಿಗೆ ಬಂದು ಟ್ರಾಫಿಕ್ ಜಾಮ್ ಆಗಬೇಕೆ! ವಾಟರ್ ಜೆಟ್, ಲಾಠಿ ಎಲ್ಲ ಬಳಕೆ ಮಾಡಿದ ಬೆಂಗಳೂರು ಪೋಲಿಸರು ಅಶ್ರುವಾಯು ಸೆಲ್ ಸಿಡಿಸತೊಡಗಿದರು.

ಆಗ ಸಂಣತಿಂಮ ಆ ಇಂಜನಿಯರನ್ನು ಕೇಳಿದ. 'ಸ್ವಾಮಿ, ಟಿಯರ್ ಗ್ಯಾಸ್ ಸಿಡಿಸಿದಾಗ ಈರುಳ್ಳಿ ಮೂಸೋದು. ಆ ಹೊಗೆ ಮೋಡದ ಮಧ್ಯೆ ಕ್ಯಾಬ್ ಓಡಿಸೋದು ಬರುತ್ತೇ?' ಮೂವರೂ ಒಕ್ಕೊರಲಿಂದ ಭಯ ಭೀತರಾಗಿ 'ಇಲ್ಲ, ಇಲ್ಲ' ಎಂದರು. ಜೇಬಿನಿಂದ ಈರುಳ್ಳಿ ತೆಗೆದು ಮೂಸುತ್ತಾ ಕ್ಯಾಬ್ ಪೈಲಟ್ ವಾಹನದಿಂದ ಇಳಿದು ಹೇಳಿದ: ' ಹಾಗಾದರೆ ಇನ್ನು ನಾಲ್ಕು ತಾಸು ನಿಮ್ಮನ್ನು ದೇವರೂ ಕಾಪಾಡಲಾರ! ಮುವತ್ತನೇ ಸಮ್ಮಿಶ್ರ ಸರ್ಕಾರ ಮುರಿದು ಬಿದ್ದ ಹಾಗೆ ಜನ ಧರಣಿ ನಡೆಸಲಿಕ್ಕೆ ವಿಧಾನ ಸೌಧಕ್ಕೆ ಹೋಗ್ತಿದಾರೆ. ಟ್ರಾಫಿಕ್ ಕ್ಲಿಯರ್ ಆದ್ಮೇಲೆ ಬರ್ತೀನಿ. ವೈಟಿಂಗ್ ಚಾರ್ಜ್ ಮೀಟರ್ ಚಾಲೂ ಮಾಡಿದೀನಿ. ಬೈ ಸಂಣತಿಂಮ ಅಶ್ರುವಾಯು ಮೋಡದಲ್ಲಿ ಮರೆಯಾದ. ನಚಿಕೇತ, ಅಪ್ರಮೇಯ, ಚಿನ್ಮಯಾನಂದರು ಬೆವರತೊಡಗಿದರು.

ದಿನವಿಡೀ ಸಂಣತಿಂಮ ಸಿಟಿ ಟ್ಯಾಕ್ಸಿ ಓಡಿಸಿ ಸುಸ್ತಾಗಿ ಮನೆಗೆ ಬಂದ. ಅವನ ಹೆಂಡತಿ ಕಡಕ್ ಚಾಯನ್ನು ಒಂದು ಕೈಯಲ್ಲಿ ಹಿಡಿದು ಬಂದು ಮತ್ತೊಂದು ಕೈಯಲ್ಲಿದ್ದ ಆಡ್ ಮ್ಯಾಗ್ (ಜಾಹೀರಾತು ಪತ್ರಿಕೆ) ಮುಂದೆ ಚಾಚಿದಳು. ಹೊಸ ತ್ರಿ ಆಕ್ಸಿಸ್ ರೊಬೋಟ್ ಸಂಪೂರ್ಣ ಯಂತ್ರಮಾನವ ಈಗ ಕಂತಿನಲ್ಲಿ ಲಭ್ಯ.



ಚಪಲ ಹುಟ್ಟಿಸುವ ಜಾಹೀರಾತು. ಚಹಾ ಗುಟುಕರಿಸುತ್ತಾ ಸಂಣತಿಂಮ ಓದಿದ. ಹೆಂಡತಿ ವರಾತಕ್ಕೆ ಒಪ್ಪಿ ಆಗಲೇ ಸೆಲ್ ಫೋನಿನಲ್ಲಿ ಒಂದು ರೋಬೋಟ್‌ಗೆ ಆರ್ಡರೂ ಕೊಟ್ಟಾಯಿತು. ಅರ್ಧ ಗಂಟೆಯಲ್ಲಿ ರೋಬೋಟ್ ಸಂಣತಿಂಮನ ಎದುರಿಗೆ ಹಾಜರಾಯಿತು. ನನ್ನ ಹೆಸರು ತ್ರಿಬಲ್ ಎಕ್ಸ್ ವೈ ಕೊಟ್ಟ ಕೆಲಸ ಎಲ್ಲ ಮಾಡ್ತೀನಿ. ಆದರೆ ನನ್ನನ್ನು ಸುಮ್ಮನೆ ಇರು ಎಂದರೆ ಪವರ್ ಬ್ರೇಕ್ ಡೌನ್ ಆಗಿ ನನ್ನ ಸಿಸ್ಟಂ ಕ್ರಾಷ್ ಆಗುತ್ತೆ. ಸದಾ ನಾನು ಕಾರ್ಯಮಗ್ನ ಆಗಿರೋ ರೀತಿ ಕಮಾಂಡ್ ಕೊಡೋದು ನಿಮ್ಮ ಜವಾಬ್ದಾರಿ.

ಕೂಡಲೇ ತಿಂಮನ ಹೆಂಡತಿ 'ಬಲೇಪುಟ್ಟಿ' ಬಾಯಿ ಹಾಕಿದಳು. 'ಓ ಯೆಸ್, ಅದು ನಂ ಕೆಲ್ಸ. ಹಿಂದೆ ವ್ಯಾಸ ಋಷಿಗೆ ಗಣಪತಿನೂ ಹಿಂಗೆ ಷರತ್ತು ಹಾಕಿದ್ದ. ನಂ ಜನಪದ ಕತೆಗಳಲ್ಲಿ ಬ್ರಹ್ಮ ರಾಕ್ಷಸಾನೂ ಹೀಗೆ ಹೆದರಿಸ್ತಾ ಇದ್ದ. ಅದೆಲ್ಲಾ ನಮಗೂ ಗೊತ್ತಿದೆ'.

ಸಂಣತಿಂಮ ತ್ರಿಬಲ್ ಎಕ್ಸ್‌ಗೆ ಆದೇಶ ನೀಡಿದ. 'ಹೋಗಿ ಇಬ್ಬರಿಗೆ ಆಗೋ ಹಬ್ಬದ ಅಡುಗೆ ಮಾಡು.' ಹದಿನೈದು ನಿಮಿಷದ ನಂತರ ಯಂತ್ರ ಮಾನವ ಅಡುಗೆಮನೆಯಿಂದ ವಾಪಸ್ ಬಂತು. 'ಎಲ್ಲಾ ರೆಡಿ. ಇನ್ನು 3 ನಿಮಿಷದಲ್ಲಿ ಮೈಕ್ರೊ ಓವನ್ ಆರುತ್ತೆ. ನಾಲ್ಕು ನಿಮಿಷದ ನಂತರ ಊಟ ಮಾಡಬಹುದು. ಈಗ ಏನಪ್ಪಣೆ?' ಸಂಣತಿಂಮ ಮತ್ತೆ ಆಜ್ಞೆ ಮಾಡಿದ. 'ಕಬ್ಬನ್ ಪಾರ್ಕಿಗೆ ಹೋಗಿ ಎಷ್ಟು ಜನ ಜಾಗ್ ಮಾಡ್ತಿದ್ದಾರೆ, ನೋಡಿ ಬಾ' ರೊಬೋಟ್ ಕೂಡಲೇ ಉತ್ತರಿಸಿತು. '146'. ಸಂಣತಿಂಮನಿಗೆ ಆಶ್ಚರ್ಯವಾಯ್ತು. 'ಹೇಗೆ ಹೇಳಿದೆ' ಎಂದು ಕೇಳಿದ ರೊಬೋಟ್ ಉತ್ತರಿಸಿತು. ಕಬ್ಬನ್ ಪಾರ್ಕಿನಲ್ಲಿ ಈಗ ಉಳಿದಿರುವ ಕಛೇರಿಗಳ ಸಂಖ್ಯೆ ಐದು. ಅದರಲ್ಲಿರುವ ಒಟ್ಟು ಸಿಬ್ಬಂದಿಯಲ್ಲಿ ಇಂದು ಶೇಕಡಾ ಮೂವತ್ತು ಹಾಜರಾತಿ ಇದೆ. ನನ್ನ ಇಂಟರ್‌ನೆಟ್ ಅಕೌಂಟ್‌ನಿಂದ ಆ ಮಾಹಿತಿ ಬ್ರೌಸ್ ಮಾಡಿದ್ದೇನೆ. ಸಂಣತಿಂಮನಿಗೆ ತಲೆಕೆಟ್ಟಿತು. ಈಗೇನು ಕೆಲಸ ಕೊಡೋದು ಈ ಹಾಳಾದ್ದಕ್ಕೆ?

ಆಗ ಬಲೇಪುಟ್ಟಿ ತನ್ನ ಹೆರಳಿನ ಮುಂಗೂದಲ ರಾಶಿಯಿಂದ ಒಂದು ಕೂದಲು ಕಿತ್ತು ರೋಬೋಟ್ ಕೈಗಿತ್ತು ಹೇಳಿದಳು. 'ಇದನ್ನು ನೆಟ್ಟಗೆ ಮಾಡು'. ಆಗ ತ್ರಿಬಲ್ ಎಕ್ಸ್‌ವೈ, ಅದನ್ನು ಓವನ್‌ನಲ್ಲಿಟ್ಟು ಬೆಚ್ಚಗೆ ಮಾಡಿ ನೆಟ್ಟಗೆ ಮಾಡಲು ಪ್ರಯತ್ನಿಸಿತು. ಆ ಹೆರಳ ಕೂದಲು ಸುಟ್ಟು ಕರಟಿ ಹೋಯಿತು. ರಿಟ್ರೀವ್ ಕಮಾಂಡ್ ಕೊಟ್ಟು ಅದರ ಉತ್ತರಕ್ಕೆ ರೊಬೋಟ್ ಮೈಕ್ರೋ ಓವನ್ ಬಳಿ ಕಾಯುತ್ತಿದೆ. ತಿಂಮ ಪುಟ್ಟಿ, ಈಗ ಹಾಯಾಗಿದ್ದಾರೆ.

■ ಕೆ.ಆರ್. ಪ್ರಹಲ್ಲಾದ



ಮಗನಿಗೊಂದು ಮನವರಿಕೆಯ ಮಾತು

ನಮ್ಮ ಮಕ್ಕಳನ್ನು ಡಾಕ್ಟರ್ ಎಂದೋ ಇಂಜಿನಿಯರ್ ಎಂದೋ ಹೆಮ್ಮೆಯಿಂದ ಹೇಳಿಕೊಳ್ಳುತ್ತೇವೆ. ಅದೇ ಅವರು ಒಳ್ಳೆಯ ವ್ಯವಸಾಯಗಾರ, ಚಿತ್ರಕಾರ, ಕವಿ ಎಂದು ಹೇಳಿಕೊಳ್ಳಲು ಸಂಕೋಚವೇಕೆ? ಅಷ್ಟಕ್ಕೂ ಮಕ್ಕಳು ಆರಿಸಿಕೊಳ್ಳಬೇಕಾದ್ದು ತಮ್ಮನ್ನು ತಾವೇ ತೊಡಗಿಸಿಕೊಳ್ಳಬಹುದಾದ ವೃತ್ತಿಯಲ್ಲಿ. ಅವರಿಗೆ ಇಂಥದ್ದೇ ಆಗಬೇಕು ಎಂದು ಕಡ್ಡಾಯಗೊಳಿಸುವುದರ ಮೂಲಕ ಪ್ರತಿಭೆ, ಸೃಜನಶೀಲತೆಗಳನ್ನು ಚಿವುಟುತ್ತಿದ್ದೇವೆ.

ನಮ್ಮ ಹುಡುಗ ಕಾಲೇಜಿಗೆ ಸೇರುವ ಸಮಯಕ್ಕೇ ಬಿಕ್ಕಟ್ಟು ತಲೆದೋರಿತು. ಎಸ್ಎಸ್ಎಲ್‌ಸಿಯಲ್ಲಿ ಚೆನ್ನಾಗಿ ಮಾರ್ಕು ಪಡೆದ ಶ್ರೀಕಾಂತ. ಅವನನ್ನು ಅತ್ಯುತ್ತಮ ಕಾಲೇಜಿಗೆ ಸೇರಿಸಬೇಕೆಂದು ನನ್ನ ಹೆಂಡತಿಯ ಇಚ್ಛೆ, ಮುಂದಿನ ಅವನ ಭವಿಷ್ಯ ನಿರ್ಧರಿಸುವುದೇ ಆ ಕೋರ್ಸು. ಒಳ್ಳೆಯ ಶಿಕ್ಷಣ ದೊರೆಯಬೇಕು ಎಂಬ ಬಯಕೆ ಸಹಜ.

ನಾವಿರುವ ಮೈಸೂರಲ್ಲಿ ಕೆಲವು ಹೆಸರಾಂತ ಕಾಲೇಜುಗಳು ಇವೆ. ಒಂದೆರಡು ರ್‍ಯಾಂಕ್ ಪಡೆಯುವುದರಲ್ಲಿ ಮುಂದೆ. ಅಂಥ ಕಾಲೇಜುಗಳಲ್ಲಿ ಸೀಟು ಪಡೆಯುವುದಕ್ಕೆ ಮಾರ್ಕ್ ಒಂದೇ ಅಲ್ಲ, ಸಾಕಷ್ಟು ಹಣ ನೀಡಬೇಕಿತ್ತು. ನಾನು, ನನ್ನ ಹೆಂಡತಿ ಇಬ್ಬರೂ ದುಡಿಯುತ್ತೇವೆ. ಮಕ್ಕಳಿಗಾಗಿ ಸ್ವಲ್ಪ ರಿಸ್ಕ್ ತೆಗೆದುಕೊಳ್ಳಬೇಕು, ತ್ಯಾಗ ಮಾಡಬೇಕು ಎಂಬುದು ಹೆಂಡತಿಯ ವಾದ.

ನಾನು ಸರ್ಕಾರಿ ಶಾಲೆಗಳಲ್ಲಿ ಓದಿದವನು. ಈಗಿನ ಹಾಗೆ ಆಗ ಖಾಸಗಿ ಶಿಕ್ಷಣ ಸಂಸ್ಥೆಗಳು ಇರಲಿಲ್ಲ. ಇದ್ದರೂ ರ್‍ಯಾಂಕ್ ಪಡೆಯಲೆಂದು ಅಂಥ ಕಡೆ ಸೇರಬೇಕೆಂಬ ಉತ್ಸಾಹವೇನೂ ಯಾರಲ್ಲೂ ಇದ್ದ ಹಾಗಿರಲಿಲ್ಲ. ನಮ್ಮ ಊರಿನ ಸರ್ಕಾರಿ ಹೈಸ್ಕೂಲಿನಲ್ಲಿ ಓದಿದ ನಾನು ಸಾಕಷ್ಟು ಉತ್ತಮ ಅಂಕಗಳಿಸಿದ್ದೆ. ಮುಂದೆ ಸಾಮಾನ್ಯ ಕಾಲೇಜುಗಳಲ್ಲಿ ಓದಿ, ಡಿಗ್ರಿಯಲ್ಲಿ ಹತ್ತರಲ್ಲೊಂದು ರ್‍ಯಾಂಕು ಪಡೆದಿದ್ದೆ. ನಾವು ಓದಿನ ಬಗ್ಗೆ ಇರಿಸಿಕೊಳ್ಳುವ ಶ್ರದ್ಧೆ, ಕಳಕಳಿ ಮುಖ್ಯ. ನಾವು ಸೇರುವ ಕಾಲೇಜು ಮುಖ್ಯ ಅಲ್ಲ ಎಂಬುದು ನನ್ನ ವಿಚಾರ. ಇದನ್ನು ಹೆಂಡತಿ ಒಪ್ಪಲಿಲ್ಲ.

ಈಗಿನ ಶಿಕ್ಷಣದ ಶೈಲಿ ಬದಲಾಗಿದೆ. ಕೋಚಿಂಗ್ ಕೊಡುವ ರೀತಿಯೂ ಮುಖ್ಯ. ಹುಡುಗ ಚೆನ್ನಾಗಿ ಮಾರ್ಕು ತೆಗೆದರೆ, ಡಾಕ್ಟರ್ ಕೋರ್ಸಿಗೆ ಸೇರಿಸಬಹುದು ಎಂದೆಲ್ಲ ಅವಳ ವಾದ. ಆಗ ಬೆಚ್ಚಿ ಬೀಳುವಂತಾಯಿತು. ಇವತ್ತು ಮೆಡಿಕಲ್ ಕಾಲೇಜಿನ ಓದು, ಮುಖ್ಯವಾಗಿ ಆ ಖರ್ಚು ಸುಲಭವಲ್ಲ. ಈಗ ಇವನು, ಇನ್ನೆರಡು ವರ್ಷದ ನಂತರ ಇವನ ತಂಗಿ ಕಾಲೇಜು, ಆನಂತರ ವೃತ್ತಿಪರ ಕೋರ್ಸಿಗೋ, ಮತ್ತೊಂದಕ್ಕೋ ಸೇರಬೇಕು.

ನಾವಾದರೋ ಹೊಟ್ಟೆ ಬಟ್ಟೆ ನೋಡಿಕೊಂಡು, ಇದ್ದುದರಲ್ಲಿ ನೆಮ್ಮದಿಯಾಗಿ ಇದ್ದವರು. ಅನಿವಾರ್ಯ ಎಂಬಂತೆ ಸಾಲ ಪಡೆದು ಸ್ಕೂಟರ್ ಕೊಂಡಿದ್ದವರು. ಮಕ್ಕಳ ಮುಂದಿನ ಓದಿನ ವಿಚಾರ ನೆನೆದು ಚಿಂತೆಯಾಯಿತು. ಇದನ್ನು ಮೊದಲು ನಿರೀಕ್ಷಿಸಿರಲಿಲ್ಲ ಎಂದೇನೂ ಅಲ್ಲ. ಆದರೆ ಏಕಾಏಕಿಯಾಗಿ ಭಾರೀ ಮೊತ್ತದ ಡೊನೇಷನ್ ನೀಡಿ ಕಾಲೇಜಿಗೆ ಸೇರಿಸುವ, ಆನಂತರ ವೃತ್ತಿಪರ ಕಾಲೇಜಿಗೆ ಸೇರಿಸುವ ವಿಚಾರ ಸಣ್ಣಗೆ ಕೊರೆಯುತ್ತಾ ಇತ್ತು. ಇಷ್ಟೆಲ್ಲ ತಾಕಲಾಟ ನಡೆಯುತ್ತಾ ಇರುವಾಗಲೇ, ಒಂದು ದಿನ ನನ್ನ ಹೆಂಡತಿ ರಮಾ ಮಗನನ್ನು ಪ್ರತಿಷ್ಠಿತ ಕಾಲೇಜೊಂದಕ್ಕೆ ಸೇರಿಸಿ ಬಂದಳು. ಅಲ್ಲಿನ ಡೊನೇಷನ್ ಹಣಕ್ಕೆ ಸಾಲ ಮಾಡಿದ್ದಳು. ಇದು ಅವಳ ಪಾಲಿಗೆ ಪ್ರತಿಷ್ಠೆ ಅನ್ನಿಸಿತೋ! ನನ್ನ ಮೇಲಿನ ಜಿದ್ದಿಗೆ ಹಾಗೆ ಮಾಡಿದಳೋ! ಅಥವಾ ಬೇರೆಯ ಮಕ್ಕಳ ಹಾಗೆ ಇವನಿಗೂ ಅವಕಾಶ ಸಿಕ್ಕದೇ ಹೋದರೆ ಎಂಬ ಆತಂಕವೋ ನನಗೆ ಸರಿಯಾಗಿ ತಿಳಿಯದು.

ಎರಡು ವರ್ಷದ ಪಿಯುಸಿ ಮುಗಿದು, ಮಗ ಶ್ರೀಕಾಂತ ಆಗಲೇ ಡಾಕ್ಟರಾಗುವ ಕನಸು ಕಾಣುತ್ತಿದ್ದ. ಅವನಿಗೂ ಒಂದು ಚಿಂತೆ. ಸ್ವಲ್ಪ ರ್‍ಯಾಂಕಿಂಗ್ ಕಡಿಮೆಯಾದರೆ ಪೇಮೆಂಟ್ ಸೀಟಿಗೆ ಹೋಗಬೇಕು. ಒಂದು ದಿನ ಹೀಗೇ ಮಾತಾಡುತ್ತಾ ''ಡ್ಯಾಡೀ, ನನಗೆ ಮೆರಿಟ್ ಸೀಟು ಸಿಗದೇ ಇದ್ದರೆ ಡೊನೇಷನ್ ಸೀಟು ಕೊಡಿಸುತ್ತೀರಾ?'' ಎಂದ. ''ಇಲ್ಲ'' ಎಂದು ನೇರವಾಗಿ ಹೇಳಿದರೆ ಅವನಿಗೆ ನೋವಾಗುತ್ತದೆ.

''ಎಷ್ಟು ಕೊಡಬೇಕಾಗುತ್ತೆ?'' ವಿಚಾರಿಸಿದೆ.

''ಹೋದ ಸಲ ನನ್ನಷ್ಟೇ ರ್‍ಯಾಂಕ್ ಬಂದಿದ್ದ ರಾಕೇಶ ಒಂದು ಲಕ್ಷ ಕೊಟ್ಟಿದ್ದ....'' ಅನುಮಾನಿಸುತ್ತಾ ಹೇಳಿದ.

''ತುಂಬಾ ಜಾಸ್ತಿ ಅಲ್ಲವೇನೋ!'' ಎಂದ ನನ್ನ ಧ್ವನಿಯನ್ನು ಗಮನಿಸಿದ್ದೇ ಆತ,

''ಹೋಗಲಿ ಡೆಂಟಲ್ ಕಾಲೇಜಿಗೆ ಸೇರಲಾ?'' ಎಂದ.

ಅದಕ್ಕಾದರೂ ನಲವತ್ತು, ಐವತ್ತು ಸಾವಿರ ರೂಪಾಯಿ ಕೊಡಬೇಕು. ಒಂದು ಸಲ ಅಷ್ಟು ದುಡ್ಡು ಕಟ್ಟಿದರೆ ಮುಗಿಯಿತು ಎಂದ ಹಾಗಿತ್ತು ಅವನ ಮಾತು. ಅದು ಹಾಗಲ್ಲ. ಪ್ರತಿ ವರ್ಷ ಅಷ್ಟೇ ಮೊತ್ತ ಕಟ್ಟಬೇಕು. ಜೊತೆಗೆ ಅವನ ಓದು, ಹಾಸ್ಟೆಲಿನ ಖರ್ಚು ವೆಚ್ಚವೆಲ್ಲ ಬರುತ್ತವೆ. ಒಂದು ಸಲ ದುಡ್ಡು ಕಟ್ಟೋದಷ್ಟೇ ಆಗಿದ್ದರೆ, ನಲವತ್ತು ಐವತ್ತು ಸಾವಿರ ಸಾಲ ಮಾಡಬಹುದಿತ್ತು ಎಂಬ ಇಂಗಿತ ಹೇಳಿದ ಮೇಲೆ ಅವನಿಗೆ ಸ್ವಲ್ಪ ಸಿಟ್ಟು ಬಂದ ಹಾಗಿತ್ತು.

ಅವನ ಅಮ್ಮನ ಮುಂದೆ ಗೊಣಗಾಡಿದನಂತೆ. ಬೇರೆ ಹುಡುಗರು, ತನಗಿಂತ ಕಡಿಮೆ ಮಾರ್ಕು ಪಡೆದವರು ಬೇಕುಬೇಕಾದ ಕೋರ್ಸಿಗೆ ಹೋಗುತ್ತಾರೆ. ತಾನು ಇಂಥ ತಂದೆ ತಾಯಿಗಳ ಮಗನಾಗಿ ಹುಟ್ಟಿದ್ದೇ ತಪ್ಪು ಎನ್ನುವಂತೆ ಮಾತಾಡಿದನಂತೆ. ಇದನ್ನು ರಮಾ ನನಗೆ ಹೇಳಿದಳು. ಅವಳ ಮನಸ್ಸಿನಲ್ಲಿಯೂ ಹೇಗಾದರೂ ಮಾಡಿ ಮಗನನ್ನು ಮೆಡಿಕಲ್‌ಗೆ ಸೇರಿಸಬೇಕೆಂಬ ಇಂಗಿತ ಇತ್ತು. 'ಹೇಗಾದರೂ' ಎಂಬ ಮಾತು ನನ್ನನ್ನು ಕಾಡುತ್ತಿತ್ತು. ''ಅವನು ಡಾಕ್ಟರು ಆಗಬೇಕು ಅನ್ನುತ್ತಾನೆ. ಅದಿಲ್ಲದೇ ಹೋದರೆ ಡೆಂಟಲ್ ಕೋರ್ಸಾದರೂ ಸಾಕು ಅನ್ನುತ್ತಾನೆ. ಅವನಿಗೇ ತಾನೇನು ಮಾಡಬೇಕು ಎಂಬ ಕಲ್ಪನೆ ಇದ್ದಂತಿಲ್ಲ. ಜೊತೆಯವರು ಸೇರಿ ಮಾತಾಡುವಾಗ

ದೇ ಸರಿಯಾದ ಕೋರ್ಸ್ ಎನ್ನುವುದು ಮನಸ್ಸಿಗೆ ನೆಟ್ಟುಬಿಟ್ಟಿದೆ. ಎಲ್ಲರ ಾಗೆ ತಾನಾಗಬೇಕು ಎಂಬ ಪ್ರತಿಕ್ರಿಯೆ ಇದು. ಮುಖ್ಯ, ತಂದೆ ತಾಯಿಯ ಣಕಾಸಿನ ಪರಿಸ್ಥಿತಿ ಏನು? ಅವರು ಇದೆಲ್ಲ ಹೊರಬಲ್ಲರೇ? ಎಂಬ ೋಚನೆ ಕೂಡ ಇದ್ದಂತಿಲ್ಲ....'' ಎಂದು ಹೇಳಿದ ಮೇಲೆ ಅವಳೂ ಆ ೊತ್ತಿಗೆ ಸುಮ್ಮನಾದಳು.

ಅದೇ ಸಮಯಕ್ಕೆ ಮಗಳು ಸುಮನಾಗೆ ಆರೋಗ್ಯ ಕೆಟ್ಟಿತು. ಆಸ್ಪತ್ರೆ ೇರಿಸಿದಾಗ ಸಣ್ಣದೊಂದು ಆಪರೇಷನ್ ಮಾಡಬೇಕು ಎಂದು ಡಾಕ್ಟರು ೇಳಿದರು. ಮಗನ ಕಾಲೇಜು ಡೊನೇಷನ್ ಹಣಕ್ಕೆ ಸಾಲ ಮಾಡಿದ್ದ ಹೆಂಡತಿ ಆ ೊತ್ತಿಗಾಗಲೇ ಹೈರಾಣಾಗಿದ್ದಳು. ಇನ್ನು ಬೇರೆ ಸಾಲ ಮಾಡುವ ಸ್ಥಿತಿಯಲ್ಲಿ ವಳು ಇರಲಿಲ್ಲ. ಮಗಳ ಅನಾರೋಗ್ಯ ಅವಳನ್ನು ಕಂಗೆಡಿಸಿತ್ತು. ಆಪರೇಷನ್ ಂದ ಕೂಡಲೇ ಭಯ ಮುತ್ತಿಕೊಳ್ಳುತ್ತದೆ. ಜೊತೆಗೆ ಔಷಧಿ, ಇಂಜೆಕ್ಷನ್ ಂದು ಸಾಕಷ್ಟು ಹಣದ ಖರ್ಚು.

''ಏನು ಮಾಡ್ತೀರ ಈಗ ದುಡ್ಡಿಗೆ?'' ಆತಂಕದಿಂದಲೇ ಆಕೆ ಕೇಳಿದಳು. ಫೀಸಲ್ಲಿ ಇಂಥ ಸಂದರ್ಭದಲ್ಲಿ ಸಿಗುವ ಸಾಲ ಮತ್ತೊಂದು ಎಲ್ಲ ಲೆಕ್ಕ ಹಾಕಿ ೇಳಿದೆ. ಆದರೂ ಕಡಿಮೆ ಬೀಳುತ್ತಿತ್ತು. ಅಲ್ಲದೇ ನಮ್ಮ ಆಫೀಸಲ್ಲಿ ಚಿಕಿತ್ಸೆ ಂತರ ಬಿಲ್ಲು ನೀಡಿದರೆ ಮಾತ್ರ ಹಣ ಕೊಡುವುದು. ಅಂದರೆ ಮೊದಲು ನಾವು ಣ ಖರ್ಚು ಮಾಡಬೇಕು. ಸ್ನೇಹಿತರು ಹೇಗೂ ಕೈಸಾಲಕ್ಕೆ ಇರುತ್ತಾರೆ ಎಂಬ ಂಬಿಕೆ ಇತ್ತು. ಕೆಲವರಲ್ಲಿ ಆಗಲೇ ಮಾತಾಡಿದ್ದೆ. ಅವರೂ 'ಕಷ್ಟದಲ್ಲಿ ಆಗದೇ ದ್ದರೆ ಅದೆಂಥ ಸ್ನೇಹಾನಯ್ಯ?'' ಎಂದು ಭರವಸೆ ನೀಡಿದ್ದರು.

ಅಂತೂ ಆಪರೇಷನ್ ಮುಗಿದು, ಚೇತರಿಸಿಕೊಂಡು, ಮಗಳು ಮನೆಗೆ ಂದಳು. ದೊಡ್ಡ ಕಂಟಕ ಗೆದ್ದ ನಿರಾತಂಕ. ಆಗ ಮಗನ ಮುಂದಿನ ದ್ಯಾಭ್ಯಾಸದ ಪ್ರಶ್ನೆ ಮತ್ತೆ ಎದ್ದಿತು.

ಈ ಮಧ್ಯೆ ಸಣ್ಣದೊಂದು ಪ್ರಯೋಗ ನಾನು ಮಾಡಿದ್ದೆ. ಮಗಳ ಆಸ್ಪತ್ರೆ ರ್ಚು, ಓಡಾಟ ಎಂದು ನಾವು ಗಂಡ, ಹೆಂಡತಿ ಓಡಾಡುತ್ತಿದ್ದಾಗ ಮನೆಯ ಸ್ತುವಾರಿ ಮಗನಿಗೆ ವಹಿಸಿದ್ದೆ. ರಮಾ ಅಂತೂ ಆ ಸಲ ಸಂಬಳವಾದ ಡಲೇ, ಬ್ಯಾಂಕಿನಲ್ಲಿ ಕನಿಷ್ಠ ಮೊತ್ತ ಬಿಟ್ಟು ಉಳಿದೆಲ್ಲ ಮನೆಗೇ ತಂದಿದ್ದಳು. ದನ್ನು ಮಗನ ಕೈಗಿತ್ತು. ಸೈನ್ ಮಾಡಿದ ನನ್ನ ಕೆಲವು ಚೆಕ್‌ಗಳನ್ನೂ ಅವನಿಗೆ ಟ್ಟು

''ನಾವು ಆಸ್ಪತ್ರೆ ಮನೆ ಅಂತ ಓಡಾಡ್ತಾ ಇರ್ತೀವಿ. ನೀನೇ ವ್ಯವಹಾರ ಎಲ್ಲ ೋಡಿಕೋ...'' ಅಂದಿದ್ದೆ.

ಅವನ ಪಾಲಿಗೆ ತಾಯಿ ತಂದುಕೊಟ್ಟ ಸಾವಿರಾರು ರೂಪಾಯಿ ಮೊತ್ತ ಹುದೊಡ್ಡ ಗಂಟಾಗಿ ಕಂಡಿರಬೇಕು. ಆದರೆ ಮನೆ ಬಾಡಿಗೆ, ಹಾಲು, ದಿನಸಿ, ೇಪರು, ಕೇಬಲ್ ಆಪರೇಟರ್‌ನ ಬಾಡಿಗೆ ಎಂದು ಒಂದೊಂದಾಗಿ ಕೊಡುತ್ತಾ ೋದಂತೆ ಆ ದೊಡ್ಡ ಗಂಟು ಕರಗಿಯೇ ಹೋಯಿತು. ಇನ್ನು ಲೈಟ್ ಬಿಲ್ಲು, ನೆಗೆ ಕಂತಿನ ಸಾಲದ ಮೇಲೆ ಕೊಂಡ ವಸ್ತುಗಳ ಹಣ ಎಂದು ನಾನು ಕೊಟ್ಟಿದ್ದ ೆಕ್‌ನಲ್ಲಿ ಪಾವತಿ ಮಾಡುವಾಗ, ದಿನದಿಂದ ದಿನಕ್ಕೆ ಶ್ರೀಕಾಂತ ಂಭೀರವಾಗುತ್ತಾ ಹೋದ. ಅವನಿಗೆ ಪ್ರತಿ ತಿಂಗಳ ಮನೆ ಖರ್ಚು ಮಾತ್ರ ಾಗಿಸುವ ಜವಾಬ್ದಾರಿ ವಹಿಸಿದ್ದೆ. ಆಸ್ಪತ್ರೆ, ಔಷಧಿ ಖರ್ಚು ಬೇರೆಯೇ. ಂಗಳನ್ನು ಮನೆಗೆ ಕರೆದು ತರುವ ಮುನ್ನಾದಿನ, ಅವನ ಕೈಯಿಂದಲೇ ಆದ ರ್ಚಿನ ಲೆಕ್ಕವನ್ನು ಗಂಡ-ಹೆಂಡತಿ ಹೇಳಿ ಬರೆಸಿದ್ದೆವು. ಅದೆಲ್ಲ ನೋಡುತ್ತಾ ೀಕಾಂತನ ಮುಖದಲ್ಲಿ ಒಂದು ರೀತಿಯ ಗಾಬರಿ. ತಂದೆ, ತಾಯಿಗೆ ಬರುವ ಂಬಳದ ಮೊತ್ತ ಎಷ್ಟೆಂಬುದು ಅವನಿಗೆ ಗೊತ್ತಾಗಿತ್ತು. ನಿತ್ಯದ ಖರ್ಚು, ವೆಚ್ಚ ಷ್ಟೆಲ್ಲ ಆಗುತ್ತದೆ ಎಂಬ ಕಲ್ಪನೆಯೇ ಇರಲಿಲ್ಲ.

ಇಷ್ಟಾದ ಮೇಲೆ ಮಗಳು ಹುಷಾರಾಗಿ ಮನೆಗೆ ಬಂದು, ಅವಳು ೊದಲಿನಂತಾಗುವಾಗ ಒಂದು ದಿನ ಮನೆಯವರೆಲ್ಲ ಹೊರಗೆಲ್ಲಾದರೂ ೋಗಿ ಬರುವ ವಿಚಾರ ಬಂದಿತು. ಶ್ರೀಕಾಂತ 'ಬೇಡ ಬೇಡ' ಅಂದುಬಿಟ್ಟ. ವನ ಹತ್ತಿರ ನಾನೂರೋ, ಐದುನೂರೋ ಉಳಿದಿತ್ತು. ಒಂದು ಸಲ ನೆಯವರೆಲ್ಲ ಹೊರಗೆ ಹೋಗಿ ಊಟ, ತಿಂಡಿ, ಸಿನಿಮಾ ಎಂದು ಖರ್ಚು ಾಡಿದರೆ ಅದು ಏನಕ್ಕೂ ಸಾಲುವುದಿಲ್ಲ ಎಂದು ಅವನ ಚಿಂತನೆ.

ಇದು ತೀರಾ ಅತಿಯಾಯಿತು ಎಂದು ನನಗೆ ಗೊತ್ತು. ಅದೇ ಹೊತ್ತಿಗೆ ಗಳು ಸುಮನಾ ''ಡ್ಯಾಡಿ ಕೊಟ್ಟಿದ್ದ ಪಾಕೆಟ್‌ಮನಿ ಉಳಿಸಿದ್ದು ನನ್ನ ಹತ್ತಿರ ಇದೆ. ನಾನು ಈ ಪಾರ್ಟಿ ಕೊಡಿಸ್ತೀನಿ'' ಅಂದುಬಿಟ್ಟಳು.

''ಯಾರೂ ಕೊಡೋದು ಬೇಡ. ಎಲ್ಲೂ ಹೋಗೋದು ಬೇಡ. ಹಾಯಾಗಿ ಮನೇಲಿ ಇದ್ದು ಬಿಡೋಣ'' ಅಂದಳು ಹೆಂಡತಿ.

''ಮಕ್ಕಳು ಅಷ್ಟು ಇಷ್ಟಪಡುತ್ತವೆ. ನಿರಾಸೆ ಮಾಡಬಾರದು. ಹೋಗಿ ಬರೋಣ'' ಎಂದೆ.

''ಸರಿ ಹೋಯಿತು. ಹೀಗೆ ಸಿಕ್ಕಿದ್ದಕ್ಕೆಲ್ಲ ಖರ್ಚು ಮಾಡಿದರೆ ಉದ್ಧಾರ ಆದ ಹಾಗೆ ಆಯಿತು'' ಎಂದು ತಾಯಿ ಮಗ ರೇಗಿಬಿದ್ದರು. ಒಂದು ರೀತಿ ಎರಡು ಪಂಗಡಗಳಂತೆ ಆಗಿತ್ತು. ನಾನು, ಮಗಳು ಒಂದು ಕಡೆ. ತಾಯಿ ಮಗ ಇನ್ನೊಂದು ಕಡೆ.

ಅದೇ ಸಮಯಕ್ಕೆ ಸರಿಯಾಗಿ ಗೆಳೆಯ ನಾಗೇಂದ್ರ ಬಂದ. ಮಗಳು ಆಸ್ಪತ್ರೆಯಿಂದ ಬಂದ ಸುದ್ದಿ ತಿಳಿದು, ನೋಡಿಕೊಂಡು ಹೋಗಲು ಬಂದಿದ್ದ. ಹೊರಡುವಾಗ ''ತಗೋಳಯ್ಯ. ನೀನು ಕಷ್ಟದಲ್ಲಿ ಇದ್ದಾಗಲೇ ಕೊಡಬೇಕಾಗಿತ್ತು. ನಾನು ಕಷ್ಟದಲ್ಲಿ ಇದ್ದಾಗ ನೀನಾಗಿ ಕೊಟ್ಟಿದ್ದೆ. ಏನು ಮಾಡೋದು? ಎಷ್ಟೇ ಪ್ರಯತ್ನಿಸಿದರೂ ಆಗಲಿಲ್ಲ. ಈಗ ಕೊಡತಾ ಇದೀನಿ. ಬೇಜಾರು ಮಾಡಿಕೋಬೇಡ'' ಎಂದು ನಾನು ಯಾವತ್ತೋ ಕೊಟ್ಟಿದ್ದ ಎರಡು ಸಾವಿರ ರೂಪಾಯಿ ಹಿಂದಿರುಗಿಸಿ ಹೋದ. ಅದು ನಮಗೆ ಬೋನಸ್ ನೀಡಿದಂತಾಯಿತು. ಪಾರ್ಟಿ ಚೆನ್ನಾಗಿ ನಡೆಯಿತು.

ಪಾರ್ಟಿಯ ದಿನ ಮಗನನ್ನು ಜೊತೇಲಿ ಕೂರಿಸಿಕೊಂಡು ಸುಮ್ಮನೆ ಕೇಳಿದೆ: ''ನಿಜವಾಗಲೂ ನಿನಗೆ ಏನು ಇಷ್ಟ ಹೇಳು. ಇಷ್ಟ ಅಂದರೆ ಸುಮ್ಮನೆ ಕ್ರೇಜಿಯಾಗಿ ಮಾತಾಡಬಾರದು. ನೀನು ನಾಳೆ ಡಾಕ್ಟರಾಗತೀಯೋ, ಎಂಜಿನಿಯರಾಗತೀಯೋ, ಮತ್ತೇನೋ! ಆದರೆ ಅಂಥ ಕೆಲಸ ನಿನಗೆ ನಿಜವಾಗ್ಲೂ ಇಷ್ಟನಾ? ಅಂಥ ಕೆಲಸದಿಂದ ನಿನಗೆ ತೃಪ್ತಿ ಬರುತ್ತಾ? ಅಥವಾ ಕೇವಲ ದುಡ್ಡು, ಕಾಸು ಬರುತ್ತೆ ಅಂತಲೋ, ಬೇರೆ ಯಾರನ್ನ ಕೇಳಿದರೂ ಅವರು ಮೆಡಿಕಲ್ಲು, ಇಂಜನಿಯರಿಂಗ್ ಅಂತ ಹೇಳ್ತಾರೆ ಅನ್ನೋ ಕಾರಣಕ್ಕೇ ನೀನೂ ಅದಾಗಬೇಕು ಅಂತಿದೀಯಾ? ನಿಜವಾಗಲೂ ನಿನಗೆ ಏನಾಗಬೇಕು ಅಂತಿದೆ ಹೇಳು. ನೀನು ಡಾಕ್ಟರ್ ಆಗಬೇಕು ಅನ್ನೋ ಹಟ ಇರೋದಾದರೆ, ಅದೇ ನಿನ್ನ ನಿಜವಾದ ಜೀವನ ಅನ್ನಿಸೋದಾದರೆ ಹೇಳು. ಬೇಕಾದರೆ ಇನ್ನೊಂದು ಸಲ ವಿತ್‌ಡ್ರಾ ಮಾಡಿ ಪರೀಕ್ಷೆ ತಗೋ, ಶ್ರದ್ಧೆಯಿಂದ ಓದು. ಒಳ್ಳೆ ಮಾರ್ಕು ತಗೋ. ಮೆರಿಟ್ ಸೀಟು ಸಿಗಲಿ. ಕಷ್ಟ ಆದರೂ ಹದಿನೈದು ಇಪ್ಪತ್ತು ಸಾವಿರ ಕೋಡೋಣ....'' ಎಂದೆ.

ಹೀಗೆ ನಾನು ಕೇಳಿದ್ದು ಅವನಲ್ಲಿ ಗಲಿಬಿಲಿ ಉಂಟು ಮಾಡಿತು. ತಾಯಿಯ ಹಾಗೆ ಭಾವುಕನಾಗಿ ನಾನು ಯೋಚನೆ ಮಾಡೋದಿಲ್ಲ ಅಂತ ಗೊತ್ತು. ಆದರೆ, ನೇರವಾಗಿ ಹೀಗೆ ತನ್ನನ್ನೇ ಕೇಳಬಹುದು, ಹೇಳಬಹುದು ಅಂತ ಅಂದುಕೊಂಡಿರಲಿಲ್ಲ. ಜೊತೆಗೆ ಒಂದು ಮಾತೂ ಹೇಳಿದೆ.

''ಮನೆಯ ಹಣಕಾಸಿನ ಸ್ಥಿತಿ ಏನು ಅಂತ ನಿನಗೆ ಈಗಾಗಲೇ ಗೊತ್ತಿದೆ. ನಾವು ಬೇರೆ ಏನೂ ಮಾಡೋಕಾಗಲ್ಲ. ನಿನ್ನ ಐದು ವರ್ಷದ ಓದು ಅಂದರೆ ಸುಮಾರು ಒಂದು ಲಕ್ಷ ರೂಪಾಯಿ ಸಾಲ. ಸಾಲ ಮಾಡಬಾರದು ಅಂತ ಅಲ್ಲ. ಅಷ್ಟು ಮಾಡಿ, ನೀನೂ ಒಂದು ಒಳ್ಳೇ ಓದು ಓದಿದೆ ಅಂತ ನಿನಗೂ ಅನ್ನಿಸಬೇಕು. ನಮ್ಮ ತಂದೆ ತಾಯಿ ದುಡ್ಡಿನ ಮುಖ ನೋಡಿ ನನ್ನ ಕೆರಿಯರ್ ಹಾಳು ಮಾಡಿದರು ಅಂತ ನಿನ್ನ ಮನಸ್ಸಿಗೆ ಬರಬಾರದು. ನಾನು ಹೇಳೋದಿಷ್ಟೆ, ಯಾವುದೇ ಕೆಲಸದಲ್ಲೂ ಸಾರ್ಥಕತೆ ಅನ್ನೋದಿರಬೇಕು. ಇವತ್ತೇ ಹೇಳು ಅಂತ ಅಲ್ಲ. ಎರಡು ದಿನ ಯೋಚನೆ ಮಾಡಿ ಹೇಳು....'' ಅಂದೆ.

ಬಹುಶಃ ಅವನಿಗೆ ನಿರ್ಧಾರ ತೆಗೆದುಕೊಳ್ಳುವುದು ತೀರಾ ಕಷ್ಟವಾಗಿರಬೇಕು. ಆದರೂ ವಾರ ಕಳೆಯುತ್ತಾ ಇದ್ದ ಹಾಗೆ ಬಂದು ''ನನಗೆ ಮೆಡಿಕಲ್, ಇಂಜನಿಯರಿಂಗ್ ಬೇಡ. ಆರ್ಟ್ ಕೋರ್ಸ್‌ಗೆ ಸೇರ್ತೀನಿ'' ಅಂತ ದೃಢವಾಗಿ ಹೇಳಿದ.

ಇದಾಗಿ ನಾಲ್ಕು ವರ್ಷ ಆಗಿದೆ. ಮೊನ್ನೆ ಅವನ ಕಾಲೇಜಲ್ಲಿ ಹುಡುಗರ ಪೇಂಟಿಂಗ್‌ಗಳ ಪ್ರದರ್ಶನ ಇಟ್ಟಿದ್ದರು. ಮನೆಯವರನ್ನು ಕರೆದುಕೊಂಡು ಹೋಗಿದ್ದ. ಮಗ ಬಿಡಿಸಿದ ಚಿತ್ರವನ್ನು ನೋಡುತ್ತಾ, ಅವನು ತನಗೆ ಸರಿ ಎನಿಸಿದ ದಾರಿ ಆರಿಸಿಕೊಂಡ ನೆಮ್ಮದಿ ಮನಸಲ್ಲಿ ಮೂಡಿತ್ತು.

■ ಟಿ.ಎನ್.ಸೂರ್ಯನಾರಾಯಣ.

ಹೀಗೇ ಈ ಬದುಕು....



ಊರಿಂದ ಅಜ್ಜಿ ಬಂದಿದ್ದರು. ಅವರಿಗೀಗ ಎಂಬತ್ತು ವರ್ಷ. ಜಪ, ತಪ ಜೋರು. ಬೆಂಗಳೂರಿನ ದೇವಸ್ಥಾನ, ಮಠಗಳನ್ನೆಲ್ಲ ತೋರಿಸಿ ಆಯಿತು. ಅದೆಲ್ಲ ತುಂಬಾ ಎಂಜಾಯ್ ಮಾಡಿದರು ಅಜ್ಜಿ. ಈ ಮಧ್ಯೆ ಹುಡುಗರೆಲ್ಲ ಸಿನಿಮಾ ನೋಡುವ ಪ್ರೋಗ್ರಾಂ ಹಾಕಿದರು. ಮನೆಯವರೆಲ್ಲ ಹೋದರೆ, ಅಜ್ಜಿ ಒಬ್ಬರೇ ಮನೆಯಲ್ಲಿ ಇರುವುದೇ? ಅವರನ್ನೂ ಹೊರಡಿಸಿದ್ದಾಯಿತು.

ನನಗೆ ಸಿನಿಮಾ ಅಂದರೆ ಬೋರು. ಹೋಗಿ ಕುಳಿತ ತಕ್ಷಣ ಚೆನ್ನಾಗಿ ನಿದ್ದೆ ಬರುತ್ತೆ. ಅವತ್ತೂ ಹಾಗೇ ಆಯಿತು. ನಿದ್ದೆಯ ನಡುವೆ ಎಲ್ಲ ಜೋರಾಗಿ ನಕ್ಕಿದ್ದರಿಂದ ಎಚ್ಚರ. ಗಾಬರಿ ಬಿದ್ದು, ಎದ್ದವನೇ ಪಕ್ಕದಲ್ಲಿದ್ದ ಅಜ್ಜೀನ 'ಬೇಜಾರಾಯಿತಾ? ನಿದ್ದೆ ಬರೋ ಹಾಗಿದ್ದರೆ ಮನೆಗೆ ಹೋಗೋಣ'' ಅಂದೆ. ಇದು ಒಂದು ಸಲವಲ್ಲ. ನಾಲ್ಕೈದು ಸಲ ಆಯಿತು.

ಅವತ್ತು ಸಿನಿಮಾ ನೋಡಿಕೊಂಡು ಬರುವಾಗ ''ಸಿನಿಮಾಕ್ಕೆ ಬರೋವಾಗ ಮಕ್ಕಳು ಮರೀನೆಲ್ಲ ಕಟ್ಟಿಕೊಂಡು ಬರಬಾರದು ಕಣೆ'' ಎಂದು ಅಜ್ಜಿ ನನ್ನವಳ ಮುಂದೆ ಹೇಳುತ್ತಿದ್ದುದು ಕಿವಿಗೆ ಬಿತ್ತು.

ಅವತ್ತು ನೋಡಿದ ಸಿನಿಮಾ ಶಾರುಖ್ ಖಾನ್ ಅಭಿನಯದ ಸೂಪರ್ ಹಿಟ್ ಪ್ರೇಮಕಥೆಯ ಚಿತ್ರವಂತೆ. ಈಗಲೂ ನನ್ನ ಹೆಂಡತಿ ಹೇಳುತ್ತಿರುತ್ತಾಳೆ.

- ನಾಗೇಶ್ವರ ಎನ್.ಆರ್., ಬೆಂಗಳೂರು

ಮಗಳು ಹುಟ್ಟಿದ ಮೇಲೆ ಇವರಿಗೆ ಕೊಂಚ ಮುನಿಸು. ಮಗೂನ ಹಚ್ಚಿಕೊಂಡು, ತನ್ನನ್ನು ನಿರ್ಲಕ್ಷಿಸುತ್ತಾ ಇದ್ದೀನಿ ಅನ್ನುವ ಭಾವನೆ. ಅದು ಗಾಢವಾಗಿ ಅಲ್ಲದಿದ್ದರೂ, ಆಗಾಗ ಮಾತುಗಳಲ್ಲಿ ಪ್ರಕಟವಾಗುತ್ತಿತ್ತು. ಮಗಳು ಸ್ವಲ್ಪ ಬೆಳೆದು, ಮಾತಾಡುವಂತಾದಾಗ ಇಬ್ಬರಿಗೂ ಆಗಾಗ ಈ ವಿಷಯದಲ್ಲಿ ಚಕಮಕಿ ಆಗುತ್ತಿತ್ತು. ಆಗೆಲ್ಲ ನಾನು ಮೂಕ ಪ್ರೇಕ್ಷಕಳು.

''ನಿಮ್ಮಮ್ಮ ನಿನಗೇನು ಮಹಾ ಗೊತ್ತು? ಎಷ್ಟು ವರ್ಷದಿಂದ ಕಂಡಿದೀಯ? ಭಾರೀ ಜೋರು ಹೊಡಿತೀಯಲ್ಲ!'' ಎಂದು ಇವರು ದಬಾಯಿಸಿದರು. ಅವಳು ಸೇರಿಗೆ ಸವಾ ಸೇರಿನಂಥವಳು.

''ಓಹೋ! ಚೆನ್ನಾಗಿ ಗೊತ್ತು. ನಾನು ಹುಟ್ಟಿದಾಗಿಂದ ನಮ್ಮಮ್ಮನ್ನ ನೋಡ್ತಾನೇ ಇದೀನಿ....'' ಎಂದು ಬಾಂಬು ಸಿಡಿಸಿದಾಗ, ಇವರಿಗೆ ಏನು ಹೇಳಬೇಕೋ ತಿಳಿಯದಾಗಿ ಪೆದ್ದು ಪೆದ್ದಾಗಿ ನಗಬೇಕಾಯಿತು.

- ನಾಗರತ್ನ, ಮೈಸೂರು

ನಮ್ಮ ಮಗ ರಾಹುಲನಿಗೆ ಮಲಗುವ ಮುಂಚೆ ಕಥೆ ಕೇಳುವುದು ಅಭ್ಯಾಸ. ನಮ್ಮ ತಾಯಿ ಮನೇಲಿದ್ದಾಗ ಅವರು ಅಭ್ಯಾಸ ಮಾಡಿಸಿದ್ದು. ಸ್ವಲ್ಪ ದೊಡ್ಡವನಾಗಿ ಇಲ್ಲಿಗೆ ಬಂದ ಮೇಲೆ, ಮಲಗಿಸೋಕೆ ಹೋದರೆ ಕತೆ ಹೇಳು ಅಂತ ವರಾತ. ನನಗೆ ಕತೆ ಹೇಳೋಕೆ ಬರ್ತಾ ಇರಲಿಲ್ಲ, ಅದನ್ನ ಅವನು ನೇರವಾಗಿ 'ನಿನಗೆ ಕತೆ ಹೇಳೋಕ್ಕೆ ಬರೋದಿಲ್ಲ ಕಣಮ್ಮ. ಅಜ್ಜಿ ಎಷ್ಟು ಚೆನ್ನಾಗಿ ಕತೆ ಹೇಳ್ತಾರೆ' ಅಂದಮೇಲೆ, ಸಿಟ್ಟುಕೊಂಡು 'ಹೋಗು ಅವರ ಹತ್ತಿರಾನೇ ಇರು. ಇಲ್ಯಾಕೆ ಬಂದೆ!' ಎಂದು ಸಿಟ್ಟಾದೆ. ಹಾಸಿಗೇಲಿ ಉರುಳಿಕೊಂಡು ಪೇಪರು ಓದುತ್ತಿದ್ದ ಮನೆಯವರು 'ಮಗು ಮೇಲೆ ಹಾಗೆಲ್ಲ ಸಿಟ್ಟಾಗತಾರೆಯೇ?' ಎಂದಿದ್ದು ಇನ್ನಷ್ಟು ಕೆರಳಿಸಿತು.

''ಹಾಗಾದರೆ, ನೀವೇ ನಿಮ್ಮ ಮಗರಾಯಂಗೆ ನಿದ್ದೆ ಬರೋ ಹಾಗೆ ಕತೆ ಹೇಳಿ ಮಲಗಿಸಬೇಕಪ್ಪ!'' ಎಂದು ಮುಖ ಊದಿಸಿಕೊಂಡೆ. ಮಗನೂ ತಂದೆಯನ್ನು ಒತ್ತಾಯಿಸಿದ. ಅವತ್ತು ಅವರು ತಮಗೆ ತೋಚಿದ ಕತೆಯೊಂದು ಹೇಳಿ ಮಲಗಿಸಿದರು. ಆನಂತರ ನಿತ್ಯರಾತ್ರಿ ಕತೆ ಹೇಳುವ ಸರದಿ ಅವರದು.

ಅವತ್ತೊಂದು ದಿನ ಯಾವುದೋ ಜಾನಪದ ಕತೆ ಹೇಳ್ತಾ ಇದ್ದರು. ಸ್ವಲ್ಪ ದೊಡ್ಡದು. ಯಾಕೋ ಕತೆ ಹೇಳ್ತಾ ಇದ್ದವರು ನಿಲ್ಲಿಸಿದರು. ಯಾಕೆ ಅಂತ ನೋಡಿದರೆ ಮಗು ಆಗಲೇ ಮಲಗಿತ್ತು. ಆದರೆ ಕುತೂಹಲ ತಡೆಯಲಾರದೆ ''ಮುಂದೆ?'' ಅಂದೆ. ''ನಾಳೆ ಹೇಳ್ತೀನಿ'' ಅಂತ ಮುಸುಕಿಕ್ಕಿ ಮಲಗಿ, ಯಾವತ್ತೋ ಆಡಿದ್ದ ಮಾತಿಗೆ ಅವತ್ತು ಮುಯ್ಯೀ ತೀರಿಸಿಕೊಂಡರು.

- ವಿದ್ಯಾ ಎನ್. ರಾವ್, ಹಾಸನ

ನನ್ನ ಕಸಿನ್ ಮುಂಬಯಿಗೆ ಬಂದಿದ್ದ. ಕಾಲೇಜು ಓದುತ್ತಿದ್ದ ಅವನಲ್ಲಿ ಹುಡುಗಾಟಿಕೆ, ಚೇಷ್ಟೆ ಜಾಸ್ತಿ. ನನಗೆ ಕೆಲಸದ ಒತ್ತಡ. ಅವನ ಜೊತೆ ತಿರುಗಾಡಲು ಪುರಸೊತ್ತು ಇರಲಿಲ್ಲ. ಜೊತೇಲಿ ಇಬ್ಬರನ್ನು ಕರೆದು ತಂದಿದ್ದ. ಹೀಗಾಗಿ ಅವರನ್ನೇ ಕಟ್ಟಿಕೊಂಡು ತಿರುಗುತ್ತಿದ್ದ.

ಮೊದಲ ದಿನ ಸ್ಟೇಷನ್‌ನಿಂದ ಮನೆಗೆ ಬರುವಾಗಲೇ, ಅವನ ತುಂಟಸ್ವಭಾವ ಗೊತ್ತಾಗಿತ್ತು. ಆಚೀಚೆ ಹುಡುಗಿಯರು ಕಂಡಾಗ ಒಂದು ಹಾನಿಕರವಲ್ಲದ ಕಾಮೆಂಟ್ ಒಗೆಯುತ್ತಿದ್ದ. ಅದೂ ಕನ್ನಡದಲ್ಲಿ. ಅದನ್ನು ಗಮನಿಸಿ ನಾನು ಆಗಲೇ ಎಚ್ಚರಿಸಿದ್ದೆ 'ಇಲ್ಲಿ ಕನ್ನಡ ಮಾತಾಡುವವರೂ ಜಾಸ್ತಿ ಇದ್ದಾರೆ. ಹುಷಾರಾಗಿರು' ಅಂತ. ಅದು ಕಿವಿಯ ಮೇಲೆ ಹಾಕಿಕೊಂಡನೋ ಬಿಟ್ಟನೋ!

ತಿರುಗಾಟವೆಲ್ಲ ಮುಗಿಯುವ ಹಂತಕ್ಕೆ ಬಂದು, ಇನ್ನು ಕೆಲವು ಸಂಬಂಧಿಕರನ್ನು ನೋಡುವುದಿತ್ತು. ಹಾಗೆ ಅವರ ಅತ್ತಿಗೆಯ ಸಂಬಂಧಿ ಒಬ್ಬರ ಮನೆಗೆ ಹೋಗಬೇಕಿತ್ತು. ಅವರಿದ್ದುದು ಚೆಂಬೂರಿನಲ್ಲಿ. ನಾವಿದ್ದ ವಡಾಲಾದಿಂದ ನೇರವಾಗಿ ಬಸ್ ಇದ್ದುದರಿಂದ, ಬಸ್‌ನಲ್ಲಿಯೇ ಹೋಗಲು ಹೇಳಿದೆ.

ಅವತ್ತು ಭಾನುವಾರ. ಆಫೀಸಿನ ಕೆಲಸದ ಹೊರೆ ಮನೆಗೇ ಹೊತ್ತು ತಂದು ಕಡತ ನೋಡುತ್ತಾ ಕುಳಿತಿದ್ದೆ. ಹೋದವರು ಮಧ್ಯಾಹ್ನ ಅಲ್ಲಿಯೇ ಊಟ ಮುಗಿಸಿ ಬರುತ್ತಾರೆ ಅಂದುಕೊಂಡಿದ್ದೆ. ನೋಡಿದರೆ, ಹೋದ ಸ್ವಲ್ಪ ಹೊತ್ತಿಗೆ ಎಲ್ಲ ಹಿಂದಿರುಗಿದರು. ಎಲ್ಲರ ಮೋರೆ ಪೆಚ್ಚು ಬಡಿದಿತ್ತು.

''ಯಾಕೋ ಅಡ್ರೆಸ್ ಸಿಗಲಿಲ್ಲವಾ?'' ಅಂದೆ

''ಸಿಕ್ಕಿತು... ಆದರೆ....'' ಎಂದು ಏನೋ ಹೇಳಲು ಹೋದವನನ್ನು ಇನ್ನೊಬ್ಬ ತಡೆದ. ಕೊನೆಗೆ ಅವರವರಲ್ಲಿಯೇ ಗುಸು ಗುಸು ಆಗಿ ಗುಟ್ಟು ಹೊರಬಿತ್ತು.

ಇವರು ಬಸ್ ಹತ್ತಿದ ಸ್ವಲ್ಪ ಹೊತ್ತಿಗೆ ದಾದರ್‌ನಲ್ಲಿ ಇಬ್ಬರು ತರುಣಿಯರು ಇವರಿದ್ದ ಮುಂದಿನ ಸೀಟಿನಲ್ಲಿ ಕುಳಿತರಂತೆ. ಇಬ್ಬರೂ ಮರಾಠಿಯಲ್ಲಿ ಮಾತಾಡುತ್ತಾ ಇದ್ದರು. ಅದರಲ್ಲೊಬ್ಬಳು ಚೆನ್ನಾಗಿ ಇದ್ದಳೆಂದು ನನ್ನ ಕಸಿನ್ ಕನ್ನಡದಲ್ಲಿ ಯಥಾ ಪ್ರಕಾರ ಕಾಮೆಂಟ್ ಶುರು ಮಾಡಿದನಂತೆ. ಅದಕ್ಕೆ ಅವರಿಂದ ಪ್ರತಿಕ್ರಿಯೆ ಏನೂ ಬಾರದ ಕಾರಣ, ಇವರ ಕಾಮೆಂಟ್ ಜೋರಾಗಿ ಮುಂದುವರಿದಿದೆ. ಸಯಾನ್‌ನಲ್ಲಿ ಒಬ್ಬ ಹುಡುಗಿ ಇಳಿದಿದ್ದಾಳೆ. ಚೆನ್ನಾಗಿದ್ದ ಹುಡುಗಿ ಒಬ್ಬಳೇ. ಇವರ ಕಾಮೆಂಟ್ ಇನ್ನೂ ಜೋರಾಗಿದೆ. ಇವರು ಇಳಿಯೋ ಸ್ಟಾಪ್‌ನಲ್ಲೇ ಅವಳೂ ಇಳಿದು ಮಾಯವಾಗಿದ್ದಾಳೆ. ಇವರು ಅಡ್ರೆಸ್, ವಿಚಾರಿಸಿಕೊಂಡು ಎರಡನೇ ಮಹಡಿಯ ಆ ಮನೆ ಮುಂದೆ ನಿಂತು ಬೆಲ್ ಒತ್ತಿದ್ದಾರೆ. ಬಾಗಿಲು ತೆಗೆದದ್ದು ಆ ಹುಡುಗಿ. ''ಅಮ್ಮಾ ಯಾರೋ ಬಂದಿದಾರೆ....'' ಅಂತ ಆಕೆ ಗಾಬರಿ ಗಾಬರಿಯಾಗಿ ಕೂಗಿ ಹೇಳಿದ್ದೇ, ಆ ಮನೆಯವರನ್ನು ಕಾಣಲೆಂದೇ ಹೋಗಿದ್ದರೂ, ಧಡಧಡ ಮೆಟ್ಟಿಲಿಳಿದು ಇವರೆಲ್ಲ ಓಡಿ, ಬಸ್ ಹತ್ತಿ ವಾಪಸ್ ಬಂದರಂತೆ.

■ ಪ್ರಕಾಶ್ ಪುತ್ರನ್, ಮುಂಬಯಿ

ಸವಾಲಾದ ಸೊಳ್ಳೆ

ಸೊಳ್ಳೆಯಂಥ ಸಣ್ಣ ಕೀಟದ ಬಗ್ಗೆ ಲೇಖನ ಬರೆಯುವ ವಿಚಾರ ತಿಳಿದು ನನ್ನ ಹೆಂಡತಿ ಬಿದ್ದು ಬಿದ್ದು ನಗುತ್ತಿದ್ದಳು. ಸೊಳ್ಳೆಯ ಬಗ್ಗೆ ತಿಳಿಯಲು ಅಂಥಾದ್ದೇನಿದೆ ಎಂದೇ ಸಾಮಾನ್ಯ ಭಾವನೆ. ಒಂದು ಸಣ್ಣ ಸಂಗತಿ ಗಮನಿಸಿ. ಮಾನವನ ಇದುವರೆಗಿನ ಜನಸಂಖ್ಯೆಯಲ್ಲಿ ಅರ್ಧದಷ್ಟು ಜನ ಸೊಳ್ಳೆಯಿಂದ ಹರಡಿದ ರೋಗಗಳಿಂದಾಗಿಯೇ ಸಾವು ಕಂಡಿದ್ದಾರೆ. ಸೊಳ್ಳೆಗಳಲ್ಲಿ ಎರಡು ಸಾವಿರಕ್ಕೂ ಹೆಚ್ಚು ಪ್ರಭೇದಗಳಿವೆ. ಇವುಗಳಲ್ಲಿ ಮೂರ್‍ನಾಲ್ಕು ಪ್ರಭೇದ ಅಥವಾ ಜಾತಿಯ ಸೊಳ್ಳೆಗಳಿಂದ ಮಾತ್ರ ರೋಗ ಹರಡುತ್ತದೆ. ಇನ್ನು ಎಲ್ಲ ಸೊಳ್ಳೆಗಳೂ ರೋಗ ಹರಡುವುದಾಗಿದ್ದರೆ ಮನುಷ್ಯ ಉಳಿಯಲು ಸಾಧ್ಯವಿತ್ತೇ?

ಇನ್ನೊಂದು ಸಂಗತಿ. ಯಾವುದೇ ವರ್ಗದ ಜೀವಿ ಸಮೂಹ ಮಿತಿಯಿಲ್ಲದೇ ಬೆಳೆಯದಂತೆ ಪ್ರಕೃತಿ ಎಚ್ಚರವಹಿಸಿದೆ. ಸೊಳ್ಳೆ ನೊಣ ಮುಂತಾದವನ್ನು ತಿನ್ನಲು ಜೇಡ, ಹಲ್ಲಿ ಇರುತ್ತವೆ. ಪತಂಗಗಳ ನಿಯಂತ್ರಣ ಬಾವಲಿಗಳಿಂದ ಆಗುತ್ತದೆ. ಹೀಗೆಲ್ಲ ಇದ್ದರೂ ಸೊಳ್ಳೆಯಂಥ ಸಣ್ಣದೊಂದು ಕೀಟ ಕೊಡುವ ತೊಂದರೆ ನಿಯಂತ್ರಿಸಲೂ ಮನುಷ್ಯನಿಗೆ ಸಾಧ್ಯವಾಗುತ್ತಿಲ್ಲ.

ಡಿಡಿಟಿ (ಡೈಕ್ಲೋರೋ ಡೈಫೀನೈಲ್ ಟ್ರೈಕ್ಲೋರೋ ಈಥೇನ್) ಕಂಡು ಹಿಡಿದಾಗ ಇನ್ನು ಸೊಳ್ಳೆಗಳ ನಿರ್ನಾಮ ಆಗಿಯೇ ಹೋಯಿತು ಎಂದಿದ್ದರು. ಈಗೇನಾಗಿದೆ? ಸೊಳ್ಳೆಗಳು ಡಿಡಿಟಿಗೆ ಪ್ರತಿರೋಧ ಬೆಳೆಸಿಕೊಂಡಿವೆ. ಸೊಳ್ಳೆಗಳನ್ನು ನಿರ್ಮೂಲನ ಮಾಡುವ ಹಟಕ್ಕೆ ಬಿದ್ದು ಎಲ್ಲೆಡೆ ಸಿಂಪಡಿಸಿದ ಡಿಡಿಟಿ ಇಂದು ನಾವು ತಿನ್ನುವ ಪ್ರತಿ ಆಹಾರದಲ್ಲೂ ಬೆರೆತಿದೆ. ಜಾನುವಾರುಗಳು ನೀಡುವ ಹಾಲು ಇರಲಿ, ತಾಯಂದಿರ ಎದೆ ಹಾಲಿನಲ್ಲೂ ಇವತ್ತು ಡಿಡಿಟಿ ಪತ್ತೆಯಾಗುತ್ತಿದೆ.

ರೋನಾಲ್ಡ್ ರಾಸ್ ಸೊಳ್ಳೆಯಿಂದ ಹರಡುವ ಮಲೇರಿಯಾ ಜ್ವರಕ್ಕೆ ಮದ್ದು ಕಂಡು ಹಿಡಿದಾಗ ಜನ ನೆಮ್ಮದಿಯ ನಿಟ್ಟುಸಿರು ಬಿಟ್ಟಿದ್ದರು. ಆದರೂ ಇವತ್ತಿಗೂ ಮಲೇರಿಯಾ ಹಲವರಿಗೆ ನಿತ್ಯದ ಪಿಡುಗಾಗಿದೆ.

ಅನಾಫಿಲೀಸ್ ಎಂಬ ಹೆಣ್ಣು ಸೊಳ್ಳೆ ಹರಡುವ ಮಲೇರಿಯಾ ಜ್ವರ ಈಗ ಅಂಥ ದೊಡ್ಡ ಪಿಡುಗೇನೂ ಅಲ್ಲ. ಈಡಿಸ್ ಸೊಳ್ಳೆ ಹರಡುವ ಹಳದಿ ಜ್ವರಕ್ಕೆ ಮತ್ತು ಕ್ಯೂಲೆಕ್ಸ್ ಎಂಬ ಸೊಳ್ಳೆ ಹರಡುವ ಆನೆಕಾಲು ರೋಗ (ಎನ್‌ಸೆಫಿಲೈಟಿಸ್) ಈಗಲೂ ಬಹುದೊಡ್ಡ ಸವಾಲುಗಳಾಗಿವೆ. ಇತ್ತೀಚೆಗೆ ಭಾರತದಲ್ಲಿ ಕಾಣಿಸಿಕೊಂಡಿರುವ ಡೆಂಗ್ಯೂ ಜ್ವರ ಮತ್ತು ಆಫ್ರಿಕಾದಲ್ಲಿ ನಿದ್ರಾಹೀನತೆ ಉಂಟು ಮಾಡಿ ಸಾವು ತರುವ ಇಬೋಲೆ ಜ್ವರಗಳು ಇನ್ನೂ ಅದೆಷ್ಟು ಜನರನ್ನು ಬಲಿ ತೆಗೆದುಕೊಳ್ಳುತ್ತವೋ ತಿಳಿಯದು.

ಅಷ್ಟಕ್ಕೂ ಸೊಳ್ಳೆಗಳಿಗೆ ಮನುಷ್ಯ ಅಥವಾ ಇತರ ಪ್ರಾಣಿಗಳ ರಕ್ತ ಆಹಾರವಲ್ಲ. ಸೊಳ್ಳೆಗಳ ಸಂತಾನೋತ್ಪತ್ತಿಗೆ ಅಗತ್ಯವಾದ ಪ್ರೋಟೀನನ್ನು ಮಾತ್ರ ಅವು ತಾವು ಹೀರುವ ರಕ್ತದಿಂದ ಪಡೆಯುತ್ತವೆ. ಆದ್ದರಿಂದ ಕೆಲವೇ ವರ್ಗದ ಹೆಣ್ಣು ಸೊಳ್ಳೆಗಳು ಮಾತ್ರ ಈ ರೀತಿ ರಕ್ತ ಹೀರುತ್ತವೆ. ಹಾಗೆ ರಕ್ತ ಹೀರುವಾಗ; ಕಾಯಿಲೆ ಇರುವ ಪ್ರಾಣಿಯಿಂದ ರಕ್ತ ಸೆಳೆದಿದ್ದ ಸೊಳ್ಳೆ, ಆರೋಗ್ಯವಂತ ಮನುಷ್ಯ ಅಥವಾ ಪ್ರಾಣಿಯನ್ನು ಕಚ್ಚಿದಾಗ ಸೋಂಕು ತಗಲುತ್ತದೆ.

ತನ್ನ ಸಂತಾನ ಮುಂದುವರಿಕೆಗಾಗಿ ರಕ್ತ ಹೀರುವ ಸೊಳ್ಳೆ, ಕ್ಷಯ, ಮೆದುಳು ಜ್ವರ, ಡಯಾಬಿಟೀಸ್ ರೋಗಿಗಳ ಹತ್ತಿರವೂ ಸುಳಿಯುವುದಿಲ್ಲ ಎಂದು ಇತ್ತೀಚಿನ ವರದಿಯೊಂದು ತಿಳಿಸಿದೆ.

ಒಂದು ರೀತಿ ಲೋಕಲ್ ಅನೆಸ್ಥೇಸಿಯಾ ಬಳಸಿದಂತೆ, ಸೊಳ್ಳೆ ಮೈಮೇಲೆ ಕುಳಿತು ತನಗೆ ಅಗತ್ಯವಾದಷ್ಟು ರಕ್ತ ಹಿಂಡುವ ತನಕ ಅರಿವಿಗೇ ಬರುವುದಿಲ್ಲ. ರಕ್ತ ಹೀರಿ ಮುಗಿಸಿದ ಮೇಲಷ್ಟೇ ಕುಟುಕಿದ ನೋವು ಕಾಣಿಸಿಕೊಳ್ಳುತ್ತದೆ. ತಾನು ರಕ್ತ ಹೀರುವ ನಳಿಕೆ ಚುಚ್ಚಿದಾಗ ನೋವಾಗದಂತೆ, ತಾನು ರಕ್ತ ಪಡೆಯುವಾಗ ಅದು ಹೆಪ್ಪುಗಟ್ಟದಂತೆ ಮಾಡುವ ಅದ್ಭುತ ವ್ಯವಸ್ಥೆಯೊಂದು ಇದೆಯೆಂದೇ ಇದೆಲ್ಲ ಸಾಧ್ಯವಾಗುತ್ತದೆ.

ಡಿಫೈರಾ ಎಂಬ ಗಣಕ್ಕೆ ಸೇರಿದ ಸೊಳ್ಳೆಗೆ ಜೊತೆ ರೆಕ್ಕೆಗಳು. ಪ್ರಾಣಿಗಳ ಚರ್ಮದೊಳಕ್ಕೆ ಚುಚ್ಚಿ ಜೀವರಸ ಹೀರಲು ಸಹಾಯಕವಾದ ನಳಿಕೆ, ಉದ್ದದ ಮೂರು ಜೊತೆ ಕೀಲು ಕಾಲು. ನಾವು ನಿತ್ಯ ನೋಡುವ ಅತಿ ಚಿಕ್ಕ ಗಾತ್ರದ ಸೊಳ್ಳೆಯಿಂದ ಹಿಡಿದು ನೊಣದ ಗಾತ್ರದ ಕ್ರೇನ್ ಸೊಳ್ಳೆಯೂ ಇವೆ. ಹಾಗೆ ನೋಡಿದರೆ ನೊಣ, ಗುಂಗಾಡು ಕೂಡ ಸೊಳ್ಳೆಯ ಸಮೀಪ ಸಂಬಂಧಿಗಳು. ಸಣ್ಣ ಸೊಳ್ಳೆ ಕಚ್ಚಿದರೇ ಇಷ್ಟೆಲ್ಲ ಅನಾಹುತ. ಇನ್ನು ನೊಣದ ಗಾತ್ರದ ಕ್ರೇನ್ ಸೊಳ್ಳೆ ಕಚ್ಚಿದರೆ! ಭಯಪಡಬೇಡಿ, ಏಕೆಂದರೆ ಆ ಸೊಳ್ಳೆ ಮನುಷ್ಯ ಅಥವಾ ಇತರ ಪ್ರಾಣಿಗಳ ರಕ್ತ ಹೀರುವುದಿಲ್ಲ.

ನಿಂತ ನೀರ ಮೇಲೆ ಅಸಂಖ್ಯ ಮೊಟ್ಟೆಗಳನ್ನಿಡುವ ಸೊಳ್ಳೆ, ನಾಲ್ಕು ಹಂತ ದಾಟಿ ಸೊಳ್ಳೆಯಾಗುತ್ತದೆ. ಮೊಟ್ಟೆ ಲಾರ್ವಾ ಆಗುತ್ತದೆ. ಆನಂತರ ಲಾರ್ವಾ ಕೋಶಾವಸ್ಥೆ ದಾಟಿ ಸೊಳ್ಳೆಯಾಗುತ್ತದೆ. ಒಂದು ಸೊಳ್ಳೆ ಸಹಸ್ರಾರು ಸಂಖ್ಯೆಯ ಮೊಟ್ಟೆ ಇಡಬಲ್ಲದು. ಅವುಗಳಲ್ಲಿ ಕೆಲವೇ ಕೆಲವು ಮೂರೂ ಹಂತ ದಾಟಿ ಸೊಳ್ಳೆಯಾಗುತ್ತವೆ. ಸಂತತಿ ಮುಂದುವರಿಯುತ್ತದೆ. ಅತಿಶೀತದ ಧ್ರುವ ಪ್ರದೇಶಗಳಿಂದ ಹಿಡಿದು, ಅತಿ ಉಷ್ಣ ವಲಯಗಳ ಕೊಳಗಳ ನೀರಿನ ಮೇಲೆ ಮೊಟ್ಟೆ ಇಟ್ಟು ಬೆಳೆಯುತ್ತಾ ಹೋಗುವ ಸೊಳ್ಳೆಗಳು ಎಂಥದ್ದೇ ವಾತಾವರಣದ ವೈಪರೀತ್ಯವನ್ನು ಸಹಿಸಬಲ್ಲವು.


ನಿಮಗೆ ಸೊಳ್ಳೆಯ 'ಗುಂಯ್' ಶಬ್ದ ಕೇಳಿದರೇ ರೇಗಬಹುದು. ಆದರೆ ಇದು ಹೆಣ್ಣು ಸೊಳ್ಳೆ, ತಾನು ಇಲ್ಲಿದ್ದೇನೆ ಎಂದು ಗಂಡು ಸೊಳ್ಳೆಗೆ ಕಳಿಸುವ ಸಂದೇಶ. ಈ ಸಂದೇಶದ ಕಂಪನ ಗ್ರಹಿಸುವ ಗಂಡು ಸೊಳ್ಳೆ ಅರಸಿ ಬಂದು ಹೆಣ್ಣು ಸೊಳ್ಳೆಯನ್ನು ಹಿಡಿದು ಕೂಡುತ್ತದೆ. ನಿಂತ ನೀರಿನ ಮೇಲೆ ಮೊಟ್ಟೆ ಲಾರ್ವಾ ಸ್ಥಿತಿಗೆ ಬಂದಾಗ ಅದರ ಉಸಿರಾಟಕ್ಕೆ ವಿಚಿತ್ರ ವ್ಯವಸ್ಥೆ ಇದೆ. ಕ್ಯೂಲೆಕ್ಸ್ ಸೊಳ್ಳೆಯ ಲಾರ್ವಾ ನೀರಿನ ಮೇಲೆ ತಲೆಕೆಳಗಾಗಿ ಜೋತುಬಿದ್ದು ಶ್ವಾಸಗಳಲ್ಲಿ ಗಾಳಿ ತುಂಬಿಕೊಂಡು ಉಸಿರಾಡಿದರೆ ಅನಾಫಿಲೀಸ್ ಸೊಳ್ಳೆಯ ಲಾರ್ವಾ, ನೀರಿನ ಮೇಲ್ಮೈಗೆ ಸಮಾನಾಂತರವಾಗಿಯೇ ಬಿದ್ದುಕೊಂಡು ಉಸಿರಾಡುತ್ತದೆ.

ಹೀಗೆ ನೂರೆಂಟು ವಿಚಿತ್ರಗಳ ಸಾಮಾನ್ಯ ಸೊಳ್ಳೆಯೊಂದರಲ್ಲಿ, ಅನಾಫಿಲೀಸ್ ಎಂಬ ಹೆಣ್ಣು ಸೊಳ್ಳೆಯಿಂದ ಮಲೇರಿಯಾ ಹರಡುತ್ತದೆಂದು ರೋನಾಲ್ಡ್ ರಾಸ್ ಕಂಡು ಹಿಡಿದಿದ್ದಕ್ಕೇ ನೊಬೆಲ್ ಬಹುಮಾನ ಘೋಷಿಸಿದ್ದರು ಎಂಬುದು ಇವತ್ತು ತೀರಾ ವಿಚಿತ್ರವಾಗಿ ಕಾಣಬಹುದು.

ಆದರೆ, ಒಂದೇ ಒಂದು ಸಲ ಮಲೇರಿಯಾ ಜ್ವರ ಬಂದು ಚಳಿ, ಜ್ವರದಿಂದ ತತ್ತರಿಸಿದವರನ್ನು ಕೇಳಿ ನೋಡಿ, ಸೊಳ್ಳೆಯ ಮಹಿಮೆ ಏನೆಂದು ತಿಳಿದೀತು.


■ **ಶೇಷಗಿರಿ ಜೋಡಿದಾರ್**

ಇಲಿ ಕೊಲ್ಲುವವರಿಗೆ ಬಹುಮಾನ!



'ಸೊಳ್ಳೆ ಕೊಲ್ಲುವವರಿಗೂ ಅವು ಬಹುಮಾನ ಕೊಟ್ಟಿದ್ದರೆ..... ಅದು ನನಗೇ.....'

ವಿಚಿತ್ರ ಜಗತ್ತು



ಭಾರೀ ಮತದಾನ

ಕರ್ನಾಟಕದಲ್ಲಿ ಎರಡು ಸುತ್ತು ಮತದಾನ ಆಯಿತು. ಎರಡನೇ ಸುತ್ತಿನ ಮತದಾನ ಮುಗಿದ ಮರು ದಿನ ಪೇಪರುಗಳಲ್ಲೆಲ್ಲ 'ಭಾರೀ ಮತದಾನ' ಎಂದು ವರದಿ. ಇಂಥ ಭಾರೀ ಮತದಾನಕ್ಕೆ ನೈಲ್ ಪಾಲಿಶ್ ರಿಮೂವರ್ ಕಾರಣ ಎಂದರೆ ಆಶ್ಚರ್ಯವಾಗುತ್ತದೆಯೇ?

ಮೊದಲ ಸುತ್ತಿನಲ್ಲಿ ದೆಹಲಿ, ಬೆಂಗಳೂರು ಎಲ್ಲೆಡೆ ನಿರೀಕ್ಷೆಗೂ ಮೀರಿ ಮತದಾನವಾಯಿತು. ಕೆಲವು ಅಭ್ಯರ್ಥಿಗಳು ತಮ್ಮ ತಂಡ ಕಟ್ಟಿಕೊಂಡು, ತೋರುಬೆರಳಿಗೆ ಹಾಕಿದ್ದ ಮಸಿಯನ್ನು ರಿಮೂವರ್‌ನಿಂದ ಅಳಿಸಿ ತೆಗೆದು, ಮತ್ತೆ ಮತ್ತೆ ಮತದಾನ ಮಾಡಿಸಿದ್ದು, ಸಾಕಷ್ಟು ಸಂಖ್ಯೆಯಲ್ಲಿ ಇಂಥ ಪ್ರಾಕ್ಸಿ ಮತದಾನ ನಡೆದಿದ್ದು ವರದಿಯಾಯಿತು.

ಆದರ ಪರಿಣಾಮವೆಂದರೆ, ಎರಡನೇ ಸುತ್ತಿನ ಮತದಾನದ ವೇಳೆಗೆ ನೈಲ್ ಪಾಲಿಶ್ ರಿಮೂವರ್‌ಗೆ ಭಾರೀ ಬೇಡಿಕೆ. ಹೆಚ್ಚಿದ ಮತದಾನ. ಮೈಸೂರು, ಶಿವಮೊಗ್ಗ, ಚಾಮರಾಜನಗರಗಳಂಥ ಕಡೆ ಶೇಕಡಾ ಎಂಬತ್ತರಷ್ಟು ಮತದಾನವಾದುದರ ಗುಟ್ಟು ಈಗ ಬಯಲಾಗಿದೆ.

★ ★ ★

ಬಿಕಿನಿ ಸಮಸ್ಯೆ

ಕ್ಯಾಮಿಲಿಯೋಗೆ ಇಪ್ಪತ್ಮೂರು ವರ್ಷ. ಮೆಕ್ಸಿಕೋದಲ್ಲಿ ಕಾನೂನು ವಿದ್ಯಾರ್ಥಿನಿ. ಈಚೆಗೆ ಗೆಳತಿಯರೊಡನೆ ಪಿಕ್ನಿಕ್‌ಗೆ ತೆರಳಿದ್ದ ಆಕೆ, ನೀರಾಟದಲ್ಲಿ ತೊಡಗಿದ್ದಾಗ ಪೇಚಿನ ಪ್ರಸಂಗ ನಡೆಯಿತು. ತುಂಬಾ ಆಸೆಪಟ್ಟು ಕೊಂಡಿದ್ದ ಕೆಂಪು ಬಣ್ಣದ ಬಿಕಿನಿ, ನೀರಿನಲ್ಲಿ ತೊಯ್ದದ್ದೇ ಪಾರದರ್ಶಕವಾಗಿಬಿಟ್ಟಿತು. ಹಿಂದೆ ಯಾವ ಪರಪುರುಷನೂ ಕಂಡಿರದಿದ್ದ ಆಕೆಯ ಖಾಸಗಿ ಅಂಗಾಂಗಗಳೆಲ್ಲ ಬಟ್ಟ ಬಯಲಾಗಿ ಎಲ್ಲರೂ ಕಾಣುವಂತಾಯಿತು.

ಸಿಟ್ಟಿಗೆದ್ದ ಕ್ಯಾಮಿಲಿಯೋ ಕೋರ್ಟಿಗೆ ಹೋದಳು. ಉಡುಪು ತಯಾರಿಸಿದ ಕಂಪೆನಿ ಬಿಕಿನಿಯ ಬೆಲೆ 14 ಡಾಲರ್ ಹಾಗೂ ಆಕೆಗೆ ಅವಮಾನಕಾರಿ ಪ್ರಸಂಗಕ್ಕೆ ಕಾರಣವಾದ್ದರಿಂದ 267 ಡಾಲರ್ ನೀಡಬೇಕೆಂದು ಆದೇಶಿಸಿತು.

★ ★ ★



ಜಯಲಲಿತಾ ಬೆಂಬಲಿಗನ ಶೈಲಿ ಹ್ಯಾಟ್



ಚುನಾವಣಾ ಪೋಸ್ಟರ್ ಅಂಟಿಸಲು ಈ ಸರ್ಕಸ್

ಅಂತೂ ಬಂತು ಡಿಗ್ರಿ

ಪನಾಮಾ ವಿಶ್ವವಿದ್ಯಾಲಯ 72ರ ರುಫಿನೋ ಫರ್ನಾಂಡಿಸ್‌ಗೆ ಇತ್ತೀಚೆಗೆ ಡಿಗ್ರಿ ದಯಪಾಲಿಸಿದೆ. ಈತ 1956ರಲ್ಲಿ ಸಾರ್ವಜನಿಕ ಆಡಳಿತ ಮತ್ತು ವಾಣಿಜ್ಯ ಶಾಸ್ತ್ರ ಕೋರ್ಸ್‌ಗೆ ಸೇರಿದ್ದ. ಅಂದಿನಿಂದ ಮನೆಯಲ್ಲಿ ಒಂದಲ್ಲ ಒಂದು ತಾಪತ್ರಯ. ಹಾಗಾಗಿ ಪರೀಕ್ಷೆ ಸರಿಯಾಗಿ ಬರೆಯುವುದು ಆಗುತ್ತಿರಲಿಲ್ಲ ಎಂದು ಫರ್ನಾಂಡಿಸ್ ಹೇಳಿದ್ದಾನೆ. ಅಂತೂ 43 ವರ್ಷದ ನಂತರವಾದರೂ ಡಿಗ್ರಿ ಬಂತಲ್ಲ ಎಂಬುದೇ ಆತನ ಸಮಾಧಾನ.

★ ★ ★

ಹುಡುಗಾಟ

ದಕ್ಷಿಣ ಆಫ್ರಿಕಾದ ಕೇಪ್‌ಟೌನ್ ಸಮೀಪದ ಹೆದ್ದಾರಿಯಲ್ಲಿ ಬೆತ್ತಲೆಯಾಗಿ ಗಾಯಗೊಂಡು ಬಿದ್ದಿದ್ದ ವ್ಯಕ್ತಿಯೊಬ್ಬ ಕಂಡ. ಇಪ್ಪತ್ತೊಂದು ವರ್ಷದ ಈ ವೆಲ್ಷ್ ಪ್ರವಾಸಿ ಇಂಜಿನಿಯರಿಂಗ್ ವಿದ್ಯಾರ್ಥಿ. ತನ್ನ ಜೊತೆಯವರೊಂದಿಗೆ ಪಿಕ್ನಿಕ್‌ಗೆ ಬಂದಿದ್ದ ಈತ, ಅವರ ಹುಡುಗಾಟಕ್ಕೆ ಬಲಿಯಾಗಿ ಹೀಗೆ ರಸ್ತೆಗೆ ಬಿದ್ದಿದ್ದ.

ಹುಡುಗಾಟಕ್ಕಾಗಿ ಆತನ ಜೊತೆಯವರು ಇವನನ್ನು ಬೆತ್ತಲೆಗೊಳಿಸಿ, ಆತನ ಬೆತ್ತಲೆ ಹಿಂಭಾಗ ಪ್ರವಾಸಿಗರಿಗೆ ಕಾಣುವಂತೆ, ಟೂರಿಸ್ಟ್ ಬಸ್‌ನ ಹಿಂಭಾಗದ ಕಿಟಕಿಗೆ ಒತ್ತಿ ಹಿಡಿದಿದ್ದರು. ಅದು ಎಮರ್ಜೆನ್ಸಿ ಪ್ರಸಂಗಗಳಲ್ಲಿ ಪಾರಾಗುವ ಬಾಗಿಲಾಗಿದ್ದು, ಇವರ ಒತ್ತಡದಿಂದಾಗಿ ಫಟ್ಟಂತ ತೆರೆದುಕೊಂಡು, ವಿದ್ಯಾರ್ಥಿ ರಸ್ತೆಯಲ್ಲಿ ಬಿದ್ದುಬಿಟ್ಟ. ಗಾಬರಿ ಬಿದ್ದ ಗೆಳೆಯರು ಬಸ್ ಓಡಿಸಿಕೊಂಡು ಹೋದರು. ಈತ ಬೆತ್ತಲಾಗಿ, ಗಾಯಗೊಂಡು ರಸ್ತೆಯಲ್ಲಿ ಬೀಳಬೇಕಾಯಿತು.

★ ★ ★

ಇಂಟರ್‌ನೆಟ್ ಲಗ್ಗೆ

ಇಂಟರ್‌ನೆಟ್ ಅಗ್ಗಳಿಕೆ ನಿತ್ಯ ಚರ್ಚೆಯ ವಸ್ತು. ಏನು ಮಾಹಿತಿ, ದೃಶ್ಯ ಬೇಕೋ ಎಲ್ಲ ಈಗ ಮನೆಯಲ್ಲಿ ಕುಳಿತಲ್ಲಿಯೇ ಬೆರಳ ತುದಿಯಲ್ಲಿ ಲಭ್ಯ.

ಆದರೆ ಕಿಡಿಗೇಡಿಗಳ ಕೈಗೆ ಸಿಕ್ಕರೆ ಏನಾಗಬಹುದೆಂಬುದಕ್ಕೆ ಈತ್ತೀಚೆಗೆ ಕೆನಡಾದಲ್ಲಿ ಸಣ್ಣದೊಂದು ಉದಾಹರಣೆ ದೊರೆಯಿತು. ಕೆನಡಾದ ದಕ್ಷಿಣದ ಒಂಟಾರಿಯೋ ನಗರದ ವೇಶ್ಯಾವಾಟಿಕೆ ಮೇಲೆ ಪೋಲೀಸರು ದಾಳಿ ನಡೆಸಿದರು. ಅಲ್ಲಿ ಕೆಲವು ವಿಡಿಯೋ ಕ್ಯಾಮರಾಗಳೂ ಪತ್ತೆಯಾದವು. ವೇಶ್ಯಾವಾಟಿಕೆಯಲ್ಲಿ ನಡೆಯುತ್ತಿದ್ದ ಗಂಡು-ಹೆಣ್ಣಿನ ಅತ್ಯಂತ ಆಪ್ತ ಕ್ರಿಯೆಗಳನ್ನು ಸೆರೆ ಹಿಡಿಯುತ್ತಿದ್ದ ಈ ಕ್ಯಾಮರಾಗಳು, ನೇರವಾಗಿ ಇಂಟರ್‌ನೆಟ್‌ನ ವೆಬ್‌ಸೈಟ್‌ಗೆ ರವಾನಿಸುವಂತೆ ವ್ಯವಸ್ಥೆ ಮಾಡಲಾಗಿತ್ತು ಎಂಬುದೂ ಪತ್ತೆಯಾಯಿತು.

ಒಂಟಾರಿಯೇದ ವೇಶ್ಯಾವಾಟಿಕೆಗಳಿಗೆ ಭೇಟಿ ನೀಡಿದ್ದ ಸಜ್ಜನರಿಗೀಗ, ತಮ್ಮ ಖಾಸಗಿ ರಹಸ್ಯ ಕ್ರಿಯೆಗಳೆಲ್ಲಿ ಬಯಲಾಗುತ್ತವೋ ಎಂಬ ಭೀತಿ ಸುತ್ತಿಕೊಂಡಿದೆಯಂತೆ. ■

ಸಾಕು ಪ್ರಾಣಿಗಳ ಬಗ್ಗೆ ಎಚ್ಚರ!

ಸಾಕು ಪ್ರಾಣಿಗಳು, ಎಷ್ಟೇ ಮುದ್ದಾಗಿದ್ದರೂ, ಅವನ್ನು ಸರಿಯಾಗಿ ನೋಡಿಕೊಳ್ಳದೇ ಇದ್ದರೆ ಅಪಾಯ ಕಾದಿದೆ. ಮನೆಗೊಂದು ಸಾಕು ಪ್ರಾಣಿ ಇಂದಿನ ಫ್ಯಾಷನ್ ಆಗುತ್ತಿರುವಾಗ, ಅವುಗಳಿಂದ ಆಗುವ ಹಾನಿಯ ಬಗ್ಗೆಯೂ ತಿಳಿವಳಿಕೆ ಅತ್ಯಗತ್ಯ. ಮುದ್ದಿನ ನಾಯಿ, ಬೆಕ್ಕುಗಳು ಮನೆಯ ಮಕ್ಕಳ ಪ್ರಮುಖ ಸಂಗಾತಿಗಳು. ಆದ್ದರಿಂದಲೇ ಕೆಲವು ರೀತಿಯ ಕಾಯಿಲೆ, ರೋಗಗಳೂ ಕಾಣಿಸಿಕೊಳ್ಳುತ್ತವೆ. ಸರಿಯಾದ ನಿಗಾವಹಿಸದಿದ್ದರೆ ಮುದ್ದಿನ ಸಾಕು ಪ್ರಾಣಿ ಅಪಾಯಕಾರಿ ಆಗಬಲ್ಲದು.



ಪಾಶ್ಚಿಮಾತ್ಯರಲ್ಲಿ ಪ್ರಾಣಿ ಸಾಕುವುದು ಪ್ರಮುಖ ಹವ್ಯಾಸ.
ಮೆರಿಕಾ ಒಂದರಲ್ಲೇ ಒಂದು ಕೋಟಿ ಬೆಕ್ಕುಗಳನ್ನು
ಕಲಾಗುತ್ತಿದೆಯಂತೆ. ಇನ್ನು ನಾಯಿ, ಹೆಬ್ಬಾವು, ಹಕ್ಕಿಗಳು, ಆಮೆ
ಂತಾದ ಪ್ರಾಣಿಗಳನ್ನು ಸಾಕುವವರೂ ಇದ್ದಾರೆ. ಒಂಟಿತನ, ಬೇಸರ
ಗಲು ಮನೆಗಳಲ್ಲಿ ಇಂಥ ಸಂಗಾತಿಯನ್ನು ಬೆಳೆಸುವುದು ಅವರಿಗೆ
ನಿವಾರ್ಯ.

ಭಾರತದ ನಗರಗಳಲ್ಲೂ ಈಗ
ರೀತಿಯ ಹವ್ಯಾಸ ಬೆಳೆಯುತ್ತಿದೆ.
್ರರ, ದರೋಡೆಕೋರರ
ೀತಿಯಿಂದಾಗಿ ಕಾವಲಿಗೆ ನಾಯಿ,
ಕ್ಕಳಿಗೆ, ಮನೆಯವರಿಗೆ ಸಂಗಾತಿ
ಗಲೆಂದು ಸಣ್ಣ ನಾಯಿ,
ಕ್ಕುಗಳನ್ನು ಸಾಕುವವರ ಸಂಖ್ಯೆ
ಕಷ್ಟಿದೆ. ನಾನಾ ವಿಧದ
್ಷಿಗಳನ್ನೂ ಮನೆಯಲ್ಲಿ ಇಟ್ಟು
ಕುವುದುಂಟು. ಗಿಣಿ,
ರಿವಾಳಗಳಿಗೆ ಇಲ್ಲಿ ಆದ್ಯತೆ.

ಮನೆಯಲ್ಲಿ ಹೀಗೆ ಪ್ರಾಣಿಗಳನ್ನು
ಕುವುದು ಸುಲಭವಲ್ಲ. ಅಂಥ
್ರಾಣಿಗಳನ್ನು ಮನೆಯ ಒಬ್ಬ
ದಸ್ಯನಂತೆ ನೋಡಿಕೊಳ್ಳ
ೕಕಾಗುತ್ತದೆ. ಅವಕ್ಕೆ ಅಗತ್ಯವಾದ
ಮತೆ, ಪ್ರೀತಿಯನ್ನು
ತೋರಿಸಬೇಕಾಗುತ್ತದೆ. ಪ್ರಾಣಿಗ
ನ್ನು ಸಾಕುವುದರಿಂದ ಹಲವು
ಮಸ್ಯೆಗಳೂ ಉದ್ಭವವಾಗುತ್ತವೆ.



ಮನೆಯವರೆಲ್ಲ ಒಟ್ಟಾಗಿ ಬೇರೆಡೆಗೋ, ಊರಿಗೋ ಒಂದೆರಡು ದಿನ ಹೋಗಬೇಕಾದರೆ ಇವನ್ನು ಕಟ್ಟಿಕೊಂಡು ಹೋಗುವಂತಿಲ್ಲ. ಬಿಟ್ಟು ಹೋಗುವುದಕ್ಕೂ ಆಗುವುದಿಲ್ಲ.

ಈಗೀಗ ಬೆಂಗಳೂರಂಥ ನಗರಗಳಲ್ಲಿ, ಸಾಕುಪ್ರಾಣಿಗಳನ್ನು ಕೆಲವು ದಿನ ಇಟ್ಟುಕೊಂಡು, ನೋಡಿಕೊಳ್ಳುವ ವೆಟ್ ಕ್ಲಿನಿಕ್‌ಗಳು ಖಾಸಗಿ ವಲಯದಲ್ಲೂ ಆರಂಭವಾಗಿವೆ. ಸ್ವಲ್ಪ ಹಣ ನೀಡಿದರೆ, ಪ್ರಾಣಿಗಳ ಯೋಗಕ್ಷೇಮ ವ್ಯವಸ್ಥಿತವಾಗಿ ನೋಡಿಕೊಳ್ಳುವ ಖಾಸಗಿ ಹಾಗೂ ಸರ್ಕಾರಿ ಪಶು ವೈದ್ಯಶಾಲೆಗಳೇನೋ ಇವೆ.

ಇದೆಲ್ಲಕ್ಕಿಂತ ಮುಖ್ಯ ಎಂದರೆ ಮನೆಯಲ್ಲಿ ಸಾಕುವ ಪ್ರಾಣಿಗಳಿಂದಲೇ ಮನೆಯ ಜನಕ್ಕೆ ನಾನಾ ವಿಧದ ಕಾಯಿಲೆಗಳು ಹರಡುವ ಸಾಧ್ಯತೆ ಇರುತ್ತದೆ. ಮನೆಯಲ್ಲಿ ಸಣ್ಣ ಮಕ್ಕಳಿದ್ದರಂತೂ ಪ್ರಾಣಿಗಳೊಡನೆ ಸದಾ ಆಟವಾಡುತ್ತಾ ಇರುತ್ತಾರೆ. ಕಾಯಿಲೆಯಾಗಿರುವ ಅಥವಾ ನಾನಾ ರೀತಿಯ ರೋಗಾಣುಗಳನ್ನು ಹೊಂದಿರುವ ಸಾಕು ಪ್ರಾಣಿಯಿಂದ ಮಕ್ಕಳಿಗೆ, ದೊಡ್ಡವರಿಗೆ ಸೋಂಕು ತಗಲಬಹುದು. ಇದು ಬಹುದೊಡ್ಡ ಅಪಾಯ. ಹಾಗೆ ತಗಲಬಹುದಾದ ಹಲವು ರೀತಿಯ ಸೋಂಕು ಕಾಯಿಲೆಗಳನ್ನು ಇಲ್ಲಿ ಪಟ್ಟಿ ಮಾಡಲಾಗಿದೆ. ಹೀಗೆ ಪ್ರಾಣಿಗಳಿಂದ ಮನುಷ್ಯರಿಗೆ ಹರಡುವ ಕಾಯಿಲೆಗೆ ಇಂಗ್ಲಿಷ್‌ನಲ್ಲಿ '200 noses' ಎನ್ನುತ್ತಾರೆ.

ಬೆಕ್ಕಿನ ಪರಚುವಿಕೆ ರೋಗ : ಇದೊಂದು ಬ್ಯಾಕ್ಟೀರಿಯಾದಿಂದ ಹರಡುವ ರೋಗ. ಇದು ಮನುಷ್ಯರಿಗೆ ಸೋಂಕಿದಾಗ ಜ್ವರ ಕಾಣಿಸಿಕೊಳ್ಳುತ್ತದೆ. ಚರ್ಮ ಕೆಂಪೇರಿ, ಉರಿತ ಕಾಣಿಸಿಕೊಳ್ಳುತ್ತದೆ.

ಬೆಕ್ಕುಗಳ ಉಗುರ ಸಂದಿಯಲ್ಲಿ ಬ್ಯಾಕ್ಟೀರಿಯಾಗಳು ಇರುತ್ತವೆ. ಬೆಕ್ಕು ಮನುಷ್ಯರನ್ನು ಪರಚಿದಾಗ, ಮೈಮೇಲೆ ಸಣ್ಣ ಗಾಯವೋ, ಗೀರೋ, ತರಚೋ ಆಗಿದ್ದು, ಆ ಭಾಗವನ್ನು ಬೆಕ್ಕು ನಾಲಗೆಯಿಂದ ನೆಕ್ಕಿದಾಗಲೂ ಬ್ಯಾಕ್ಟೀರಿಯಾಗಳು ಮನುಷ್ಯರಿಗೆ ವರ್ಗಾವಣೆಯಾಗುತ್ತವೆ. ಬೆಕ್ಕು ಪರಚಿ ಗಾಯವಾದಾಗ ಕೂಡಲೇ ಆಂಟಿಸೆಪ್ಟಿಕ್‌ಗಳಿಂದ ಗಾಯವನ್ನು ತೊಳೆಯಬೇಕು. ತೀರಾ ಆಳವಾದ ಗಾಯವಾಗಿದ್ದರೆ ವೈದ್ಯರಿಗೆ ತೋರಿಸುವುದು ಒಳ್ಳೆಯದು.

ಈ ರೋಗದ ಸೋಂಕು ತಗಲಿದೆ ಎಂದು ತಿಳಿಯುವುದು ಸುಲಭ. ಸೋಂಕು ತಗಲಿದ್ದರೆ ಆ ಭಾಗದ ಚರ್ಮ ಕೆಂಪಾಗಿ, ಉರಿ ಕಾಣಿಸಿಕೊಳ್ಳುತ್ತದೆ. ಬೆಕ್ಕು ಪರಚಿ ಆದ ಗಾಯ ತೊಳೆಯಲು ಡೆಟ್ಟಾಲ್ ಮುಂತಾದ ಆಂಟಿಸೆಪ್ಟಿಕ್‌ಗಳು ತಕ್ಷಣ ಮನೆಯಲ್ಲಿ ದೊರೆಯದಿದ್ದರೂ ಚಿಂತೆ ಇಲ್ಲ. ಶುದ್ಧ ನೀರು ಮತ್ತು ಸೋಪು ಬಳಸಿ ಚೆನ್ನಾಗಿ ತೊಳೆದರೂ ಆಯಿತು. ಇದೆಲ್ಲಕ್ಕಿಂತ ಮುಖ್ಯವಾಗಿ ಸಾಕಿದ ಬೆಕ್ಕು ಪರಚುವ ಅಭ್ಯಾಸ ಮಾಡಿಕೊಳ್ಳದಂತೆ ನೋಡಿಕೊಳ್ಳಬೇಕು.

ಜಾನುವಾರು ರೋಗ : ಇದಕ್ಕೆ ಇಂಗ್ಲಿಷಿನಲ್ಲಿ 'ಬ್ರುಸೆಲೋಸಿಸ್' ಎನ್ನುತ್ತಾರೆ. ಇದು ಕಾಣಿಸಿಕೊಂಡಾಗ ಜ್ವರ ಕಾಡುತ್ತದೆ. ಜೊತೆಗೆ ಒಂದೇ ಸಮನೆ ಬೆವರು ತಲೆನೋವು, ಮೈಕೈ, ಅದರಲ್ಲೂ ಕೀಲುಗಳಲ್ಲಿ ನೋವು ಕಾಣಿಸಿಕೊಳ್ಳುತ್ತದೆ. ಇದಕ್ಕೆ ಆದಷ್ಟು ಬೇಗ ಚಿಕಿತ್ಸೆ ನೀಡುವುದು ಒಳ್ಳೆಯದು.

ರೋಗಪೀಡಿತ ಹಸು, ಎಮ್ಮೆಯ ಹಾಲನ್ನು ಕುದಿಸದೇ ಹಾಗೇ ಸೇವಿಸಿದಾಗ, ಅದರಲ್ಲಿರುವ ರೋಗಾಣುಗಳಿಂದ ಈ ರೋಗ ಕಾಣಿಸಿಕೊಳ್ಳುತ್ತದೆ. ಮೇಲುನೋಟಕ್ಕೆ ಹಾಲು ನೀಡುವ ಪ್ರಾಣಿ ಆರೋಗ್ಯವಂತವಾಗಿ ಕಂಡರೂ, ಒಳಗೇ ರೋಗಾಣುಗಳು ಇದ್ದಿರಬಹುದು. ಆದಷ್ಟು ಹಾಲನ್ನು ಕಾಯಿಸಿ ಕುಡಿಯುವುದೇ ಒಳ್ಳೆಯದು. ಕೇವಲ ಹಾಲಿನಿಂದ ಮಾತ್ರವಲ್ಲ ನಾವು ಸಾಕುವ ಹಸು, ಕರು, ಅವು ಹಾಕುವ ಸಗಣಿ, ಗಂಜಲದಲ್ಲಿ ಇರುವ ಬ್ಯಾಕ್ಟೀರಿಯಾಗಳು ಗಾಳಿಯಲ್ಲಿ ತೇಲಿಬಂದು ಉಸಿರೊಂದಿಗೆ ದೇಹವನ್ನು ಪ್ರವೇಶಿಸಬಹುದು. ಕಾಯಿಲೆ ಬಂದ ಕೂಡಲೇ ವೈದ್ಯನಿಂದ ಚಿಕಿತ್ಸೆ ಪಡೆಯದೇ ಇದ್ದಲ್ಲಿ ಉಲ್ಬಣಗೊಳ್ಳುತ್ತದೆ. ವ್ಯಕ್ತಿ ತೀರಾ ದುರ್ಬಲನಾಗಿದ್ದಲ್ಲಿ ಮಾರಕ ಪರಿಣಾಮಗಳಾಗಬಹುದು. ಸಾಮಾನ್ಯವಾಗಿ ಕಾಯಿಲೆ ಕಾಣಿಸಿದ ಕೂಡಲೇ ಚಿಕಿತ್ಸೆ ಪಡೆಯದಿದ್ದಲ್ಲಿ ಅದು ಬ್ರಾಂಕೈಟಿಸ್, ಮೆನೆಂಜೈಟಿಸ್‌ನಂಥ ರೋಗಗಳಿಗೆ ಕಾರಣವಾಗುತ್ತದೆ. ಆದ್ದರಿಂದ ಮನೆಯಲ್ಲಿ ಜಾನುವಾರು ಮತ್ತು ಇತರ ಸಾಕುಪ್ರಾಣಿಗಳನ್ನು ಹೊಂದಿರುವವರು ಈ ಬಗ್ಗೆ ಅಗತ್ಯ ಎಚ್ಚರ ತೆಗೆದುಕೊಳ್ಳಬೇಕು.



ರೇಬೀಸ್ : ಪ್ರಾಣಿಯ ಕಡಿತದಿಂದ ರೇಬೀಸ್ ಬರುತ್ತದೆ. ಕಚ್ಚಿದ್ದು ಮನೆಯಲ್ಲಿಯೇ ಸಾಕಿದ ಪ್ರಾಣಿ ಇರಬಹುದು. ಕಾಡಿನ ಅಥವಾ ಬೀದಿಯ ಪ್ರಾಣಿ ಇರಬಹುದು. ಮೆದುಳಿಗೆ ಹಾನಿ ಉಂಟುಮಾಡುವ ರೇಬೀಸ್ ವೈರಸ್ ತೀರಾ ಅಪಾಯಕಾರಿ.

ಸಾಕಿದ ಪ್ರಾಣಿಗಳಿಗೆ ಈ ವೈರಸ್ ಸೋಂಕು ತಗಲದಂತೆ ಸೂಕ್ತ ಚುಚ್ಚುಮದ್ದು ಕೊಡಿಸುವುದು ಅಗತ್ಯ.

ಯಾವುದೇ ಅಪರಿಚಿತ ಪ್ರಾಣಿ ಕಚ್ಚಿದಾಗಲೂ ಕೂಡಲೇ ವೈದ್ಯರನ್ನು ಕಂಡು ಸೂಕ್ತ ಚಿಕಿತ್ಸೆ ಪಡೆಯುವುದು ಅಗತ್ಯ.

ಹುಳುಕಡ್ಡಿ : ನಾಯಿ, ಬೆಕ್ಕು ಮುಂತಾದ ಸಾಕುಪ್ರಾಣಿಗಳಲ್ಲಿ ಮನೆ ಮಾಡಿರುವ ಹುಳುಕಡ್ಡಿಗೆ ಕಾರಣವಾಗುವ ಕೀಟಗಳು ಮನುಷ್ಯರಿಗೂ ತಗಲಬಹುದು. ನಾಯಿ, ಬೆಕ್ಕುಗಳು ಮೈಯನ್ನೆಲ್ಲ ಕೆರೆದುಕೊಳ್ಳುವಾಗ ಈ ಕೀಟಗಳು ಉದುರಿ ಮನುಷ್ಯರ ಸಂಪರ್ಕಕ್ಕೆ ಬರುತ್ತವೆ. ಅದರಲ್ಲೂ ಪ್ರಾಣಿಗಳ ಜೊತೆ ಆಟವಾಡುವ ಮಕ್ಕಳಿಗೆ ಇವು ಬೇಗ ತಗಲಬಹುದು. ಆ ರೀತಿ ಕೀಟಗಳು ಮನುಷ್ಯ ಸಂಪರ್ಕಕ್ಕೆ ಬಂದ ಕೂಡಲೇ ತೀವ್ರ ಸ್ವರೂಪದ ಪರಿಣಾಮ ತಕ್ಷಣವೇ ಗೋಚರಿಸದೇ ಇರಬಹುದು.

ಒಂದು ಬಗೆಯ ಫಂಗಸ್‌ನಿಂದ ಹುಳುಕಡ್ಡಿ ಹಬ್ಬುವುದರಿಂದ, ಚರ್ಮದಲ್ಲಿ ಕಡಿತದ ಬಾಧೆ ಕೆರೆತ ಕಾಣಿಸಿಕೊಂಡು ವ್ಯಾಪಿಸುತ್ತಾ ಹೋಗಬಹುದು. ಇದನ್ನು ಮೊದಲ ಹಂತದಲ್ಲಿಯೇ ಪತ್ತೆ ಹಚ್ಚಿ ಸಾಕಿದ ಪ್ರಾಣಿ ಹಾಗೂ ಸಂಪರ್ಕದಿಂದ ಸೋಂಕು ಪಡೆದ ವ್ಯಕ್ತಿ ಇಬ್ಬರಿಗೂ ಸೂಕ್ತ ಚಿಕಿತ್ಸೆ ಮಾಡಿಸಬೇಕು.

ಜಂತು ಹುಳು : ಸಣ್ಣ ಮಕ್ಕಳಲ್ಲಿ ಕೈಗೆ ಸಿಕ್ಕಿದ್ದನ್ನು ಬಾಯಿಗಿಟ್ಟುಕೊಳ್ಳುವ ಅಭ್ಯಾಸ ಇರುತ್ತದೆ. ಕೆಲವು ಮಕ್ಕಳು ನೆಲದಲ್ಲಿನ ಕಸ, ಮಣ್ಣು ಎಲ್ಲ ಬಾಯಿಗಿಟ್ಟುಕೊಳ್ಳುತ್ತವೆ. ಅಂಥ ಸಂದರ್ಭಗಳಲ್ಲಿ ಪ್ರಾಣಿಗಳಿಂದ ವಿಸರ್ಜಿತವಾದ ಜಂತು ಹುಳುವಿನ ಮೊಟ್ಟೆಗಳು ಮಣ್ಣು ಅಥವಾ ಧೂಳಿನಲ್ಲಿದ್ದು, ಅವು ಮಗುವಿನ ದೇಹ ಪ್ರವೇಶಿಸುತ್ತವೆ. ಮಗು ಮತ್ತು ಸಾಕು ಪ್ರಾಣಿ ಎರಡನ್ನೂ ವೈದ್ಯರ ಚಿಕಿತ್ಸೆಗೆ ಗುರಿ ಮಾಡಿ, ದೇಹದೊಳಗಿನ ಹುಳುಗಳೆಲ್ಲ ಹೊರಬೀಳುವಂತೆ ಮಾಡಬೇಕು. ಕಂಡದ್ದನ್ನೆಲ್ಲ ಬಾಯಿಗಿಟ್ಟುಕೊಳ್ಳುವ, ಮಣ್ಣು ತಿನ್ನುವ ಮಗುವಿನ ಅಭ್ಯಾಸ ಮೊದಲು ಬಿಡಿಸಬೇಕು.

ಸಾಲ್ಮೋವೆಲ್ಲಾ : ಸಾಲ್ಮೋವೆಲ್ಲ ಎಂಬುದು ಕರುಳಿನ ಸೋಂಕಿಗೆ ಕಾರಣವಾಗುವ ಬ್ಯಾಕ್ಟೀರಿಯಾ. ಈ ಬ್ಯಾಕ್ಟೀರಿಯಾ ಸಾಕು ಪ್ರಾಣಿಗಳಿಗೆ ಏನೂ ಮಾಡುವುದಿಲ್ಲ. ಆದರೆ ಮನುಷ್ಯನ ಮೇಲೆ ತೀವ್ರರೀತಿಯ ದುಷ್ಪರಿಣಾಮ ಉಂಟು ಮಾಡುತ್ತವೆ. ಪ್ರಾಣಿಗಳ ಸಂಪರ್ಕದಿಂದ ಸಾಲ್ಮೋವೆಲ್ಲಾ ಬ್ಯಾಕ್ಟೀರಿಯಾ ಮನುಷ್ಯನ ದೇಹ ಪ್ರವೇಶಿಸುತ್ತದೆ. ಮೊದಲು ಹೊಟ್ಟೆನೋವು ಕಾಣಿಸಿಕೊಳ್ಳುತ್ತದೆ. ಆನಂತರ ರಕ್ತ ಬೇಧಿ ಪ್ರಾರಂಭವಾಗುತ್ತದೆ. ಜೊತೆಗೆ ಜ್ವರ ಬರುತ್ತದೆ. ಎರಡು ಮೂರು ದಿನ ಬೇಧಿ ಕಾಡಬಹುದು. ಆ ನಂತರವೂ ಜ್ವರ ಮುಂದುವರಿಯುತ್ತದೆ. ಅದು ಎರಡು ಮೂರು ವಾರಗಳವರೆಗೂ ಮುಂದುವರಿಯಬಹುದು. ಸಾಕು ಪ್ರಾಣಿಗಳನ್ನು ಶುಭ್ರವಾಗಿ ಇಡುವುದು, ಅವುಗಳ ಗೂಡುಗಳನ್ನು ಚೊಕ್ಕಟವಾಗಿ ಇರಿಸುವುದರಿಂದ ಸಾಲ್ಮೋನೆಲ್ಲಾ ಬ್ಯಾಕ್ಟೀರಿಯಾ ಸೋಕದಂತೆ ತಡೆಯುವುದು ಸಾಧ್ಯ.

ಸಾಕುಪ್ರಾಣಿಗಳ ಸಂಪರ್ಕಕ್ಕೆ ಬಂದಾಗ, ಅವುಗಳ ಶುಚಿತ್ವ ಕೈಗೊಂಡ ನಂತರ ಕೈಗಳನ್ನು ಚೆನ್ನಾಗಿ ತೊಳೆದುಕೊಳ್ಳುವುದು ಬಹಳ ಮುಖ್ಯ.

ಟ್ಯಾಕ್ಸೊಪ್ಲಾಸ್ಮಾಸಿಸ್ : ಸಾಮಾನ್ಯವಾಗಿ ಬೆಕ್ಕುಗಳಿಂದ ಹರಡುವ ರೋಗ ಇದು. ಬೆಕ್ಕುಗಳು ಇಲಿ, ಜಿರಳೆ ಮುಂತಾದುವನ್ನು ತಿನ್ನುವುದರಿಂದ ಈ ಸೋಂಕು ತಗಲುತ್ತದೆ. ನಾವು ತಿನ್ನುವ ಆಹಾರದಿಂದಲೂ ಇದು ಬರಬಹುದು. ಸರಿಯಾಗಿ ಬೇಯಿಸದ ಮಾಂಸ, ತೊಳೆಯದೇ ಬಳಸುವ ತರಕಾರಿ ಕೂಡ ಇದಕ್ಕೆ ಕಾರಣ.

ಟ್ಯಾಕ್ಸೋ ಪ್ಲಾಸ್ಮಾಸಿಸ್ ಕೆಲವು ವೇಳೆ ಗಂಭೀರವಾಗಲೂಬಹುದು. ಅದರಲ್ಲೂ ಗರ್ಭಿಣಿ ಸ್ತ್ರೀಯರ ಮೇಲೆ ಇದು ಗಂಭೀರ ಪರಿಣಾಮ ಬೀರುವುದುಂಟು. ಜ್ವರ, ಸುಸ್ತು ಪ್ರಮುಖ ಲಕ್ಷಣಗಳು, ತೀರಾ ಜಾಸ್ತಿಯಾದಾಗ ಗರ್ಭಿಣಿಯರಲ್ಲಿ ಗರ್ಭಸ್ರಾವವೂ ಆಗಬಹುದು. ಕೆಲವೊಮ್ಮೆ ಗರ್ಭಸ್ಥ ಶಿಶುವಿನ ಮೇಲೆ ಪರಿಣಾಮವಾಗಿ ವಿಕಲಾಂಗ ಅಥವಾ ದೋಷಪೂರಿತ ಮಗುವಿನ ಜನನಕ್ಕೆ ಕಾರಣವೂ ಆಗಬಹುದು. ಬೆಕ್ಕುಗಳು ಮನೆಬಿಟ್ಟು ಹೋಗಿ ಬೇಟೆಯಾಡಿ ಆಹಾರ ಪಡೆಯದಂತೆ ನೋಡಿಕೊಳ್ಳುವುದರಿಂದ ಈ ರೋಗ ಬರದಂತೆ ತಡೆಯಬಹುದು. ಕಸದ ಬುಟ್ಟಿಯಲ್ಲಿ, ತೊಟ್ಟಿಯಲ್ಲಿ ಆಹಾರ ಹುಡುಕಿಕೊಳ್ಳುವ ಬೆಕ್ಕು ಕೂಡ ಈ ಅಪಾಯಕಾರಿ ರೋಗಕ್ಕೆ ಕಾರಣ ಎಂಬುದು ಮರೆಯಬಾರದು.

ಗಿಣಿ ಜ್ವರ : ಸಿಟಾಕೋಸಿಸ್ ಎಂದು ಕರೆಯಲಾಗುವ ಈ ಜ್ವರ ಹೆಚ್ಚಾಗಿ ಗಿಣಿ, ಸಾರಿವಾಳ ಮುಂತಾದ ಪಕ್ಷಿಗಳಿಂದಾಗಿ ಬರುತ್ತದೆ. ಜ್ವರ, ಕೆಮ್ಮು ಹಾಗೂ ತೀವ್ರ ಥರದ ತಲೆನೋವು ಇದರ ಪ್ರಮುಖ ಲಕ್ಷಣಗಳು, ಮೊದಲು ಕಾಣಿಸಿಕೊಂಡಾಗ ಅಷ್ಟೇನೂ ಹಾನಿ ಆಗದು. ಆದರೆ ಇದು

ಏನೋ ಸಾಮಾನ್ಯ ಅನಾರೋಗ್ಯ ಎಂದು ಭಾವಿಸಿ ಮುಂದುವರಿಯಲು ಬಿಟ್ಟರೆ ತೀವ್ರ ರೀತಿಯ ಪರಿಣಾಮಗಳಾಗುವ ಸಾಧ್ಯತೆ ಇದೆ.

ಸೋಂಕು ತಗುಲಿದ ಹಕ್ಕಿಗಳ ಹಿಕ್ಕೆಯಿಂದ ಈ ರೋಗ ಮನುಷ್ಯರಿಗೂ ಬರುತ್ತದೆ. ಮನೆಯಲ್ಲಿ ಸಾಕುವ ಹಕ್ಕಿಗಳ ಗೂಡುಗಳನ್ನು ಶುಚಿಯಾಗಿ ಇಟ್ಟುಕೊಳ್ಳುವುದು ಅತಿ ಮುಖ್ಯ. ಹಕ್ಕಿಗೂಡುಗಳನ್ನು ಚೊಕ್ಕಟಗೊಳಿಸಿದ ನಂತರ ಕೈ, ಕಾಲು ಚೆನ್ನಾಗಿ ತೊಳೆದುಕೊಳ್ಳಬೇಕು. ಹಕ್ಕಿಗಳನ್ನು ಮುಟ್ಟಿ, ಅವನ್ನು ಪರಿಪಾಲಿಸಿದ ನಂತರ ಸೋಪು ಹಾಕಿ ಚೆನ್ನಾಗಿ ಕೈ ತೊಳೆಯಬೇಕು. ಹಕ್ಕಿಗಳಲ್ಲಿ ರೋಗದ ಲಕ್ಷಣ ಗೋಚರಿಸಿದರೆ, ಅವುಗಳನ್ನು ಇತರ ಹಕ್ಕಿಗಳಿಂದ ಬೇರ್ಪಡಿಸಿ ಇಡುವುದು ಒಳ್ಳೆಯದು.

ಮುನ್ನೆಚ್ಚರಿಕೆ : ಸಾಕು ಪ್ರಾಣಿಗಳನ್ನು ಇಷ್ಟಪಡುವವರು ಹಲವಾರು ಮುಂಜಾಗರೂಕತಾ ಕ್ರಮ ಕೈಗೊಳ್ಳಬೇಕು. ಪ್ರಾಣಿಗಳ ಆರೋಗ್ಯದ ಬಗ್ಗೆ ಸದಾ ಕಾಳಜಿಯಿಂದ ಇರುವುದು ಅತ್ಯಗತ್ಯ. ಪ್ರಾಣಿಗಳನ್ನು ಮನೆಗೆ ತರುವಾಗಲೇ ಅವು ಆರೋಗ್ಯಪೂರ್ಣವಾಗಿವೆ ಎಂದು ಖಾತರಿ ಮಾಡಿಕೊಳ್ಳಬೇಕು. ಮಿನುಗುವ ಕಣ್ಣು, ಚುರುಕಾದ ಕಿವಿ, ಹೊಳೆಯುವ ಮೈಚರ್ಮ, ತುಪ್ಪಳ, ಆರೋಗ್ಯಪೂರ್ಣ ವಸಡು ಇಂಥ ಒಳ್ಳೆಯ ಲಕ್ಷಣಗಳನ್ನು ಗಮನಿಸಿಯೇ ಸಾಕುಪ್ರಾಣಿಗಳನ್ನು ಆರಿಸಿ ಮನೆಗೆ ತರಬೇಕು. ಹಾಗೆ ಆರಿಸಿ ತಂದ ಪ್ರಾಣಿಗಳನ್ನು ಪಶುವೈದ್ಯರಿಗೆ ಒಮ್ಮೆ ತೋರಿಸಿ ರೋಗ ನಿರೋಧಕ ಚುಚ್ಚುಮದ್ದು ಕೊಡಿಸುವುದಲ್ಲದೇ, ಅವರು ನೀಡುವ ಸಲಹೆ ಸೂಚನೆಗಳನ್ನು ಕಾಲಕಾಲಕ್ಕೆ ಅನುಸರಿಸುವುದು ಅಗತ್ಯ.

ಹೊಣೆಗಾರಿಕೆ : ಸಾಕು ಪ್ರಾಣಿಗಳನ್ನು ಮನೆಗೆ ತರುವುದು ದೊಡ್ಡ ಜವಾಬ್ದಾರಿ. ಅವು ಮನೆಯ ಇನ್ನೊಂದು ಸದಸ್ಯ ಎಂದೇ ಭಾವಿಸಬೇಕಾಗುತ್ತದೆ. ಏನೋ ಹಾಕಿದ್ದು ತಿಂದುಕೊಂಡು, ಮನೆಯ ಮೂಲೆಯಲ್ಲಿ ಬಿದ್ದುಕೊಂಡಿರುತ್ತವೆ ಎಂಬ ಧೋರಣೆ ಸರ್ವಥಾ ಸರಿಯಲ್ಲ. ಒಮ್ಮೆ ಮನೆಗೆ ಬಂದ ಪ್ರಾಣಿಗೆ ಬದುಕಿರುವಷ್ಟು ಕಾಲ ಮನುಷ್ಯರ ಆರೈಕೆ ಬೇಕೇ ಬೇಕು. ಅದರ ಜವಾಬ್ದಾರಿಯನ್ನು ಗಂಭೀರವಾಗಿ ತೆಗೆದುಕೊಳ್ಳುವ ಹಾಗಿದ್ದರೆ ಮಾತ್ರ ಪ್ರಾಣಿಗಳನ್ನು ಸಾಕಲು ಮುಂದಾಗಬೇಕು. ಮನೆಯ ಮಕ್ಕಳನ್ನು ನೋಡಿಕೊಳ್ಳುವ ಹಾಗೆ ಅವನ್ನೂ ನೋಡಿಕೊಳ್ಳಬೇಕು. ಅವಕ್ಕೂ ತಾಜಾ ಆಹಾರ, ಶುದ್ಧ ನೀರು ದೊರೆಯಬೇಕು. ಸಾಕು ಪ್ರಾಣಿಗಳು ಯಾವಾಗ ಬೇಕಾದರೂ ಕುಡಿಯಲು ಶುದ್ಧ ನೀರನ್ನು ಒಂದೆಡೆ ಪಾತ್ರೆಯಲ್ಲಿ ಇರಿಸಿರಬೇಕಾಗುತ್ತದೆ.

ನಾಯಿ, ಬೆಕ್ಕುಗಳ ಮೈಯನ್ನು ಆಗಿಂದಾಗ್ಗೆ ಬ್ರಷ್ ಮಾಡುತ್ತಾ ಇರಬೇಕಾಗುತ್ತದೆ. ಮೈಗೂದಲು ಹೆಚ್ಚಾಗಿ ಬೀಳಲಾರಂಭಿಸಿದರೆ, ಯಾವುದೋ ಅನಾರೋಗ್ಯ ಕಾಣಿಸಿದೆ ಎಂಬುದರ ಸೂಚನೆ. ಅದು ನಾನಾ ರೀತಿಯ ಅಜೀರ್ಣದ ಸೂಚನೆ ಇರಬಹುದು.

ನಾಯಿಗಳಿದ್ದರೆ ಅವನ್ನು ಒಂದೆಡೆ ಕಟ್ಟಿಹಾಕುವುದಲ್ಲ. ನಿತ್ಯವೂ ಅವುಗಳಿಗೆ ಸೂಕ್ತ ವ್ಯಾಯಾಮ, ವಾಕಿಂಗ್ ಅತ್ಯಗತ್ಯ. ಅವುಗಳಿಗೆ ತಮ್ಮದೇ ಚೊಕ್ಕಟವಾದ ವಾಸದ ಗೂಡು ಕೊಡಬೇಕು. ಅವು ಎಲ್ಲೆಂದರಲ್ಲಿ ಇರುವುದು ಜೊತೆಯ ಮನುಷ್ಯರಿಗೂ ಅಪಾಯಕಾರಿ ಆಗಬಲ್ಲದು. ಇಂಥ ಸಾಮಾನ್ಯ ಎಚ್ಚರಿಕೆ, ಒಂದಿಷ್ಟು ಕಾಳಜಿ ಇದ್ದರೆ ಮಾತ್ರ ಸಾಕುಪ್ರಾಣಿಗಳೊಡನೆ ಸಹಜೀವನ ಆನಂದದಾಯಕ ಆಗಬಲ್ಲದು.

(ಆಧಾರ:ಇನ್‌ಸೈಟ್) ■

ಖ್ಯಾತನಾಮರ ಚತುರೋಕ್ತಿಗಳು

1931ರಲ್ಲಿ ಗಾಂಧಿಯವರು ಇಂಗ್ಲೆಂಡಿಗೆ ದುಂಡುಮೇಜಿನ ಪರಿಷತ್ತಿಗೆ ಹೋಗಿದ್ದಾಗ ಇಂಗ್ಲೆಂಡಿನ ದೊರೆ ಐದನೆಯ ಜಾರ್ಜ್ ಮತ್ತು ಮಹಾರಾಣಿ ಕ್ವೀನ್ ಮೇರಿಯವರು ಗಾಂಧೀಜಿಯ ಗೌರವಾರ್ಥವಾಗಿ ಒಂದು ಔತಣಕೂಟವನ್ನು ಏರ್ಪಡಿಸಿ ಅವರನ್ನು ಸಾದರಪೂರ್ವಕವಾಗಿ ರಾಜಭವನಕ್ಕೆ ಆಹ್ವಾನಿಸಿದ್ದರು.

ಸಮಾರಂಭಕ್ಕೆ ಗಾಂಧೀಜಿ ಅದೆಂಥ ಉಡುಪನ್ನು ಧರಿಸಿ ಹೋಗುವರೋ ಎಂದು ಎಲ್ಲರೂ ಕುತೂಹಲ ಭರಿತರಾಗಿ ಮೈಯೆಲ್ಲ ಕಣ್ಣಾಗಿ ನೋಡುತ್ತಿದ್ದರು.

ಆದರೆ ಗಾಂಧೀಜಿ ಎಂದಿನಂತೆ ತಮ್ಮ ಮಾಮೂಲಿ ಉಡುಪಿನಲ್ಲೇ ಹೋದರು. ಉಡಲು ಖದ್ದರಿನ ಒಂದು ಸಣ್ಣ ತುಂಡು ಪಂಚೆ ಹೊದೆಯಲು ಒಂದು ಸಾಮಾನ್ಯವಾದ ಉತ್ತರೀಯ ಧರಿಸಿ, ಔತಣಕೂಟದಲ್ಲಿ ಭಾಗವಹಿಸಿ ತಮ್ಮ ಸರಳತೆಯಿಂದ ಸೌಜನ್ಯತೆಯಿಂದ ಆಹ್ವಾನಿತರೆಲ್ಲರ ಮೆಚ್ಚುಗೆಗೆ ಪಾತ್ರರಾದರು.

ಆ ಸಮಾರಂಭಕ್ಕೆ ಬಂದಿದ್ದ ಒಬ್ಬ ಪತ್ರಕರ್ತ ಮಾತ್ರ ಗಾಂಧೀಜಿಯನ್ನು ಕುರಿತು - ''ಬಾಪೂಜೀ! ನೀವು ಒಬ್ಬ ದೊಡ್ಡ ಚಕ್ರವರ್ತಿ ನೀಡುವ ಔತಣಕೂಟಕ್ಕೆ ಇಷ್ಟೊಂದು ಸರಳವಾದ ಉಡುಪಿನಲ್ಲಿ ಬಂದಿರುವಿರಲ್ಲ! ಇದು ನಿಮಗೆ ಒಪ್ಪಿಗೆಯಾಯಿತೆ?'' ಎಂದು ಪ್ರಶ್ನಿಸಿದ.

ಅದಕ್ಕೆ ಬಾಪು - ''ಅಲ್ಲಪ್ಪ! ಚಕ್ರವರ್ತಿಗಳ ಮೈಮೇಲೆ ನಮ್ಮಿಬ್ಬರಿಗೂ ಸಾಕಾಗುವಷ್ಟು ಯಥೇಚ್ಛವಾದ ಉಡುಪಿರುವಾಗ ನಾನು ಧರಿಸಿರುವ ನನ್ನ ಈ ಮಾಮೂಲಿ ಉಡುಪು ಸಾಕಲ್ಲವೆ?'' ಎಂದು ಸಮಾರಂಭಕ್ಕೆ ಬಂದಿದ್ದವರನ್ನೆಲ್ಲ ನಗೆಗಡಲಿನಲ್ಲಿ ತೇಲಿಸಿದರಂತೆ.

★

ಗಾಂಧೀಜಿ ಮತ್ತು ಕವಿವರ್ಯ ರವೀಂದ್ರನಾಥ ಟಾಗೂರರು ಪರಮಾಪ್ತ ಮಿತ್ರರು. ಪರಸ್ಪರ ಒಬ್ಬರನ್ನೊಬ್ಬರು ಬಹಳವಾಗಿ ಗೌರವಿಸುತ್ತಿದ್ದರು ಕೂಡ, ಒಮ್ಮೆ ಟಾಗೂರರ ಆಹ್ವಾನದ ಮೇಲೆ ಗಾಂಧೀಜಿ ಶಾಂತಿನಿಕೇತನಕ್ಕೆ ಭೇಟಿ ಕೊಟ್ಟರು.

ಶಾಂತಿನಿಕೇತನದಲ್ಲಿ ಉಳಿದುಕೊಳ್ಳಲು ಗಾಂಧೀಜಿಗೆ ನಿಗದಿಪಡಿಸಿದ್ದ ಕೋಣೆಯನ್ನು ಕಲಾತ್ಮಕವಾಗಿ ಸರ್ವಾಂಗ ಸುಂದರವಾಗಿ ಅಲಂಕರಿಸಲಾಗಿತ್ತು. ಗಾಂಧೀಜಿ ಆ ಕೋಣೆಯನ್ನು ಪ್ರವೇಶಿಸಿ, ಅಲ್ಲಿ ಮಾಡಿದ್ದ ಅಲಂಕಾರ ವಿಶೇಷಗಳಿಗೆ ಬೆರಗಾಗಿ - ''ಇದೇನು! ಹಲ್ಲುಗಳು ಉದುರಿಹೋಗಿರುವ ಮೈಸುಕ್ಕುಗಟ್ಟಿದ ನನ್ನಂಥ ವೃದ್ಧನಿಗೆ ಶೋಭನದ ಕೋಣೆಯನ್ನೂ ನಾಚಿಸುವಂತೆ ಅಲಂಕರಿಸಿದ್ದೀರಲ್ಲ?'' ಎಂದರಂತೆ ನಗುತ್ತ. ಅದಕ್ಕೆ ಕವಿ ಸಾಮ್ರಾಟ್ ರವೀಂದ್ರರು - ''ನಿತ್ಯನವ ಯೌವನವತಿಯಾದ ನಮ್ಮ ಶಾಂತಿನಿಕೇತನಳೇ - ನಿಮ್ಮನ್ನು ವರಿಸಲಿರುವ ಕನ್ಯಾಕುಮಾರಿ!'' - ಎಂದರಂತೆ ನಗುತ್ತ.

''ಹಾಗಾದರೆ ಬಚ್ಚುಬಾಯಿನ ಈ ಮುದುಕನನ್ನು ಒಪ್ಪಿಕೊಳ್ಳುತ್ತಾಳೋ - ನಿಮ್ಮ ನಿತ್ಯ ನೂತನ ವಧು?'' ಕೇಳಿದರಂತೆ ಬಾಪು.

''ಸತ್ಯವನ್ನು ಮಾತ್ರವೇ ಪೂಜಿಸುವ ಗೌರವಿಸುವ ನಮ್ಮ ಕನ್ಯೆಗೆ ವರನ ಬಾಹ್ಯಾಕೃತಿಯ ಸೌಂದರ್ಯದ ಪ್ರಮೇಯವಿಲ್ಲ'' ಟಾಗೂರರ ಸಮಾಧಾನ.

''ಸಧ್ಯ ನನ್ನನ್ನು ಬದುಕಿಸಿದಿರಿ. ಹಲ್ಲುಬಿದ್ದ - ಸುಕ್ಕು ಚರ್ಮದ ನನ್ನಂಥ ಮುದಿಯನಿಗೂ ಹೆಣ್ಣು ಕೊಡುವವರಿದ್ದಾರೆಂದು ಧೈರ್ಯ ಹೇಳುತ್ತಿದ್ದೀರಲ್ಲ'' ಎಂದರು ಬಾಪು.


ಅದೇ ಸಮಯಕ್ಕೆ ಅಲ್ಲಿಗೆ ಒಬ್ಬ ಚಿತ್ರಕಾರ ಒಂದು ತನ್ನ ಕ್ಯಾನ್‌ವಾಸಿನ ಮೇಲೆ ಸುಂದರವಾದ ಬಾಪೂಜಿಯವರ ವರ್ಣಚಿತ್ರ ಬಿಡಿಸಿ ಅದರ ಮೇಲೆ ಸಹಿ ಮಾಡುವಂತೆ ವಿನಂತಿಸಿದ.

ಆಗ ಬಾಪೂಜಿ - ''ಅಲ್ಲಪ್ಪ! ಒಳ್ಳೆಯ ಚಿತ್ರಕಾರ ತನ್ನ ಅಭ್ಯಾಸಕ್ಕಾಗಿ ಪ್ರಮಾಣ ಬದ್ಧವಾದ ಅಂಗಸೌಷ್ಠವ ಹೊಂದಿರುವ ಸುಂದರವಾಗಿರುವವರನ್ನು ಮಾಡಲ್ ಆಗಿ ಆಯ್ಕೆ ಮಾಡಿಕೊಳ್ಳುತ್ತಾರೆ ಎಂದು ಕೇಳಿದ್ದೇನೆ. ಆದರೆ ಇದೇನು! ನೀನು ಹಲ್ಲುಗಳು ಬಿದ್ದು ಹೋದ ಬೋಳುತಲೆಯ ನನ್ನಂಥ ಸಾಮಾನ್ಯವಾದ ಮುದುಕನನ್ನು ಮಾಡಲ್‌ಆಗಿ ಆರಿಸಿಕೊಂಡಿದ್ದೀಯಲ್ಲ!'' ಎಂದು ಮುಗುಳು ನಗುತ್ತ ವರ್ಣ ಚಿತ್ರದ ಮೇಲೆ ತಮ್ಮ ಸಹಿ ಹಾಕಿದರು.

■ ಶಾರದಾತನಯ

ನಿಮ್ಮ ವೈದ್ಯರನ್ನು ಕಾಣುವ ಮುನ್ನ....
ಈ ಲೇಖನ ಓದಿ

■ ಡಾ॥ ವಿನೋದ ಛೆಬ್ಬಿ



ಕಾಯಿಲೆಗಳಿಂದ ದೂರವಿದ್ದು ಆರೋಗ್ಯವಂತರಾಗಿರಲು ವೈದ್ಯಕೀಯ ಸಹಾಯ ಅಗತ್ಯವಿದೆಯೆಂಬುದು ಎಲ್ಲರಿಗೂ ಗೊತ್ತು. ಇದಕ್ಕಾಗಿ ಕಳೆದ ಅರ್ಧ ಶತಮಾನದಿಂದ ವೈದ್ಯಕೀಯ ಮತ್ತು ತಾಂತ್ರಿಕ ಸಂಶೋಧನೆಗಳು ಅಗಾಧವಾದ ವೇಗದಲ್ಲಿ ನಡೆಯುತ್ತಿದ್ದು, ರೋಗಗಳನ್ನು ಬಹು ಬೇಗ ಕಂಡುಹಿಡಿಯುವುದಕ್ಕೂ ಅವುಗಳನ್ನು ಸಂಪೂರ್ಣ ಗುಣ ಮಾಡುವುದಕ್ಕೂ ಸಹಾಯ ಮಾಡುತ್ತಿವೆ. ಈ ಪ್ರಯತ್ನದಲ್ಲಿ ಕೆಲವು ರೋಗಗಳಂತೂ ಭೂಪಟದಿಂದ ನಾಪತ್ತೆಯಾಗಿವೆ. ಜೀವವಾಹಕಗಳನ್ನು (genes) ಮಾರ್ಪಾಟು ಮಾಡಿ ಅನುವಂಶಿಕ ಕಾಯಿಲೆಗಳನ್ನು ಬರದಿರುವಂತೆ ತಡೆಗಟ್ಟುವುದರಿಂದ ಹಿಡಿದು, ಗರ್ಭಾವಸ್ಥೆಯಲ್ಲಿರುವ ಮಗುವಿನ ಶಸ್ತ್ರಚಿಕಿತ್ಸೆಯನ್ನು ಮಾಡುವವರೆಗೆ ವೈದ್ಯಕೀಯ ವಿಜ್ಞಾನ ಮುಂದುವರೆದಿದೆ.

ಆಳಗಲಗಳಲ್ಲಿ ಬೆಳೆಯುತ್ತಿರುವ ವೈದ್ಯಕೀಯ ವಿಜ್ಞಾನವು ಹೆಚ್ಚು ಕ್ರಿಯಾಶೀಲವಾಗುವ ಉದ್ದೇಶದಿಂದ ಅನೇಕ ಶಾಖೆ-ಉಪಶಾಖೆಗಳಾಗಿ ವಿಭಜಿಸಲ್ಪಟ್ಟಿದೆ. ಪ್ರತಿ ಚಿಕ್ಕ ಶಾಖೆಗೂ ಅದರದೇ ಆದ ತಜ್ಞ (specialists) ಕಷ್ಟವಾಗುತ್ತದೆ. ತಜ್ಞರ ಪಟ್ಟಿ ದೊಡ್ಡದಾದಷ್ಟೂ ತಪ್ಪಾಗುವ ಸಂಭವವೂ ಹೆಚ್ಚಾಗುತ್ತದೆ. ನೀವು ಆರಿಸಿದ ತಜ್ಞರೇ ನಿಮ್ಮ ಕಾಯಿಲೆಗೆ ಸಂಬಂಧಪಟ್ಟವರೆಂದು ಯಾವ ಆಧಾರದ ಮೇಲೆ ನಿರ್ಧರಿಸುತ್ತೀರಿ? ಉದಾಹರಣೆಗಾಗಿ, ನಿಮ್ಮ ತಲೆನೋವಿಗೆಂದು ಯಾವ ತಜ್ಞರ ಬಳಿಗೆ

ನೀವೇ ನೇರವಾಗಿ ತಜ್ಞರ ಹತ್ತಿರ ಹೋದರೆ ಅವರು ನಿಮ್ಮ ಲಕ್ಷಣಗಳಿಗೆ ತಮಗೆ ತಿಳಿದಂತೆ ತಪ್ಪಾದ ಮಹತ್ವ ಕೊಟ್ಟು, ನಿಮ್ಮನ್ನು ತಪ್ಪಾಗಿ ಪರೀಕ್ಷಿಸಿ, ತಪ್ಪಾದ ರಕ್ತ-ಮೂತ್ರ ತಪಾಸಣೆ ಮಾಡಿ, ತಪ್ಪು ಕಾಯಿಲೆಯೊಂದನ್ನು ಕಂಡುಹಿಡಿದು, ತಪ್ಪಾಗಿ ಚಿಕಿತ್ಸೆ ಕೊಟ್ಟು, ತಪ್ಪಾಗಿ ಶಸ್ತ್ರಚಿಕಿತ್ಸೆ ಮಾಡಿ ನಿಮ್ಮನ್ನು ತಪ್ಪಾದ ಸಮಾಧಿಗೆ ಕಳಿಸಿಯೇಬಿಡಬಹುದು!

ವೈದ್ಯರಿದ್ದಾರೆ. ಒಂದೊಂದು ಕಾಯಿಲೆಗೂ (ಮಧುಮೇಹಕ್ಕೆ ಡಯಾಬಿಟಾಲೋಜಿಸ್ಟ್, ಸಂಧಿವಾತಕ್ಕೆ ರ್‍ಯುಮಾಟಾಲೋಜಿಸ್ಟ್), ದೇಹದ ಪ್ರತಿ ಭಾಗಕ್ಕೂ (ಕಣ್ಣಿನ, ಹೃದಯದ, ಅನ್ನನಾಳದ ತಜ್ಞರು), ಪ್ರತಿ ವಯಸ್ಸಿನವರಿಗೂ (ಮಕ್ಕಳ ಹದಿಹರೆಯದ, ವೃದ್ಧರ ತಜ್ಞರು), ಎರಡೂ ಲಿಂಗದವರಿಗೂ (ಗೈನೆಕಾಲಜಿಸ್ಟ್, ಆ್ಯಂಡ್ರಾಲಾಜಿಸ್ಟ್) ಇದ್ದಾರೆ! ಪ್ರತಿಯೊಬ್ಬರೂ ತಮ್ಮ ಕ್ಷೇತ್ರದಲ್ಲಿ ಅತ್ಯಾಧುನಿಕ, ಅತ್ಯುಚ್ಚ ಮಟ್ಟದ ಚಿಕಿತ್ಸೆಯನ್ನು ಕೊಡುತ್ತಿದ್ದಾರೆ. ಜನರು ಇದನ್ನು ಮನಗಂಡು, ಸ್ವಲ್ಪ ಎದೆನೋವು ಕಾಣಿಸಕೊಂಡರೆ ಹೃದಯರೋಗ ತಜ್ಞರ ಬಳಿಗೆ, ಮಗುವಿಗೆ ಸ್ವಲ್ಪ ನೆಗಡಿಯಾದರೆ ಮಕ್ಕಳ ರೋಗ ತಜ್ಞರ ಬಳಿಗೆ ಎಂದು ಮುಂತಾಗಿ ತಮಗೆ ತಿಳಿದ ತಜ್ಞರ ಬಳಿಗೆ ನೇರವಾಗಿಯೇ ಹೋಗುತ್ತಿದ್ದಾರೆ.

ಹಾಗಾದರೆ, ನಿಮ್ಮ ಯಾವುದೇ ಕಾಯಿಲೆಯ ಚಿಕಿತ್ಸೆಗೆ ಆಯಾ ತಜ್ಞರ ಬಳಿ ನೇರವಾಗಿ ಹೋದರೆ ಅತ್ಯುತ್ತಮ ಚಿಕಿತ್ಸೆ ಸುಲಭಸಾಧ್ಯವೆಂದು ಅನ್ನಿಸುತ್ತದಲ್ಲವೆ? ವಾಸ್ತವಿಕವಾಗಿ ಮತ್ತು ವೈಜ್ಞಾನಿಕವಾಗಿ ಯೋಚಿಸಿದರೆ ಇದು ಸಂಪೂರ್ಣ ತಪ್ಪು ಕಲ್ಪನೆ! ಅದು ಹೇಗೆ?

ವಿಶೇಷ ಜ್ಞಾನವಿರುವ ಚಿಕ್ಕ ಚಿಕ್ಕ ಶಾಖೆಗಳು ಹೆಚ್ಚಾದಷ್ಟೂ ನಿಮ್ಮ ಆಯ್ಕೆ ಹೋಗುತ್ತೀರಿ? ದೃಷ್ಟಿದೋಷವಿದೆಯೆಂದು ನೇತ್ರತಜ್ಞರ ಬಳಿಗೋ, ಸೈನ್ಯುಸೈಟಿಸ್ ಎಂದುಕೊಂಡು ಇ.ಎನ್.ಟಿ. ತಜ್ಞರ ಬಳಿಗೊ, ಅಲರ್ಜಿ ಎಂದುಕೊಂಡು ಅಲರ್ಜಿ ತಜ್ಞರ ಬಳಿಗೋ, ಹಲ್ಲಿನ ತೊಂದರೆಯೆಂದು ದಂತವೈದ್ಯರ ಬಳಿಗೋ, ನರದೌರ್ಬಲ್ಯವೆಂದು ನರರೋಗ ತಜ್ಞರ ಬಳಿಗೊ, ಮೆದುಳಿನಲ್ಲಿ ಗಡ್ಡೆಯಾಗಿರಬಹುದೆಂದು ಮೆದುಳಿನ ಶಸ್ತ್ರಚಿಕಿತ್ಸಕರ ಹತ್ತಿರವೊ, ಮಾನಸಿಕ ಕಾಯಿಲೆಯಿದೆ ಎಂದುಕೊಂಡು ಮನೋರೋಗ ಚಿಕಿತ್ಸಕರ ಬಳಿಗೋ, ಅಥವಾ ಮನೋಸಾಮಾಜಿಕ ಕಾರಣಗಳಿಂದ ಎಂದುಕೊಂಡು ಸಮಾಲೋಚಕರ (ಕೌನ್ಸೆಲ್ಲರ್) ಹತ್ತಿರವೋ? ರಕ್ತನಾಳಗಳ ಶಸ್ತ್ರಚಿಕಿತ್ಸಕ? ಮೈಗ್ರೇನ್ ತಜ್ಞ? ವಶೀಕರಣ ತಜ್ಞ?... ಇದರಲ್ಲಿ ಯಾರಾದರೂ ಒಬ್ಬರನ್ನು ಆರಿಸಿದರೆ, ಅವರು ನಿಮ್ಮ ಕಾಯಿಲೆಗೆ ಸರಿಯಾದ ತಜ್ಞರಾಗಿರುವ ಸಂಭವ ಹತ್ತರಲ್ಲಿ ಒಂದಕ್ಕಿಂತಲೂ ಕಡಿಮೆ! ಇದರ ಗಂಭೀರತೆ ನಿಮಗೆ ಅರ್ಥವಾಗಬೇಕಾದರೆ ಹೀಗೆ ಯೋಚಿಸಿ: ಹತ್ತು ಜನರಿಗೆ ಶಸ್ತ್ರಚಿಕಿತ್ಸೆ ಮಾಡಿದರೆ ಒಬ್ಬರಿಗೆ ಮಾತ್ರ ಯಶಸ್ವಿಯಾಗುವ ಸರ್ಜನ್‌ರ ಹತ್ತಿರ ನೀವು ಚಿಕಿತ್ಸೆ ಪಡೆಯುವ ಧೈರ್ಯ ಮಾಡುತ್ತೀರಾ?

ಅಷ್ಟೇ ಅಲ್ಲ. ನೀವು ಯಾವುದೇ ತಜ್ಞರ ಹತ್ತಿರ ಹೋದರೂ ಅವರು ತಮ್ಮ ಕ್ಷೇತ್ರಕ್ಕೆ ಸಂಬಂಧಪಟ್ಟ ರೋಗಗಳನ್ನೇ ನಿಮ್ಮಲ್ಲಿ ಹುಡುಕುತ್ತಾರೆ. ಉದಾಹರಣೆಗಾಗಿ ಹೇಳಬೇಕೆಂದರೆ ಈ ಮೇಲೆ ಹೇಳಿದ ಎಲ್ಲ ಶಾಖೆಗಳಲ್ಲೂ ತಲೆನೋವಿನ ಲಕ್ಷಣವಿರುವ ರೋಗಗಳಿವೆ. ಆದುದರಿಂದ, ನಿಜವಾದ ರೋಗ ಏನೇ ಇದ್ದರೂ ನೀವು ಭೇಟಿ ಮಾಡಿದ ಪ್ರತಿ ತಜ್ಞರೂ ನಿಮ್ಮ ತೊಂದರೆಗೆ ತಮ್ಮ ಕ್ಷೇತ್ರಕ್ಕೆ ಸಂಬಂಧಪಟ್ಟ ಹೆಸರೊಂದನ್ನು ಕೊಡುತ್ತಾರೆ. ಇದನ್ನೇ ಇನ್ನೊಂದು ರೀತಿ ಹೇಳಬೇಕೆಂದರೆ, ನೀವು ಯಾವ ಕಾಯಿಲೆ ಬಯಸುತ್ತೀರೊ ಅದರ ತಜ್ಞರನ್ನು ಆಯ್ಕೆ ಮಾಡಬಹುದು! ಅಂದರೆ, ಡಿಪ್ರೆಶ್ಶನ್ ಬೇಕೆ? ಮನೋರೋಗತಜ್ಞರ ಹತ್ತಿರ ಹೋಗಿ; ಕನ್ನಡಕ ಬೇಕೆ? ನೇತ್ರತಜ್ಞರ ಹತ್ತಿರ ಹೋಗಿ. ಅಪೆಂಡಿಕ್ಸ್ ಆಪರೇಶನ್ ಬೇಕೆ? ಸರ್ಜನ್ ಬಳಿಗೆ! ಇವರಾರೂ ನಿಮ್ಮ ಅನಿಸಿಕೆಯನ್ನು ನಿರಾಕರಿಸುವುದಿಲ್ಲ. ತಮ್ಮ ಕ್ಷೇತ್ರದಲ್ಲಿರುವ ಮಾಹಿತಿಗೆ ಬದ್ಧರಾಗಿರುವ ಇವರು ನೀವು ಕೊಡುವ **ಹಣಕ್ಕೆ ಮೋಸ ಮಾಡದೆ** ನಿಮ್ಮ ಇಷ್ಟ ನೆರವೇರಿಸುತ್ತಾರೆ. ಆದರೆ ನಿಮಗೆ ಸರಿಯಾದ **ಚಿಕಿತ್ಸೆ ಸಿಕ್ಕಿತೋ ಇಲ್ಲವೋ** ಎಂಬುದು ಬೇರೆ ಮಾತು!

ಹೀಗೇಕಾಗುತ್ತದೆ? ''ನಿಮ್ಮ ತೊಂದರೆ ನನ್ನ ಪರಿಣತಿ ಮಿತಿಗೆ ಒಳಪಟ್ಟಿದ್ದಲ್ಲ; ಆದುದರಿಂದ ಇಂಥಿಂಥ ಬೇರೆ ವೈದ್ಯರ ಹತ್ತಿರ ಹೋಗಿ''. ಎಂದಂದು ಯಾವ ಔಷಧಿಯನ್ನೂ ಬರೆದು ಕೊಡದೆ ಏಕೆ ಕಳಿಸುವುದಿಲ್ಲ? ರೋಗಿಗಳಿಗೆ ಅತ್ಯುತ್ತಮ ಮಟ್ಟದ ಸೇವೆಯನ್ನು ಕೊಡುವುದಕ್ಕೋಸ್ಕರ ವೈದ್ಯವೃತ್ತಿಯ ಯಾವುದೇ ಶಾಖೆಯ ತಜ್ಞರು ತಮ್ಮ ಕ್ಷೇತ್ರದಲ್ಲಿ ಆಗುತ್ತಿರುವ ಬೆಳವಣಿಗೆಯನ್ನು ಸದಾ ಅಭ್ಯಸಿಸುತ್ತಿರಬೇಕಾಗುತ್ತದೆ. ಅದಕ್ಕಾಗಿ ಅವರು ತಕ್ಕ ಸಮಯವನ್ನು ಮುಡುಪಾಗಿ ಇಡಲೇಬೇಕಾಗುತ್ತದೆ. ಪ್ರತಿ ಚಿಕ್ಕ ಕ್ಷೇತ್ರದಲ್ಲೂ ಆಗುತ್ತಿರುವ ಬೆಳವಣಿಗೆ ಎಷ್ಟೊಂದು ತ್ವರಿತವಾಗಿದೆಯೆಂದರೆ, ಒಂದು ಅಂದಾಜಿನ ಪ್ರಕಾರ ವೈದ್ಯಕೀಯ ಜ್ಞಾನಭಂಡಾರವು ಪ್ರತಿ ಐದು ವರ್ಷಗಳಿಗೊಮ್ಮೆ ಮುಂಚಿಗಿಂತ ಎರಡು ಪಾಲು ಹೆಚ್ಚಾಗುತ್ತದೆ. ಅಂದರೆ, ಐದು ವರ್ಷಗಳ ಕಾಲ ಹೊಸ ವಿಷಯಗಳನ್ನು ತಿಳಿದುಕೊಳ್ಳದಿರುವ ವೈದ್ಯರು ನಿಮ್ಮಷ್ಟೇ ಅಜ್ಞಾನಿಯಾಗಿಬಿಡುತ್ತಾರೆ! ಹೀಗಾಗಿ, ತನಗೆ ಸಂಬಂಧಪಟ್ಟ ಜ್ಞಾನವನ್ನು ಯಾವಾಗಲೂ ಉತ್ಕೃಷ್ಟ ಮಟ್ಟದಲ್ಲಿಟ್ಟುಕೊಳ್ಳಬಯಸುವ ಯಾವುದೇ ತಜ್ಞ ವೈದ್ಯರು ಬೇರೆ ಕ್ಷೇತ್ರಗಳ ಕಡೆಗೆ ಗಮನ ಕೊಡಲು ಸಾಧ್ಯವಿಲ್ಲದಂಥ ಪರಿಸ್ಥಿತಿ ಉಂಟಾಗಿದೆ. ಆದುದರಿಂದ, ಯಾವುದೇ ತಜ್ಞರು ತಮ್ಮ ಕ್ಷೇತ್ರದಲ್ಲಿ ದೊಡ್ಡ ಪಂಡಿತರೆನ್ನಿಸಿಕೊಂಡರೂ ಬೇರೊಂದು ಕ್ಷೇತ್ರದಲ್ಲಿ ಸಂಪೂರ್ಣ ಅಜ್ಞಾನಿ ಆಗಿರಬಹುದು; ಅಥವಾ ಬೇರೆ ಕ್ಷೇತ್ರಗಳ ಕಡೆಗೆ ಅವರ ತಲೆ ಓಡುವುದೇ ಇಲ್ಲ ಎನ್ನಬಹುದು. ಇದಕ್ಕೊಂದು ನಿದರ್ಶನವನ್ನು ಇಂಗ್ಲೆಂಡಿನ ಸುಪ್ರಸಿದ್ಧ ಡಾ. ರಿಚರ್ಡ್ ಆ್ಯಶರ್ ಅವರು ಕೊಟ್ಟಿದ್ದಾರೆ:

ಭಾಗಶಃ ಕುರುಡುತನದಿಂದ ನರಳುತ್ತಿರುವ ಒಬ್ಬ ರೋಗಿ ತನ್ನ ಕುಟುಂಬ ವೈದ್ಯರ ಹತ್ತಿರ ತೋರಿಸಿದಾಗ ಲಾರೆನ್ಸ್ ಮೂನ್ ಬಿಡೆಲ್ ಸಿಂಡ್ರೋಮ್ (Laurence-Moon-Bidell syndrome) ಎಂಬ ಅಪರೂಪವಾದ ಕಾಯಿಲೆ ಇರುವ ಸಂದೇಹ ಬಂದಿತು. ಈ ಕಾಯಿಲೆಯ ಮುಖ್ಯ ಲಕ್ಷಣಗಳೆಂದರೆ ಬುದ್ಧಿಮಾಂದ್ಯತೆ, ಐದಕ್ಕಿಂತ ಹೆಚ್ಚು ಬೆರಳುಗಳು (ಪೊಲಿಡಾಕ್ಟ್ಯಾಲಿ-polydactyly) ಮತ್ತು ಕಣ್ಣಿನ ರೆಟಿನಾದಲ್ಲಿ ಚುಕ್ಕೆಗಳು (retinitis pigmentosa). ರೋಗಿಗೆ ಬುದ್ಧಿಮಾಂದ್ಯತೆ ಮತ್ತು ಆರು ಬೆರಳುಗಳು ಇದ್ದುದರಿಂದ ಕಣ್ಣಿನ ಪರೀಕ್ಷೆಗಾಗಿ ಅವನನ್ನು ಪ್ರಸಿದ್ಧ ನೇತ್ರತಜ್ಞರೊಬ್ಬರ ಹತ್ತಿರ ಕಳಿಸಲಾಯಿತು. ಆ ತಜ್ಞರು ಕಣ್ಣುಗಳನ್ನು ಕೂಲಂಕಷವಾಗಿ ಪರೀಕ್ಷಿಸಿ, ಈ ರೋಗಿಯ ಕಣ್ಣಿನ ರೆಟಿನಾದಲ್ಲಿ ಚುಕ್ಕೆಗಳಿವೆ. ನಿಜ. ಆದರೆ ಪೊಲಿಡಾಕ್ಟ್ಯಾಲಿ ಇದೆಯೇ? ಎಂದು ಚೀಟಿ ಬರೆದು ವಿಚಾರಿಸಿದರು! ಯಾಕೆ, ಅವರಿಗೆ ರೋಗಿಯ ಬೆರಳುಗಳನ್ನು ಎಣಿಸಲು ಬರುತ್ತಿರಲಿಲ್ಲವೆ?

ನೇರವಾಗಿ ತಜ್ಞರ ಹತ್ತಿರ ಹೋದಲ್ಲಿ ಇನ್ನೊಂದು ಅನಾಹುತವಾಗುತ್ತದೆ. ಪ್ರತಿ ತಜ್ಞರೂ ತಮ್ಮದೇ ಆದ ಕ್ಷೇತ್ರದಲ್ಲಿ ನಿಷ್ಣಾತರಾಗಿರುವುದರಿಂದ, ತಮಗೆ ಕಂಡುಬರುವ ಎಲ್ಲ ಲಕ್ಷಣಗಳನ್ನು ತಮಗೆ ಗೊತ್ತಿರುವ ಕಾಯಿಲೆಗೇ ಗಂಟುಹಾಕುತ್ತಾರೆ, ಈ ಲಕ್ಷಣಗಳು ತಮಗೆ ಸಂಬಂಧವಿಲ್ಲದ ಕಾಯಿಲೆಯದ್ದೂ ಆಗಿರಬಹುದಾದ ಸಾಧ್ಯತೆಯನ್ನು ಅವರು ಈ ಭರಾಟೆಯಲ್ಲಿ ಮರೆತುಬಿಡುತ್ತಾರೆ. ಇದ್ದ ಕಾಯಿಲೆಗೆ ತಪ್ಪು ಚಿಕಿತ್ಸೆ ಅನಿವಾರ್ಯವಾಗುತ್ತದೆ. ಉದಾಹರಣೆಗೆ, ನನಗೆ ಗೊತ್ತಿರುವ ಒಬ್ಬ ಮಹಿಳೆಯ ಎಡ ಮೊಳಕಾಲಲ್ಲಿ ನೋವು ಮತ್ತು ನಿಶ್ಶಕ್ತಿ ಉಂಟಾಯಿತು. ಅವಳು ನೇರವಾಗಿ ಎಲುಬು ಮತ್ತು ಕೀಲು ತಜ್ಞರ ಬಳಿಗೆ ಹೋದಾಗ ಅವರು ಮೊಳಕಾಲಿನ ಕೀಲಿನ ರೋಗವೆಂದು ನಿರ್ಧರಿಸಿ ಅದರ ಶಸ್ತ್ರಚಿಕಿತ್ಸೆಯನ್ನು ಮಾಡಿದರು. ಅವಳಿನ್ನೂ ಪ್ಲಾಸ್ಟರ್ ಹಾಕಿಕೊಂಡೇ ಇರುವಾಗ ಅವಳ ಬಲದ ಮೊಳಕೈಯಲ್ಲೂ ಅದೇ ರೀತಿಯ ನೋವು ಮತ್ತು ನಿಶ್ಶಕ್ತಿ ಉಂಟಾಯಿತು. ಈಗ ಅವಳು ತಮ್ಮ ಕುಟುಂಬ ವೈದ್ಯರ ಹತ್ತಿರ ತೋರಿಸಿದಾಗ ಅವರು ಅವಳಿಗೆ ನರರೋಗ ಶಸ್ತ್ರಚಿಕಿತ್ಸಕರ ಹತ್ತಿರ ಹೋಗಲು ಸಲಹೆ ಮಾಡಿದರು. ಆ ಹೊಸ ತಜ್ಞರು ಕಂಡು ಹಿಡಿದ ಕಾರಣ ಬಹಳ ವಿಚಿತ್ರವಾಗಿತ್ತು. ಅವಳ ಎಲ್ಲ ಕೀಲುಗಳೂ ಸುಸ್ಥಿತಿಯಲ್ಲಿದ್ದವು. ಆದರೆ ಅವಳ ಕುತ್ತಿಗೆಯ ಮೂಳೆಯೊಂದರ ನಡುವಿನ ಟೊಳ್ಳು ಜಾಗದಲ್ಲಿ ಗಡ್ಡೆಯೊಂದು ಬೆಳೆದು, ಹತ್ತಿರವಿರುವ ಕಶೇರುಕಾರಜ್ಜು (spinal cord) ಮತ್ತು ಕುತ್ತಿಗೆಯಲ್ಲಿ ಹಾಯ್ದು ಹೋಗುವ ನರಗಳ ಮೇಲೆ ಒತ್ತುತ್ತಿತ್ತು. ಇದರ ಪರಿಣಾಮದಿಂದ ಅವಳ ಎಡದ ಮೊಳಕಾಲು ಮತ್ತು ಮೊಳಕೈಗಳ ನರಗಳು ನಿಧಾನವಾಗಿ ನಿಶ್ಚೇಷ್ಟಿತಗೊಳ್ಳಲು ಪ್ರಾರಂಭಿಸಿದ್ದವು. ಆ ಗಡ್ಡೆಯನ್ನು ಶಸ್ತ್ರಚಿಕಿತ್ಸೆಯ ಮೂಲಕ ತೆಗೆದುಹಾಕಿದ ಮೇಲೆ ಅವಳ ಮೊಳಕೈ ತನ್ನಷ್ಟಕ್ಕೆ ತಾನೇ ಸರಿಹೋಯಿತು. ಆದರೆ ತಪ್ಪು ಚಿಕಿತ್ಸೆಗೆ ಬಲಿಯಾದ ಎಡದ ಮೊಳಕಾಲು ಮಾತ್ರ ನಷ್ಟಕ್ಕೀಡಾಗಿ ಅವಳು ಜೀವನವೆಲ್ಲ ಕುಂಟುತ್ತಲೇ ನಡೆಯುವಂತಾಯಿತು.

ಹೀಗೆ ನೀವೇ ನೇರವಾಗಿ ತಜ್ಞರ ಹತ್ತಿರ ಹೋದರೆ ಅವರು ನಿಮ್ಮ ಲಕ್ಷಣಗಳಿಗೆ ತಮಗೆ ತಿಳಿದಂತೆ ತಪ್ಪಾದ ಮಹತ್ವ ಕೊಟ್ಟು, ನಿಮ್ಮನ್ನು ತಪ್ಪಾಗಿ ಪರೀಕ್ಷಿಸಿ, ತಪ್ಪಾದ ರಕ್ತ-ಮೂತ್ರ ತಪಾಸಣೆ ಮಾಡಿ, ತಪ್ಪು ಕಾಯಿಲೆಯೊಂದನ್ನು ಕಂಡುಹಿಡಿದು, ತಪ್ಪಾಗಿ ಚಿಕಿತ್ಸೆ ಕೊಟ್ಟು, ತಪ್ಪಾಗಿ ಶಸ್ತ್ರಚಿಕಿತ್ಸೆ ಮಾಡಿ ನಿಮ್ಮನ್ನು ತಪ್ಪಾದ ಸಮಾಧಿಗೆ ಕಳಿಸಿಯೇಬಿಡಬಹುದು!

ತಜ್ಞ ವೈದ್ಯರ ಬಗೆಗೆ ಇನ್ನೊಂದು ಮಾತು: ಅವರು ಸೂಕ್ಷ್ಮಾತಿಸೂಕ್ಷ್ಮ ಚಿಹ್ನೆಗಳನ್ನೂ ಸಹ ದೊಡ್ಡದಾಗಿ ಪರಿಗಣಿಸಿ, ತಮ್ಮ ವ್ಯಾಪ್ತಿಯಲ್ಲಿ ಬರುವ ಕಾಯಿಲೆಗೆ ಜೋಡಿಸಿ ಕಾಯಿಲೆಯನ್ನು ಕಂಡುಹಿಡಿಯುತ್ತಾರೆ. ಇದರಲ್ಲಿ ಅವರು ಎಷ್ಟೊಂದು ಮಗ್ನರಾಗಿರುತ್ತಾರೆಂದರೆ, ಶರೀರದ ಸಾಮಾನ್ಯ ಏರಿಳಿತಗಳೂ ಅವರಿಗೆ ಲಕ್ಷಣಗಳಾಗಿಯೇ ಕಾಣುತ್ತವೆ. ಯಾಕೆಂದರೆ ಯಾವುದೇ ಲಕ್ಷಣವು ಆಯಾ ಸಮುದಾಯದಲ್ಲಿ (community) ಎಷ್ಟೋ ಜನರಿಗೆ ಇದ್ದರೂ ಅವರು ಯಾವ ವೈದ್ಯಕೀಯ ನೆರವಿಲ್ಲದೆ ಜೀವನ ಸಾಗಿಸುತ್ತಿದ್ದಾರೆ ಎಂಬುದರ ಅರಿವು ತಜ್ಞರಿಗೆ ಇರುವುದಿಲ್ಲ - ಅದು ಅವರಿಗೆ ಸಂಬಂಧಿಸಿರದ ತಜ್ಞಶಾಖೆಯಾದ ಸಮುದಾಯ ವೈದ್ಯಕೀಯ (community medicine) ಅಲ್ಲವೆ? ಹೀಗಾಗಿ, ಕ್ಷುಲ್ಲಕ ಏರಿಳಿತಗಳನ್ನೂ ಅವರು ಕಾಯಿಲೆಯ ಲಕ್ಷಣಗಳನ್ನಾಗಿ ಪರಿಗಣಿಸುತ್ತಾರೆ.

ನಮ್ಮ ಸ್ನೇಹಿತರೊಬ್ಬರಿಗೆ ಇದೇ ಅನುಭವವಾಯಿತು. ಮಹತ್ವದ ಕೆಲಸವೊಂದರ ನಿಮಿತ್ತ ಒಂದು ಬೇಸಿಗೆಯ ಮಧ್ಯಾಹ್ನ ಧಾವಿಸುತ್ತಿದ್ದಾಗ ಅವರ ಮೋಟಾರ್ ಸೈಕಲ್‌ನ ಹೊಟ್ಟೆ ನಡುರಸ್ತೆಯಲ್ಲಿ ಖಾಲಿಯಾಯಿತು. ಅದರ ಜೊತೆಗೆ ಆಗ ಅವರ ಜೇಬೂ ಖಾಲಿಯಿದ್ದುದು ಕಂಡುಬಂದುದರಿಂದ ಅವರು ಹತ್ತಿರದ ಪ್ರಸಿದ್ಧ ನರ್ಸಿಂಗ್ ಹೋಮ್‌ನ ಮಾಲಿಕರಾದ ಹೃದಯರೋಗ ತಜ್ಞ ಸ್ನೇಹಿತರ ಬಳಿಗೆ ಸಾಲ ಕೇಳಲು ಗಾಡಿಯನ್ನು ಅಲ್ಲಿಯವರೆಗೆ ತಳ್ಳಿಕೊಂಡೇ ನಡೆದರು. ನರ್ಸಿಂಗ್ ಹೋಮ್ ಮುಟ್ಟಿದಾಗ ಅವರ ಶರ್ಟ್ ಬೆವರಿನಿಂದ ಸಂಪೂರ್ಣ ಒದ್ದೆಯಾಗಿ, ಆಯಾಸದಿಂದ ಏದುಸಿರು ಬಿಡುತ್ತಿದ್ದರು. ಉಸಿರಾಟವನ್ನು ಆಳವಾಗಿ ಮಾಡುತ್ತಿದ್ದುದರಿಂದ ಸ್ವಲ್ಪ ಎದೆನೋವೂ ಬರುತ್ತಿತ್ತು. ಸ್ಪಷ್ಟವಾಗಿ ಮಾತಾಡಲು ಆಗುತ್ತಿರಲಿಲ್ಲ. ಈ ಅವಸ್ಥೆಯಲ್ಲಿ ನೋಡಿದ ಅವರ ಸ್ನೇಹಿತ ಹೃದಯರೋಗ ತಜ್ಞರು ಅವರಿಗೆ ಹೃದಯಾಘಾತವಾಗಿದೆಯೆಂದು ಬಲವಾಗಿ ನಂಬಿ, ಅವರನ್ನು ತಮ್ಮ ನರ್ಸಿಂಗ್ ಹೋಮ್‌ನಲ್ಲಿ ದಾಖಲು ಮಾಡಿ, ಏನೇನೋ ಚಿಕಿತ್ಸೆ ಕೊಟ್ಟು, ಕೊನೆಗೆ ಯಾವ ಕಾಯಿಲೆಯೂ ಇಲ್ಲದಿದ್ದುದರಿಂದ (ನಿರಾಶರಾಗಿ) ಮೂರು ದಿನಗಳ ನಂತರ ಅವರನ್ನು ಬಿಡುಗಡೆ ಮಾಡಿದರು. ಆದರೆ ಇದರ ಪರಿಣಾಮ ಮಾತ್ರ ವಿಪರೀತವಾಯಿತು. ಈಗ ಆ ಮನುಷ್ಯ ತಮಗೆ ಹೃದಯದ ಕಾಯಿಲೆ ಇದೆಯೆಂದೇ ನಂಬಲಾರಂಭಿಸಿದ್ದಾರೆ. ''ಇಲ್ಲದಿದ್ದರೆ ನಮ್ಮ ಸ್ನೇಹಿತನೇಕೆ

ನನ್ನನ್ನು ಎಡ್ಮಿಟ್ ಮಾಡಿ ನನ್ನನ್ನು ಮೂರು ಹಗಲು ಮೂರು ರಾತ್ರಿ ಪರೀಕ್ಷೆ ಮಾಡುತ್ತಿದ್ದ?'' ತನ್ನ ಸ್ನೇಹಿತನ ಅಳವಿಗೆ ಮೀರಿದ ಯಾವುದೋ ಹೃದಯದ ಕಾಯಿಲೆ ತಮಗಿದೆಯೆಂದು ತಿಳಿದು, ಕಂಡಕಂಡ ಹೃದಯ ರೋಗ ತಜ್ಞರನ್ನು ಭೇಟಿಮಾಡಿ ತಮ್ಮ ಹೃದಯದ ಅಳಲನ್ನು ತೋಡಿಕೊಳ್ಳಲು ಆರಂಭಿಸಿದ್ದಾರೆ. ಇಲ್ಲದ ಹೃದಯರೋಗವನ್ನು ಗುಣಮಾಡಿಕೊಳ್ಳಲು ಅವರು ಪಡುವ ಬವಣೆಯನ್ನೂ, ಮಾಡುವ ಖರ್ಚನ್ನೂ ನೋಡಿದ ಯಾರಿಗಾದರೂ ಹೃದಯ ಭಾರವಾಗದೇ ಇರದು!

ಹೀಗೆ, ಸಾಮಾನ್ಯವಾಗಿ ಕಾಣುವ ಅವೈದ್ಯಕೀಯ ಲಕ್ಷಣಗಳನ್ನು ಕಾಯಿಲೆಯ ಲಕ್ಷಣಗಳೆಂದು ಲೆಕ್ಕಿಸುವ ಪರಿಸ್ಥಿತಿಗೆ ಲಕ್ಷಣಗಳ ಕೇಂದ್ರೀಕರಣ (organisation of symptoms) ಎನ್ನುತ್ತೇವೆ. ಮನಸ್ಸಿನ ಯಾವುದೋ ಮೂಲೆಗಳಲ್ಲಿ ಅಸ್ಪಷ್ಟವಾಗಿ ಸುಳಿದಾಡುತ್ತಿರುವ ನೋವು ಮುಂತಾದ ಅಹಿತಕರ ಚಿಹ್ನೆಗಳನ್ನು ರೋಗವೊಂದರ ಲಕ್ಷಣಗಳಾಗಿ ಪರಿವರ್ತಿಸಿ ಅವುಗಳನ್ನು ನಿರ್ದಿಷ್ಟ ಅಂಗಗಳಲ್ಲಿ ನೆಟ್ಟು ಬೆಳೆಸುವಂಥ ಕಾರ್ಯಕ್ರಮವೇ ಇದು. ಚಿಕ್ಕ ಪುಟ್ಟ ಹಾನಿರಹಿತ ಲಕ್ಷಣಗಳನ್ನು ಬಳಸಿ ಗಂಭೀರವಾದ ರೋಗದ ಪೋಷಾಕನ್ನು ತಜ್ಞರು ಹೊಲೆದು ಕೊಟ್ಟಾಗ ಹೀಗಾಗುತ್ತದೆ. ಇದಕ್ಕೆ ತಜ್ಞರಲ್ಲಿರುವ ಸಾಮಾನ್ಯಜ್ಞಾನದ ಕೊರತೆಯೂ ಒಂದು ಕಾರಣ. ಈ ಮುಂಚಿನ ಉದಾಹರಣೆಯಲ್ಲಿ ಹೃದಯ ರೋಗತಜ್ಞರು ಒಂದು ವಿಚಾರ ಮಾಡಬೇಕಿತ್ತು: ಈ ರೋಗಿಗೆ ಇರುವ ಲಕ್ಷಣಗಳು ಆರೋಗ್ಯವಂತನಲ್ಲಿ ಕೂಡ ಇರಬಹುದಲ್ಲ? ಹಾಗಾದರೆ, ಸಮುದಾಯದಲ್ಲಿ ಈ ಲಕ್ಷಣಗಳಿದ್ದೂ ಕಾಯಿಲೆಯಿಲ್ಲದ ಜನರು ಎಷ್ಟು ಇರಬಹುದು? ಇಂಥ ಲೆಕ್ಕಾಚಾರಕ್ಕಾಗಿಯೇ ಸಮುದಾಯದ ಆರೋಗ್ಯಕ್ಕೆ ಸಂಬಂಧಪಟ್ಟಂತೆ ಸಮುದಾಯ ವೈದ್ಯಕೀಯ (community medicine) ಇದ್ದರೂ ಈ ನಮ್ಮ ಹೃದಯ ರೋಗ ತಜ್ಞರು ಅದರಲ್ಲಿ ತಜ್ಞರಲ್ಲವಲ್ಲ? ಯಾಕೆ, ಅದರಲ್ಲಿಯೂ ಅಲ್ಪಸ್ವಲ್ಪ ತಿಳಿದುಕೊಂಡರೆ ಅನುಕೂಲವಲ್ಲವೆ? ಎಂದು ನೀವು ಕೇಳಬಹುದು. ಅದೇನೋ ಸರಿ, ಆದರೆ ಒಂದೇ ಕ್ಷೇತ್ರದಲ್ಲಿರುವ ಜ್ಞಾನಭಂಡಾರ ಎಷ್ಟೊಂದು ದೊಡ್ಡದಾಗಿದೆಯೆಂದರೆ, ಯಾವುದೇ ತಜ್ಞವೈದ್ಯರಿಗೆ ಬೇರೆ ಕ್ಷೇತ್ರಕ್ಕೆ ಸಂಬಂಧಿಸಿದ ಎಲ್ಲವನ್ನೂ ತಿಳಿದುಕೊಂಡು, ನೆನಪಿಟ್ಟುಕೊಂಡು, ಅದನ್ನು ತನ್ನ ರೋಗಿಯ ಚಿಕಿತ್ಸೆಯಲ್ಲಿ ಅಳವಡಿಸುವುದಕ್ಕೆ ತಕ್ಕ ಕಾಲಾವಕಾಶವೂ ಇಲ್ಲ, ವ್ಯವಧಾನವೂ ಇಲ್ಲ. ಇಂಥ ಸಮಗ್ರ ದೃಷ್ಟಿಯ ಕೊರತೆಯಿಂದ ನಾವೆಂಥ ಜಾಲದಲ್ಲಿ ಸಿಕ್ಕಿಬೀಳುತ್ತೇವೆಂದು ಗೊತ್ತಾಯಿತಲ್ಲ?

ತೊಂದರೆಯ ನಿವಾರಣೆಗೆ ನೇರವಾಗಿ ತಜ್ಞರ ಹತ್ತಿರ ಚಿಕಿತ್ಸೆಗಾಗಿ ಹೋಗುವುದು ಸರಿಯಲ್ಲವೆಂಬುದರಲ್ಲಿ ಯಾವ ಸಂದೇಹವೂ ಉಳಿಯಲಿಲ್ಲ. ಹಾಗಾದರೆ ನಮಗೆ ಸೂಕ್ತರಾದ ತಜ್ಞರನ್ನು ಹೇಗೆ ಹುಡುಕುವುದು? ಬೆಕ್ಕಿನ ಕೊರಳಿಗೆ ಗಂಟೆ ಕಟ್ಟುವುದು ಹೇಗೆ? ಗಂಟೆ ಕಟ್ಟಿಸಿಕೊಳ್ಳುವ ಬೆಕ್ಕನ್ನು ಹೇಗೆ ಹುಡುಕುವುದು?

ವೈದ್ಯಕೀಯ ಕ್ಷೇತ್ರದಲ್ಲಿರುವ ಎಲ್ಲ ಸೌಲಭ್ಯಗಳನ್ನು ಸರಿಯಾದ ರೀತಿಯಲ್ಲಿ ಬಳಸಿಕೊಳ್ಳುವುದರ ಜೊತೆಗೆ ಅವುಗಳ ಅನವಶ್ಯಕವಾದ ಬಳಕೆಯನ್ನೂ, ದುರುಪಯೋಗವನ್ನೂ ತಡೆಯುವ ಒಂದು ಉಪಾಯ ಖಂಡಿತವಾಗಿಯೂ ಇದೆ: ನಿಮ್ಮವರೇ ಆದ ಒಬ್ಬರು ಕುಟುಂಬ ವೈದ್ಯರನ್ನು ಹೊಂದುವುದು! ಸರಿಯಾದ ವಿದ್ಯಾರ್ಹತೆಯುಳ್ಳ, ಎಲ್ಲವನ್ನೂ ಬಲ್ಲ, ಮತ್ತು ನಿಮ್ಮ ಹಿತರಕ್ಷಣೆ ಮಾಡಬಲ್ಲ ವೈದ್ಯರನ್ನು ನಿಮ್ಮ ಕುಟುಂಬವೈದ್ಯರನ್ನಾಗಿ ಇರಿಸಿಕೊಳ್ಳುವುದು. ನಿಮಗೆ ಯಾವ ತಜ್ಞರ ಸೇವೆ ಯಾವಾಗ ಮತ್ತು ಎಷ್ಟರ ಮಟ್ಟಿಗೆ ಬೇಕು ಎಂಬುದನ್ನು ಈ ವೈದ್ಯರೇ ನಿಮ್ಮ ಪರವಾಗಿ ನಿರ್ಧರಿಸುತ್ತಾರೆ. ಆಗ ನಿಮಗೆ ಸೂಕ್ತವಾದ ತಜ್ಞ ವೈದ್ಯರ ಸಹಾಯವು ಸೂಕ್ತವಾದ ಸಮಯದಲ್ಲಿ ದೊರಕುವುದರಲ್ಲಿ ಸಂದೇಹವಿಲ್ಲ.

ಈಗೊಂದು ಹೊಸ ಪ್ರಶ್ನೆ: ಸೂಕ್ತರಾದ ಕುಟುಂಬ ವೈದ್ಯರನ್ನು ಹೇಗೆ ಆಯ್ಕೆ ಮಾಡುವುದು?

ಇದರ ಉತ್ತರವನ್ನು 'ಬದುಕು' ಮಾಸಪತ್ರಿಕೆಯ ಇನ್ನೊಂದು ಸಂಚಿಕೆಯಲ್ಲಿ ನಿರೀಕ್ಷಿಸಿ.

■

ಕಬ್ಬಿನ ಹಾಲಿನ ಸಂಸ್ಕರಣೆ

ಬೇಸಿಗೆಯ ದಾಹವನ್ನು ತಣಿಸುವ ಪಾನೀಯಗಳಲ್ಲಿ ಕಬ್ಬಿನ ಹಾಲಿನ ಸ್ಥಾನವೂ ಹಿರಿದೇ. ದುರದೃಷ್ಟವಶಾತ್ ಈಗ ನಾವು ಕಬ್ಬಿನ ಹಾಲನ್ನು ತೆಗೆಯುತ್ತಿರುವ ತಂತ್ರಜ್ಞಾನದಿಂದ ಅದನ್ನು ಒಂದು ಗಂಟೆ ಕಾಲ ಇಡಲೂ ಶಕ್ಯವಾಗುವುದಿಲ್ಲ. ಹಾಲನ್ನು ತೆಗೆದಾಕ್ಷಣ ಕುಡಿದರೇನೇ ಚೆನ್ನ. ಫ್ಲಾಸ್ಕಿನಲ್ಲಿ ಹಾಕಿಟ್ಟರೂ ಫಲವಿಲ್ಲ. ಒಂದು ವೇಳೆ ಸಂಗ್ರಹಿಸಿಡಲಾಗುತ್ತಿದ್ದರೆ ! ಅದೊಂದು ದೊಡ್ಡ ಪಾನೀಯ ಉದ್ಯಮವಾಗಿ ಬಿಡುತ್ತಿತ್ತೇನೋ?

ಪಾನೀಯ ಮಾಡಿ ರಕ್ಷಿಸಿ ಬಾಟಲಿಗಳಲ್ಲಿ ತುಂಬಿ ಮಾರಲು ಶಕ್ಯವಿದೆ ಎಂಬ ಸಂಗತಿಯನ್ನು ಮೈಸೂರಿನ ಕೇಂದ್ರೀಯ ಆಹಾರ ಸಂಶೋಧನಾಲಯವು ತೋರಿಸಿಕೊಟ್ಟು ಅಂತಹ ತಂತ್ರಜ್ಞಾನವೊಂದನ್ನು ಬಿಡುಗಡೆ ಮಾಡಿದೆ ಕೂಡಾ.

ಸಿ.ಎಫ್.ಟಿ.ಆರ್.ಐ. ದಿನಕ್ಕೆ 200 ಎಂ.ಎಲ್‌ನ 3000 ಬಾಟಲಿಗಳಷ್ಟು ಕಬ್ಬಿನ ಹಾಲನ್ನು 1000 ಕಿಲೋ ಕಬ್ಬಿನಿಂದ ತೆಗೆದು ಉದ್ಯಮ ನಡೆಸಬಹುದಾದ ತಂತ್ರಜ್ಞಾನ ಅಭಿವೃದ್ಧಿ ಪಡಿಸಿದೆ. ಶುದ್ಧವಾದ ಯಾವುದೇ ರೀತಿ ಹಾಳಾಗಿರದ ಕಬ್ಬಿನ ದಂಟನ್ನು ಆರಿಸಿಕೊಂಡು ಅದಕ್ಕೆ ಕೆಲವೊಂದು ರಕ್ಷಕಗಳನ್ನು ಬಳಸಿ ಮೂರು ತಿಂಗಳವರೆಗೆ ಹಾಳಾಗದಂತೆ ಇಡಬಹುದು.

ಈ ಸಂಬಂಧ ಕೆಲವೊಂದು ಉಪಕರಣಗಳು ಬೇಕಾಗುತ್ತವೆ. ಅವುಗಳೆಂದರೆ ಪ್ಲೇಟ್ ಮತ್ತು ಫ್ರೇಮ್ ಫಿಲ್ಟರ್ ಪ್ರೆಸ್, ಬಾಯ್ಲರ್, ಸಿಲಿಂಡರ್‌ನಂತಹ ಟ್ಯಾಂಕ್‌ಗಳು, ಬಾಟಲಿ ತೊಳೆಯುವ ಸಾಧನ, ಬಾಟಲಿಗೆ ತುಂಬುವ ಸಾಧನ, ವಾಕ್ ಇನ್ ಕೂಲರ್, ವಾಟರ್ ಟ್ರೀಟ್‌ಮೆಂಟ್ ಪ್ಲಾಂಟ್, ಕ್ರೌನ್ ಕಾರ್ಕಿಂಗ್ ಮೆಷಿನ್, ಕಬ್ಬು ದಂಟು ಅರೆಯುವ ಸಾಧನ, ಮತ್ತು ಪ್ಯಾಶ್ಚರೀಕರಿಸುವ ಟ್ಯಾಂಕುಗಳು ಬೇಕಾಗುತ್ತವೆ.


ಈ ಯಂತ್ರ ಸಾಧನಗಳನ್ನು ಬೆಂಗಳೂರಿನ ಪೀಣ್ಯಾ ಹಾಗೂ ದೆಹಲಿಯ ಗಾರ್ಡ್‌ನರ್ಸ್ ಕಾರ್ಪೊರೇಷನ್, ಬಿಸೆನ್ಬೆರಿ ಎಂಡ್ ಕಂಪೆನಿ ತಯಾರಿಸಿ ಕೊಡುತ್ತವೆ.

ಕಬ್ಬಿನ ಹಾಲು ಉತ್ತಮ ಪೌಷ್ಟಿಕ ಪಾನೀಯವಾಗಿದ್ದು, ಇದರಲ್ಲಿ ನೈಸರ್ಗಿಕ ಸಕ್ಕರೆ, ಖನಿಜಗಳಾದ ಕಬ್ಬಿಣ, ಮೆಗ್ನೀಷಿಯಂ, ಫಾಸ್ಫರಸ್ ಮತ್ತು ಕ್ಯಾಲ್ಸಿಯಂಗಳಿವೆ. ಇಂಗಾಲ ಆಸಿಡ್‌ಗಳಾದ ಮಲಿಕ್, ಸಸಿನಿಕ್ ಮತ್ತು ಅಕೋಟೆನಿಕ್‌ಗಳಿವೆ. ಇವೆಲ್ಲ ಸೇರಿಕೊಂಡಿರುವ ಏಕಮಾತ್ರ ಪೇಯವೆಂದರೆ ಇದು.

ರೈತರು ಬೆಳೆದ ಉತ್ಪನ್ನವನ್ನು ಮೌಲ್ಯ ವೃದ್ಧಿಮಾಡಿಕೊಂಡು ಮಾರಿದರೆ ಲಾಭ ಜಾಸ್ತಿ. ಜೊತೆಗೆ ನಮ್ಮ ಉತ್ಪನ್ನಕ್ಕೆ ಹೊಸ ಮಾರುಕಟ್ಟೆ ದೊರೆತಂತೆ. ಮುಂದೊಂದು ದಿನ ಈಗಿರುವ ಸಿಂಥೆಟಿಕ್ ಪಾನೀಯಗಳು ನಿಂತು ಹೋಗುವ ಇಲ್ಲವೇ ನಿಷೇಧಿಸಲ್ಪಡುವ ಕಾಲ ದೂರವಿಲ್ಲ. ಹಾಗಿರುವಾಗ ಕಬ್ಬಿನ ಹಾಲಿನಂತಹ, ಮುರುಗನ ಹುಳಿಯಂತಹ ಪ್ರಾಕೃತಿಕವಾದ ಪಾನೀಯಗಳು ಜನಮನ್ನಣೆ ಗಳಿಸುವುದು ಖಂಡಿತ.

■

ಮೈಲುಗಲ್ಲುಗಳ ಹುಡುಕುತ್ತಾ....



'ನಾಗತಿ ಹಳ್ಳಿ' ನಮ್ಮಲ್ಲಿರುವ ಮೋಡಿ ಮಾಡುವ ಬರಹಗಾರ. ಮಂಡ್ಯ ಜಿಲ್ಲೆಯ ಸಣ್ಣ ಹಳ್ಳಿಯೊಂದರಲ್ಲಿ ಹುಟ್ಟಿ, ಬೆಳೆದು ಮೈಸೂರು ಸೇರಿದ್ದು, ಅಲ್ಲಿಂದ ಬೆಂಗಳೂರಿಗೆ ಬಂದು ನೆಲೆಸಿದ್ದು ದೊಡ್ಡ ಸಾಹಸಗಾಥೆ. ಹಳ್ಳಿಯ ಆಕಾಂಕ್ಷೆ ಹೊತ್ತ ಹುಡುಗರ ಪಾಲಿಗೆ 'ಹೀರೋ' ಎನಿಸಿಕೊಳ್ಳುವ ಎಲ್ಲ ಲಕ್ಷಣ ಹೊಂದಿರುವ ಈ ಚಂದ್ರಶೇಖರ ಹೊಟ್ಟೆಪಾಡಿಗಾಗಿ ಮೊದಲು ಹಿಡಿದ ಕೆಲಸ, ಅದರ ಮೋಜು, ಮಜಾ, ಸಂಕಟ ಎಲ್ಲವನ್ನು ಇಲ್ಲಿ ಹೇಳಿಕೊಂಡಿದ್ದಾರೆ.

ಅನುಮಾನವೇ ಇಲ್ಲ-ನಾನು ಅವತ್ತು ಮಾಡಲೇಬೇಕಿದ್ದುದು ...ಾದರೊಂದು ಹೊಟ್ಟೆಪಾಡು. ಯಾರದೋ ಬಲವಂತಕ್ಕೆ ವಿಜ್ಞಾನವನ್ನು ...ದುಕೊಂಡು ಓದಲಾಗದೆ ಪಿಯುಸಿಯಲ್ಲಿ ಢುಮ್ಕಿ ಹೊಡೆದು ಹಳ್ಳಿಗೆ ...ರಳಿದಾಗ ನನ್ನ ಮೊದಲ ವೃತ್ತಿ ಆರಂಭವಾಯ್ತು. ಹಳ್ಳಿ ಶಾಲೆಯಿಂದ ಧುತ್ತನೆ ...ರಕ್ಕೆ ಹಾಕಿ, ಇಂಗ್ಲಿಷ್ ಮತ್ತು ವಿಜ್ಞಾನಗಳೆಂಬ ಮಹಾನ್ ಭೂತಗಳೆದುರಿಗೆ ...ಸಿ, ಓದು ಓದು ಎಂದು ತಿವಿಯುತ್ತಿದ್ದ ವ್ಯವಸ್ಥೆಯಲ್ಲಿ ನಾನು ಫೇಲಾಗಿ ಓಡಿ ...ದದ್ದು ದೊಡ್ಡ ಅಪರಾಧವಾಗಿತ್ತು. ಆಗ ಅನುಭವಿಸಿದ ಅವಮಾನಗಳು ...ರಾರು. ಅದೆಲ್ಲವನ್ನೂ ನುಂಗಿ ಮುಂದೆ ಕನ್ನಡ ಮಾಧ್ಯಮ ಮತ್ತು ...ವಿಭಾಗವನ್ನು ಆರಿಸಿಕೊಂಡು ರ್‍ಯಾಂಕು ಗಿಟ್ಟಿಸಿದ್ದು ಮತ್ತೊಂದು ಅಧ್ಯಾಯ. ...ರಿಲಿ, ಪಿಯುಸಿ ಫೇಲಾಗಿ ಹಳ್ಳಿಗೆ ಬಂದಾಗ ಅವಮಾನಗಳ ನಡುವೆ ...ಳಿದ್ದು ನನ್ನ ಮೊದಲ ವೃತ್ತಿ.

ಕನ್ನಡವನ್ನು ಅಪ್ಪ, ಅಮ್ಮ, ಶಾಲೆ ಮೂವರೂ ಸೊಗಸಾಗಿ ಕಲಿಸಿದ್ದರು. ...ನ್ನಾಗಿ ಅಷ್ಟೆ ಅಲ್ಲ, ಮುದ್ದಾಗಿ ಬರೆಯುವುದನ್ನೂ! ಸ್ವತಃ ಶಾಲಾ ...ಸ್ತರಾಗಿದ್ದ ನನ್ನ ತಂದೆ, ಸ್ವಲ್ಪ ಕಾಲ ಶಿಕ್ಷಕಿಯಾಗಿದ್ದ ತಾಯಿ ಇಬ್ಬರೂ ...ಡವನ್ನು ನನ್ನೊಳಗೆ ತುಂಬಿದ್ದರು. ನನ್ನ ಮುದ್ದಾದ ಬರವಣಿಗೆಯೇ ನನ್ನ ...ದಲ ವೃತ್ತಿಯನ್ನು ಆರಂಭಿಸಲು ನೆರವಾಯಿತು. ಅನಾಥಪ್ರಜ್ಞೆ, ...ಂಗಿತನದ ನೋವು, ಮಾರ್ಗದರ್ಶನದ ಕೊರತೆಯಿಂದ ಬಳಲುವ ಹಳ್ಳಿ ...ಡುಗರಿಗೆಲ್ಲಾ ರಕ್ಷಣೆಗೆ ಬರುವುದು ಅವರೊಳಗಿನ ಈ ಬಗೆಯ ಆಂತರಿಕ ...ಯೇ. ಹಳ್ಳಿಯ ಆಸುಪಾಸಿನಲ್ಲೇ ನನ್ನ ಮೊದಲ ವೃತ್ತಿ ಶುರು ಮಾಡಿದೆ. ...ೆಂದರೆ ಬೋರ್ಡ್ ಬರೆಯುವುದು.

ಹಳ್ಳಿಯ ಗರ್ಭ ಸೀಳಿ ಹಾದು ಹೋಗುವ ಹೆದ್ದಾರಿ ಬೆಂಗಳೂರು ...ಂಗಳೂರುಗಳನ್ನು ಸೇರಿಸುತ್ತಿತ್ತು. ಒಂದು ಮಹಾನ್‌ನಗರವನ್ನೂ, ಒಂದು ...ಹಾನ್ ಕಡಲನ್ನೂ ಸೇರಿಸುತ್ತದೆ ಎಂದು ಓದಿ ತಿಳಿದಿದ್ದ ನನಗೆ ...ದ್ದಾರಿಯೊಂದು ನಿಗೂಢ, ಕೌತುಕಮಯ ಸಂಗತಿಯಾಗಿತ್ತು. ...ದಮೊದಲು ಸುಮ್ಮನೆ ಕಾಲು ದಣಿವವರೆಗೆ ನಡೆಯುತ್ತಿದ್ದೆ. ಹೆದ್ದಾರಿ ಮೇಲೆ ...ುವ ವಿವಿಧ ಲಾರಿಗಳು, ವರ್ಣರಂಜಿತ ಬಸ್ಸುಗಳು, ನನ್ನಲ್ಲಿ ಆಕರ್ಷಣೆ ...ಂಟು ಮಾಡುತ್ತಿದ್ದವು. ಕಿನ್ನರಲೋಕದತ್ತ ಕೊಂಡೊಯ್ಯುವ ದೂತರಂತೆ ...ಿಸುತ್ತಿದ್ದವು. ಅವುಗಳ ಹೊಟ್ಟೆ ಮೇಲೆ ರಾರಾಜಿಸುತ್ತಿದ್ದ ಚಿತ್ರಗಳು ಮತ್ತು ...ರಗಳನ್ನು ಗಮನಿಸುತ್ತಿದ್ದೆ. ಅಕ್ಷರ ಲೋಕದ ಸಂಪರ್ಕ ತಂದ ಮೊದಲ ಪತ್ರಿಕೆ ...ಟ್ಟ ತರಿಸುತ್ತಿದ್ದ 'ಸಂಯುಕ್ತ ಕರ್ನಾಟಕ'. ಹೀಗೆ ನನ್ನ ಮೊದಲ ವೃತ್ತಿಗೆ ಚಾಲನೆ ...ಡಿದ ವಿಶಿಷ್ಟ ಸಂಗತಿಗಳು ನನ್ನಿಂದ ಬ್ರಶ್ಶು ಬಣ್ಣ ತರಿಸಿದವು. ಹತ್ತಿರದ ...ಳ್ಳೂರು ನನ್ನ ವೃತ್ತಿಯನ್ನಾರಂಭಿಸಿದ ಮೊದಲ ಊರಾಯಿತು.

ಬೆಳ್ಳೂರು ಸಣ್ಣ ಹೋಬಳಿ. ಜೈನರು, ಮುಸ್ಲಿಮರು ಹೆಚ್ಚು ವಾಸಿಸುವ ಜಾಗ. ಎರಡು ಸಮುದಾಯದವರಲ್ಲೂ ಬಹುತೇಕ ವ್ಯಾಪಾರವೇ ವೃತ್ತಿ. ಹತ್ತಿರದ ಹಳ್ಳಿಯ ಹುಡುಗ ಎಂಬ ಅನುಕಂಪಕ್ಕೊ, ಕಡಿಮೆ ಬೆಲೆಗೆ ಬೋರ್ಡು ಬರೆಯುತ್ತಾನೆ ಎಂಬ ಕಾರಣಕ್ಕೊ, ಅಂತೂ ನನಗೆ ಬೆಳ್ಳೂರಿನ ಬೋರ್ಡುಗಳೆಲ್ಲ ಬರತೊಡಗಿದವು. ಕೆಲವರಿಗೆ ಅವಶ್ಯಕವಿಲ್ಲದಿದ್ದರೂ ಬರೆಸುತ್ತಿದ್ದರು. 'ನೀವೊಂದ್ ಬರೆಸ್ರೀ... ಹುಡುಗ ಚೆನ್ನಾಗಿ ಬರೀತಾನೆ' ಎಂಬ ಪ್ರೋತ್ಸಾಹದ ಮಾತುಗಳನ್ನು ಬರೆಸಿಕೊಂಡವರು ಆಡುತ್ತಿದ್ದುದುಂಟು.


ಆದರೆ ನಾನು ನಗರದ ಬೋರ್ಡುಗಳಿಗೆ ಹೋಲಿಸಿ ನೋಡಿದರೆ ತುಂಬಾ ಚೆನ್ನಾಗಿ ಬರೆಯುತ್ತಿದ್ದೆ ಎಂದು ನನಗನ್ನಿಸುತ್ತಿಲ್ಲ. ನೋಡಲು ಮುದ್ದಾಗಿ, ಕೆಂಪಗಿದ್ದ; ಮಂಡಿ ತನಕ ಪ್ಯಾಂಟು ತೊಟ್ಟು, ಹಳೆ ಅರಿವೆಗಳನ್ನು ಹಿಡಿದು, ಉರಿಬಿಸಿಲಲ್ಲಿ ಏಣಿ ಮೇಲೋ, ಗಳಗಳ ಮೇಲೋ ನಿಂತು ಬರೆಯುತ್ತಿದ್ದ ಶ್ರಮ ನೋಡಿ ಕೆಲವರಿಗೆ ಅನುಕಂಪ ಮೂಡಿದ್ದಿರಬೇಕು. ನನ್ನ ಬರಹಕ್ಕಿದ್ದ ಮಿತಿ ನನಗೆ ಗೊತ್ತಿತ್ತು. ಅಕ್ಷರಗಳ ವಿನ್ಯಾಸದಲ್ಲಿ ನಾನು ಪರಿಣತನಾಗಿದ್ದರೂ ಸುಂದರ ಚಿತ್ರಗಳನ್ನು ಬಿಡಿಸುವಾಗ ಸೋಲುತ್ತಿದ್ದೆ. ಆ ಬಣ್ಣ, ಬಿಸಿಲು, ಒಣಗಿ ರೊಟ್ಟೆಯಂತಾದ ಬಣ್ಣ ಮಿಶ್ರಿತ ಬಟ್ಟೆಗಳು.... ನನಗೊಂದು ವ್ಯಕ್ತಿತ್ವವೇ ಹುಟ್ಟಿಕೊಂಡಿತ್ತು. ಬೋರ್ಡುಗಳ ಸೈಜಿನ ಮೇಲೆ ಸಂಭಾವನೆ. ಗೋಡೆ ಮೇಲೆ ಬರೆದರೆ ಅದೇ ಬೇರೆ ರೇಟು. ಕೆಲವರು ತಾವೇ ಬೋರ್ಡ್ ಒದಗಿಸಿಕೊಡುತ್ತಿದ್ದರು. ಮತ್ತೆ ಕೆಲವರು ನನಗೇ ವಹಿಸುತ್ತಿದ್ದರು. ಆಗ ಶುರುವಾದದ್ದು ಫಜೀತಿ. ನಾನು ಕಾರ್ಪೆಂಟರ್‌ಗಳನ್ನು ಹುಡುಕಿ ಹೊರಟೆ. ಶೀಟುಗಳನ್ನು ಕತ್ತರಿಸಿ ರೀಪರ್‌ಗಳ ಮೇಲೆ ಮೊಳೆ ಹೊಡೆದು ಉಕ್ಸ್ ಹಾಕಿ ಕೊಡಬಲ್ಲ ಕಾರ್ಪೆಂಟರುಗಳಿಗಾಗಿ ಸುತ್ತತೊಡಗಿದೆ. ಒಳ್ಳೆಯ ಕಸುಬುದಾರರು ಸಿಗುತ್ತಿರಲಿಲ್ಲ. ಅಸಡಾ ಬಸಡಾ ಮಾಡಿಕೊಡುತ್ತಿದ್ದರು. ನನ್ನ ಗ್ರಾಹಕರಿಂದ ನಾನು ಬೈಯಿಸಿಕೊಳ್ಳಬೇಕಾಗುತ್ತಿತ್ತು.

ಮಾಯಣ್ಣ ಎಂಬ ಹಳ್ಳಿಯ ಗೆಳೆಯ ನನಗೆ ಜತೆಯಾದ. ಅವನು ಬೆಳ್ಳೂರಿನ ಟೆಲಿಫೋನ್ ಎಕ್ಸ್‌ಛೇಂಜ್‌ನಲ್ಲಿ ಕೆಲಸಕ್ಕಿದ್ದ. ಅವನ ಶಿಫಾರಸ್ಸಿನಿಂದಲೂ ಒಂದೆರಡು ಬೋರ್ಡ್‌ಗಳು ದಕ್ಕಿದ್ದವು. ಯಾವುದೋ ಕಂಬ ಏರಿ ತಂತಿ ತಗುಲಿಸಿ ರಿಸೀವರ್ ಕಿವಿಗಿಟ್ಟು 'ಹಲೋ ಹಾಸನ್, ಕುಣಿಗಲ್' ಎಂದು ಉದ್ಗರಿಸುತ್ತಿದ್ದ ಅವನೇ ನನ್ನ ಪಾಲಿಗೆ ನಾಗತಿಹಳ್ಳಿಯ ನ್ಯೂಟನ್ ತರಾ ಕಾಣಿಸುತ್ತಿದ್ದ. ಸಂಜೆವರೆಗೆ ಬೋರ್ಡು ಬರೆದು ಬೆಳ್ಳೂರಿನಿಂದ ನಾಗತಿಹಳ್ಳಿಗೆ

ಸೈಕಲ್ ವಿಹಾರ ನಡೆಸಿ ವಾಪಸ್ಸಾಗುತ್ತಿದ್ದೆವು. ಮೈ ಮೇಲೆಲ್ಲ ಬಣ್ಣದ ಕಲೆ ಸೇರಿ ನಾನು ವಿಚಿತ್ರ ವಾಸನೆ ಹೊಡೆಯುತ್ತಿದ್ದೆ. ಮಳೆ ಬಿದ್ದ ದಿನಗಳಲ್ಲಿ ಹೊಲ ತೋಟದ ವ್ಯವಸಾಯದ ಕೆಲಸಕ್ಕೆ ಹೋಗುತ್ತಿದ್ದುದನ್ನು ಬಿಟ್ಟರೆ ನನ್ನ ಪ್ರಪಂಚ ಕುಂಚ, ಬಣ್ಣ, ತಗಡು, ಗೋಡೆ, ಏಣಿ, ಸೈಕಲ್ ಮುಂತಾದ ವಸ್ತುಗಳೊಂದಿಗೆ ಬೆಳೆಯತೊಡಗಿತು. ಚೆಲುವಾಂಬ ಸ್ಟೋರ್ಸ್, ವಸುದೇವ ಜೈನ್ ಬಟ್ಟೆ ಅಂಗಡಿ, ಟೂರಿಂಗ್ ಟಾಕೀಸ್, ಸಹಕಾರಿ ಸಂಘ, ನಗರಸಭೆ.... ಹೀಗೆ ನನ್ನ ಬಣ್ಣ ಹರಿಯಿತು.

ಖಾಸಗಿ ಮಳಿಗೆಗಳಾದ ಮೇಲೆ ಅಂಚೆ ಇಲಾಖೆ, ಲೋಕೋಪಯೋಗಿ ಇಲಾಖೆಯಲ್ಲಿ ಸಂಪರ್ಕ ಸಿಕ್ಕಿತು. ಬರೆಯುವುದು, ಸಂಭಾವನೆಯ ಬಿಲ್ ಮಾಡಿದ ಕೊಂಚ ದಿನದ ನಂತರ ಸಿಗುವುದು, ಇದು ಅಲ್ಲಿನ ನಿಯಮ. ಲೋಕೋಪಯೋಗಿ ಇಲಾಖೆಯಿಂದ ನಾನು ಪಡೆದ ಮೊದಲ ಗುತ್ತಿಗೆ ಮೈಲಿಗಲ್ಲುಗಳನ್ನು ಬರೆಯುವುದು. ಇದರಲ್ಲಿ ವಿಶಿಷ್ಟ ಬಗೆಯ ಶ್ರಮ - ಆನಂದ ಬೆರೆತಿತ್ತು. ಸೈಕಲ್ಲೇರಿ ಹೊರಟು ಬಿಡುತ್ತಿದ್ದೆ. ಕ್ರಮೇಣ ಸಂಖ್ಯೆಯ ಏರಿಸುತ್ತಾ, ಇಳಿಸುತ್ತಾ ಹೋಗುವ ಮೋಜು. ಒಂದು ಊರು ಹತ್ತಿರವಾ ಮತ್ತೊಂದು ದೂರಾಗುತ್ತಿತ್ತು, ಬದುಕಿನ ಸುಖದ ಮರೀಚಿಕೆಗಳ ಹಾಗೆ. ನ ಒಂದು ಬೋರ್ಡ್ ಬರೆದರೆ 25 ರೂ ಸಿಗುತ್ತಿತ್ತು. ತಿಂಗಳಿಗೆ ನೂರರಿಂ ನೂರೈವತ್ತು ಸಂಪಾದನೆ. 'ತುಂಬಾ ಹೀಟು. ತಣ್ಣಗಿನ ಬಿಯರ್ ಕುಡಿದ ಒಳ್ಳೆಯದು' ಅನ್ನುವ ಅಮೋಘ ಸಲಹೆಯನ್ನು ಮಾಯಣ್ಣನೇ ಕೊ ಇಬ್ಬರೂ ಮೂರು ರೂಪಾಯಿ ಸಮ ಬಂಡವಾಳ ಹಾಕಿ ಮೊಟ್ಟ ಮೊದ ಬಿಯರ್ ಕುಡಿದೆವು. ಅದರಲ್ಲಿ ಪಾಪಪ್ರಜ್ಞೆಗಿಂತ ದುಡಿತದ ಶ್ರಮ, ಶ್ರಮದಿಂದ ಹುಟ್ಟಿದ ಒಣಜಂಭ, ಆತ್ಮವಿಶ್ವಾಸ, ಏನೆಲ್ಲಾ ಇದ್ದವು. ಈಗಲ ನನ್ನ ಹಳ್ಳಿಯಲ್ಲಿ ಮೈಲಿಗಲ್ಲುಗಳು, ಮುರಿದ ಫಲಕಗಳು ನನ್ನನ್ನು ಆತ್ಮೀಯವಾ ಮಾತನಾಡಿಸುತ್ತವೆ. ಪುಳಕ ತರುತ್ತವೆ. ಮಾಯಣ್ಣ ಹಾಗೇ ಇದ್ದಾನೆ!

■ ನಾಗತಿಹಳ್ಳಿ ಚಂದ್ರಶೇಖ



ಮುಂಬಯಿಯಲ್ಲೊಬ್ಬ ಸಾಹಸಿ ಕನ್ನಡಿಗ ಪೋಲೀಸ್ ಅಧಿಕಾರಿ

ದ.ಕ. ಜಿಲ್ಲೆಯ ಕಾರ್ಕಳದ ಎಣ್ಣೆಹೊಳೆಯವರಾದ ದಯಾನಂದ ನಾಯಕ್ ಏಳನೇ ತರಗತಿ ತನಕ ಊರಲ್ಲೇ ಕಲಿತು ಮುಂದೆ ತಮ್ಮ ಹನ್ನೆರಡನೆಯ ವಯಸ್ಸಿನಲ್ಲಿ ಮುಂಬಯಿ ಬಸ್ಸುಹತ್ತಿದ್ದರು. ಅಲ್ಲಿ ಪಹಾಡಿ ಮುನ್ಸಿಪಲ್ ಶಾಲೆಯಲ್ಲಿ ಮೆಟ್ರಿಕ್ ತನಕ ಕನ್ನಡ ಮೀಡಿಯಂನಲ್ಲೇ ಕಲಿತು ಬಿ.ಕಾಮ್ ಡಿಗ್ರಿ ಮುಗಿಸಿದರು. ಆದರೆ ವಾಣಿಜ್ಯ ನಗರ ಮುಂಬಯಿಯಲ್ಲಿ ಜನಸೇವೆಯನ್ನು ಕೈಗೊಳ್ಳುವ ಆಸೆಯಿಂದ ಪೊಲೀಸ್ ಇಲಾಖೆಯತ್ತ ಆಕರ್ಷಿತರಾದರು. ಮುಂದೆ ವಿವಿಧ ಪರೀಕ್ಷೆಗಳನ್ನು ಮುಗಿಸಿ 1996ರಲ್ಲಿ ಜುಹು ಪೊಲೀಸ್ ಠಾಣೆಯಲ್ಲಿ ಸೇರಿ ತಮ್ಮ ಕರ್ತವ್ಯ ಆರಂಭಿಸಿದರು. ಇಂದು ಕ್ರೈಮ್ ಬ್ರಾಂಚ್‌ನಲ್ಲಿದ್ದಾರೆ.

ಇಂದು ಮುಂಬಯಿಯ ಮಾಫಿಯಾಗಳಿಗೆ ಸಿಂಹಸ್ವಪ್ನರಾಗಿದ್ದಾರೆ. ದಾವೂದ್, ಚೋಟಾರಾಜನ್, ಅಬೂಸಲೇಂ, ಬಬ್ಲೂ ಶ್ರೀವಾಸ್ತವ್, ಸುಭಾಷ್‌ಸಿಂಗ್ ಠಾಕೂರ್, ಚೋಟಾಶಕೀಲ್ ಗುಂಪಿನ 39ರಷ್ಟು ಗ್ಯಾಂಗ್‌ಸ್ಟರ್‌ಗಳನ್ನು ಕಳೆದ ನಾಲ್ಕು ವರ್ಷಗಳಲ್ಲಿ ಎನ್‌ಕೌಂಟರ್‌ನಲ್ಲಿ ಹತ್ಯೆಗೈದಿರುವ ದಯಾನಂದ ನಾಯಕ್ ಸದಾ ಅಪಾಯದ ಪರಿಸರದಲ್ಲೇ ತಿರುಗುವವರು. ಮುಂಬಯಿಯಂತಹ ಮಹಾನಗರದಲ್ಲಿರುವ ದಯಾನಂದ್ ನಾಯಕ್‌ರನ್ನು ಇಲ್ಲಿಯ ಟೈಮ್ಸ್ ಆಫ್ ಇಂಡಿಯಾ ಪತ್ರಿಕೆ "He is a 'Nayak' of encountry" ಎಂದು ವಿಶೇಷ ವರದಿ ಮೂಲಕ ಪ್ರಶಂಸಿಸಿದೆ. ಇದು ಕನ್ನಡಿಗರಿಗೂ ಹೆಮ್ಮೆ.


■ ಜೋಕಟ್ಟೆ

ಚೆಕಿಂಗ್ ಇನ್ಸ್‌ಪೆಕ್ಟರ್ : ಟಿಕೆಟ್ ಯಾಕೆ ತೊಗಳ್ಳಲಿಲ್ಲ? ಟಿಕೆಟ್ ಇಲ್ಲದೆ ಕುಳಿತುಕೊಳ್ಳುವುದು 'ಅಪರಾಧ' ಅಂತ ಬಸ್ ಒಳಗೆ ಬೋರ್ಡ್ ಹಾಕಿಲ್ವೇ?

ಪ್ರಯಾಣಿಕ : ಆ ಬೋರ್ಡನ್ನು ಓದಿದೆ. ಆದರೆ ಬಸ್ಸಿನಲ್ಲಿ ನಾನು ನಿಂತೇ ಪ್ರಯಾಣ ಮಾಡ್ತಿದ್ದೇನಲ್ಲಾ.

ಸಿಂಧನೂರಿನ

'ಸಾಧನಾ'



ಶರಣಪ್ಪ ಬರಸಿ

ಹೈದರಾಬಾದ್ ಕರ್ನಾಟಕದ ರಣಬಿಸಿಲು, ಬಡತನ ಒಂದಕ್ಕೊಂದು ಥಳುಕು ಹಾಕಿಕೊಂಡ ಹಾಗೆ ಕಾಣುತ್ತದೆ. ಈ ಭಾಗದ ರಾಯಚೂರು ಜಿಲ್ಲೆಯ ಸಿಂಧನೂರು ಇಂಥ ಎಲ್ಲವುಗಳಿಗೆ ಕನ್ನಡಿಯಂತೆ. ಇಲ್ಲಿನ ದೂಳು ತುಂಬಿದ ರಸ್ತೆಗಳು, ಕೊಳಗೇರಿಗಳು ಕಣ್ಣಿಗೆ ಬಿದ್ದಾಗ ನಿಜಕ್ಕೂ ನಾವು ಇಪ್ಪತ್ತೊಂದನೇ ಶತಮಾನದ ಹೊಸ್ತಿಲಿಗೆ ಬಂದಿದ್ದೇವೆಯೇ ಎಂಬ ಅನುಮಾನ. ಇಷ್ಟೆಲ್ಲ ದುರ್ಬಲ ಅಂಶಗಳ ಜೊತೆಗೇ, ಇಲ್ಲಿ ಸದ್ದಿಲ್ಲದೇ ಕ್ರಾಂತಿಯೊಂದು ಆರಂಭಗೊಂಡಿದೆ. ದುರ್ಬಲರನ್ನು ಅದರಲ್ಲೂ ಮಹಿಳೆಯರ ಸ್ಥಿತಿಗತಿ ಸುಧಾರಿಸುವ ಕೆಲಸ ಸಾಗಿದೆ.

ಇಲ್ಲಿನ ತೀರಾ ಹಿಂದುಳಿದ, ಕೊಳಕಾದ ಗುಡಿಸಲು ಪ್ರದೇಶಕ್ಕೆ ಬಂದರೆ ಅಲ್ಲೊಂದು ವಿಚಿತ್ರ ಚಟುವಟಿಕೆ ಕಂಡು ಬೆರಗಾಗುತ್ತೀರಿ. ಇಲ್ಲಿನ ಒಂದು ಗುಡಿಸಿಲಲ್ಲಿ ಇಪ್ಪತ್ತು ಹೆಂಗಸರು. ಎಲ್ಲ ಸಣ್ಣ ಪುಟ್ಟ ವ್ಯಾಪಾರ ಮಾಡುತ್ತಾ, ಅದರಿಂದ ಬಂದ ಹಣದಿಂದ ಜೀವನ ನಿರ್ವಹಣೆ ಮಾಡುವವರು. ಅಲ್ಲಿ ಅವರೆಲ್ಲ ಸೇರಿರುವುದು ತಮ್ಮ ಕಷ್ಟ ಸುಖ ಹಂಚಿಕೊಳ್ಳಲು. ತೀರಾ ಕಷ್ಟದಲ್ಲಿ ಇರುವ ಮಹಿಳೆಗೆ ಹಣದ ನೆರವು ಬೇಕು. ಈ ಇಪ್ಪತ್ತೂ ಜನ ತಲಾ ಐವತ್ತು ರೂಪಾಯಿ ಹಾಕುತ್ತಾರೆ. ಸಾವಿರ ರೂಪಾಯಿ ಸೇರುತ್ತದೆ. ಕಷ್ಟದಲ್ಲಿರುವ ಮಹಿಳೆಯ ಮುಖದಲ್ಲಿ ಬೆಳಕು ಕಾಣುತ್ತದೆ. ಆಕೆಗೆ ಈ ಸಾವಿರ ರೂಪಾಯಿ ದೊರೆಯುತ್ತದೆ.



ಗಿರಿಜಮ್ಮ

ಹಣ ಸಾಲವೇನೋ ನಿಜ. ಆದರೆ ಅದಕ್ಕೆ ಬಡ್ಡಿ ಇಲ್ಲ. ಒಂದೇ ಸಲ ಹಿಂದಿರುಗಿಸಬೇಕೆಂಬ ನಿಯಮವಿಲ್ಲ. ಮುಂದಿನ ಇಪ್ಪತ್ತು ವಾರ, ವಾರಕ್ಕೆ ಐವತ್ತು ರೂಪಾಯಿಯಂತೆ ಹಿಂದಿರುಗಿಸಿ ಸಾಲ ಮುಟ್ಟಿಸಿದರೆ ಆಯಿತು. ಇಂಥ ಸುಲಭ ಹಾಗೂ ಸರಳ ಯೋಜನೆ ಹಮ್ಮಿಕೊಂಡು, ಯಶಸ್ವಿಯಾಗಿ ನಡೆಸುತ್ತಾ ಇರುವುದೇ ಸಿಂಧನೂರಿನ 'ಸಾಧನಾ' ಸಂಸ್ಥೆ. ನಾಲ್ಕು ವರ್ಷದ ಹಿಂದೆ ಈ ಸ್ವಯಂ ಸೇವಾಸಂಸ್ಥೆ ಹುಟ್ಟಿತು. ನಾನಾ ಶಿಬಿರ, ಕಾರ್ಯಾಗಾರ ಹಮ್ಮಿಕೊಂಡು ಯಶಸ್ವಿಯಾಗಿ ನಡೆಸಿತು. 1998ರಿಂದ ಸ್ವಯಂ ಸಹಾಯ ವ್ಯವಸ್ಥೆ ಜಾರಿಗೆ ತರಲಾಯಿತು. ಅಂದಿನಿಂದ ಇಲ್ಲಿನ ಅಸಹಾಯಕ ಸ್ಥಿತಿಯಲ್ಲಿರುವ ಹೆಣ್ಣು ಮಕ್ಕಳ ಬದುಕಿನಲ್ಲಿಯೂ ಬೆಳಕು ಕಾಣಿಸಿಕೊಂಡಿದೆ.



ಮೈಮೂದಾ ಬೇಗಂ

ಗುಡಿಸಲು ಪ್ರದೇಶದ ಬಾಲ ಕಾರ್ಮಿಕರಿಗಾಗಿಯೇ ಸಂಸ್ಥೆ ಶಾಲೆಯೊಂದನ್ನು ನಡೆಸುತ್ತಾ ಬಂದಿದೆ. ಈ ವರ್ಷ ಈ ಶಾಲೆಗೆ ಐವತ್ತು ಮಕ್ಕಳು ಸೇರಿದ್ದಾರೆ.

ಕೇವಲ ಸಿಂಧನೂರು ಮಾತ್ರವಲ್ಲದೇ, ಹತ್ತಿರದ ಹಳ್ಳಿಗಳಾದ ಉದ್ಬಾಳ, ಗೋಮರ್ಸಿ, ಮಾಡಸಿರವಾರ, ಬೆಳಗುರ್ಕಿ, ಅಲಬನೂರು, ಗಿಣಿವಾರಗಳಿಗೂ ಸಾಧನಾ ಸಂಸ್ಥೆಯ ಕಾರ್ಯಕ್ಷೇತ್ರ ವ್ಯಾಪಿಸಿದೆ.

ಸಾಧನಾ ಸಂಸ್ಥೆಯ ತ್ವರಿತ ಬೆಳವಣಿಗೆಯ ರೂವಾರಿ, ಕಾರ್ಯದರ್ಶಿಯಾಗಿರುವ ಶರಣಪ್ಪ ಬರಸಿ. ವೃತ್ತಿಯಿಂದ ವಕೀಲರಾದ ಇವರು, ಚಿಕ್ಕಂದಿನಿಂದಲೂ ಸಮಾಜದ ಸೇವೆಗೆ ತೊಡಗಿಸಿಕೊಂಡವರು. ನಾವು ಮಾತ್ರ ಚೆನ್ನಾಗಿ ಬದುಕಿದರೆ ಸಾಲದು, ನಮ್ಮ ಸುತ್ತ ಇರುವವರೂ ಚೆನ್ನಾಗಿ ಬದುಕುವಂತೆ ಮಾಡಬೇಕೆಂಬುದೇ ಇವರ ಹೆಬ್ಬಯಕೆ.

ಈಚೆಗೆ ಸಾಧನಾ ಸಂಸ್ಥೆ ವೃದ್ಧರಿಗಾಗಿಯೇ 'ಡೇ ಕೇರ್ ಸೆಂಟರ್' ಒಂದನ್ನು ಆರಂಭಿಸಿದೆ.

ಪ್ರೇಮಿಸಿ, ಅಂತರ್ಜಾತೀಯ ಮದುವೆಯಾದ ಗಿರಿಜಮ್ಮನ ಬದುಕು ಚೆನ್ನಾಗಿಯೇ ಇತ್ತು. ಒಂದು ದಿನ ಗಂಡ ಮನೆ ಬಿಟ್ಟು ಹೋದ. ಮೂವರು ಮಕ್ಕಳನ್ನು ಸಾಕಿ ಬೆಳೆಸುವ ಹೊಣೆ ಆಕೆಯ ಮೇಲೆ. ತಂದೆ, ತಾಯಿ, ಅಣ್ಣ, ತಂಗಿಯರೂ ಈಗಾಗಲೇ ದೂರವಾಗಿದ್ದರು. ಸಿಂಧನೂರಿನ ಗುಡಿಸಲು ಪ್ರದೇಶಕ್ಕೆ ಬಂದು ಟೈಲರಿಂಗ್ ಆರಂಭಿಸಿದ ಗಿರಿಜಮ್ಮ ಸಣ್ಣ ಪ್ರಮಾಣದಲ್ಲಿ ಬಟ್ಟೆ ವ್ಯಾಪಾರ ಕೂಡ ಆರಂಭಿಸಿದ್ದಾಳೆ. ತನ್ನ ಪುಟಾಣಿ ಉದ್ಯಮದಲ್ಲಿ ಇನ್ನೊಬ್ಬ ವಿಧವೆಗೆ ಕೆಲಸ ಕೊಟ್ಟಿದ್ದಾಳೆ. ಆಕೆ ಬದುಕಲ್ಲಿ ನೆಲೆಯಾಗಿ ನಿಲ್ಲಲು ನೆರವಾಗಿದ್ದು ಸಾಧನಾ. ಈಗ ಗಿರಿಜಮ್ಮನೇ ಶಾರದಾ ಮಹಿಳಾ ಸ್ವಸಹಾಯ ಸಂಘದ ಅಧ್ಯಕ್ಷೆ.

ಮಹಬೂಬ ಕಾಲನಿ ಕೊಳಗೇರಿಯಲ್ಲಿ ಹೆಚ್ಚಾಗಿ ಇರುವವರು ಮುಸ್ಲಿಮರು. ಇಲ್ಲಿರುವ ಹೆಣ್ಣು ಮಕ್ಕಳ ಅನುಕೂಲಕ್ಕಾಗಿ ಸಾಧನಾದ ವತಿಯಿಂದ ಭವಾನಿ ಮಹಿಳಾ ಸಂಘ ಸ್ಥಾಪಿತವಾಯಿತು. ಕಾರ್ಯದರ್ಶಿಯಾಗಿ ಮೈಮೂದಾ ಬೇಗಂ ಆಯ್ಕೆಯಾದರು. ಆಗಿನಿಂದ ಈಕೆಯೇ ಇಡೀ ಕೊಳಗೇರಿಯ ಕಾರ್ಯಚಟುವಟಿಕೆಯ ಕೇಂದ್ರ. ಜಡ್ಡಾದವರನ್ನು ಆಸ್ಪತ್ರೆಗೆ ಕರೆದೊಯ್ಯುವುದರಿಂದ ಹಿಡಿದು, ಯಾರದಾದರೂ ಮನೆಯಲ್ಲಿ ಮದುವೆ ಗೊತ್ತಾದರೆ, ಬಂಗಾರ ಖರೀದಿಗೂ ಮೈಮೂದಾ ಬೇಗಂ ಬೇಕೇ ಬೇಕು ಎನ್ನುವಂತಾಗಿದೆ.

ಹೀಗೆ ಹಲವು ಜನರ ಬದುಕು ಹಸನಾಗಿಸುತ್ತಾ ಸಾಗಿರುವ ಸಾಧನಾ, ಮುಂದಿನ ವರ್ಷಗಳಲ್ಲಿ ಬಹುದೊಡ್ಡ ಸಾಧನೆ ಮಾಡಿದರೆ ಆಶ್ಚರ್ಯವೇನೂ ಇಲ್ಲ.

■ ರಮೇಶ್ ವಿ.



ಸುತ್ತಲೂ ಗಗನ ಚುಂಬಿಸುವಂತೆ ಆವರಿಸಿರುವ ಭಾರೀ ಗಾತ್ರದ ಕಲ್ಲು ಗುಂಡುಗಳು, ಇವುಗಳ ನಡುವೆ ಇಣುಕು ಹಾಕುವಂತೆ ಕಾಣುವ ಹಚ್ಚಹಸಿರಿನ ಗಿಡಮರಗಳು, ಇವುಗಳ ಮಧ್ಯ ತಿಳಿನೀರಿನಿಂದ ಅತ್ಯಾಕರ್ಷಕವಾಗಿ ಕಂಗೊಳಿಸುವುದೇ ಪಂಪಾಸರೋವರ. ಜನದಟ್ಟಣೆಯಿಂದ ದೂರದಲ್ಲಿರುವ ಈ ಪರಿಸರ ಒಂದು ರಮ್ಯ ತಾಣದಂತಿದೆ. ದಣಿದು ಬಂದ ಪ್ರವಾಸಿಗರಿಗೆ ಮೊದಲ ನೋಟದಲ್ಲೇ ನೋಡುಗರ ಮನಸೆಳೆದು ನಮ್ಮನ್ನು ಯಾವುದೋ ಲೋಕಕ್ಕೆ ಕರೆದೊಯ್ಯುತ್ತದೆ. ಇನ್ನು ಅಲ್ಲಿ ಮಾತಿಗೆ ಅವಕಾಶವಿಲ್ಲ, ಮೌನವೇ ನಮ್ಮನ್ನು ಬಂಧಿಸುತ್ತದೆ. ನೆಮ್ಮದಿಯನ್ನು ಅರಸಿ ಬಂದವರಿಗೆ ಇಲ್ಲಿದ್ದಷ್ಟೂ ಕಾಲ ರಮಣೀಯವಾದ ಸೌಂದರ್ಯವನ್ನು ಕಣ್ಣಲ್ಲಿ, ಮನಸಲ್ಲಿ ತುಂಬಿಕೊಳ್ಳುವುದಷ್ಟೇ ಕೆಲಸವಾಗುತ್ತದೆ. ಛಾಯಾಗ್ರಾಹಕರಿಗಂತೂ ಈ ಪ್ರದೇಶ ಆತ್ಮೀಯವಾಗಿ ಹೇಳಿ ಮಾಡಿಸಿಟ್ಟಂತಿದೆ. ಎಷ್ಟು ಕೋನಗಳಿಂದ ನಾನಾ ವಿಧದಲ್ಲಿ ಛಾಯಾಚಿತ್ರಗಳನ್ನು ತಮ್ಮ ಕ್ಯಾಮೆರಾದಲ್ಲಿ ಸೆರೆಹಿಡಿದರೂ ಸಮಾಧಾನವಾಗುವುದಿಲ್ಲ.

ಇತಿಹಾಸ ಪ್ರಸಿದ್ಧ ಆನೆಗುಂದಿಯು ಹೊಸಪೇಟೆಯಿಂದ ಸುಮಾರು ಹದಿನೈದು ಕಿ.ಮಿ. ದೂರದಲ್ಲಿ ತುಂಗಭದ್ರಾ ನದಿಯ ಎಡದಂಡೆ ಮೇಲಿರುವ ಪುಟ್ಟ ಗ್ರಾಮ. ಇಲ್ಲೊಂದು ಅಪರೂಪದ ಪ್ರವಾಸಿ ತಾಣವಿದೆ. ಅದೇ 'ಪಂಪಾಸರೋವರ'. ಇದು ಆನೆಗುಂದಿಯಿಂದ ಸುಮಾರು ನಾಲ್ಕು ಕಿ.ಮಿ. ಅಂತರದಲ್ಲಿದೆ. ಅಂದರೆ ಇಲ್ಲಿಂದ ಗಂಗಾವತಿಗೆ ಹೋಗುವ ಮಾರ್ಗದಲ್ಲಿ ಎಡಕ್ಕೆ ಹೊರಳಿದರೆ ಮಣ್ಣಿನ ಮಾರ್ಗ ಬರುತ್ತದೆ. ಆ ಮಾರ್ಗದಲ್ಲಿ ಸ್ವಲ್ಪ ದೂರ ನಡೆದರೆ ಈ ಸ್ಥಳ ಕಂಡುಬರುತ್ತದೆ.

ಈ ಭೂಮಿಯ ಮೇಲೆ ನಾಲ್ಕು ಪವಿತ್ರ ಸರೋವರಗಳಿವೆಯೆಂಬುದು

ಜನರ ನಂಬಿಕೆಯಾಗಿದೆ. ಟಿಬೆಟ್‌ನ ಮಾನಸ ಸರೋವರ, ಗುಜರಾತ್‌ನ ಬಿಂದುಸರೋವರ, ಅಸ್ಸಾಂನ ನಾರಾಯಣ ಸರೋವರ ಹಾಗೂ ಕರ್ನಾಟಕದ ಆನೆಗೊಂದಿಯ ಪಂಪಾಸರೋವರ ಈ ನಾಲ್ಕು ಪವಿತ್ರ ಸರೋವರಗಳು. ಈ ರೀತಿ ನಿಸರ್ಗದತ್ತವಾಗಿ ಉದ್ಭವಿಸಿರುವ ಸರೋವರ ಅನೇಕ ಪುರಾಣ ಕಥೆಗಳನ್ನು ತನ್ನ ಒಡಲಲ್ಲಿಟ್ಟುಕೊಂಡಿದೆ.


'ಪಂಪಾ' ಶಬ್ದ ದ್ರಾವಿಡ ಭಾಷಾ ಪದವೆಂದು ಭಾವಿಸಲಾಗಿದೆ. ಕ್ರಿ.ಶ. 1053ರ ಶಾಸನದಲ್ಲಿ ಇದರ ಬಗೆಗೆ ಉಲ್ಲೇಖ ಕಂಡುಬರುತ್ತದೆ. ಅಲ್ಲದೆ ಈ ಪಂಪಾ ಕ್ಷೇತ್ರದ ಹೆಸರು ವಿಜಯನಗರ ಪೂರ್ವದಿಂದಲೂ ಇತ್ತೆಂಬುದು ಶಾಸನದಿಂದ ತಿಳಿದು ಬರುತ್ತದೆ. ಈಗಿನ ಹಂಪೆಯನ್ನು 'ಪಂಪಾಪುರ'ವೆಂದು ಕರೆಯಲಾಗುತ್ತಿದ್ದು,

'ಪಂಪಾ' ಎಂಬುದು ತುಂಗಭದ್ರಾ ನದಿಯ ಪ್ರಾಚೀನವಾದ ಹೆಸರೆಂಬ ನಂಬಿಕೆಯಿದೆ. ವಿಜಯನಗರ ಕಾಲದಲ್ಲಿ ಕ್ರಿ.ಶ. 1400ರ ಶಾಸನದಲ್ಲಿ 'ಪಂಪಾ ಸರಸ್' ಎಂದು, 1534ರ ಶಾಸನದಲ್ಲಿ 'ಸೀತಾಕುಂಡ' ವೆಂತಲೂ ಕರೆಯಲಾಗಿದೆ.

ಈ ಪರಿಸರವನ್ನು ಹಿಂದೆ 'ಕಿಷ್ಕಿಂಧೆ' ಎಂಬ ಹೆಸರಿನಿಂದ ಕರೆಯಲಾಗುತ್ತಿತ್ತು. ಇಲ್ಲಿ ವಿದ್ಯಾರಣ್ಯರು ವಾಸವಾಗಿದ್ದರೆಂದು ಅವರು ಹಿಂದೂ ಸಾಮ್ರಾಜ್ಯದ ಉಳಿವಿಗಾಗಿ ದೀರ್ಘ ತಪಸ್ಸನ್ನಾಚರಿಸಿದರೆಂದೂ ತಿಳಿದುಬರುತ್ತದೆ.

ದೇವಾಲಯದ ಪರಿಚಯ : ಈ ಸರೋವರದ ದಡದ ಮೇಲೆ ಪಂಪಾಂಬಿಕೆಯ ದೇವಸ್ಥಾನವಿದೆ. ಪಂಪಾಂಬಿಕೆಯ ವಿಗ್ರಹವನ್ನು ವಿದ್ಯಾರಣ್ಯರು ಶ್ರೀ ಚಕ್ರದ ಮೇಲೆ ಪ್ರತಿಷ್ಠಾಪಿಸಿರುವರೆಂಬುದು ಈಗಾಗಲೇ ವ್ಯಕ್ತವಾಗಿರುವ ವಿಚಾರ. ಈ ಪಂಪಾಂಬಿಕೆ ಮೂರ್ತಿಯನ್ನು ಈಚೆಗೆ ಇಲ್ಲಿ ನೆಲೆಸಿರುವ ಕೆಲ ಸಾಧುಗಳು ವಿಜಯಲಕ್ಷ್ಮಿ, ಜಯಲಕ್ಷ್ಮಿ ಎಂಬ ಹೆಸರುಗಳಿಂದ ಕರೆಯುತ್ತಿದ್ದಾರೆ. ಈ ದೇವಾಲಯ ಗರ್ಭಗುಡಿ ಹಾಗೂ ಮುಖಮಂಟಪವನ್ನೊಳಗೊಂಡಿದೆ. ಇದರ ಪಕ್ಕದಲ್ಲಿ ಈಶ್ವರ ದೇವಾಲಯವಿದೆ. ಇಲ್ಲಿ ಬಂಡೆಯ ಮೇಲೆ ಕೆತ್ತಲಾದ ಧ್ಯಾನಮಗ್ನವಾಗಿರುವ ವ್ಯಕ್ತಿಯ ಉಬ್ಬುಶಿಲ್ಪವಿದೆ. ಇದೇ ವಿದ್ಯಾರಣ್ಯರ ಶಿಲ್ಪವೆಂದು ಇಲ್ಲಿನ ಜನರು ಹೇಳುತ್ತಾರೆ. ಇಲ್ಲಿರುವ ಕಂಬಗಳ ಮೇಲೆ ಉಬ್ಬುಶಿಲ್ಪಗಳ ಕೆತ್ತನೆ ಕಂಡುಬರುತ್ತದೆ.

ಶಬರಿ ಗುಹೆ : ಈ ಸ್ಥಳವು ರಾಮಾಯಣದ ಕಾಲದಲ್ಲಿ ಅಂದರೆ ತ್ರೇತಾಯುಗದಲ್ಲಿ ಸಂಭವಿಸಿದ ಕೆಲ ಘಟನೆಗಳನ್ನು ನೆನಪಿಗೆ ತರುತ್ತದೆ. ಸೀತೆಯು ಒಮ್ಮೆ ಇಲ್ಲಿನ ಸರೋವರದಲ್ಲಿ ಸ್ನಾನಾದಿಗಳನ್ನು ಮಾಡಿದ್ದು, ನಿತ್ಯವೂ ರಾಮನಿಗಾಗಿ ಕಾಯುತ್ತಿದ್ದಳಂತೆ ಶಬರಿಯು ಇಲ್ಲಿನ ಗುಹೆಯೊಂದರಲ್ಲಿ ವಾಸವಾಗಿದ್ದಳೆಂಬುದಕ್ಕೆ ಆಧಾರವಾಗಿ ಜಯಲಕ್ಷ್ಮಿ ದೇವಾಲಯದ ಬಲಪಕ್ಕದಲ್ಲಿರುವ ಗುಹೆಯೇ ಸಾಕ್ಷಿಯಾಗಿದೆ. ಇದಕ್ಕೆ 'ಶಬರಿಗುಹೆ' ಎನ್ನಲಾಗುತ್ತಿದೆ. ಒಮ್ಮೆ ಸೀತೆಯನ್ನು ಹುಡುಕುತ್ತಾ ಬಂದ ರಾಮ-ಲಕ್ಷ್ಮಣರಿಗೆ ಶಬರಿಯು ತನ್ನ ಗುಹೆಯೊಳಕ್ಕೆ ಸ್ವಾಗತಿಸಿ ಹಣ್ಣು-ಹಾಲು ನೀಡಿ ಸತ್ಕರಿಸಿದಳೆಂಬುದು ಇಲ್ಲಿನ ಜನ ತಮ್ಮ ಕಥೆಯಲ್ಲಿ ಹೇಳುವುದುಂಟು.



ರಾಮಚರಿತ ಮಾನಸದಲ್ಲಿ : ತುಳಸೀದಾಸರ 'ರಾಮಚರಿತ ಮಾನಸದಲ್ಲಿ' ಪಂಪಾಸರೋವರದ ವರ್ಣನೆ ಮೋಹಕವಾಗಿ ಮೂಡಿಬಂದಿದೆ. ''ಪಂಪಾಸರೋವರದ ಜಲವು ಸಂತರ ಹೃದಯದಂತೆ ನಿರ್ಮಲ, ಅದರೊಳಗಿದ್ದ ಎಲ್ಲ ರೀತಿಯ ಮೀನುಗಳು ಏಕರೀತಿಯಾಗಿ ಸುಖಿಯಾಗಿದ್ದವು. ಅದರಲ್ಲಿ ಬಣ್ಣ ಬಣ್ಣದ ಕಮಲಗಳು ಅರಳಿದ್ದವು. ಚಕ್ರವಾಕ, ಕೊಕ್ಕರೆ, ಮೊದಲಾದ ಪಕ್ಷಿಗಳ ಚೆಲುವು ವರ್ಣನಾತೀತ. ಈ ಸರೋವರದ ತೀರದಲ್ಲಿ ದಟ್ಟವಾದ ಕಾಡು ಇದೆ. ಅಲ್ಲಿ ಸಂಪಿಗೆ, ಬಕುಳ, ಕದಂಬಿ, ಕಮಲ, ಪಾದರಿ, ಹಲಸು, ಮುತ್ತುಗ, ಮಾವು ಮೊದಲಾದ ಅನೇಕ ರೀತಿಯ ಸಸ್ಯಗಳು, ಮರಗಳು ಸುಗಂಧಪೂರ್ಣ ಕುಸುಮಗಳಿಂದ ಕಂಗೊಳಿಸುತ್ತಿದ್ದವು. ಶ್ರೀರಾಮ ಈ ಸರೋವರವನ್ನು ಕಂಡು ಅದರಲ್ಲಿ ಮಿಂದು ಪರಮಸುಖವನ್ನು ಅನುಭವಿಸಿದ. ನಂತರ ಅಲ್ಲಿನ ಒಂದು ಸುಂದರ ತರುವರದ ಕೆಳಗೆ ತಂಪಾದ ನೆರಳಿನಲ್ಲಿ ತನ್ನ ತಮ್ಮ ಲಕ್ಷ್ಮಣನೊಂದಿಗೆ ಹೋಗಿ ಕುಳಿತುಕೊಂಡ'' ಎಂಬುದಾಗಿ ಅದರಿಂದ ತಿಳಿದುಬರುತ್ತದೆ.

ಶ್ರೀ ಪಂಪಾಮಹಾತ್ಮೆಯಲ್ಲಿ ಶ್ರೀಗುರು ಓಂಸಿದ್ಧಲಿಂಗೇಶ್ವರ ಸ್ವಾಮಿಗಳವರು ಬರೆದ 'ಶ್ರೀಪಂಪಾಮಹಾತ್ಮೆ'ಯಲ್ಲಿ ಬರುವ ಕಥೆಯ ಪ್ರಕಾರ ಪಂ-ಎಂದರೆ ಅಮೃತ, ಪಾ-ಎಂದರೆ ಸ್ವರ್ಗ, ಅ-ಎಂದರೆ ದೀನ ಇದು ಪಂಪಾ-ಶಬ್ದದ ಅರ್ಥ. ನಿಜವಾಗಿಯೂ ಬೇಡುವವರಿಗೆ ಭಕ್ತಿ ಹಾಗೂ ಮುಕ್ತಿಗಳನ್ನು ಕೊಟ್ಟು ರಕ್ಷಿಸುವವಳು ಎಂಬ ಅರ್ಥವುಳ್ಳ ಪಂಪಾ ಹೆಸರು ನಿನಗೆ ಭೂಷಣಪ್ರಾಯವೆಂದು ಬ್ರಹ್ಮನು ಪಾರ್ವತಿದೇವಿಯ ತಪಸ್ಸಿಗೆ ಮೆಚ್ಚಿ ಅವಳಿಗೆ 'ಪಂಪಾ' ಎಂದು ನಾಮಕರಣ ಮಾಡಿದನೆಂದೂ ತಿಳಿಯುತ್ತದೆ. ಈ ರೀತಿ ಬ್ರಹ್ಮನ ಮಾನಸ ಪುತ್ರಿಯಾದ ಪಂಪಾದೇವಿಯು ವಿರೂಪಾಕ್ಷನನ್ನು ಕುರಿತು ಮೊದಲು ತಪಸ್ಸು ಮಾಡಿದ್ದು ಈ ಸರೋವರದಲ್ಲಾದ್ದರಿಂದ ಅವಳ ತಪಸ್ಸಿಗೆ ಮೆಚ್ಚಿದ ವಿರೂಪಾಕ್ಷನು ಆ ಸರೋವರಕ್ಕೆ 'ಪಂಪಾಸರೋವರ'ವೆಂದು ಕರೆದನು. ಹಂಪಿಯಲ್ಲಿರುವ ಪಂಪಾಂಬಿಕೆ ಮೊದಲು ಇಲ್ಲಿ ನೆಲೆಸಿದ್ದರಿಂದ ಇದಕ್ಕೆ 'ಆದಿ ಪಂಪಾಕ್ಷೇತ್ರ'ವೆಂದು ಕರೆಯಲಾಗುತ್ತದೆ.

ಇಲ್ಲಿ ಪ್ರತಿ ಚೈತ್ರ ಶುದ್ಧ ಹುಣ್ಣಿಮೆಯ ದಿನದಂದು ಹನುಮಾನ್ ಜಯಂತಿ ಹಾಗೂ ಜಯಲಕ್ಷ್ಮಿ ಉತ್ಸವ ಬಹಳ ವಿಶೇಷವಾಗಿ ಆಚರಿಸಲಾಗುತ್ತದೆ. ಕಾರ್ತಿಕಶುದ್ಧ ಗೌರಿ ಹುಣ್ಣಿಮೆಯ ದಿನದಲ್ಲಿ ಸುತ್ತಮುತ್ತಲ ಊರುಗಳಿಂದ ಅನೇಕ ಭಕ್ತರು ಈ ಸರೋವರದಲ್ಲಿ ಪುಣ್ಯಸ್ನಾನ ಮಾಡುತ್ತಾರೆ. ಕೆಲವರು ಈ ದಿನ ಅನ್ನಸಂತರ್ಪಣೆ ಮಾಡುತ್ತಾರೆ.

ಈಗ ಕಂಡುಬರುತ್ತಿರುವ ಈ ಸರೋವರವನ್ನು ನಾಲ್ಕು ವರುಷಗಳ ಹಿಂದೆ ನೂತನವಾಗಿ ದುರಸ್ತಿ ಮಾಡಲಾಗಿದೆ. ಸುತ್ತಲೂ ನಾಲ್ಕು ಕಡೆಗಳಲ್ಲಿ ಕಲ್ಲಿನ ಮೆಟ್ಟಿಲುಗಳನ್ನು ಪಾವಟಿಗೆಗಳನ್ನು ನಿರ್ಮಿಸಲಾಗಿದೆ. ಈ ಸರೋವರದ ವಿಸ್ತಾರ ಪೂರ್ವಪಶ್ಚಿಮವಾಗಿ ಸುಮಾರು ಎಂಭತ್ತು ಮೀಟರ್ ಉದ್ದವಾಗಿಯೂ, ದಕ್ಷಿಣೋತ್ತರವಾಗಿ ಸುಮಾರು ಐವತ್ತು ಮೀಟರ್ ಅಗಲವಾಗಿಯೂ ಕಂಡುಬರುತ್ತದೆ. ಇದರಲ್ಲಿ ತುಂಬಿದ್ದ ಹೂಳನ್ನು ಅದೇ ಸಂದರ್ಭದಲ್ಲಿ ತೆಗೆಯಲಾಗಿದೆ. ಇದರ ಆಳ ಸುಮಾರು ಹದಿನೈದು ಅಡಿಗಳಷ್ಟಿದೆಯೆಂದು ತಿಳಿದು ಬರುತ್ತದೆ.

ಈ ಸರೋವರದ ಸುತ್ತಮುತ್ತ ಸ್ವಲ್ಪ ದೂರದಲ್ಲಿ ವಾಲಿಭಂಡಾರ, ರಾಮನಗುಹೆ, ಚಿಂತಾಮಣಿ ಮಠ ಮತ್ತು ಮಾಲ್ಯವಂತ, ಹೇಮಕೂಟ, ಮಾತಂಗ, ಅಂಜನಾದೇವಿ, ತಾರಾದೇವಿ, ಋಷ್ಯಮೂಕ ಮುಂತಾದ ಪರ್ವತಗಳ ಸಾಲುಗಳು ಅಲ್ಲದೆ ಹತ್ತಿರದಲ್ಲಿ ಮಹಾತ್ಮರ ಒಂಭತ್ತು ವೃಂದಾವನಗಳು ಕೂಡ ಕಂಡುಬರುತ್ತವೆ.


ಇಲ್ಲಿನ ಬೆಟ್ಟ ಮತ್ತು ಪರಿಸರಕ್ಕೆ ತನ್ನದೇ ಆದ ಪೌರಾಣಿಕ ಹಿನ್ನೆಲೆ ಏನೇ ಇರಬಹುದು. ಆದರೆ ಕಣ್ಮನಗಳನ್ನು ಸೂರೆಗೊಳ್ಳುವ ಬೆಟ್ಟ ಸಾಲುಗಳು, ಆಧ್ಯಾತ್ಮಿಕ ಭಾವನೆಯನ್ನು ತೀವ್ರಗೊಳಿಸುವ ಪವಿತ್ರ ಎಡೆಗಳು, ಸುಂದರ ವೈವಿಧ್ಯಮಯ ಆಕೃತಿಗಳನ್ನೊಳಗೊಂಡ ಬೃಹತ್ ಕಲ್ಲುಗುಂಡುಗಳು ಮೊದಲಾದ ಅರ್ಹತೆಗಳನ್ನೊಳಗೊಂಡ ಪಂಪಾಸರೋವರದ ಪರಿಸರದಲ್ಲಿ ಸ್ವಲ್ಪಹೊತ್ತು ಕಾಲಕಳೆಯುವಾಗ ಆಗುವ ರೋಮಾಂಚನಕಾರಿಯಾದ ಅನುಭವಗಳೇ ಬೇರೆ. ಆದ್ದರಿಂದ ಪ್ರವಾಸಿಗರೆ, ನೀವೂ ಒಮ್ಮೆ ಈ ಸುಂದರ ಪರಿಸರಕ್ಕೆ ಮರೆಯದೇ ಭೇಟಿಕೊಡಿ.

■ ರಾಜಶೇಖರ ಜಮದಂಡಿ

ಅಂತರ್ಮುಖ

ಕತೆ

ತೆಲುಗು : ಮಲ್ಲಾದಿ ವೆಂಕಟಕೃಷ್ಣಮೂರ್ತಿ
ಕನ್ನಡಕ್ಕೆ : ಪಿ. ಶ್ರೀಕಾಂತ್



'ಡೈರಿ ಅಂದರೆ ನಮ್ಮೊಳಗಿನ ಶತ್ರುವನ್ನು ಪರಿಚಯಿಸೋ ಅಂತರ್ಮುಖ' - ತಾನು ತುಂಬಾ ಇಷ್ಟಪಡೋ ಚಿಕ್ಕಪ್ಪ ಬರೆದುಕೊಟ್ಟಿದ್ದ ಈ ಸಾಲು ತನ್ನ ಡೈರಿಯ ಮೊದಲ ಪುಟದಲ್ಲಿ ಕಾಣಿಸಿತು ಶಶಾಂಕನಿಗೆ - ಆ ಸಾಲನ್ನು ಬಹುಶಃ ಆತ ಕೆಲವು ಸಾವಿರ ಸಲ ಓದಿರಬಹುದು.

ಆ ಡೈರಿಯೆಂದರೆ ಶಶಾಂಕನಿಗೆ ತುಂಬಾ ಇಷ್ಟ - ತನ್ನನ್ನು ಲೇಖಕನನ್ನಾಗಿ ಮಾಡಿದ್ದು ಆ ಡೈರಿಯೇ ಅಂತ ಗಾಢನಂಬಿಕೆ. ಆತನ ಹದಿನಾಲ್ಕನೇ ಹುಟ್ಟುಹಬ್ಬದ ದಿನ ಆಫೀಸಿನ ಕೆಲಸದ ಮೇಲೆ ಊರಿಗೆ ಬಂದಿದ್ದ ಚಿಕ್ಕಪ್ಪ ಉಡುಗೊರೆಯಾಗಿ ಕೊಟ್ಟಿದ್ದ ಡೈರಿ ಅದು.

''ಅಂತರ್ಮುಖ'' ಅಂದ್ರೆ ಏನು ಚಿಕ್ಕಪ್ಪ?'

ಸಣ್ಣದಾಗಿ ನಕ್ಕು ಅವರು ಹೇಳಿದರು.

''ಮರೀ ನೀನು ತುಂಬಾ ಚಿಕ್ಕೋನಿದ್ದಾಗಿಂದ ನನಗೆ ಚೆನ್ನಾಗಿ ಗೊತ್ತು. ನಿನಗೆ ಪರಿಚಯದವರು - ಶತ್ರುಗಳು ಹೊರತುಪಡಿಸಿದರೆ 'ಸ್ನೇಹಿತ' ಅಂಬೋನು ಒಬ್ನೂ ಇಲ್ಲ ಅಂತ ಬೇಸರಪಡದ ದಿನ ಇಲ್ಲ. ನಿನಗೆ ಲೈಫಲ್ಲಿ ತುಂಬಾ ಬೇಜಾರಾದಾಗ, ಮನಶ್ಶಾಂತಿ ಸಿಗದೇ ಇದ್ದಾಗ ಇದನ್ನು ಓದು - ನಿನಗೇ ಗೊತ್ತಾಗುತ್ತದೆ. ನೀನು ಯಾರು? ಎಲ್ಲಿಂದ ಎಲ್ಲಿಗೆ ಹೋದೆ? ಅಂತ. ಬಹುಶಃ ಆಗ ನಿನ್ನ ನಿಜವಾದ ವಯಸ್ಸು ಹದಿನಾಲ್ಕು ಆಗಿರುತ್ತದೆ''

ಶಶಾಂಕನಿಗೆ ಏನೂ ಅರ್ಥವಾಗಲಿಲ್ಲ.

''ನಿನ್ನ ಮನಸ್ಸಿಗೆ ಅನ್ನಿಸಿದ್ದು - ಹೊರಗೆ ಹೇಳಿಕೊಳ್ಳಲಾರದಂಥದನ್ನು ಇದರಲ್ಲಿ ಬರೆದುಕೋ''

ಶಶಾಂಕ ಆ ಡೈರಿಯಲ್ಲಿ ತನಗೆ ಅತಿಯಾಗಿ ಹಿಡಿಸಿದ ಕೊಟೇಶನ್ಸ್, ಸಣ್ಣ ಸಣ್ಣ ಕವನಗಳನ್ನು ಬರೆದುಕೊಳ್ಳುತ್ತಿದ್ದ. ಆಗಾಗ ತನ್ನ ಕತೆ, ಕಾದಂಬರಿಗಳಲ್ಲಿ ಅವನ್ನು ಬಳಸುತ್ತಿದ್ದ.

ಆ ದಿನ ಮಾತ್ರ ಶಶಾಂಕ ತುಂಬಾ ಬೇಸರಗೊಂಡಿದ್ದ.

ಅದಕ್ಕೆ ಮುಖ್ಯ ಕಾರಣ ಭರದ್ವಾಜ !

ಹೈದರಾಬಾದ್‌ಗೆ ಮರಳಿದ ನಂತರ ಅತ್ಯಧಿಕ ಪ್ರಸಾರವುಳ್ಳ ವೀಕ್ಲಿ ಉಪಸಂಪಾದಕರನ್ನು ಭೇಟಿಯಾದ - ಪತ್ರಿಕೆಗೆ ಬಂದ ಕತೆಗಳೆಲ್ಲವನ್ನೂ ಓದಿ ಆಯ್ಕೆ ಮಾಡೋನು ಅವನು. ತುಂಬಾ ಸಹಜವಾಗಿಯೇ ಹೇಳಿದ ಶಶಾಂಕ ಅವನೊಂದಿಗೆ - ''ಸ್ಕೂಟರ್ ಲೋನ್ ಬೇಕೆಂದರೆ ನನ್ನನ್ನು ನೆನಪಿಸಿಕೊಳ್ಳಿ...'' ಮೊದಲ ಕತೆಯ ಪ್ರಕಟಣೆಯ ಹಿನ್ನೆಲೆ ಇದು!

ಮಾತ್ರೆಯೊಂದನ್ನು ಹಾಕಿಕೊಂಡು ನೀರು ಕುಡಿದ - ಚಿಕ್ಕಪ್ಪ ಹೇಳಿದ್ದ ಮಾತು ನೆನಪಿಗೆ ಬಂತು. ಸರಸರನೇ ಡೈರಿಯ ಪುಟ ತಿರುವತೊಡಗಿದ.

ಒಂದು ಪುಟದಲ್ಲಿ ದೃಷ್ಟಿ ನಿಲ್ಲಿಸಿದ

''ಹತ್ತು ಸೋಲುಗಳ ನಂತರ ಪಡೆಯುವ ಗೆಲುವು - ಅತ್ಯಂತ ಮಹತ್ವಪೂರ್ಣ ಗೆಲುವು!'' ಅದು ಬರೆದಾಗಿನ ಸಂದರ್ಭ ನೆನೆಸಿಕೊಂಡ.

ದೆಹಲಿಗೆ ಹೋಗುವ ಮುನ್ನ ಹತ್ತನೇ ಸಲ ಮರಳಿ ಬಂದ ತನ್ನ ಕತೆ ನೋಡಿ ದುಃಖ ತಾಳಲಾಗದೇ ಬರೆದುಕೊಂಡಿದ್ದ. ಹನ್ನೊಂದನೆ ಸಲ ಕತೆಯನ್ನು ಪೋಸ್ಟ್ ಮಾಡುವ ಮುನ್ನ ಅದನ್ನು ಪ್ರಕಟಿಸಿಕೊಳ್ಳಲೇಬೇಕೆಂದು ನಿಶ್ಚಯಿಸಿದ್ದ - ಹಿತ್ತಲಬಾಗಿಲಿಂದ !!

ಹೈದರಾಬಾದ್‌ಗೆ ಮರಳಿದ ನಂತರ ಅತ್ಯಧಿಕ ಪ್ರಸಾರವುಳ್ಳ ವೀಕ್ಲಿ ಉಪಸಂಪಾದಕರನ್ನು ಭೇಟಿಯಾದ - ಪತ್ರಿಕೆಗೆ ಬಂದ ಕತೆಗಳೆಲ್ಲವನ್ನೂ ಓದಿ ಆಯ್ಕೆ ಮಾಡೋನು ಅವನು. ತುಂಬಾ ಸಹಜವಾಗಿಯೇ ಹೇಳಿದ ಶಶಾಂಕ ಅವನೊಂದಿಗೆ -

''ಸ್ಕೂಟರ್ ಲೋನ್ ಬೇಕೆಂದರೆ ನನ್ನನ್ನು ನೆನಪಿಸಿಕೊಳ್ಳಿ....''

ಮೊದಲ ಕತೆಯ ಪ್ರಕಟಣೆಯ ಹಿನ್ನೆಲೆ ಇದು!

ಇದೊಂದು ಇಂಗ್ಲೀಷ್ ಕತೆಯೊಂದರ ಕೆಟ್ಟ ಕಾಪಿ ಅಂತ ಪತ್ರಿಕೆಯಲ್ಲಿ ಕೆಲವರು ದೂರಿದರು. ಆ ಪತ್ರಗಳೆಲ್ಲಾ ಪತ್ರಿಕೆಯಲ್ಲಿ ಅಚ್ಚಾದವು. ನಂತರ ಶಶಾಂಕ ಬರೆದ ಕಿರುಕಾದಂಬರಿಯೊಂದು ಕೂಡಾ ಜನಪ್ರಿಯ ಇಂಗ್ಲೀಷ್ ಕಾದಂಬರಿಯನ್ನು ಆಧಾರವಾಗಿಟ್ಟುಕೊಂಡು ಬರೆದದ್ದು - ಮೂಲಕೃತಿ ಆತನ ಕಾಲೇಜಿನಲ್ಲಿ ಉಪಪಠ್ಯಪುಸ್ತಕವಾಗಿತ್ತು.

ಮೊದ ಮೊದಲು ಲೇಖಕನೊಬ್ಬ ಕೃತಿ ಚೌರ್ಯ ಮಾಡಿದ್ದಾನೆಂದು ಗೊತ್ತಾದರೆ ಅವನನ್ನು ಬ್ಲಾಕ್ ಲಿಸ್ಟ್‌ನಲ್ಲಿ ಸೇರಿಸೋ ಸಂಪ್ರದಾಯವೊಂದಿತ್ತು. ಆದರೆ ಶಶಾಂಕನ ಬದುಕಲ್ಲಿ ಆ ಥರದ್ದೇನೂ ನಡೆಯಲಿಲ್ಲ.

ಡೈರಿಯ ಮತ್ತೊಂದು ಸಾಲು ಓದಿದ -

''ಜೀವನದಲ್ಲಿ ಯಾವ ಸಂಪಾದಕನಾದರೂ ಮೊಟ್ಟಮೊದಲ ಸಲ 'ಸ್ಕಾಚ್' ಕುಡಿದನೆಂದರೆ ಅದು 'ಶಶಾಂಕ'ನ ಸ್ಕಾಚ್ ಆಗಿರಬೇಕು'' - ಸಾಲಿನ ಕೆಳಗೆ ಜ್ಞಾನೇಶ್ವರರಾವ್ ಸಹಿ ದಿನಾಂಕದೊಂದಿಗಿತ್ತು. ಅವನೊಬ್ಬ ವೀಕ್ಲಿ ಎಡಿಟರ್ - ನಾಲ್ಕನೇ ಪೆಗ್ ನಂತರ ತಾನೇ ಬರೆಸಿದ್ದು - ಇತರರ ಬಲಹೀನತೆಗಳ ಮೇಲೆ ತನಗಿರೋ ಅಧಿಕಾರದ ಸಾವನೀರ್ ಅದು!

ಶಶಾಂಕನಿಗೆ 'ಸಂಭಾವನೆ' ಲೆಕ್ಕಕ್ಕಿಲ್ಲದ್ದು - ಸಮಾಜದಲ್ಲಿ 'ಅವನೇ ಶಶಾಂಕ' ಅಂತ ಐಡೆಂಟಿಟಿಗಾಗಿ ಹಾತೊರೆಯುತ್ತಿದ್ದ ಸಮಯ ಅದು - ಕ್ರಿಕೆಟ್‌ನಿಂದ ಜನಪ್ರಿಯತೆ ಹೆಸರು ಮಾಡಿಕೊಳ್ಳೋಣ ಅಂದರೆ 'ಕ್ರಿಕೆಟ್' ಗಂಧ ಗೊತ್ತಿಲ್ಲ - ಸಿನಿಮಾಸ್ಟಾರ್ ಆಗೋಣವೆಂದುಕೊಂಡರೂ ಆಗಲಿಲ್ಲ - ಎತ್ತರ ಕಡಿಮೆ, ಕುಳ್ಳಬೇರೆ!!

ಆದ್ದರಿಂದ ಲೇಖಕನಾದ - ಆ ದಿನಗಳಲ್ಲಿ ಲೇಖಕರಿಗೆ ಹೇಳಿಕೊಳ್ಳುವಂಥ ಗ್ಲಾಮರ್ ಇರಲಿಲ್ಲ. ಬರೇಯೊರು ತೀರಾ ಕಮ್ಮಿ - ಸಂಪಾದಕನೊಂದಿಗೆ 'ಕ್ಲೋಸ್ ಆಗಿ ಮೂವ್' ಆಗೋದಾಗಲೀ, ಒಟ್ಟಿಗೆ ಸೇರೋದಾಗಲೀ, ಬಾರ್‌ಗೆ ಕರೆದುಕೊಂಡು ಹೋಗೋದಾಗಲೀ ಆಗುತ್ತಿರಲಿಲ್ಲ. ಆಗ ಶಶಾಂಕ ತಲೆ ಓಡಿಸಿದ, ಸಂಪಾದಕರನ್ನು ಬಾರ್‌ಗೆ ಕರೆದೊಯ್ಯೋದು (ಕಂಪೆನಿ ಖರ್ಚಿನಲ್ಲಿ), ಚಿಕ್ಕಪುಟ್ಟ ಉಡುಗೊರೆ ಕೊಡಲು ಶುರು ಮಾಡಿದ. ಪ್ರತಿಫಲವಾಗಿ 'ಇದೇ ಇಂಗ್ಲೀಷ್ ಕಾದಂಬರಿಯನ್ನು ಕಾಪಿ ಮಾಡಿದೆ' ಅಂತ ಹೇಳಿ ಕಾದಂಬರಿಯನ್ನು ಸಂಪಾದಕನಿಗೆ ಕೊಡ್ತಿದ್ದ. ಅವರಿಗೇನೋ 'ನೋ' ಅನ್ನಲಾರದ ಮುಜುಗರ. ಅಚ್ಚಾದ ನಂತರ ಇಡೀ ಓದುಗರು 'ಈ ಕಾದಂಬರಿ ಕಾಪಿ' ಅಂತ ಬಡ್ಕೊಂಡರೂ ಸಂಪಾದಕರು ಸುಮ್ಮನಿರುತ್ತಿದ್ದರು.

ಈ ಪರಿಸ್ಥಿತಿಯಲ್ಲಿ ಶಶಾಂಕ ತನ್ನ ಪಾಪುಲಾರಿಟಿ(?)ಯ ಕೊನೆಯ ಮಜಲನ್ನು ತಲುಪಬೇಕೆಂದುಕೊಂಡ ಸಮಯದಲ್ಲಿ, ಅಲ್ಲಿ ಮೊದಲೇ ಎಸ್ಟಾಬ್ಲಿಶ್ ಆಗಿದ್ದ ಲೇಖಕ ಭರದ್ವಾಜ ಅಡ್ಡವಾದ.

ಮಧ್ಯಮ ವರ್ಗದ ಜನರ ಬದುಕಿನ ಏರಿಳಿತಗಳನ್ನೇ ಆಧಾರವಾಗಿಟ್ಟುಕೊಂಡು ಹೊಸ ಹೊಸ ಪ್ರಯೋಗಗಳಿಂದ ಬರೆಯುತ್ತಿದ್ದ ಭರದ್ವಾಜನಿಗೆ ಅವನದೇ ಆದ ಒಂದು ವಿಶಿಷ್ಟ ಓದುಗರ ವರ್ಗವಿತ್ತು. ಶಶಾಂಕ ಆಗಲೇ ಯೋಜನೆ ಸಿದ್ಧ ಪಡಿಸಿಕೊಂಡಿದ್ದ.

''ಮನುಷ್ಯ ಗುರಿ ತಲುಪೋದು ಮುಖ್ಯ, ದಾರಿ ಯಾವುದಾದರೂ ಆಗಿರಲಿ'' ಆ ದಿನ ರಾತ್ರಿ ಶಶಾಂಕ ಡೈರಿಯಲ್ಲಿ ಬರೆದುಕೊಂಡ.

ಭರದ್ವಾಜನ ಬರವಣಿಗೆಗೂ, ತನ್ನ ಬರವಣಿಗೆಯ ವ್ಯತ್ಯಾಸ ಪರಿಶೀಲಿಸಿದ. ಆತ ಯಾವುದೇ ಟೆನ್ಶನ್ ಇಲ್ಲದೇ, ಕನ್‌ಫ್ಯೂಜನ್ ಇಲ್ಲದೇ ತುಂಬಾ ನೇರವಾಗಿ, ಸರಳವಾಗಿ ಬರಿತಾನೆ. ಅವನ ರೈಟಿಂಗ್ ಕ್ರಾಫ್ಟ್‌ನಲ್ಲಿ ಎಲ್ಲೂ ವೀಕ್ ಪಾಯಿಂಟ್ ಇಲ್ಲ. ಆದರೆ ಶಶಾಂಕನಿಗೆ ಚೆನ್ನಾಗಿ ಓದಿಸಿಕೊಂಡು ಹೋಗುವಿಕೆಯ ಬರವಣಿಗೆ ಇತ್ತು. ಆದರೆ ಕತೆ ಹೆಣೆಯುವ ಜಾಣ್ಮೆ ಮಾತ್ರ ಇರಲಿಲ್ಲ. ಸದ್ಯದ ಪರಿಸ್ಥಿತಿಯಲ್ಲಿ ತಾನು ಭರದ್ವಾಜನನ್ನು ಮೀರಿಸಿ ಬೆಳೆಯಬೇಕೆಂದರೆ ಅವನಿಗಿಂತ ಒಳ್ಳೆಯ ಕಥಾವಸ್ತು ಹುಡುಕಬೇಕು - ಬರೀಬೇಕು ಹೇಗಾದರೂ ಮಾಡಿ ತುಳೀಬೇಕು. ಹೇಗೆ?... ಯೋಚಿಸತೊಡಗಿದ.

ಶಾರ್ಟ್‌ಕಟ್ಸ್‌ಗಳಲ್ಲಿ ಶಶಾಂಕ ಹೇಳಿ ಮಾಡಿಸಿದಷ್ಟು ಪರ್‌ಫೆಕ್ಟ್!

''ನಾವಿಬ್ರೂ ಸೇರಿ ಜೊತೆಯಾಗಿ ಒಂದು ಕಾದಂಬರಿ ಬರೆಯೋಣ'' ಭರದ್ವಾಜನನ್ನು ಕೇಳಿದ. ಕೊನೆಗೆ ಈ ರೀತಿಯಾದರೂ ಭರದ್ವಾಜನೊಂದಿಗೆ ತನ್ನ ಹೆಸರೂ ಕ್ಲಿಕ್ ಆಗಬಹುದೆಂಬ ಯೋಚನೆ - ಭರದ್ವಾಜ ಇದಕ್ಕೆ ಒಪ್ಪಲೇ ಇಲ್ಲ.

ಶಶಾಂಕ ಛಲ ಬಿಡಲಿಲ್ಲ. ಭರದ್ವಾಜನನ್ನು ತುಳಿಯಲು ತನ್ನೆಲ್ಲಾ ಪ್ರಯತ್ನಗಳನ್ನು ಪ್ರಯೋಗಿಸತೊಡಗಿದ. 'ಒಂದು ಪುಟದ ಮಿನಿ' ಕತೆಗಳನ್ನು ಭರದ್ವಾಜ ಅದ್ಭುತವಾಗಿ ಬರೆಯುತ್ತಾನೆಂಬ ಹೆಸರಿತ್ತು. ಇದೇ ಅಂಶದ ಮೇಲೆ ಆ ದಿನ ಸಂಜೆ ಆ ವಾರ ಪತ್ರಿಕೆಯ ಸಂಪಾದಕನಿಗೆ 'ರಿಲಯನ್ಸ್ ಡಿಸ್ಕೌಂಟ್' ಕೂಪನ್ ಕೊಟ್ಟ, ಹತ್ತುಸಾವಿರ ಕ್ಯಾಶ್ ಲೋನ್ ಸಮೇತ. ತನ್ನ ಧಾರಾವಾಹಿ ಆ ಪತ್ರಿಕೆಯಲ್ಲಿ ಶುರುವಾದ ನಂತರ ಅರ್ಧ ಬಾಟೆಲ್ ಸ್ಕಾಚ್ ಖಾಲಿಯಾದ ನಂತರ ಕೇಳಿದ ಶಶಾಂಕ.

''ಭರದ್ವಾಜನ ಸಿಂಗಲ್ ಪೇಜ್ ಕತೆ ಇಲ್ದಿದ್ರೆ ನಿಮ್ಮ ಪತ್ರಿಕೆ ಮಾರಾಟ ಆಗಲ್ವಾ?''

''ಅದೇನ್ ಸಾರ್? ಹಾಗೆ ಕೇಳ್ತಿದೀರಿ?''

''ನನ್ನ ಧಾರಾವಾಹಿಯಿಂದ ಪತ್ರಿಕೆ ಸರ್ಕುಲೇಶನ್ ಹೆಚ್ಚಿದೆಯಾ ಇಲ್ವಾ ಅಂತ ತಿಳ್ಕೋಬೇಕೆಂದರೆ - ಆತನ ಹೆಸರು ಪತ್ರಿಕೇಲಿ ಇಲ್ದೆ ಇರೋದು ಬೆಟರ್ ಅಂತ.... ಅಷ್ಟೆ ನಾಳೆ ಸಂಬಳ ಬಂದ್ರೆ ನನ್ನ ಸಾಲ ತೀರಿಸ್ತೀರಲ್ವಾ?''

ಭರದ್ವಾಜನ ಕತೆಗಳು ಪತ್ರಿಕೆಯಲ್ಲಿ ನಿಂತು ಹೋದವು - ಸಂಪಾದಕ ತುಂಬಾ ಸಾಧು. ಅವರಿಬ್ಬರ ಸ್ನೇಹ ಹೆಚ್ಚಿತು.

ಶಶಾಂಕನಿಗೆ ಅರ್ಥವಾಯಿತು - ಯಾವ ಪತ್ರಿಕೆಯ ಸಂಪಾದಕನನ್ನಾದರೂ ಬಲೆಯಲ್ಲಿ ಹಾಕಿಕೊಳ್ಳೋದು ಸುಲಭ ಅಂತ - ಅದನ್ನೇ ಡೈರಿಯಲ್ಲಿ ಬರೆದುಕೊಂಡ

'ಹಣ ಅಥವಾ ಹುಡುಗಿ ಗಂಡಸಿನ ಬಲಹೀನತೆ'

ಎಂ.ಬಿ.ಎನಲ್ಲಿ ತಾನು ಓದಿದ್ದ ಎಲ್ಲಾ ಮಾರ್ಕೆಟಿಂಗ್ ತಂತ್ರಗಳನ್ನು ಉಪಯೋಗಿಸಿದ. ಸಾಬೂನು ಯಾವುದೇ ಗ್ಲಾಮರಲ್ಲದ ವಸ್ತು. ಅದನ್ನೂ ಮಾರಬೇಕೆಂದರೆ ಚೆಂದದ ಹುಡುಗಿಯ ಅವಶ್ಯಕತೆ ಇದೆ. ಇದೇ ಪದ್ಧತಿಯನ್ನು ಅನುಕರಿಸಿದ ಶಶಾಂಕ.

ಶಶಾಂಕನ ಆಮಿಷಗಳಿಗೆ ಮಣಿಯದ ಪತ್ರಿಕೆಗಳಿಗೆ ಮಾತ್ರ ಭರದ್ವಾಜ ಧಾರಾವಾಹಿಗಳನ್ನು ಬರೆಯತೊಡಗಿದ. ಶಶಾಂಕನ ಕೈವಾಡ ಇರುವ ಪತ್ರಿಕೆಗಳಲ್ಲಿ ಕೇವಲ ಆತನ ಧಾರಾವಾಹಿಗಳು ಮತ್ತು ಆತನೇ ಖುದ್ದಾಗಿ ಆಯ್ಕೆ ಮಾಡುವ ಧಾರಾವಾಹಿಗಳು ಬರತೊಡಗಿದವು. ಭರದ್ವಾಜನ ಧಾರಾವಾಹಿಗಳ ಬಗ್ಗೆ ಬರುವ ಮೆಚ್ಚುಗೆ ಪತ್ರಗಳ ಪ್ರಕಟಣೆ ನಿಲ್ಲಿಸಿದ - ತನ್ನ ಫೋಟೋಗಳ ಪ್ರಕಟಣೆ ಶುರುಮಾಡಿಕೊಂಡ.

ಅಲ್ಲಿಯವರೆಗೆ ಲೇಖಕರು, ಬರಹಗಾರರು ಹೆಚ್ಚು ಮಧ್ಯಮ ವರ್ಗದವರೇ. ಆರ್ಥಿಕವಾಗಿ ಇಮೇಜ್ ಇದ್ದವರು ಕಡಿಮೆ ಜನ. ಹಣವನ್ನು, ಸಂಭಾವನೆಯನ್ನು ಪ್ರೀತಿಸದವರು ತುಂಬಾ ಕಡಿಮೆ ಇದ್ದರು. ಶಶಾಂಕ ಇದೇ ಸಮಯದಲ್ಲಿ 'ಗ್ರೇಟ್ ರೈಟರ್'ನಾಗಿ ಫಸ್ಟ್‌ಕ್ಲಾಸ್ ಎ.ಸಿ.ಯಲ್ಲಿ ಪ್ರಯಾಣ ಮಾಡುವ ಲೇಖಕನಾಗಿ, ಎ.ಸಿ ಕೋಣೆಯಲ್ಲಿ ಕೂತು ಬರೆಯುವ ಲೇಖಕನಾಗಿಯೂ, ಹುಡುಗಿಯರ ಆರಾಧ್ಯಲೇಖಕನಾಗಿಯೂ ಪ್ರೊಜೆಕ್ಟ್ ಮಾಡಿಕೊಂಡ.

ಬಹಳಷ್ಟು ಜನ ಸಂಪಾದಕರನ್ನು ತನ್ನ ಮಾತನ್ನು ಮೀರದ ಮಟ್ಟಕ್ಕೆ ತಂದ. ನಡು-ನಡುವೆ ಕ್ಯಾಶ್‌ಲೋನ್ಸ್ ಫೈನಾನ್ಸ್ ಅದೂ ಅಂತ ಡಾಮಿನೇಟ್ ಆದ.

''ಭರದ್ವಾಜನ ಧಾರಾವಾಹಿ ಪ್ರಕಟಿಸೋರೆಲ್ಲಾ ನಮ್ಮ ಶತ್ರುಗಳೆಂದರೆ ಹೇಗೆ ಸಾರ್?'' ಒಬ್ಬ ಸಂಪಾದಕ ಎದುರು ನುಡಿದ. ಭರದ್ವಾಜನ ಧಾರಾವಾಹಿಯನ್ನು ಶಶಾಂಕ ವಾರಪತ್ರಿಕೆಯಲ್ಲಿ ದಿನ ಪತ್ರಿಕೆಯಲ್ಲಿ ಮಧ್ಯದಲ್ಲಿಯೇ ನಿಲ್ಲಿಸುವ ಏರ್ಪಾಟುಮಾಡಿದ. ಜೊತೆಗೆ ತಾನು ಬರೆಯುತ್ತಿದ್ದ ಸಬ್‌ಜೆಕ್ಟ್‌ದೊಂದಿಗೆ (ಇಬ್ಬರೂ ಒಂದೇ ಇಂಗ್ಲೀಷ್ ಕಾದಂಬರಿಯನ್ನು ಕೃತಿಚೌರ್ಯ ಮಾಡಿದ್ದರು) ಇನ್ನೊಬ್ಬ ಲೇಖಕ ಅದೇ ಪತ್ರಿಕೆಯಲ್ಲಿ ಬರೆಯುತ್ತಿದ್ದ ಧಾರಾವಾಹಿಯನ್ನೂ ನಿಲ್ಲಿಸಿದ.

ಬರುಬರುತ್ತಾ ಶಶಾಂಕನಿಗೆ ಭರದ್ವಾಜನನ್ನು ಎಲ್ಲಾ ರೀತಿಯಿಂದ ಸೋಲಿಸೋದು ಮತ್ತು ಕೇವಲ ತನ್ನೊಬ್ಬನ ಹೆಸರನ್ನು ಮಾತ್ರ ಕಮರ್ಶಿಯಲ್ ಸಾಹಿತ್ಯಕ್ಷೇತ್ರದಲ್ಲಿ ಬೆಳಗಬೇಕೆಂಬ ಬಯಕೆ ಹೆಚ್ಚಾಯಿತು.

ಆದರೆ ಇಷ್ಟೆಲ್ಲಾ ಗಿಮಿಕ್‌ಗಳನ್ನು ಶಶಾಂಕ ಮಾಡಿದರೂ ಭರದ್ವಾಜನ ಸ್ಥಾನ

ಒಂಚೂರು ಅಲ್ಲಾಡಲಿಲ್ಲ. ಶಶಾಂಕ ಅಡ್ಡದಾರಿಗಳಿಂದ ತಾತ್ಕಾಲಿಕವಾಗಿ ಬೆಳೆಯುತ್ತಿದ್ದರೂ ಭರದ್ವಾಜ ಮಾತ್ರ ಮತ್ತಷ್ಟು ಕ್ರಿಯಾಶೀಲನಾಗಿ ಬೆಳೆಯತೊಡಗಿದ ಜನಪ್ರಿಯನಾಗತೊಡಗಿದ.

ಮೊದಲು ಹಾಸ್ಯಕಾದಂಬರಿಗಳಿಂದ ದೂರವಿದ್ದ ಭರದ್ವಾಜ ನಿಧಾನವಾಗಿ ಅವನ್ನೂ ಶುರುಮಾಡಿದ - ನೀರು ಕುಡಿದಷ್ಟು ಸರಾಗವಾಗಿ ಬರೆಯಲಾರಂಭಿಸಿದ. ನೆಲಕ್ಕೆಸೆದ ಚೆಂಡಿನಂತೆ ಮೇಲೇಳತೊಡಗಿದ, ಶಶಾಂಕನಿಗೆ ಕಿಚ್ಚನ್ನುಂಟು ಮಾಡುತ್ತಾ.

ಆದರೆ ಶಶಾಂಕ ಎಸೆದ ಪ್ರತಿ ಕಲ್ಲನ್ನೂ ಭರದ್ವಾಜ ತಿರುಗಿ ಎಸೆಯುವ ಸಣ್ಣತನ ಮಾಡಲಿಲ್ಲ - ಪ್ರತಿ ಕಲ್ಲನ್ನೂ ಶೇಖರಿಸಿದ. ಅವುಗಳಿಂದ ಗಟ್ಟಿ ಮನೆಯನ್ನೇ ಕಟ್ಟಿಬಿಟ್ಟ.

ಸಿನಿಮಾ ಕ್ಷೇತ್ರದಲ್ಲಿ ಕತೆಗಾರನೊಬ್ಬ ಕ್ಲಿಕ್ ಆಗಬೇಕೆಂದರೆ ಹೊಸತನ ತುಂಬಾ ಮುಖ್ಯ. ನಿಧಾನವಾಗಿ ಶಶಾಂಕ ಸಿನಿಮಾ ಗೀಳು ಶುರುಮಾಡಿಕೊಂಡ. ಬರೆಯುವ ಶೈಲಿ ಹೊರತುಪಡಿಸಿದರೆ ಇನ್ನಾವುದೇ ಹೊಸತನವಿಲ್ಲದ ಶಶಾಂಕ ಅಲ್ಲೂ ನೆಲಕಚ್ಚಿದ - ಸ್ಕ್ರಾಚ್ ಮತ್ತು ಸಾಲದ ಹಣಕ್ಕೆ ಆಸೆಪಡೋ 'ಎಡಿಟರ್ಸ್' ಥರದ ಜನ ಸಿನಿಮಾದವರಲ್ಲ. ಶಶಾಂಕನಲ್ಲಿ ಅಸಹನೆ ಜಾಸ್ತಿ ಆಯ್ತು. ಆದರೆ ಅಂದಿನವರೆಗೆ ಯಾವತ್ತೂ ಸಿನಿಮಾಗಳ ಹಿಂದೆ ಬೀಳದ ಭರದ್ವಾಜನ ಸರಳ-ಸುಂದರ ಕತೆಗಳನ್ನು ಅರಸುತ್ತಾ ಸಿನಿಮಾದವರೇ ಮುಂದೆ ಬಂದರು.

ಈ ಎಲ್ಲಾ ಹೊಡೆತಗಳಿಂದ ತತ್ತರಿಸಿದ ಶಶಾಂಕ.... ಮತ್ತೇ ಓದುಗರ ಹತ್ತಿರ ಹೋಗಬೇಕೆಂದುಕೊಂಡ.. ಸಾಧ್ಯವಾಗಲೇ ಇಲ್ಲ.

ಶಶಾಂಕ ಸಾಹಿತ್ಯರಂಗದಲ್ಲಿ ಬಳಸಿದ 'ಶಾರ್ಟ್‌ಕಟ್' ಟ್ರಿಕ್ 'ಸೋಪು - ಸಿನಿಮಾ ತಾರೆ' ಥರ ನಾಲ್ಕೈದು ಜನ ಮರಿಸಾಹಿತಿಗಳು ಬೆಳೆದರು. ಕೈಯಾರೆ ಕಳೆದುಕೊಂಡ ತನ್ನ ಜನಪ್ರಿಯತೆ ನೆನೆಸಿಕೊಂಡು ಕಣ್ಣೀರು ಬಂದವು ಶಶಾಂಕನಿಗೆ.

ಜನಪ್ರಿಯ ಏಣಿಯ ಕೊನೆಯಂಚಿನಲ್ಲಿ ಕುಳಿತುಕೊಳ್ಳಬೇಕೆಂಬ ಬಯಕೆ ಹಾಗೆಯೇ ಉಳಿಯಿತು - ಆದರೆ ಆ ಸ್ಥಾನವನ್ನು ಭರದ್ವಾಜ ಮಾತ್ರ ತಣ್ಣಗೇ ಹಾಗೆಯೇ ಉಳಿಸಿಕೊಂಡಿದ್ದ. ಒಂದು ಕಾಲದಲ್ಲಿ ಶಶಾಂಕನ ಹೆಸರು ರಿಸರ್ವ್‌ಬ್ಯಾಂಕ್ ಥರ ಇದ್ದದ್ದು ಈಗ ನಷ್ಟದಲ್ಲಿರೋ ಸಹಕಾರಿ ಬ್ಯಾಂಕ್ ಥರ ಆಗಿತ್ತು. ಯಾವ ಹೊಸಪತ್ರಿಕೆ ಶುರುವಾದರೂ ಪತ್ರಿಕೆಯವರು ಏಜೆಂಟರೊಂದಿಗೆ ಮೀಟಿಂಗ್ ಮಾಡ್ತಿದ್ದರು-ಯಾವ ಯಾವ ಲೇಖಕರ ಧಾರಾವಾಹಿ ಪ್ರಕಟಿಸಬೇಕೆಂದು. ಚಾಲ್ತಿಯಲ್ಲಿದ್ದ ಎಲ್ಲಾ ಪತ್ರಿಕೆಗಳಲ್ಲೂ 'ಭರದ್ವಾಜನ' ಧಾರಾವಾಹಿಗಳೇ ಅಚ್ಚಾಗುತ್ತಿದ್ದವು.

ಏಜೆಂಟ್ಸ್ ಸರ್ವೆನಲ್ಲಿ ಶಶಾಂಕನ ಹೆಸರು ಒಬ್ಬರೂ ಹೇಳಲಿಲ್ಲ. ಹೊಸ ಸಂಪಾದಕರನ್ನು ಆಕರ್ಷಿಸಲೇ ಇಲ್ಲ. ಏಕೆಂದರೆ ದೊಡ್ಡ - ದೊಡ್ಡ ಪತ್ರಿಕೆಗಳ ಥರ ಇಲ್ಲಿ ಮಾಲಿಕ - ಸಂಪಾದಕ ಬೇರೆ ಬೇರೆ ಅಲ್ಲ. ಶಶಾಂಕ ತನ್ನ ಹೆಸರಿನ ವರ್ಚಸ್ಸು ಕಡಿಮೆಯಾದಂತೆ ಹೊಸ ಹೆಸರನ್ನು ಸೃಷ್ಟಿಸಿದ. ಒಬ್ಬ ಪಂಜಾಬಿ ಮಾಡೆಲಿಂಗ್ ಹುಡುಗಿಯೊಂದಿಗೆ ಕಂಟ್ರಾಕ್ಟ್ ಬರೆಸಿಕೊಂಡು ಫೋಟೋಸೆಶನ್ ತೆಗೆದ. ಅವಳ ಲೈಫ್‌ಸ್ಟೋರಿಗೆ ಅದ್ಭುತವಾದ ಪ್ರೊಫೈಲ್ ತಯಾರಿಸಿದ. ಮತ್ತೆ ಹಣ ಚೆಲ್ಲಿ ಘೋಸ್ಟ್‌ರೈಟರ್ಸಿಂದ ಹತ್ತು ಧಾರಾವಾಹಿಗಳನ್ನು ಪ್ರಕಟಿಸಿದ.

ಆದರೆ ಓದುಗರಿಗೆ ಇಂಥ ಟ್ರಿಕ್ಸ್ ಹಳತಾಗಿವೆ ಅಂತ ಶಶಾಂಕನಿಗೆ ನಿಧಾನವಾಗಿ ಗೊತ್ತಾಯಿತು - ಟ್ರಿಕ್‌ಗೆ ಖರ್ಚುಮಾಡಿದ ಬಂಡವಾಳದ ಹಣ ಸಹಿತ ವಾಪಸ್ ಬರಲಿಲ್ಲ.

ಶಶಾಂಕನಿಗೆ ನಿರ್ವಿಘ್ನವಾಗಿ ಬೆಳೆಯುತ್ತಿರುವ ಭರದ್ವಾಜನ ಮೇಲೆ ಹಗೆ ಹೆಚ್ಚಾಗತೊಡಗಿತು. ಸುಮ್ಮನಿರಲಿಲ್ಲ. ಈ ಸಲ ಹೊಸ ಪ್ರೊಜೆಕ್ಟ್ ಹಮ್ಮಿಕೊಂಡ. ಸಣ್ಣ ಗೆಸ್ಟ್ ಹೌಸ್, ಉತ್ಸಾಹಿ ಯುವಲೇಖಕರೊಂದಿಗೆ ವರ್ಕ್‌ಶಾಪ್, ಇಸ್ಪೀಟು, ಇಂಡಿಯನ್ ವಿಸ್ಕಿ - ಇಂತಹ ಲೈಫನ್ನು ಸವಿಯದವರಿಗೆ ಆಹ್ವಾನವಿತ್ತ.

ಸುಮಾರಾಗಿ ಎರಡು ವರ್ಷ ಬೇಕಾಯ್ತು ಶಶಾಂಕನಿಗೆ ಪ್ರೊಜೆಕ್ಟ್ ಪೂರ್ಣಗೊಳ್ಳಲು. ಇನ್ನೂ ಎರಡು - ಮೂರುವಾರಗಳಲ್ಲಿ ಭರದ್ವಾಜನ ಧಾರಾವಾಹಿ ಮುಗಿಯುತ್ತದೆ ಅನ್ನುವಷ್ಟರಲ್ಲಿ ಕಾದಂಬರಿಗಳು ಮಾರುಕಟ್ಟೆಗೆ ಬರುತ್ತಿದ್ದವು. ಆದರೆ ಈಗ ಆರು ತಿಂಗಳಾದರೂ ಬರಲಿಲ್ಲ. ಶಶಾಂಕ ತಾನೇ ಗೆದ್ದೆ ಅಂದುಕೊಂಡ. ಆದರೆ ಈ ಸಲ ತಾನು ಎಸೆದ ಕಲ್ಲನ್ನು ಭರದ್ವಾಜ ಹೊಸಮನೆಗೆ 'ಇಟ್ಟಿಗೆ' ಯಾಗಿ ಬಳಸಿಕೊಂಡನೆಂದು ಗೊತ್ತಾಯ್ತು ಶಶಾಂಕನಿಗೆ.

ಎದ್ದು ಕಪಾಟಿನಲ್ಲಿ ಭರದ್ವಾಜ ಕಾಂಪ್ಲಿಮೆಂಟರಿಯಾಗಿ ಕಳಿಸಿದ್ದ 25 ಕಾದಂಬರಿಗಳನ್ನು ನೋಡಿದ. ಎಲ್ಲವೂ ಸ್ವಂತ ಪ್ರಕಾಶನ. ಎಲ್ಲ ಕಾದಂಬರಿಗಳ ಮೊದಲ ಪುಟದಲ್ಲಿ 'ಆಲ್ ದಿ ಬೆಸ್ಟ್ - ಭರದ್ವಾಜ' ಅಂತ ಬರೆದು ಕಳಿಸಿದ್ದ. ಬಂಡವಾಳ ಅವನದೇ - ಲಾಭವೂ ಅವನದೇ. ಭರದ್ವಾಜ ಪ್ರಕಾಶಕನಾಗಿ ಬೆಳೆದದ್ದು ಕೂಡಾ ತನ್ನಿಂದಲೇ!

ಶಶಾಂಕನ ಮನಸ್ಸಿನ ತುಂಬಾ ಅಸಹನೆ. ಮೂರು ನಿದ್ರೆ ಮಾತ್ರೆ ನುಂಗಿ ನೀರು ಕುಡಿದ. ಐದು ನಿಮಿಷ ಮಂಚದ ಮೇಲೆ ಹೊರಳಾಡಿದ. ಅವನಿಗೆ ದುರ್ಯೋಧನನನ್ನು ನೋಡಿ ನಕ್ಕ ದ್ರೌಪತಿಯ ನೆನಪಾಯ್ತು.

ಭರದ್ವಾಜ ಈಗೇನು ಮಾಡ್ತಿರಬಹುದು - ಹಾಯಾಗಿ ಮಲಗಿರಬಹುದೇ ಥಟ್ಟನೇ ಎದ್ದು ಡಯಲ್ ಮಾಡಿದ. ಆರು ಸಲ ರಿಂಗಣಿಸಿದ ನಂತರ ಭರದ್ವಾಜನ ದನಿ ಕೇಳಿಸಿತು ಸ್ಪಷ್ಟವಾಗಿ

''ಭರದ್ವಾಜ ಹಿಯರ್!''

''ಶಶಿ'' ಮಾತಾಡ್ತಿರೋದು....''

''ಹೇಳಿ ಶಶಾಂಕ್.. ಹೇಗಿದೀರಾ?''

''ನೀವು ಹೇಗಿದ್ದೀರಿ?''.... ಸಣ್ಣದಾಗಿ ನಕ್ಕ ಭರದ್ವಾಜ.

''ಮೊನ್ನೆ ಒಂದು ಕತೆ ಬರೆದೆ - ಅದು ನಿಮ್ಮನ್ನು ಉದ್ದೇಶಿಸಿ ಬರೆದದ್ದು ಅಂತ ಇಬ್ಬರು-ಮೂರು ಜನ ವಾದ ಮಾಡಿದರು. ನಿಮ್ಮನ್ನು ದೃಷ್ಟಿಯಲ್ಲಿಟ್ಟುಕೊಂಡು ಬರೆದಿಲ್ಲ ಅಂತ ಹೇಳಲು ಫೋನ್ ಮಾಡಿದೆ!!

''ಇಟ್ಸಾಲ್ ರೈಟ್''

..ಏನೀತ? ತಾನಿಷ್ಟು ಮಾಡಿದರೂ ಆರಾಮಾಗಿದಾನಲ್ಲ? ಜಗಳ ಮಾಡ್ತಾ ಇಲ್ಲ.. ಸಿಟ್ಟಾಗ್ತಾ ಇಲ್ಲ..

''.... ಒಂದ್ವೇಳೆ ನನ್ನ ಮೇಲೆ ಸಿಟ್ಟಾಗಿದ್ರೆ.. ನನ್ನ ಮೇಲೊಂದು ಕತೆ ಬರೀಬಾರ್ದಾ?'' ಹೀಯಾಳಿಸುವ ದನಿಯಲ್ಲಿ ಹೇಳಿದ..

''ನಿಜವಾಗ್ಲೂ.. ಬರೀಲಾ?''

''ನಿಮ್ಮ ಕೈಲಾದ್ರೆ..''

ಸ್ವಲ್ಪ ಹೊತ್ತು ಬಿಟ್ಟು ಭರದ್ವಾಜ ಕೇಳಿದ ''ನೀವಿಷ್ಟು ಮಾಡಿದರೂ ನಿಮ್ಮನ್ಯಾಕೆ ದ್ವೇಷಿಸ್ತಾ ಇಲ್ಲ ಅಂತ ನಿಮ್ಮ ಸಂದೇಹ - 'ತನ್ನಲ್ಲಿ ಎಲ್ಲರನ್ನೂ.. ಎಲ್ಲರಲ್ಲಿ ತನ್ನನ್ನು ನೋಡಿಕೊಳ್ಳುವವ ಯಾರನ್ನೂ ದ್ವೇಷಿಸಲಾರ ಶಶಿ!''

''ಓ.. ವೇದಾಂತದಲ್ಲಿ ಇಳಿದುಬಿಟ್ರಾ!''

''ಬೇರೆಯವರು ತನಗೆ ಏನು ಮಾಡಬಾರದೆಂದುಕೊಳ್ತಾರೋ ಅದನ್ನು ಇತರರಿಗೆ ತಾನು ಮಾಡಬಾರದೆಂಬುದನ್ನು ಮಾಸ್ಟರ್ ಸಿ.ವಿ.ವಿ. ಯೋಗಾದಿಂದ ಕಲಿತೆ - ಕಳೆದ ಹದಿನಾರು ವರ್ಷದಿಂದ ಸಿ.ವಿ.ವಿ. ಶಿಷ್ಯ ನಾನು''.

''ನಾಳೆ ಮಾತಾಡೋಣ. ಲೋಕೋಸಮಸ್ತಾಸುಖಿನೋ ಭವಂತುಃ' ಗುಡ್‌ನೈಟ್ ಮಿಸ್ಟರ್ ಶಶಿ!'' ಫೋನ್ ಇಟ್ಟ ಭರದ್ವಾಜ.

ಶಶಾಂಕ ರೂಮಿಂದ ಹೊರಬಂದ - ಸ್ವಲ್ಪ ಆಕಾಶ ನೋಡುತ್ತಾ ನಿಂತ.. ನಿಧಾನವಾಗಿ ಅರ್ಥವಾಗತೊಡಗಿತು - ಅಂತರ್ಮುಖಿ ಅಂದರೆ ಏನಂತ.. ತನ್ನ ಶತ್ರುಯಾರು? ತನಗೇಕೆ ಮನಶ್ಶಾಂತಿ ಸಿಗ್ತಿಲ್ಲ ಅಂತ!

ಚಿಕ್ಕಪ್ಪ ಹೇಳಿದ್ದು ನಿಜ - ತನಗೀಗ ಹದಿನಾಲ್ಕು ವರ್ಷ.

■

ಗಂಡ ಘರ್ಜಿಸಿದ : ನಾನು ಮಹಾಭಾರತ ಓದಿದ್ದೇನೆ. ಧರ್ಮರಾಯ ಕೂಡ ಜೂಜು ಆಡ್ತಿದ್ದ ಗೊತ್ತಾ?
ಅಂಥದ್ದರಲ್ಲಿ ನಾನು ಆಡ್ತಿದ್ರೆ ತಪ್ಪೇನು?
ಹೆಂಡತಿ : ಆಯ್ತು ಆಡಿ! ನಾನು ತಡೆಯೋಲ್ಲ. ಆದರೆ ನೆನಪಿರಲಿ ದ್ರೌಪದಿಗೆ ಐದು ಜನ ಗಂಡಂದಿರು ಇದ್ರು!


ಚುನಾವಣೆಯ ಮುನ್ನ....
'ನಮಸ್ಕಾರ'
ಚುನಾವಣೆಯ ನಂತರ....
'ದೊಡ್ಡ ನಮಸ್ಕಾರ'
ಸೋಲು-ಗೆಲುವು
ಈ ಸಲದ ಚುನಾವಣೆಯಲ್ಲಿ ಸ್ಥಳೀಯ ಬ್ರಾಂದಿ ಕೊಡಿಸಿದ್ದೇನೆ. ಮುಂದಿನ ಚುನಾವಣೆಯಲ್ಲಿ 'ಫಾರೆನ್ ವಿಸ್ಕಿ' ಕೊಡಿಸುತ್ತೇನೆ.
ನೀವು ಹೇಗೆ ಪದೆ-ಪದೆ ಪಕ್ಷ ನಿಷ್ಠೆ ಬದಲಿಸುತ್ತಿದ್ದಿರೋ, ಹಾಗೆ ಜನರು ಈ ಸಲ ತಮ್ಮ ನಿಷ್ಠೆ ಬದಲಿಸಿರಬಹುದು.

ನಾರಿಯರನ್ನು ರಕ್ಷಿಸುವ ಕೊಡೆಗಳು



ಸಂಸ್ಕೃತದಲ್ಲಿ 'ಛತ್ರಂ' ಎಂದರೆ ಆಚ್ಛಾದನೆ, ಹೊದಿಕೆಯನ್ನು ಮಾಡುವುದು ಎಂದರ್ಥ. ಅದಕ್ಕೆ ಹಿಂದಿಯಲ್ಲಿ ಕೊಡೆಯನ್ನು 'ಛತ್ರಿ' ಎಂದು ಕರೆಯುತ್ತಾರೆ. ಹಾಗೇನೆ 'ಅಂಬರಿಲ್ಲಾ' ಎನ್ನುವುದು ಲ್ಯಾಟಿನ್ ಪದ. ಅಂದರೆ ನೆರಳನ್ನು ನೀಡುವುದು ಎಂದರ್ಥ. ಇದನ್ನು ಅನುಸರಿಸಿಯೇ ಅಂಬ್ರೆಲ್ಲಾ ಎಂಬ ಇಂಗ್ಲಿಷ್ ಪದ ಹುಟ್ಟಿದೆ. ಪೂರ್ವಕಾಲದಲ್ಲಿ ಕೊಡೆಗಳನ್ನು ರಾಜ ಮಹಾರಾಜರು, ಅಮಾತ್ಯರು ಮಾತ್ರ ಉಪಯೋಗಿಸುತ್ತಿದ್ದರು. ಜನಸಾಮಾನ್ಯರಿಗೆ ಕೊಡೆ ಕೈಗೆಟುಕುವಂತೆ ಇರಲಿಲ್ಲ. ಕೊಡೆ ಹಿಡಿದು ಹೋಗುವವರ ಅಡಿಗೆ ಮುಡಿ ಹಾಕುವ ಸಂಪ್ರದಾಯವೂ ಇತ್ತಂತೆ.

ಈಗಿನ ದಿನಗಳಲ್ಲಿ ನಾವು ವಿವಿಧ ಬಣ್ಣಗಳ ಕೊಡೆಗಳನ್ನು ಕಾಣುತ್ತೇವೆ. ಕೊಡೆ ನಮ್ಮ ಜೀವನದಲ್ಲಿ ನಿತ್ಯಾವಶ್ಯಕ ವಸ್ತುವಾಗಿ ಬಿಟ್ಟಿದೆ. ಮಡಚುವ ಮಾದರಿಯ ಪೋರ್ಟಬಲ್ ಕೊಡೆಗಳು, ಕಿರಿಗಾತ್ರದಲ್ಲಿರುವುದರಿಂದ ಪ್ರತಿಯೊಬ್ಬ ಲೇಡಿಹ್ಯಾಂಡ್‌ಬ್ಯಾಗಿನಲ್ಲಿ ಈಗ ಕೊಡೆಗಳು ಕಾಣಬರುತ್ತವೆ.

ಮುಖ್ಯವಾಗಿ ಕೇರಳ, ತಮಿಳುನಾಡು, ಮಹಾರಾಷ್ಟ್ರ, ಆಂಧ್ರಪ್ರದೇಶ, ಕರ್ನಾಟಕದ ಕೆಲವು ಭಾಗಗಳಲ್ಲಿ ಕೊಡೆಗಳ ಬಳಕೆ ಹೆಚ್ಚು.

ವರ್ಷದಲ್ಲಿ ಒಂಭತ್ತು ತಿಂಗಳೂ ಬಿಸಿಲಿರುವ ನಮ್ಮ ದೇಶದಲ್ಲಿ ಕೊಡೆಯ ಬಳಕೆ ಅನಿವಾರ್ಯವಾಗಿದೆ.

ನಮ್ಮ ದೇಶದಲ್ಲಿ ಕೊಡೆ ಹುಟ್ಟಿ 200 ವರ್ಷಗಳು ದಾಟಿದರೂ ಪ್ರಚಾರ ಪಡೆದದ್ದು ಮಾತ್ರ ಇಂಗ್ಲಿಷಿನವರ ಆಡಳಿತದ ಕಾಲದಲ್ಲಿ. ಇಂಗ್ಲಿಷ್ ಅಧಿಕಾರಿಗಳ ಪತ್ನಿಯರು ಇಂಗ್ಲೆಂಡದಿಂದ ತರಿಸಿಕೊಂಡ ಕೊಡೆಗಳು ಎಲ್ಲರ ಗಮನ ಸೆಳೆದವಂತೆ. ಆಮೇಲೆ 1900 ಇಸ್ವಿಯಿಂದ ನಮ್ಮ ದೇಶದಲ್ಲಿಯೇ ಇಬ್ರಾಹಿಂ ಕರೀಮ್ ಸನ್ಸ್‌ರವರು, ಮುಂಬೈಯಲ್ಲಿ ಕೊಡೆಗಳ ತಯಾರಿಕೆಯನ್ನು ಪ್ರಾರಂಭಿಸಿದರು. ಇದು ಮೊದಮೊದಲು ಗೃಹ ಕೈಗಾರಿಕೆಯಾಗಿ ಪ್ರಾರಂಭವಾದರೂ ಈಗ ಕಾರ್ಪರೇಟ ಸ್ಥಾಯಿಗೆ ಬೆಳೆದುನಿಂತಿದೆ. ನಮ್ಮ ದೇಶದಲ್ಲಿ ಕೊಡೆಗಳನ್ನು ತಯಾರು ಮಾಡುವ ಸಂಸ್ಥೆಗಳು 100ರ ಗಡಿ ದಾಟಿವೆ.

ಇಬ್ರಾಹಿಂ ಸಂಸ್ಥೆಯವರು ಯುರೋಪ್ ದೇಶದಲ್ಲೆಲ್ಲಾ ಸಂಚರಿಸಿ ಕೊಡೆಗಳ ತಯಾರಿಕೆಗೆ ಅವಶ್ಯವಿದ್ದ ಸಾಮಗ್ರಿಗಳನ್ನು ಆಮದು ಮಾಡಿಕೊಂಡು 1902ರಲ್ಲಿ ನ್ಯಾಷನಲ್ ಅಂಬ್ರೆಲ್ಲಾ ಫ್ಯಾಕ್ಟರಿಯನ್ನು ಪ್ರಾರಂಭಿಸಿದರು. ಕೊಡೆಯ ಕೋಲಿಗೆ, ಹಿಡಿಕೆಗೆ ಬೇಕಾದ ಕಟ್ಟಿಗೆಯನ್ನು ಚೇನಾದಿಂದಲೂ, ಸಿಲ್ಕ್‌ಕ್ಲಾತ್ ಲಂಡನ್‌ದಿಂದಲೂ ಆಮದು ಮಾಡಿಕೊಂಡರು. ನಂತರದ ದಿನಗಳಲ್ಲಿ ಕಟ್ಟಿಗೆಯ ಕೋಲು, ಹಿಡಿಕೆಗೆ ಬದಲಾಗಿ ಸ್ಟೀಲು, ಹಿತ್ತಾಳೆ, ಅಲ್ಯುಮಿನಿಯಮ್, ಪ್ಲಾಸ್ಟಿಕ್ ಬಳಕೆಗೆ ಬಂದಿತು.

ಕೊಡೆಯ ಬಟ್ಟೆ ಈಗ ನಮ್ಮ ದೇಶದಲ್ಲೇ ತಯಾರಾಗುತ್ತದೆ. ಈ ಸಂಸ್ಥೆಯಲ್ಲಿ ದಿನಕ್ಕೆ 5000 ಕೊಡೆಗಳು ತಯಾರಾಗುತ್ತವೆ. ಈ ಸಂಸ್ಥೆ ಅನೇಕ ಕೊಡೆಗಳ ಪ್ರದರ್ಶನದಲ್ಲಿ ಭಾಗವಹಿಸಿ ಪ್ರಶಸ್ತಿಗಳನ್ನು ಗಳಿಸಿದೆ. ಕೊಡೆಗಳ ತಯಾರಿಕೆಯಲ್ಲಿ ಈ ಸಂಸ್ಥೆ ಹಿರಿಯಣ್ಣನ ಸ್ಥಾನದಲ್ಲಿದೆ.

ವೈವಿಧ್ಯಮಯ ವಿನ್ಯಾಸಗಳು : ಕೊಡೆಗಳ ವೈವಿಧ್ಯತೆಯಲ್ಲಿ ಬಾಹುಳ್ಯವಿದ ಬಿಸಿಲಿನಲ್ಲಿ ಸೂರ್ಯನ ತೀಕ್ಷ್ಣ ಕಿರಣಗಳು ನಮ್ಮ ಮೇಲೆ ಬೀಳದಂತೆ ರಕ್ಷಿಸು ಕೊಡೆಗಳು, ಮಳೆಯಲ್ಲಿ ದೇಹ ನೆನೆಯದಂತೆ ಕಾಪಾಡುವ ಕೊಡೆಗಳು, ದೇವ ಉತ್ಸವಗಳಲ್ಲಿ, ಮೆರವಣಿಗೆಯಲ್ಲಿ ಉಪಯೋಗಿಸುವ ಬಿಳಿಬಣ್ಣದ ದೊ ಸೈಜಿನ ಕೊಡೆಗಳು, (ಇಂಥಹ ಕೊಡೆಗಳಿಗೆ ಸುತ್ತಲೂ ಅಂದವಾದ ಕೆಂಪಗಿ ಜರಿ ಅಂಚು ಇರುತ್ತದೆ) ರಾಷ್ಟ್ರಪತಿ, ಪ್ರಧಾನಮಂತ್ರಿ, ಇತರ ಮಹೋದಯ ಅಂತಸ್ಥಿಗೆ ತಕ್ಕಂತೆ ವಿಶೇಷವಾಗಿ ತಯಾರಿಸಿದ ಕೊಡೆಗಳು, ಸಿನಿಮ ತಾರೆಯರಿಗೆ, ತಂತ್ರಜ್ಞರಿಗೆ ಪ್ರತ್ಯೇಕವಾಗಿ ತಯಾರಿಸಿದ ಕೊಡೆಗಳು.

ಓಪನ್ ಏರ್ ರೆಸ್ಟಾರೆಂಟುಗಳಲ್ಲಿ, ಬೀಚ್ ರೆಸ್ಟಾರೆಂಟುಗಳಲ್ಲಿ ಬ ಬಣ್ಣದ ಛಾಯೆಗಳಿಂದ ಟೆಂಟುಗಳನ್ನು ಹೋಲುವ ಕೊಡೆಗಳನ್ನು ಬಳಸುತ್ತಾ ಫೋಟೋ ಸ್ಟುಡಿಯೋಗಳಲ್ಲಿ ಲೈಟ್ ರಿಫ್ಲೆಕ್ಟರ್‌ಗಳಂತೆ ಕೂಡಾ ಕೊಡೆಗಳನ ಬಳಸುತ್ತಾರೆ. ಸಣ್ಣಮಕ್ಕಳಿಗೆ 'ಟೋಪಿ ಟೈಪ್' ಕೊಡೆಗಳು ಕೂಡ ಮಾರ್ಕೆಟ್ ಬಂದಿವೆ.

ಕೊಡೆಗಳ ಮೇಲೆ ಜಾಹೀರಾತು : ದೊಡ್ಡ ದೊಡ್ಡ ಕಾರ್ಪರೇಟ


ಕಂಪೆನಿಗಳು ತಮ್ಮ ಉತ್ಪಾದನೆಗಳನ್ನು ಕೊಡೆಗಳ ಮೇಲೆ ಮುದ್ರಿಸಿ ಉಚಿತವಾಗಿ ಹಂಚುತ್ತಿವೆ. ಹೇರ್ ಆಯಿಲ್ ಕಂಪೆನಿಗಳು, ಪ್ರಸಾಧನಗಳು, ಪೇಸ್ಟುಗಳು, ತಂಪುಪಾನೀಯಗಳು, ಟೈರ್ ಕಂಪೆನಿಗಳು, ಸಿಮೆಂಟ್ ಫ್ಯಾಕ್ಟರಿಗಳು ಕೊನೆಗೆ ಬ್ಯಾಂಕಿನವರೂ ಕೂಡಾ ವಿಶೇಷವಾಗಿ ಕೊಡೆಗಳನ್ನು ತಯಾರಿಸಿ ತದ್ವಾರ ಭಾರೀ ಪ್ರಚಾರಕ್ಕೆ ಇಳಿದಿದ್ದಾರೆ.



ಬಿಸಿಲು ಮಳೆಯಿಂದ ರಕ್ಷಣೆಗೆ ಚಾಮರದಂಥ ಕೊಡೆ



ಮಡೋನ್ನಾ ಕೊಡೆ



ಟಾರ್ಚ್ ಲೈಟ್ ಕೊಡೆ

ರಾತ್ರಿ ಹೊತ್ತು ಕತ್ತಲಲ್ಲಿ ಮಿನುಗುವ ಕೊಡೆಗಳು ಹೊಸದಾಗಿ ಬಂದಿವೆ (ಇದರಲ್ಲಿ ಬ್ಯಾಟರಿ ಅಳವಡಿಸಿರುತ್ತದೆ). ಈಗ ಇವು ಒಂದು ರೀತಿಯ ವಿಶೇಷ ಆಕರ್ಷಣೆ ಪಡೆದಿವೆ. ಮಳೆ ಬಂದಾಗ ಕತ್ತಲಲ್ಲಿ ಈ ಕೊಡೆಗಳು ಬಹಳ ಉಪಯುಕ್ತವಾಗಿವೆ. ಈಗ ಇವು ನಾಲ್ಕು ವರ್ಣಗಳಲ್ಲಿ ದೊರೆಯುತ್ತವೆ.

ಹಾಗೇನೆ ವಾತಾವರಣಕ್ಕೆ ಅನುಗುಣವಾಗಿ ಬಣ್ಣಗಳನ್ನು ಬದಲಾಯಿಸುವ ಕೊಡೆಗಳು, ಸುವಾಸನೆಯನ್ನು ಸೂಸುವ ಸುಗಂಧಿತ ಕೊಡೆಗಳು, ಸಿನಿಮಾ ತಾರೆಯರ ಚಿತ್ರಗಳಿರುವ (ಮಡೋನಾ, ಮರ್ಲಿನ್ ಮನ್ರೊ) ಕೊಡೆಗಳು ಸುಮಾರು 300 ವಿಧದಲ್ಲಿ ಮಾರ್ಕೆಟ್ಟಿಗೆ ಬಂದಿವೆ.

ಕೊಡೆಗಳಲ್ಲಿ ಮೂರು ಮಡಿಕೆಯ, ನಾಲ್ಕು ಮಡಿಕೆಯ ಕೊಡೆಗಳು ಕೇವಲ ಆರು ಅಂಗುಲ ಜಾಗೆ ಇರುವ ಬ್ಯಾಗಿನಲ್ಲಿಯೂ ಹಿಡಿಯುತ್ತವೆ. ಈಗೀಗ ಬಹು ಹಗುರಾಗಿರುವ ಕೊಡೆಗಳು. ತಯಾರಾಗುತ್ತಿವೆ. ತಲೆಗೆ ಟೋಪಿಯ ಹಾಗೆ ಇಟ್ಟುಕೊಳ್ಳುವ ಸಣ್ಣ ಮಕ್ಕಳ ಕೊಡೆಗಳು, ಸ್ಕೂಟರ್, ಮೋಟಾರು ಸೈಕಲ್ಲುಗಳ ಮೇಲೆ ಹೋಗುವವರಿಗೆ ಅನುಕೂಲವಾಗುವ ಅಲ್ಟ್ರಾ ವಾಯಲೆಟ್ ಕಿರಣಗಳನ್ನು ನಿರೋಧಿಸುವ ಸಿಲ್ವರ್ ಕೋಟೆಡ್‌ಕೊಡೆಗಳು, ಗೋಲ್ಡ್ ಕೋಟಿಂಗ್ ಮಾಡಿದ ಕೊಡೆಗಳು, ವಜ್ರಗಳಿಂದ ಅಲಂಕರಿಸಿದ ಹಿಡಿಕೆ ಇರುವ ಕೊಡೆಗಳೂ ಇವೆ. ಇವು ಧನಿಕರಿಗೆ ತಮ್ಮ ಅಂತಸ್ತಿನ ಸಂಕೇತವಾಗಿ ಅಲಂಕಾರಿಕ ವಸ್ತುವಾಗಿ ಉಪಯೋಗವಾಗುತ್ತಿವೆ.

ವಿಶ್ವ ಸುಂದರಿಯರ ಸ್ಪರ್ಧೆಗಳಿಗಾಗಿ : ಓರಿಸ್ಸಾದಲ್ಲಿ 'ಪಿಪ್ಲೀ' ಹತ್ತಿರ ಬಣ್ಣದ ಬಟ್ಟೆಯಮೇಲೆ ಕನ್ನಡಿಗಳನ್ನು ಅಳವಡಿಸಿದ ಹೊದಿಕೆಯನ್ನು ಉಪಯೋಗಿಸಿ ಕೊಡೆಗಳನ್ನು ತಯಾರಿಸುತ್ತಾರೆ. ಇವು ಕೂಡಾ ನೋಡಲು ಆಕರ್ಷಣೀಯವಾಗಿರುತ್ತವೆ. ಇದರಂತೆ ಜರಿ ಬಟ್ಟೆಯಿಂದ, ವಿವಿಧ ವಿನ್ಯಾಸಗಳಲ್ಲಿ ಸೌಂದರ್ಯ ಸ್ಪರ್ಧೆಗಳಿಗಾಗಿಯೇ ವಿಶೇಷವಾಗಿ ಕೊಡೆಗಳನ್ನು ತಯಾರಿಸಲಾಗುತ್ತಿದೆ.

ಭಾರತದ ಸ್ವಾತಂತ್ರ್ಯ ಸುವರ್ಣ ಮಹೋತ್ಸವ ಸಂದರ್ಭಕ್ಕಾಗಿ 'ತಿರಂಗಾ' ಹೆಸರಿನಿಂದ ವಿಶೇಷ ಕೊಡೆಗಳನ್ನು ಬಿಡುಗಡೆಮಾಡಿದ್ದಾರೆ. ಕೊಡೆಗಳ ಬೆಲೆ ರೂ. 30 ರಿಂದ 3000ವರೆಗೂ ಇದ್ದು, ವಿಶೇಷವಾಗಿ ತಯಾರಿಸಿದವು ಮಾತ್ರ ಅತ್ಯಂತ ಹೆಚ್ಚು ಬೆಲೆಯುಳ್ಳವುಗಳಾಗಿವೆ. ಕೊಡೆಗಳು ಹೆಚ್ಚು ಕಾಲ ಬಾಳಿಕೆ ಬರಲು ಅನುಕೂಲವಾಗುವಂತೆ ನೈಲಾನ್ ಬಟ್ಟೆಯನ್ನು ಬಳಸುತ್ತಿದ್ದಾರೆ.

ನಮ್ಮ ದೇಶದಲ್ಲಿ ಅನೇಕ ಕಡೆ ಈ ಕೊಡೆಗಳ ತಯಾರಿಕೆ ಗುಡಿ ಕೈಗಾರಿಕೆಯಾಗಿದೆ. ಇದರಲ್ಲಿ ಅನೇಕ ಮಹಿಳೆಯರು ಜೀವನೋಪಾಯ ಕಂಡುಕೊಂಡಿದ್ದಾರೆ. (ಜನವರಿ, ಫೆಬ್ರುವರಿ, ಮಾರ್ಚ್, ಎಪ್ರಿಲ್, ಮೇ, ಜೂನ್) ಸೀಜನ್‌ದಲ್ಲಿ ಅನೇಕ ಜನ ಗ್ರಾಮ ಪ್ರಾಂತ್ಯದಲ್ಲಿರುವ ಸ್ತ್ರೀ-ಪುರುಷರು, ಈ ಕೊಡೆಗಳ ಫ್ಯಾಕ್ಟರಿಯಲ್ಲಿ ದಿನವೂ ದುಡಿದು, ಹಣ ಸಂಪಾದಿಸಿ ತಮ್ಮ ಕುಟುಂಬವನ್ನು ಪೋಷಿಸಿಕೊಳ್ಳುತ್ತಿದ್ದಾರೆ.

ನಮ್ಮ ದೇಶದಿಂದ ಅರಬ್ ದೇಶಗಳಿಗೆ, ಆಫ್ರಿಕಾಗೆ ಕೊಡೆಗಳನ್ನು ನಿರ್ಯಾತ ಮಾಡಲಾಗುತ್ತಿದೆ. ಈ ವ್ಯಾಪಾರದ ಮೊತ್ತ 200 ಕೋಟಿಗಳವರೆಗೂ ಇರುತ್ತದೆಂದು ಒಂದು ಅಂದಾಜು.


ಈ ಕೈಗಾರಿಕೆ ಮತ್ತಷ್ಟು ವಿಸ್ತರಿಸಲು ಸರ್ಕಾರ ಅನೇಕ ರೀತಿಯ ಸಬ್ಸಿಡಿ ಕೊಟ್ಟು, ಸಾಲದ ಅವಕಾಶ ಮಾಡಿಕೊಟ್ಟರೆ ಚೆನ್ನಾಗಿರುತ್ತದೆ ಎಂದು ಅನೇಕ ಜನ ಕಾರ್ಮಿಕರು ಅಭಿಪ್ರಾಯಪಡುತ್ತಾರೆ.

ಮಹಿಳಾ ಉದ್ಯೋಗಿಗಳು ತಮ್ಮ ಹ್ಯಾಂಡ್‌ಬ್ಯಾಗಿನಲ್ಲಿ ಟಿಫಿನ್ ಬಾಕ್ಸ್‌ನೊಂದಿಗೆ ಒಂದು ಫೋಲ್ಡಿಂಗ್ ಕೊಡೆಯನ್ನು ಕೂಡಾ ಕೊಂಡೊಯ್ಯುವುದು, ಪಟ್ಟಣಗಳಲ್ಲಿ ಇಂದು ಸಾಮಾನ್ಯ ಸಂಗತಿಯಾಗಿದೆ. ಅವರ ದೇಹಸಿರಿ ಬಿಸಿಲಿಗೆ ಕಂದಿ ಹೋಗದಂತೆ, ಮಳೆಗೆ ನೆನೆಯದಂತೆ ಕಾಪಾಡುವುದಕ್ಕೆ ಈ ಕೊಡೆಗಳು ಉಪಯೋಗಕ್ಕೆ ಬರುತ್ತವೆಂದು ಅವರು ನಂಬುತ್ತಾರೆ. ಒಂದು ರೀತಿಯಿಂದ ಈ ಕೊಡೆಗಳು ಮಹಿಳೆಯರ ಸೌಂದರ್ಯ ರಕ್ಷಣೆ ಮಾಡಲು ವ್ಯಕ್ತಿತ್ವಕ್ಕೆ ಮೆರುಗನ್ನು ನೀಡಲು ಸಹಾಯಕವಾಗಿವೆ ಎನ್ನಬಹುದು.

■ ಕೆ.ಬಿ.ಬೊಮ್ಮನಾಳ

ಬಲೆಯೊಳಗೆ ಬಲಿಬೀಳದ ಜೇಡ

'ಬಾ ನೊಣವೆ, ಬಾ ನೊಣವೆ, ಬಾ ನನ್ನ ಮನೆಗೆ
ಬಾನೊಳಗೆ ಹಾರಿ ಬಲು ದಣಿವಾಯ್ತು ನಿನಗೆ'



ಎಂಬ ಪದ್ಯವನ್ನು ಹಾಡಿ ಮಕ್ಕಳು ಆನಂದಪಡುತ್ತಾರೆ, ಜೇಡದ ಪ್ರಶಂಸೆಗೆ ಮನಸೋತ ನೊಣ ಬಲೆಯೊಳಗೆ ಹಾರಿ ಜೇಡನಿಗೆ ಆಹಾರವಾಗುತ್ತದೆ. ಪ್ರಕೃತಿಯಲ್ಲಿರುವ ಜೀವಿಗಳೊಳಗಿನ ಸಮತೋಲನವನ್ನು ಕಾಪಾಡಿಕೊಳ್ಳಲು ಪ್ರಕೃತಿಯೇ ನಿಯಮಿಸಿದ ಹಲವಾರು ವಿಧಿ-ವಿಧಾನಗಳಿವೆ. ಒಂದು ಜೀವಿಗೆ ಇನ್ನೊಂದು ಜೀವಿ ಆಹಾರವಾಗಿರುವುದು ಇವುಗಳಲ್ಲಿ ಒಂದು ವಿಧಾನ.

ಜೇಡ ಚಿಕ್ಕ ಗಾತ್ರದ ಕೀಟಗಳನ್ನು ಹಿಡಿದು ತಿನ್ನುವ ಒಂದು ಪರಭಕ್ಷಕ ಪ್ರಾಣಿ. ಹಲವಾರು ಪ್ರಭೇಧಗಳಿಗೆ ಸೇರಿದ ಜೇಡಗಳಿವೆ. ಇಬ್ಬನಿ ಬಿದ್ದ ರಾತ್ರಿ ಕಳೆದು ಮುಂಜಾನೆ ಭತ್ತದ ಗದ್ದೆಗಳ ಬದಿಯಿಂದ ನಡೆದಾಡಿದರೆ ಗರಿಗಳನ್ನೇ ಆಧಾರವಾಗಿ ರಚಿಸಿದ, ಹೊಳೆಯುವ ಮೋಹಕ ಬಲೆಗಳು ಅಲ್ಲಲ್ಲಿ ಕಾಣಿಸಿಕೊಳ್ಳುತ್ತವೆ, ಭತ್ತದ ಪೈರೊಂದರಲ್ಲೇ ಸುಮಾರು 34 ಪ್ರಭೇಧಗಳಿಗೆ ಸೇರಿದ ಜೇಡಗಳಿವೆ! ಒಂದು ಜೇಡ ದಿನವೊಂದಕ್ಕೆ 8-10 ಜಿಗಿ ಕೀಟಗಳನ್ನು ಕೊಲ್ಲುತ್ತದೆ. ಹಲವಾರು ಹಾನಿಕಾರಕ ಕೀಟಗಳನ್ನು ಭಕ್ಷಿಸಿ ಅವುಗಳ ಸಂಖ್ಯೆಯನ್ನು ನಿಯಂತ್ರಿಸುವ ಜೇಡ ಒಂದು ಉಪಕಾರಿ ಪ್ರಾಣಿ.

ಜೇಡದ ದೇಹದಲ್ಲಿ ರೇಷ್ಮೆ ದಾರ ಉತ್ಪಾದಿಸುವ ಗ್ರಂಥಿಗಳಿರುತ್ತವೆ. ಈ ಗ್ರಂಥಿಗಳಿಂದ ಹೊರಸೂಸಲ್ಪಟ್ಟ ರೇಷ್ಮೆ ಹೊಟ್ಟೆಯ ತುದಿಯ ಕೆಳಭಾಗದಲ್ಲಿರುವ 3 ಜತೆ ಸೂಕ್ಷ್ಮ ರಂಧ್ರಗಳ ಮೂಲಕ ತೆಳುವಾದ ರೇಷ್ಮೆದಾರವಾಗಿ ಹೊರಬರುತ್ತದೆ. ನೀರಿನಲ್ಲಿ ಕರಗದ ಈ ರೇಷ್ಮೆದಾರ ಸಮಾನ ಗಾತ್ರದ ಉಕ್ಕಿನ ಕಂಬಿಗಿಂತಲೂ ಗಟ್ಟಿಯಾಗಿರುತ್ತದೆ!

ಬಲೆಗಳನ್ನು ರಚಿಸುವ ಜೇಡನ ಕೌಶಲ್ಯವನ್ನು ವೀಕ್ಷಿಸುವುದೊಂದು ಅಪೂರ್ವ ಅನುಭವ. ಕೇಂದ್ರ ಬಿಂದುವೊಂದರಿಂದ ಪ್ರಾರಂಭಿಸಿ ಆಧಾರಗಳನ್ನು ಸ್ಪರ್ಶಿಸುವ ಹಲವು ದಾರಗಳನ್ನು ಜೇಡ ನೇಯುತ್ತದೆ. ಈ ದಾರಗಳು ಚಕ್ರವೊಂದಕ್ಕೆ ಜೋಡಿಸಿದ ಕೀಲುಗಳಂತೆ (spokes) ಕಾಣಿಸುತ್ತವೆ. ನಂತರ ಈ ನೂಲುಗಳನ್ನು ವೃತ್ತಾಕಾರದಲ್ಲಿ ಜೋಡಿಸುವ ಕಾರ್ಯ ನಡೆಯುತ್ತದೆ. ಒಂದು ಬಲೆಯಲ್ಲಿ 10-60 ವೃತ್ತಾಕಾರದ ಸುತ್ತುಗಳಿರುತ್ತವೆ.

ನಾಜೂಕಾದ ಬಲೆಯನ್ನು ಕಟ್ಟಿದರಾಯಿತೇ? ಕೀಟಗಳು ಬಲೆಗೆ ಅಂಟಿಕೊಳ್ಳುವಂತೆ ಮಾಡುವುದೂ ಅವಶ್ಯಕ. ಜೇಡ ದಾರದ ಮೇಲೆ ಅಲ್ಲಲ್ಲಿ ಒಂದು ಅಂಟು ಪದಾರ್ಥದ ಹನಿಗಳನ್ನು ಉದುರಿಸಿಬಿಡುತ್ತದೆ. ವಾತಾವರಣದಿಂದ ತೇವವನ್ನು ಹೀರಿಕೊಂಡು ಈ ಅಂಟುಪದಾರ್ಥ ಒದ್ದೆಯಾಗಿಯೇ ಇರುತ್ತದೆ. ಬಲೆಯತ್ತ ಹಾರಿಬಂದ ಕೀಟಗಳು ಬಲೆಗೆ ಅಂಟಿಕೊಳ್ಳುತ್ತವೆ. ಕೊಳ್ಳೆಯನ್ನು ಹಿಡಿಯಲು ಜೇಡ ಕೇಂದ್ರ ಬಿಂದುವಿನಲ್ಲಿ ಅಥವಾ ಹೊರಗಡೆ ಹೊಂಚು ಹಾಕುತ್ತಾ ಇರುತ್ತದೆ, ಬಲೆಯ ಕಂಪನದಿಂದಲೇ ಅದು ಕೊಳ್ಳೆ ಸಿಕ್ಕಿ ಬಿದ್ದಿದೆ ಎಂದು ನಿರ್ಧರಿಸುತ್ತದೆ. ಕೊಳ್ಳೆಯತ್ತ ಹಾರಿ ಅದನ್ನು ನಿಶ್ಚೇತನಗೊಳಿಸುತ್ತದೆ.

ಅಂಟಾದ ರೇಷ್ಮೆದಾರದಲ್ಲಿ ಕೀಟಗಳು ಸುಲಭವಾಗಿ ಅಂಟಿಕೊಂಡರೂ ಜೇಡ ಏಕೆ ಅಂಟಿಕೊಳ್ಳುವುದಿಲ್ಲ? ಇದಕ್ಕೂ ಕಾರಣವಿದೆ. ಜೇಡ ಒಂದು ಎಣ್ಣೆಯಂತಹ ಪದಾರ್ಥವನ್ನು ಕಾಲುಗಳ ತುದಿಗೆ ಪದರವಾಗಿ ಸವರಿಕೊಳ್ಳುತ್ತದೆ. ಈ ಪದರ ಜೇಡನ ಕಾಲುಗಳು ದಾರಕ್ಕೆ ಅಂಟಿಕೊಳ್ಳುವುದನ್ನು ತಡೆಗಟ್ಟುತ್ತದೆ. ಈ ಪದರವನ್ನು ಕೃತಕವಾಗಿ ತೆಗೆದುಬಿಟ್ಟರೆ ಜೇಡನ ಕಾಲುಗಳೂ ಬಲೆಗೆ ಅಂಟಿಕೊಳ್ಳುತ್ತವೆ.

■ ಪಿ.ಎಸ್.ರೈ

ವಿಶಿಷ್ಟ ಆಚರಣೆ 'ಢಿಕ್ಕಿ' ಹಬ್ಬ

ಚಳ್ಳಕೆರೆಗೆ ಕೇವಲ ಏಳೆಂಟು ಕಿ.ಮಿ. ದೂರದ ನನ್ನಿವಾಳದಲ್ಲಿ ವಿಚಿತ್ರವಾದ ಹಬ್ಬವೊಂದು ನಡೆಯುತ್ತದೆ. ನನ್ನಿವಾಳ ಮ್ಯಾಸ ಬೇಡರ ಪ್ರಮುಖ ಸಾಂಸ್ಕೃತಿಕ ಕೇಂದ್ರವಲ್ಲದೆ, ಬೇಡ ಜನಾಂಗದ 'ಕಟ್ಟೆ ಮನೆ' ಯೂ ಹೌದು.

ಊರಿಗೆ ಅಂಟಿಕೊಂಡೇ ಬೃಹದಾಕಾರವಾದ ಬೆಟ್ಟವಿದೆ. ನಯನ ಮನೋಹರವಾದ ಈ ಬೆಟ್ಟ ಒಂದು ದಿಕ್ಕಿನಿಂದ ಗಣಪತಿಯಂತೆ ಕಂಡರೆ ಮತ್ತೊಂದು ದಿಕ್ಕಿನಿಂದ ತಲೆ ನೆಲಕ್ಕಿಟ್ಟು ಸೊಂಡಿಲು ಚಾಚಿ ಮಲಗಿದ ಆನೆಯಂತೆ ಕಾಣುತ್ತದೆ; ದೂರದಿಂದ ನೋಡಿದಾಗ ಬೇಂದ್ರೆಯವರ 'ಗುಡ್ಡ ಗುಡ್ಡ ಸ್ಥಾವರಲಿಂಗ' ವೆಂಬಂತೆ ಕಾಣುತ್ತದೆ. ಸುಮಾರು ಮೂರುಸಾವಿರ ಅಡಿ ಎತ್ತರವಿರುವ ಬೆಟ್ಟ ಬರುಬರುತ್ತಾ ಕಡಿದಾಗುತ್ತಾ ಹೋಗಿ ಒಂದು ಸಣ್ಣ ಬಯಲಿನಲ್ಲಿ ಅಂತ್ಯವಾಗುತ್ತದೆ. ಗುಹೆಯಾಕಾರದ ಬಂಡೆಯ ಸಂದಿಯಲ್ಲಿ ಒಂದು ಲಿಂಗವಿದೆ. ಹಿಂದೆ ಈ ಊರಿಗೆ 'ನಂದಿವಾಳ' ಅಂತ ಹೆಸರಿತ್ತಂತೆ. ಈ ಬೆಟ್ಟ ನಂದಿಯ ಭುಜದ ಹಾಗೇ ಇದ್ದಿದ್ದರಿಂದ ಆ ಹೆಸರು ಬಂದಿತ್ತಂತೆ. ಆಗ ನಂದಿವಾಳವನ್ನು ಆಳುತ್ತಿದ್ದ ಮ್ಯಾಸನಾಯಕ 'ನನ್ನೆಮ್ಮ' ಎಂಬ ಮುಸ್ಲಿಂ ಹೆಂಗಸಿನೊಂದಿಗೆ ಸಂಪರ್ಕ ಇಟ್ಟುಕೊಂಡಿದ್ದನಂತೆ. ಈಕೆ ನಾಯಕನಲ್ಲಿ ತನ್ನ ಹೆಸರು ಶಾಶ್ವತವಾಗಿ ಉಳಿಯಬೇಕು. ಮ್ಯಾಸಬೇಡರು ಮುಸ್ಲಿಂರ ಸಂಪ್ರದಾಯ ಅನುಸರಿಸೋ ಹಾಗೆ ಮಾಡಬೇಕು ಎಂದು ಕೇಳಿದ್ದರಿಂದ; ಆ ನಾಯಕ ಊರ ಹೆಸರನ್ನು 'ನನ್ನಿವಾಳ' ಎಂದು ಬದಲಾಯಿಸಿ, ಎಲ್ಲರೂ ಮುಂಜಿ ಮಾಡಿಸಿಕೊಳ್ಳಬೇಕು ಎಂದು ಆಜ್ಞೆ ಮಾಡಿದನಂತೆ! ಈಗಲೂ ಕೆಲವು ಜನ ಮುಂಜಿ ಮಾಡಿಸಿಕೊಳ್ಳುತ್ತಾರೆ.

ಊರ ಹೊರವಲಯದಲ್ಲಿ ಸುತ್ತಿನ ಹನ್ನೆರಡು ಮ್ಯಾಸಬೇಡರ ಹಟ್ಟಿಗಳಿಂದ ಬಂದ 12 ದೇವರುಗಳಿಗೆ ಹಸಿರು ಚಪ್ಪರ ಹಾಕಿ ಗದ್ದಿಗೆಯ ಮೇಲೆ ಇಳಿಸುತ್ತಾರೆ. 'ಎತ್ತಿನ ಕಿಲಾರಿ'ಯ ನೇತೃತ್ವದಲ್ಲಿ 'ದೇವರ ಬಸವ'ಗಳ ಓಟದ ಕಾರ್ಯಕ್ರಮ ಪ್ರಾರಂಭ. ಜನಗಳ ಕೇಕೆ. ಉರುಮೆಗಳ ಆರ್ಭಟ 'ಮುಗಿಲುಮುಟ್ಟಿ, ಒಂದೊಂದೇ ದೇವರುಗಳ ಪೂಜೆಗಳು ನಡೆದ ಮೇಲೆ ಬಂಗಾರ ದೇವರ' ಪೂಜೆ ಪ್ರಾರಂಭ. ಅಲ್ಲಿ ಸೇರಿದ್ದ ನೆಂಟರು - ಭಂಟರಾದ ಅತ್ತೆ ಸೊಸೆಯರು ಒಬ್ಬರ ಜುಟ್ಟು ಮತ್ತೊಬ್ಬರು ಹಿಡಿದುಕೊಂಡು ಒಬ್ಬರ ತಲೆಗೊಬ್ಬರು 'ಫಟ್ ಫಟ್' ಎಂದು 'ಢೀ' ಕುಟ್ಟಿಕೊಳ್ಳತೊಡಗುತ್ತಾರೆ. ಇಷ್ಟೊತ್ತು ಚೆನ್ನಾಗೇ ಇದ್ದ ಜನ ಹೀಗೇಕೆ ಮಾಡುತ್ತಿದ್ದಾರೆ ಅನ್ನಿಸುತ್ತದೆ. ಅತ್ತೆ-ಸೊಸೆಯರು ಎಲ್ಲ ಅಂತರಗಳನ್ನು ಮರೆತು, ಹೃದಯದಲ್ಲಿನ ಕಲ್ಮಷವನ್ನು ತೊಳೆದುಕೊಂಡು ಶುದ್ಧಿಯಾಗುವ ಕಾರ್ಯಕ್ರಮ ಇದಾಗಿರಬಹುದೇ? ಅನ್ನಿಸುತ್ತದೆ. ತಮಿಳಿನ ಸಂಗಂ ಕಾಲದ ಸಾಹಿತ್ಯದಲ್ಲಿ ಈ ಬಗೆಯ ಘಟನೆಯ ಉಲ್ಲೇಖವೂ ಉಂಟು. ಅಂದರೆ ಇದೊಂದು ಪರಂಪರೆಯಿಂದ ಪ್ರಾಚೀನ ಆಚರಣೆ. ಹನ್ನೆರಡು ಪೆಟ್ಟಿಗೆ ದೇವರುಗಳಲ್ಲೊಂದಾದ ಬಂಗಾರ ದೇವರಿಗೆ ತೆಂಗಿನಕಾಯಿ ಸೇರುವುದಿಲ್ಲವಂತೆ! ಅದಕ್ಕಾಗಿ ಹರಕೆ ಹೊತ್ತ ಭಕ್ತರು ತೆಂಗಿನಕಾಯಿ ಸಲ್ಲಿಸುವುದಕ್ಕೆ ಬದಲಾಗಿ 'ತಲೆ'ಯನ್ನೇ ತೆಂಗಿನಕಾಯಿ ಎಂದು ಭಾವಿಸಿ 'ಫಟ್' ಎಂದು ಘಟ್ಟಿಸಿಕೊಳ್ಳುವ ಕ್ರಿಯೆಯ ಮೂಲಕ ಕಾಯಿ ಒಪ್ಪಿಸಿದ ಸಂತೃಪ್ತಿ ಪಡೆಯುತ್ತಾರೆ ಎಂದು ಹಿರಿಯರೊಬ್ಬರು ಹೇಳುತ್ತಾರೆ.

'ಢಿಕ್ಕಿ'ಯ ನಂತರ ಅತ್ತೆ - ಸೊಸೆಯರು ನಗು ನಗುತ್ತಾ ಸೋತವರು ಗೆದ್ದವರಿಗೆ ಕಜ್ಜಾಯ ಕೊಡಿಸುತ್ತಾರೆ. ಇದನ್ನು ನೋಡಿದಾಗ ಅವರು ಬದುಕನ್ನು ಒಂದು ಸೋಲು ಗೆಲುವಿನಾಟ ಎಂದು ಭಾವಿಸಿದಂತಿದೆ ಎಂದು ಅನ್ನಿಸುತ್ತದೆ.

■ ಮಾರಾಸಾಬಿಹಳ್ಳಿ ಶಿವಣ್ಣ

ನಿತ್ಯ ಜೀವನದಲ್ಲಿ ಯೋಗಾಭ್ಯಾಸ

ಒತ್ತಡ, ಜಂಜಡಗಳಿಂದ ಕೂಡಿದ ನಿತ್ಯದ ಬದುಕಿನಿಂದ ಮನುಷ್ಯ ಹೈರಾಣಾಗುತ್ತಿದ್ದಾನೆ. ಇದರಿಂದಾಗಿಯೇ ನಾನಾ ರೀತಿಯ ಕಾಯಿಲೆಗಳಿಗೂ ತುತ್ತಾಗುತ್ತಿದ್ದಾನೆ. ಬೊಜ್ಜು, ಮಧುಮೇಹ, ರಕ್ತದೊತ್ತಡ, ತಲೆನೋವು, ತಲೆ ಸಿಡಿತ... ಹೀಗೆ ಬಹುಪಾಲು ಜನರನ್ನು ಕಾಡುತ್ತಿರುವ ರೋಗಗಳು ಬರದಂತೆಯೇ ತಡೆಯುವುದು ಮುಖ್ಯ. ರೋಗ ಬಂದ ಮೇಲೆ ವೈದ್ಯರನ್ನು ಕಂಡು ದುಬಾರಿ ಚಿಕಿತ್ಸೆಗೆ ಒಡ್ಡಿಕೊಳ್ಳುವ ಬದಲು, ಸುಲಭ, ವ್ಯಚ್ಚವಿಲ್ಲದ, ರೋಗ ತಡೆಯುವ ಅಭ್ಯಾಸ ಎಷ್ಟೊಂದು ಅರ್ಥಪೂರ್ಣ ಅಲ್ಲವೇ!



ಪಾತಂಜಲ ಮಹಾಭಾಷ್ಯ
ಚರಕಪ್ರತಿಸಂಸ್ಕೃತೈ : ।
ಮನೋವಾಕ್ಕಾಯ
ದೋಷಾಣಾಂ ಹರ್ತೆ
ಅಹಿಪತಯೇ ನಮಃ॥

ಪಾತಂಜಲ ಯೋಗಶಾಸ್ತ್ರ, ಪಾತಂಜಲ ಮಹಾಭಾಷ್ಯ ಮತ್ತು ಚರಕ ಪ್ರತಿಸಂಸ್ಕೃತ ಎಂಬ ಗ್ರಂಥಗಳ ರಚನೆಯ ಮುಖಾಂತರ ಕ್ರಮವಾಗಿ ಯೋಗಶಾಸ್ತ್ರದಿಂದ ಮನೋದೋಷಗಳನ್ನು ವ್ಯಾಕರಣ ಮಹಾಭಾಷ್ಯದಿಂದ ವಾಗ್ದೋಷಗಳನ್ನು ಮತ್ತು ಆಯುರ್ವೇದ ಚರಕ ಸಂಹಿತೆಯಿಂದ ಕಾಯದೋಷಗಳನ್ನು ಹೋಗಲಾಡಿಸಿದ ಆದಿಶೇಷನಿಗೆ ನಮಸ್ಕಾರ.

ಅನಾರೋಗ್ಯವಾದಾಗ ಯೋಗ್ಯ ವೈದ್ಯರನ್ನು ಕಾಣಬೇಕಾಗುತ್ತದೆ. ಪದೇ ಪದೇ ವೈದ್ಯರನ್ನು ಕಾಣದಂತೆ ಆರೋಗ್ಯವಂತನಾಗಿರಲು ಪೂರ್ವತಯಾರಿ ಏನಾದರೂ ಇದೆಯೇ? ಎಂಬ ಪ್ರಶ್ನೆಗೆ ''ನಿತ್ಯ ಜೀವನದಲ್ಲಿ ಯೋಗಾಭ್ಯಾಸ'' ಅಳವಡಿಸುವುದು ಎಂಬುದು ಸಮರ್ಪಕ ಉತ್ತರವಾದೀತು.

ಪರಿಶ್ರಮೋ ಮಿತಾಹಾರೋ ಭೂಗತಾವಶ್ವಿನಿಸುತೌ।
ತಾವನಾದೃತ್ಯ ನೈವಾಹಂ ವೈದ್ಯಮನ್ಯಂ ಸಮಾಶ್ರಯೇ॥

ಪರಿಶ್ರಮ ಮತ್ತು ಮಿತಾಹಾರ ಇವೆರಡು ಭೂಮಿಗವತರಿಸಿದ ಅಶ್ವಿನಿದೇವತೆಗಳಿದ್ದಂತೆ (ದೇವತಾ ವೈದ್ಯರು). ಆದ್ದರಿಂದ ಪರಿಶ್ರಮ ಮತ್ತು ಮಿತಾಹಾರಗಳನ್ನು ಬಿಟ್ಟು ಬೇರಾವ ವೈದ್ಯನನ್ನೂ ನಾನು ಆಶ್ರಯಿಸಲಾರೆ. (ವೈದ್ಯರ ಅವಶ್ಯಕತೆ ಕಡಿಮೆಯಾಗುತ್ತದೆ)

ಪರಿಶ್ರಮವೆಂದರೆ 'ಶರೀರಾಯಾಸಜನಕಂ ಕರ್ಮ ವ್ಯಾಯಾಮ ಸಂಜ್ಞಿತಂ' ಶರೀರಕ್ಕೆ ದಣಿವನ್ನು ಉಂಟುಮಾಡುವ ಕರ್ಮ (ವ್ಯಾಯಾಮ). ಬಟ್ಟೆ ಒಗೆಯುವುದು, ಪಾತ್ರೆ ತಿಕ್ಕುವುದು, ನೀರು ಸೇದುವುದು, ಬೀಸುವುದು, ತಿರುಗಾಟ, ಓಟ, ಈಜು, ಸೈಕಲ್ ಸವಾರಿ ಇತ್ಯಾದಿ ದಿನನಿತ್ಯದ ಪರಿಶ್ರಮವಿರುವ ಕೆಲಸಗಳೆಲ್ಲಾ ವ್ಯಾಯಾಮಗಳೇ ಆಗಿರುತ್ತವೆ. ಶಾಲೆಯಲ್ಲಿ ಮಾಡಿಸುವ ಡ್ರಿಲ್, ಸೂರ್ಯ ನಮಸ್ಕಾರ ಮುಂತಾದವುಗಳೆಲ್ಲ ಶಾರೀರಿಕ ವ್ಯಾಯಾಮವಾದರೆ, ಹಠಯೋಗದ ಮೊದಲನೆಯ ಅಂಗವಾದ ''ಆಸನಗಳು'' ಯೌಗಿಕ ವ್ಯಾಯಾಮವೆನಿಸಿದೆ.

ಹಠಸ್ಯ
ಪ್ರಥಮಾಂಗತ್ವಾದಾಸನಂ
ಪೂರ್ವ ಮುಚ್ಯತೆ।
ಕುರ್ಯಾತ್ತದಾಸನಂ
ಸ್ಥೈರ್ಯಮಾರೋಗ್ಯಂ
ಚಾಂಗಲಾಘವಂ॥


(ಹಠಯೋಗ ಪ್ರದೀಪಿಕಾ)

ಆಸನವು ಹಠಯೋಗದ ಮೊದಲನೆಯ ಅಂಗ. ಇಂತಹ ಆಸನವು ಶರೀರಕ್ಕೆ ಸ್ಥಿರತೆ, ಆರೋಗ್ಯ ಮತ್ತು ಲವಲವಿಕೆಯನ್ನು ನೀಡುತ್ತದೆ. ಯೋಗದಲ್ಲಿ ರಾಜಯೋಗ, ಹಠಯೋಗಗಳೆಂಬ ಪ್ರಕಾರಗಳಿವೆ. ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧ್ಯಾನ, ಧಾರಣ ಮತ್ತು ಸಮಾಧಿ ಇವು ಅಷ್ಟಾಂಗಗಳು ಎನಿಸಿವೆ. ಅಷ್ಟಾಂಗವುಳ್ಳದ್ದು ರಾಜಯೋಗ. ಯಮ - ನಿಯಮಗಳನ್ನು ಬಿಟ್ಟರೆ ಉಳಿದ ಆರು ಹಠಯೋಗದ ಅಂಗಗಳಾಗಿದ್ದು, ಆಸನವು ಹಠಯೋಗಕ್ಕೆ ಮೊದಲನೆಯ ಅಂಗವಾಗಿದೆ.

ಪರಿಶ್ರಮ, ಕೆಲಸಗಳನ್ನು ಮಾಡುವಾಗ ದೇಹದ ಪ್ರತಿಯೊಂದು ಅಂಗಕ್ಕೂ ವ್ಯಾಯಾಮ ಆಗದೇ ಇರಬಹುದು. ಅಥವಾ ಒಂದೆರಡೇ ಅಂಗಗಳಿಗೆ ಹೆಚ್ಚು ವ್ಯಾಯಾಮವಾಗಿ ಉಳಿದ ಅಂಗಗಳಿಗೆ ಆಗದೇ ಇರಬಹುದು. ವೈವಿಧ್ಯ ಕೆಲಸಗಳನ್ನು ನಿತ್ಯ ಜೀವನದಲ್ಲಿ ಮಾಡುವಾಗ ವ್ಯಾಯಾಮವಾಗುತ್ತದೆಯಾದರೂ ಕೆಲವರಿಗೆ ಅದು ಸಾಲದಾಗುತ್ತದೆ. ಅಥವಾ ವೇಳೆಯ ಅಭಾವದಿಂದ ಆಧುನಿಕ ಸೌಕರ್ಯಗಳಿಂದ ವಿಶೇಷ ವ್ಯಾಯಾಮ ಮಾಡಲು ಅಸಾಧ್ಯವಾಗುತ್ತದೆ. ಇಂತಹ ಸಂದರ್ಭಗಳಲ್ಲಿ ವಿಶೇಷ ಸಹಾಯ ನೀಡಬಲ್ಲದ್ದೆಂದರೆ 'ಯೋಗ'. ವೈವಿಧ್ಯ ಅಂಗವಿನ್ಯಾಸಗಳನ್ನು ತಿಳಿಸಿಕೊಡುವ ಆಸನಗಳಿಂದ ದೇಹದ ಸರ್ವಾಂಗೀಣ, ಸರ್ವಾಂಗ ಸುಂದರವಾಗುವ ವ್ಯಾಯಾಮ ಪರಿಶ್ರಮ ವಿಶೇಷಗಳಿಂದ ದೇಹಕ್ಕೆ ಕಡಿಮೆ ವೇಳೆಯಲ್ಲಿಯೇ ಹೆಚ್ಚಿನ ವ್ಯಾಯಾಮ ಪಡೆಯಬಹುದಾಗಿದೆ. ವಿವಿಧ ರೀತಿಯ ಆಸನಗಳಿಂದ ಸಧೃಢ ದೇಹ ಸ್ಥಿತಿಯನ್ನು ಪಡೆಯಬಹುದು. ಮಾನಸಿಕ ಶಾಂತಿ ಹೊಂದಬಹುದು. ದೇಹದ ಶಕ್ತಿ ಸೌಂದರ್ಯ, ಉತ್ಸಾಹಗಳನ್ನು ಹೊಂದಿದ್ದಲ್ಲದೇ, ಆಸನಗಳಿಂದ ವಿವಿಧ ರೋಗಗಳನ್ನು ಗುಣಪಡಿಸಬಹುದಾಗಿದೆ. ವಿವಿಧ ರೋಗಗಳನ್ನು ಬರದಂತೆ ತಡೆಗಟ್ಟುವ

ಸಾಮರ್ಥ್ಯವನ್ನು ದೇಹವು ಹೊಂದಬಹುದಾಗಿದೆ. ನಮ್ಮ ದೇಹಕ್ಕೆ ಯಾವ ಅಂಗಗಳಿಗೆ ವ್ಯಾಯಾಮದ ಅವಶ್ಯಕತೆ ಇದೆಯೋ ಅದನ್ನೇ ಅದನ್ನು ಪೂರೈಸುವ ಆಸನ ವಿಶೇಷದಿಂದ ಪೂರೈಸಿಕೊಳ್ಳುವ ಅವಕಾಶಗಳಿರುತ್ತವೆ. ದೇಹಕ್ಕೆ ಯಾವುದನ್ನು ಮಾಡುವುದರಿಂದ ತೊಂದರೆಯೆನಿಸುತ್ತದೆಯೋ ಅದನ್ನು ಕೈಬಿಡುವ ಅವಕಾಶಗಳೂ ಇರುತ್ತವೆ. ಹೀಗೆ ದೇಹಕ್ಕೆ ಅನುಕೂಲವಾದ, ಹಿತವೆನಿಸುವ, ಯೋಗ್ಯವೆನಿಸುವ, ಅವಶ್ಯವಿರುವ ಆಸನಗಳನ್ನು ಶಾಸ್ತ್ರೀಯವಾಗಿ ಆಚರಣೆ ಮಾಡಿ ಯೋಗಾಭ್ಯಾಸವನ್ನು ನಿತ್ಯ ಜೀವನದಲ್ಲಿ ಅಳವಡಿಸಿಕೊಳ್ಳಬಹುದಾಗಿದೆ.

ಯೋಗಾಭ್ಯಾಸ ಪರಿಣಿತರಿಂದ ನಮ್ಮ ದೇಹಕ್ಕೆ ಯೋಗ್ಯವಾದ ಯೋಗಾಭ್ಯಾಸ ಯಾವುದೆಂದು ದೃಢಪಡಿಸಿಕೊಳ್ಳುವ ಅವಕಾಶ ವಿಫುಲವಾಗಿರುತ್ತದೆ. ಯೋಗ ಪಾಠಶಾಲೆಯ ಗುರುಗಳು ಎಂದಿಗೂ ಸಲಹೆ ನೀಡಲು ಉತ್ಸುಕರಾಗಿದ್ದು, ಯೋಗ್ಯ ಮಾರ್ಗದರ್ಶಕರಾಗುತ್ತಾರೆ. ಇದಕ್ಕೆ ಯಶಸ್ಸಿನ, ಲಿಂಗದ, ಜಾತಿಯ, ಧರ್ಮದ ಬೇಧವಿರುವುದಿಲ್ಲ. ಇಚ್ಛಿತರು ಪಡೆಯಬಹುದಾಗಿದೆ. ಯೋಗಾಭ್ಯಾಸ ಸರಿಯಾಗಿ ಕರಗತ ಮಾಡಿಕೊಂಡವರು ಮುಂದಿನ ಹಂತವಾದ ಪ್ರಾಣಾಯಾಮ ಮಾಡಲಿಕ್ಕೂ ಅರ್ಹತೆ ಪಡೆಯಬಹುದು. ಅದಾದ ಮೇಲೆ ಪ್ರತ್ಯಾಹಾರ ಏಕಾಗ್ರತೆ, ಧಾರಣ, ಧ್ಯಾನ, ಸಮಾಧಿ ಸ್ಥಿತಿಯ ಹಂತವನ್ನು, ಹಂತ ಹಂತವಾಗಿ ತಲುಪಬಹುದಾಗಿದೆ. ಕಷ್ಟಸಾಧ್ಯವಾದದ್ದನ್ನು ಆಸಕ್ತರು ಸುಲಭಸಾಧ್ಯವಾಗಿ ಹಂತ ಹಂತದ ಬೆಳವಣಿಗೆಗಳಿಂದ ಮಾಡಿಕೊಳ್ಳಬಹುದಾಗಿದೆ.



ವ್ಯಾಯಾಮದಿಂದ ಮೇಧಸ್ಸು ಕರಗಿ ಬೊಜ್ಜುತನ ಹೋಗುತ್ತದೆ. ಶರೀರದಲ್ಲಿ ಸ್ಥಿರತೆ, ಕೃಶತೆ, ಕಠೋರತೆ ಉಂಟಾಗಿ, ಏಳುವಿಕೆ - ಕುಳಿತುಕೊಳ್ಳುವಿಕೆ, ಓಡಾಡುವಿಕೆ, ಕೆಲಸಮಾಡುವಿಕೆ ಇತ್ಯಾದಿ ಕ್ರಿಯೆಗಳ ಲವಲವಿಕೆ ಹೆಚ್ಚುತ್ತದೆ. ಕಫವು ನಷ್ಟಗೊಂಡು ಆರೋಗ್ಯಕ್ಕೆ ಮುಖ್ಯವಾಗಿ ಬೇಕಾಗಿರುವ ಜಠರಾಗ್ನಿ ಉದ್ದೀಪನಗೊಂಡು, ಆಹಾರವು ಸರಿಯಾಗಿ ಪಚನವಾಗಿ, ಅಜೀರ್ಣವಿಲ್ಲದಂತಾಗಿ, ಆರೋಗ್ಯ ಹೆಚ್ಚಿ, ದೀರ್ಘಾಯು ಸಂಭವಿಸುತ್ತದೆ. ಸ್ಥೌಲ್ಯಕಾಯಕ್ಕೆ ವಯಸ್ಸಾದಂತೆ ರೋಗಗಳೂ ಹೆಚ್ಚಾಗುವ ಸಾಧ್ಯತೆಗಳಿವೆ. ಸ್ಥೌಲ್ಯ ಇಳಿಸಲು ವಿಶೇಷ ಔಷಧಗಳಿಲ್ಲ. ಅನೇಕ ರೋಗಗಳಿಗೆ ಮುಖ್ಯಕಾರಣವಾಗುವ ಅತಿಮೇದಸ್ಸು ಸಂಗ್ರಹವನ್ನು ಕಡಿಮೆಗೊಳಿಸಲು, ಹಗುರ ಶರೀರವನ್ನಾಗಿ ಕಾಪಾಡಿಕೊಳ್ಳಲು ''ನಿತ್ಯ ಜೀವನದಲ್ಲಿ ಯೋಗಾಸನ'' ಅಳವಡಿಸಿಕೊಳ್ಳುವುದು ಉತ್ತಮ ಮಾರ್ಗ. ಹೆಚ್ಚು ತಿಂದು ಕಡಿಮೆ ಕೆಲಸ ಮಾಡಿದರೆ ದೇಹದಲ್ಲಿ ಮೇದಸ್ಸು ಸಂಗ್ರಹವಾಗುತ್ತದೆ. ಅತಿಮೇದಸ್ಸು ಸಂಗ್ರಹವಾದರೆ, ಸಕ್ಕರೆ ಅಂಶ ಹೆಚ್ಚಾದರೆ ಮಧುಮೇಹ (ಡಯಾಬಿಟಿಸ್) ರೋಗ ಬರುತ್ತದೆ. ಮಧುಮೇಹ ರೋಗವು ಇನ್ನೂ ಅನೇಕ ರೋಗಗಳಿಗೆ ಕಾರಣವಾಗುತ್ತದೆ. ಮೇದಸ್ಸು ಹೆಚ್ಚಾಗದಂತೆ ತಡೆಯಲು, ಮೇದಸ್ಸು ಸಂಗ್ರಹ ಕಡಿಮೆ ಮಾಡಲು ಯೋಗಾಸನ ಖರ್ಚಿಲ್ಲದ ಸುಲಭವಾದ ಸಾಧನವಾಗಿದೆ. ಒಮ್ಮೆ ಸರಿಯಾದ ಮಾರ್ಗದರ್ಶಕರಲ್ಲಿ ಕಲಿತುಕೊಂಡು ಕರಗತ ಮಾಡಿಕೊಂಡಲ್ಲಿ, ಮನೆಯಲ್ಲಿಯೇ ಹೆಚ್ಚು ಸಮಯ ವ್ಯಯವಿಲ್ಲದೇ, ಖರ್ಚಿಲ್ಲದೇ, ಮಾಡಬಹುದಾದ ಯೋಗಾಭ್ಯಾಸದಿಂದ ನಿಸರ್ಗ ಚಿಕಿತ್ಸೆಯಂತಾಗಿ ರೋಗ ಬರುವ ಸಾಧ್ಯತೆಗಳು ತೀರಾ ಕಡಿಮೆಯಾಗುತ್ತದೆ. ವರ್ಜನೀಯವೆನಿಸಬಹುದಾದ ಸಂದರ್ಭಗಳಲ್ಲಿ ಬಿಟ್ಟು, ಉಳಿದ ದಿನಗಳಲ್ಲಿ ಯೋಗಾಸನ ಮಾಡಿ, ಸಬಲ ಶರೀರಗಳಿಸಬಹುದಾಗಿದೆ.

ವ್ಯಾಯಾಮವನ್ನು ಸಾವುಕಾಶವಾಗಿ ಹಂತಹಂತವಾಗಿ ಮಾಡಬೇಕು. ಶಕ್ತಿಗನುಗುಣವಾಗಿ ಮಾಡಬೇಕು. ಆದ್ದರಿಂದ ಶ್ರಮಜೀವಿಗಳಿಗೆ ಆಸನಗಳ ಅವಶ್ಯಕತೆಯೇ ಇರಲಾರದು. ಏಕೆಂದರೆ ಶಕ್ತಿಯನ್ನು ಮೀರಿ ವ್ಯಾಯಾಮ ಮಾಡಿದರೆ ಇದ್ದ ಶಕ್ತಿಯೂ ನಷ್ಟವಾಗುತ್ತದೆ. ವೃದ್ಧರು, ರೋಗಿಗಳು ದುರ್ಬಲರು, ವಿಶ್ರಾಂತಿಯ ಅಗತ್ಯವಿದ್ದವರು ವ್ಯಾಯಾಮ-ಪರಿಶ್ರಮ ಮಾಡಬಾರದು.

ಜಠರದ (ಹೊಟ್ಟೆಯ) ಅರ್ಧಭಾಗ ಆಹಾರ, ಕಾಲುಭಾಗ ನೀರು, ಉಳಿದರ್ಧ ಭಾಗವನ್ನು ವಾಯುಸಂಚಾರಕ್ಕಾಗಿ ಬಿಡುವವರಿಗೆ ''ಮಿತಾಹಾರಿ'' ಎನ್ನುವರು. ಮಿತಾಹಾರವು ಆರೋಗ್ಯವರ್ಧಕವಾಗಿದೆ. ಷಡಸಯುಕ್ತ ಶುದ್ಧವಾದ, ಸಮಯಕ್ಕೆ ಸರಿಯಾಗಿ ಸ್ವೀಕರಿಸುವ ಮಿತಾಹಾರವು ದೇಹದ ಸಮತೋಲನ ಬೆಳವಣಿಗೆ, ಉತ್ತಮ ಮನಸ್ಸಿಗೆ ಕಾರಣವಾಗಿ ಔಷಧದಂತೆ ಕೆಲಸ ಮಾಡುತ್ತದೆ. ಮದ್ಯ - ತಂಬಾಕು ಸೇವನೆ - ಧೂಮಪಾನ ಇತ್ಯಾದಿ ಚಟಗಳನ್ನು ಮಾಡದೇ, ಅತಿಯಾಗಿ ಉಪ್ಪು, ಸಕ್ಕರೆ ಸೇವಿಸದೇ, ಚಹಾ - ಕಾಫಿ-ಕೋಕೋ ಪೇಯಗಳ ಬದಲಾಗಿ ಹಾಲು ಸೇವಿಸಿದರೆ ಆರೋಗ್ಯ, ಆಯುಷ್ಯ, ಬಲ, ಸುಖ, ರೋಗವಿಲ್ಲದ ಸಂತತಿ ಮತ್ತು ಹೊಟ್ಟೆಬಾಕ ಎಂಬ ತಿರಸ್ಕಾರ ಇಲ್ಲದಿರುವಿಕೆ ಎಂಬ ಆರು ಗುಣಗಳು ಸಂಭವಿಸುತ್ತದೆ. ಅಜೀರ್ಣದಿಂದ ಹಲವು ರೋಗಗಳು ಬರುವುದರಿಂದ, ಅಜೀರ್ಣವಾಗುವಿಕೆ, ಹಸಿವಾಗದಿರುವಿಕೆ ಸ್ಥೂಲಕಾಯಗಳು ಬರದಂತೆ ತಡೆಯಲು ಮಿತಾಹಾರದಿಂದ ಸಾಧ್ಯವಾಗುತ್ತದೆ.


ಪತಂಜಲಿ ಮಹರ್ಷಿಗಳ ಯೋಗಶಾಸ್ತ್ರದಿಂದ ದೈಹಿಕ - ಮಾನಸಿಕವಾದ ಆರೋಗ್ಯಪೂರ್ಣವಾದ ಬೆಳವಣಿಗೆಯು ಸಾಧ್ಯವಾಗುತ್ತದೆ. ದೇಹದ ಸ್ಥಿರತೆ, ಮನಸ್ಸಿನ ಚಂಚಲತೆ ನಿವಾರಿಸಿ, ಮನಸ್ಸಿನ ಅಚಲತೆಯತ್ತ ಒಯ್ಯುವ ಸಮಾಧಿ ಸ್ಥಿತಿಯನ್ನು ತಲುಪಿದರೆ, ಜ್ಯೋತಿ ರೂಪದಲ್ಲಿ ಆತ್ಮನನ್ನು ಕಾಣಬಹುದೆಂದು ಹಠಯೋಗಿಗಳು ಸಾರಿದ್ದಾರೆ. ''ಒಂದು ಹೊತ್ತು ಉಂಡವ ಯೋಗಿ, ಎರಡು ಹೊತ್ತು ಉಂಡವನು ಭೋಗಿ, ಮೂರು ಹೊತ್ತು ಉಂಡವ ರೋಗಿ, ನಾಲ್ಕು ಹೊತ್ತು ಉಂಡವನ ಹೊತ್ತುಕೊಂಡು ಹೋಗಿ'' ಎಂಬುದು ಮಾರ್ಮಿಕ ಮಾತು. ಮಿತಾಹಾರ ಮತ್ತು ಯೋಗಾಭ್ಯಾಸಕ್ಕೂ ಅನ್ಯೋನ್ಯ ಸಂಬಂಧವಿದ್ದು, ಎರಡೂ ಆಚರಣೆಯಲ್ಲಿ ಬಂದಾಗ, ಆರೋಗ್ಯವು ಉತ್ತಮ ಸ್ಥಿತಿಗೆ ಹೋಗುತ್ತದೆ. ಸದಾಚಾರ - ಆರೋಗ್ಯ - ಆಧ್ಯಾತ್ಮದಿಂದ ಮನಃಶಾಂತಿ, ಈ ಮೂರು ಲಾಭಗಳು ಯೋಗಾಭ್ಯಾಸದಲ್ಲಿ ಅಡಗಿದೆ.

ಮಾನಸಿಕವಾಗಿ ಚಿಂತೆ - ದುಃಖವಾದಾಗ ಕೆಲವರು ಮದ್ಯದಿಂದ ಶಾಂತಿ-ನೆಮ್ಮದಿ ಆಗುತ್ತದೆ ಎಂದು ತಪ್ಪಾಗಿ ಭಾವಿಸುತ್ತಾರೆ. ಚಿಂತೆ - ದುಃಖ, ಮಾನಸಿಕ ದುಡುಗ, ಉದ್ವೇಗಗಳನ್ನು ತಡೆಯಲು ಯೋಗಾಭ್ಯಾಸವನ್ನು ಶಾಂತಚಿತ್ತರಾಗಿ ಮಾಡಿದರೆ ಎಲ್ಲವೂ ಮಾಯವಾಗುತ್ತದೆ. ಶರೀರ ದುರ್ಬಲವಾಗುವುದರ ಬದಲು ಸಬಲವಾಗುತ್ತದೆ. ಮನಸ್ಸಿಗೆ ನಿಜವಾದ ಶಾಂತಿ ನೆಮ್ಮದಿ ಸಿಗುತ್ತದೆ. ವಿದೇಶಿಯರಿಂದ ಹೊಗಳಿಸಿಕೊಳ್ಳುತ್ತಿರುವ ಯೋಗಾಭ್ಯಾಸವನ್ನು ನಮ್ಮವರು ಕಡೆಗಣಿಸುವುದು ಸರಿಯಲ್ಲ. ಪ್ರೋತ್ಸಾಹಿಸಿ ಅಳವಡಿಸಿಕೊಳ್ಳುವುದರಲ್ಲಿ ಹಿತವಿದೆ.

■ ಚಂದ್ರಕಾಂತ ಎಸ್. ಭಟ್

ಕಂಡಕ್ಟರ್ ಸಾಹಿತಿ

ಬಸ್ ಕಂಡಕ್ಟರ್‌ಗೂ ಜನಪ್ರಿಯ ಸಾಹಿತ್ಯಕ್ಕೂ ಎಲ್ಲಿಂದೆಲ್ಲಿಯ ಸಂಬಂಧ! ಆದರೆ ಬದುಕು ಎಷ್ಟೊಂದು ವಿಚಿತ್ರವೆಂದರೆ, ಯಾವುದು ಅಸಾಧ್ಯ ಎಂದುಕೊಂಡಿರುತ್ತೇವೆಯೋ, ಅದು ಸಾಧ್ಯವಾಗಿಬಿಡುತ್ತದೆ. ಗುಜರಾತೀ ಭಾಷೆಯ ಪ್ರಸಿದ್ಧ ಕಾದಂಬರಿಕಾರ ಚತುರ್ ಸೋಲಂಕಿ ಒಬ್ಬ ನಗರ ಸಾರಿಗೆ ಸಂಸ್ಥೆಯ ಬಸ್ ಕಂಡಕ್ಟರ್. ಅವರ ಸಾಧನೆ, ಕಾರ್ಯವೈಖರಿ ಎಂಥದ್ದು.....



ಅಹಮದಾಬಾದ್‌ನ ನಗರ ಸಾರಿಗೆ ಬಸ್ಸಿನ 116ನೇ ಮಾರ್ಗಸಂಖ್ಯೆಯ ಬಸ್ಸಿನಲ್ಲಿ ಎಂದಾದರೂ ಪ್ರಯಾಣಿಸುವ ಸಂದರ್ಭ ಬಂದರೆ ನೀವು ಅದೃಷ್ಟವಂತರೇ ಸರಿ. ಯಾಕೆಂದರೆ ನೀವು ಒಬ್ಬ ಸಾಹಿತಿ ಹಾಗೂ ಥ್ರಿಲ್ಲರ್ ಕಥೆಗಾರರೊಂದಿಗೆ ಪ್ರಯಾಣ ಮಾಡುತ್ತಾ ಇದ್ದೀರೆಂದೇ ಅರ್ಥ.

ಬಸ್ಸಿನಲ್ಲಿ ಸಾಹಿತಿಗಳೇನು, ಎಲ್ಲಾ ಬಗೆಯ ಜನರೂ ಇರುತ್ತಾರೆಂದು ಹೇಳುವಿರಾ? ಸ್ವಾರಸ್ಯ ಇರುವುದು ಅಲ್ಲೇ. ಆ ಬಸ್ಸಿನ ಕಂಡಕ್ಟರ್ ಒಬ್ಬ ಸಾಹಿತಿ. ಇದುವರೆಗೆ ಹಲವಾರು ಕಾದಂಬರಿ ಕಥೆಗಳನ್ನು ಬರೆದು ಪ್ರಕಟಿಸಿದ ಒಬ್ಬ ಸಾಹಿತ್ಯ ಪ್ರೇಮಿ. ಅವರ ಹೆಸರು ಚತುರ್ ಸೋಲಂಕಿ. ಇದುವರೆಗೂ ಸುಮಾರು 70 ಕಾದಂಬರಿ ಬರೆದಿದ್ದಾರೆ. ಅವುಗಳಲ್ಲಿ 50 ಜನಪ್ರಿಯ ಅಗ್ಗದ ದರದ ಪುಸ್ತಕಗಳು. ಪ್ರಯಾಣಿಕರ ಗದ್ದಲದಿಂದ ಕೂಡಿದ ಬಸ್ಸುಗಳಲ್ಲಿ, ಪ್ರಯಾಣಿಕರೊಂದಿಗೆ ಹರಟುತ್ತಾ, ನಗಿಸುತ್ತಾ ಟಿಕೆಟ್ ಕೊಡುವ ತಮ್ಮ ಕರ್ತವ್ಯವನ್ನು ಪ್ರಮಾಣಿಕವಾಗಿ ಮಾಡುತ್ತಾ ...ದಿದ್ದಾರೆ. ದಿನವೂ ಪ್ರಯಾಣಿಕರೊಂದಿಗೆ, ಗಿಜಿಗುಡುವ ಬಸ್ಸಿನಲ್ಲಿ ತಮ್ಮ ಕರ್ತವ್ಯ ಮುಗಿಸಿ ಸುಸ್ತಾಗುವ ಸೋಲಂಕಿ, ಮನೆಯಲ್ಲಿ ಬಿಡುವಿನ ಸಮಯದಲ್ಲಿ ಕಥೆ, ಕಾದಂಬರಿ ಬರೆಯುವುದನ್ನು ರೂಢಿಸಿಕೊಂಡಿದ್ದಾರೆ.

ಅವರ ಮೊದಲ ಕಾದಂಬರಿ 'ಚಂಬಲ್ ನಿ ಕಸಮ್' 1972ರಲ್ಲಿ ಪ್ರಕಟವಾಯಿತು. ಆ ಕಾದಂಬರಿ ಯಶಸ್ವಿಯಾಗಿ ಜನಪ್ರಿಯತೆಯನ್ನು ಪಡೆದ ಹಿನ್ನೆಲೆಯಲ್ಲಿಯೇ ಪ್ರಕಾಶಕರು ಅವರ ಇನ್ನು ಮೂರು ಕಾದಂಬರಿಗಳಾದ 'ಥಾಮ್ ಲೆ ಬಂದೂಕ್,' 'ವರ್ ವರ್ ವರ್' ಹಾಗೂ 'ಟಕ್ಕರ್' ಗಳನ್ನು ಪ್ರಕಟಿಸಿದರು. ಗುಜರಾತಿ ಹಾಗೂ ಹಿಂದಿಯ ಎಲ್ಲ ಸಾಹಿತಿಗಳ ಕಾದಂಬರಿಗಳನ್ನು ಓದಿರುವ ಸೋಲಂಕಿ ಚಂಬಲ್ ಕಣಿವೆಯ ದರೋಡೆಗಾರರ ಬಗ್ಗೆ ಕಾದಂಬರಿ ಬರೆಯಲು ಖುದ್ದಾಗಿ ಚಂಬಲ್ ಕಣಿವೆಯಲ್ಲಿ ಕೆಲವು ದಿನ ಕಳೆದು, ಆ ಬಗ್ಗೆ ಒಂದು ಕಾದಂಬರಿಯನ್ನು ಬರೆದು ಯಶಸ್ವಿಯಾಗಿದ್ದಾರೆ.

ಸೋಲಂಕಿಯ ಕೌಟುಂಬಿಕ ಹಿನ್ನೆಲೆ ಸಾಹಿತ್ಯಕವಾಗಿ ರೂಪುಗೊಳ್ಳಲು ಅಷ್ಟೇನೂ ಸಹಕಾರಿಯಾಗಿಲ್ಲ. ಅವರ ತಂದೆ ಅಹ್ಮದಾಬಾದ್‌ನಲ್ಲಿ ಒಬ್ಬ ಗಿರಣಿಯ ಕೆಲಸಗಾರ. ಚತುರ್ ಸೋಲಂಕಿಗೆ ಒಟ್ಟು ಆರು ಜನ ಸಹೋದರರು ಅವರೆಲ್ಲ ಮುನ್ಸಿಪಲ್ ಸ್ಕೂಲ್‌ನಲ್ಲಿ ಓದುತ್ತಿದ್ದರು. ಸೋಲಂಕಿಯ ಮನೆಯ ಹಣಕಾಸಿನ ಬಿಕ್ಕಟ್ಟಿನಿಂದಾಗಿ ಅವರು ಹತ್ತನೆಯ ತರಗತಿಯ ನಂತರ ಮುಂದೆ ಓದಲಾಗಲಿಲ್ಲ. ಅವರ ಕುಟುಂಬದಲ್ಲಿ ಹೆಚ್ಚಿಗೆ ಓದಿದವರು ಅವರೊಬ್ಬರೇ. ಅವರ ಆತ್ಮೀಯ ಸ್ನೇಹಿತ ಮುಕುಂದ ದವೆ ಸೋಲಂಕಿಗೆ ಗುಜರಾತಿ ಕಾದಂಬರಿಗಳ ಬಗ್ಗೆ ಒಲವು ಮೂಡಿಸಿ, ಅವುಗಳನ್ನು ಓದುವ ಹಾಗೆ ಪ್ರೇರೇಪಿಸಿದ. ಆ ಪ್ರೇರೇಪಣೆಯೇ ಮುಂದೆ ಇವರೊಬ್ಬ ದೊಡ್ಡ ಸಾಹಿತಿಯಾಗಲು ಕಾರಣವಾಯ್ತು. ಗುಜರಾತಿಯ ಸಾಹಿತಿ ನವಿತ ಸೇವಕ್‌ರ ಕಟ್ಟಾ ಅಭಿಮಾನಿಯಾದ ಚತುರ್ ಸೋಲಂಕಿ ಅವರನ್ನೇ ಆತ್ಮೀಯ ಸ್ನೇಹಿತ, ತತ್ವಜ್ಞಾನಿ ಹಾಗೂ ಮಾರ್ಗದರ್ಶಕ ಎಂದು ಹೇಳುತ್ತಾರೆ.

1970ರಲ್ಲಿ ಎ.ಎಂ.ಟಿ.ಎಸ್. ನಲ್ಲಿ (ಅಹ್ಮದಾಬಾದ್ ಮುನ್ಸಿಪಲ್ ಟ್ರಾನ್ಸ್‌ಪೋರ್ಟ್ ಸರ್ವಿಸ್) ಕಂಡಕ್ಟರ್ ಕೆಲಸ ಸಿಕ್ಕಾಗ, ಸೋಲಂಕಿಯ ಮನೆಯ ಆರ್ಥಿಕ ಮುಗ್ಗಟ್ಟಿಗೆ ಪರಿಹಾರ ಸಿಕ್ಕಂತಾಯಿತು. ಸಾರಿಗೆ ಸಂಸ್ಥೆಯಲ್ಲಿ ಪಾಳಿ ಕೆಲಸ ಆಗಿದ್ದರಿಂದ ಕಥೆ ಕಾದಂಬರಿ ಬರೆಯಲು ಸಮಯದ ಅಭಾವವೇನೋ ಆಗಲಿಲ್ಲ. 'ನಾನು ದುಡ್ಡಿಗಾಗಿ ಎಂದಿಗೂ ಬರೆಯಲಿಲ್ಲ. ಆರಂಭದಲ್ಲಿ ನಾನು ನನ್ನ ಸಂಬಳದಲ್ಲಿ ತಿಂಗಳಿಗೆ 150/- ರೂ.ಗಳಿಗೂ ಹೆಚ್ಚಿಗೆ ಕಾದಂಬರಿಗಳನ್ನು ಕೊಳ್ಳಲು ವಿನಿಯೋಗಿಸುತ್ತಿದ್ದೆ. ಈಗ ತಿಂಗಳಿಗೆ 1000ದಿಂದ 2000ದವರೆಗೆ ನಾನು ಪುಸ್ತಕಗಳಿಗಾಗಿ ವಿನಿಯೋಗಿಸುತ್ತೇನೆ' ಎನ್ನುತ್ತಾರೆ ಚತುರ್ ಸೋಲಂಕಿ.

1973ರಲ್ಲಿ ಬಿಡುಗಡೆಯಾದ ಅವರ 'ಆರ್ಝೂರ್' ಎಂಬ ಪತ್ತೇದಾರಿ ಕಾದಂಬರಿ ತುಂಬಾ ಜನಪ್ರಿಯವಾಗಿ ಗುಜರಾತಿನ ಸುಮಾರು ಹನ್ನೆರಡಕ್ಕೂ ಹೆಚ್ಚು ಪ್ರಸಿದ್ಧ ಸಸ್ಪೆನ್ಸ್ ಸಾಹಿತಿಗಳ ಪಟ್ಟಿಯಲ್ಲಿ ಸೇರಿಹೋದರು. ಅವರು ಕೊನೆಯದಾಗಿ ಬರೆದದ್ದು 1994ರಲ್ಲಿ 'ಆಶ್ಲೇಷ್' ಎಂಬ ಕಾದಂಬರಿಯನ್ನು.

'ಈ ಕಂಡಕ್ಟರ್ ಕೆಲಸವು ನಿಮ್ಮ ಬರೆಯುವ ಏಕಾಗ್ರತೆಯನ್ನು ಭಂಗ ಮಾಡುವುದಿಲ್ಲವೇ?' ಎಂದು ಯಾರಾದರೂ ಕೇಳಿದರೆ, ಅವರ ಉತ್ತರ 'ಈ ಪ್ರಾಯಾಣಿಕರೇ ನನ್ನ ಕಾದಂಬರಿಗಳಿಗೆ ಸ್ಫೂರ್ತಿ. ಅವರ ಮಧ್ಯೆ ದಿನವೂ ಪ್ರಯಾಣಿಸಿ ನನ್ನ ಕಾದಂಬರಿಗೆ ಬರೆಯಲು ಬೇಕಾದಷ್ಟು ವಿಷಯಗಳು ಸಿಕ್ಕಿವೆ' ಎಂದು ಹೇಳುತ್ತಾರೆ.


ಇಷ್ಟೆಲ್ಲ ಜನಪ್ರಿಯತೆಯನ್ನು ಪಡೆದ ಸೋಲಂಕಿಯವರು ಎಂದಿಗೂ ಪ್ರಶಸ್ತಿಗಾಗಿ ಬರೆದವರಲ್ಲ. ಇವರ ಕಾದಂಬರಿಗಳನ್ನು ಮೆಚ್ಚಿ ಹಲವಾರು ಓದುಗರು ಅಭಿಮಾನದ ಮಹಾಪೂರವನ್ನೇ ಹರಿಸುತ್ತಿದ್ದಾರೆ. ಆ ಅಭಿಮಾನವೇ ತನಗೆ ನಿಜವಾದ ಪ್ರಶಸ್ತಿ ಎನ್ನುತ್ತಾರೆ ಸೋಲಂಕಿ. ಇವರ ಕಾದಂಬರಿಗಳು ಸಮಾಜದ ಸದ್ಯದ ಆಗುಹೋಗುಗಳನ್ನು ಬಿಂಬಿಸುವಲ್ಲಿ ಯಶಸ್ವಿಯಾಗಿವೆಯಲ್ಲದೇ, ವಾಸ್ತವತೆಗೆ ತೀರಾ ಹತ್ತಿರವಾಗಿವೆ ಎಂಬುದು ಓದುಗರ ಅಭಿಪ್ರಾಯ.

ಸದ್ಯಕ್ಕೆ ಕಾದಂಬರಿ ಬರೆಯುವುದನ್ನು ನಿಲ್ಲಿಸಿ ತಮ್ಮ ಆತ್ಮಕಥೆಯನ್ನು ಬರೆಯುವಲ್ಲಿ ಮಗ್ನರಾಗಿರುವ ಸೋಲಂಕಿಯವರಿಗೆ ಈಗ ನಾಲ್ಕು ಜನ ಮಕ್ಕಳು. ಅವರ ಈ ಆತ್ಮಕತೆ ಅವರ ಜೀವನವನ್ನು ವರ್ಣರಂಜಿತಗೊಳಿಸಲು ಸಹಕಾರಿಯಾಗಬಲ್ಲದೆ?

■ ಎಚ್.ಆರ್ ವಸ್ತ್ರದ್

ನಾದಲೋಕದಲ್ಲಿ ಬಿರುಗಾಳಿ ಎಬ್ಬಿಸಿದ

'ಸೋನಿ' ಬೆಳೆದ ಕತೆ



ಅಕಿ ಮೋರಿಟಾ

ಸಣ್ಣ ರಾಷ್ಟ್ರ ಜಪಾನ್. ಸಾಧನೆ ಮಾತ್ರ ದೊಡ್ಡದು. ಯುದ್ಧದ ಭೀಕರತೆ, ಸೈನ್ಯದ ನಿರರ್ಥಕತೆ ಮನಗಂಡ ಮೊದಲ ಆಧುನಿಕ ದೇಶ ಇದು. ಚರಿತ್ರೆಯಲ್ಲಿ ಎಂದೂ ಸೋಲರಿಯದಿದ್ದ ಜಪಾನಿನ ಹಿರೊಷಿಮಾ, ನಾಗಸಾಕಿ ಮೇಲೆ ಅಮೆರಿಕಾದ ಅಣುಬಾಂಬ್ ಬಿದ್ದದ್ದೇ ಇತಿಹಾಸದ ದಿಕ್ಕು ಬದಲಾಯಿತು. ಹೀಗೆ ಸುಟ್ಟು ಕರಕಾದ ಜಪಾನೀ ನೆಲದಲ್ಲಿ ಹೊಸ ಚಿಂತನೆ, ಉದ್ಯಮಶೀಲತೆಗಳು ಚಿಗುರಿವೆ. ಅಂಥ ಯಶಸ್ವಿ ಉದ್ಯಮಗಳಲ್ಲಿ ಒಂದು ''ಸೋನಿ ಕಾರ್ಪೊರೇಶನ್''. ಅದು ಹುಟ್ಟಿ, ಬೆಳೆದ ಕತೆಯೇ ಚೇತೋಹಾರಿ.

ಜಪಾನ್ ಮೇಲೆ ಅಮೇರಿಕ ಅಣುಬಾಂಬ್ ಹಾಕಿದಾಗ ಆತನಿಗಿನ್ನೂ 24 ವರ್ಷ. ಸೈನ್ಯದಲ್ಲಿ ಆಯುಧ ತಯಾರಿಸುವ ತಂಡದಲ್ಲಿ ಕೆಲಸ ಮಾಡುತ್ತಿದ್ದ. ಚರಿತ್ರೆಯಲ್ಲಿ ಎಂದೂ ಸೋಲನ್ನೇ ಕಂಡಿರದಿದ್ದ ಜಪಾನಿನ ಎದುರು ಭಗ್ನಗೊಂಡ ಕನಸಿತ್ತು. ಹಿರೋಷಿಮಾ - ನಾಗಾಸಾಕಿ ಉರಿದು ತುಂಬಿಕೊಂಡ ಬೂದಿ ಇತ್ತು. ಎರಡನೇ ಮಹಾಯುದ್ಧದ ಕರಾಳ ಛಾಯೆ ವಿಶ್ವವನ್ನು ಆವರಿಸಿದ್ದರೆ ಜಪಾನನ್ನು ಕಮರಿಸಿಬಿಟ್ಟಿತ್ತು. ಕಮರಿದ ಕನಸಿನ ಗೋಪುರದ ಮೇಲೆಯೇ ಸಾಮ್ರಾಜ್ಯ ಕಟ್ಟುವ ಕನಸಿನ ಯುವಕ ಯುದ್ಧದ ನಂತರ ಸಮರದಿಂದ ಧ್ವಂಸಗೊಂಡ ನಗರಗಳನ್ನು ಸಂಚರಿಸಿದ. ಊರು ಊರುಗಳನ್ನು ಸುತ್ತಿದ. ಬಿರಿದ ಹೃದಯಗಳನ್ನು ಕಂಡ. ಹರಿದ ದೇಹಗಳನ್ನು ನೋಡಿದ. ಅವುಗಳನ್ನು ಕಾಣುತ್ತಲೆ ಅಂದುಕೊಂಡ. 'ಸರ್ವಸ್ವವನ್ನು ಸುಟ್ಟು ಹಾಕುವ ಅಣುಬಾಂಬ್‌ಗಿಂತ ಎಲ್ಲರನ್ನೂ ಒಂದು ಗೂಡಿಸುವ ಸತತ ದುಡಿಮೆ ಈ ದೇಶಕ್ಕೊಂದು ಮಾರ್ಗವನ್ನು ತೋರಿಸುತ್ತದೆ'. ದುಡಿಮೆಯೇ ದೇವರು ಎಂದು ಭಾರತೀಯರು ಬಾಯಲ್ಲಿ ಹೇಳಿದರು. ಆದರೆ ಜಪಾನಿಗಳು ಅದನ್ನು ಮಾಡಿ ತೋರಿಸಿದರು. ದುಡಿಮೆ ಆ ಯುವಕನ ಮಂತ್ರವಾಯ್ತು. ಅಂದಿನಿಂದ ಆತ ದುಡಿಮೆಯಲ್ಲಿಯೇ ನಿರತ. ಇಂದು ಆತ ನಿಜಕ್ಕೂ ಅರಸ. ಆದರೂ ಆತನದು ಅವಿರತ ದುಡಿತ. ಈಗ ಆತ ಎಲೆಕ್ಟ್ರಾನಿಕ್ಸ್ ಲೋಕದ ಅನಭಿಷಿಕ್ತ ದೊರೆ. ಈಗ ಅಮೆರಿಕ ಕೂಡಾ ಆತನಿಗೆ ಶರಣಾಗುತ್ತದೆ. ಆತನೇ ವಿಶ್ವಮಾನ್ಯ ಎಲೆಕ್ಟ್ರಾನಿಕ್ಸ್ ಸಂಸ್ಥೆ 'ಸೋನಿ'ಯ ಸಂಸ್ಥಾಪಕ ಅಕಿ ಮೊರಿಟಾ.

ಅಕಿ ಮೊರಿಟಾ ಹೆಸರು ಜಪಾನಿಗರಲ್ಲಿ ಸ್ಫೂರ್ತಿಯ ಸೆಲೆ ಎಬ್ಬಿಸುತ್ತದೆ. ಉತ್ಸಾಹ ಚಿಮ್ಮಿಸುತ್ತದೆ. ಆನಂದದ ತರಂಗಗಳನ್ನು ಹೊಮ್ಮಿಸುತ್ತದೆ.

ವಿಶ್ವ ಮಾರುಕಟ್ಟೆಯಲ್ಲಿ ಜಪಾನಿ ವಸ್ತುಗಳಿಗೆ ಬೇಡಿಕೆಯೇ ಇಲ್ಲದ ಕಾಲದಲ್ಲಿ ವಿಶ್ವ ಮಾರುಕಟ್ಟೆಯನ್ನು ಜಪಾನೀಯರು ಮಾಡಿದ ಕೀರ್ತಿಗೆ ಭಾಜನರಾದ ಮೊರಿಟಾ ತನ್ನ ಆತ್ಮಚರಿತ್ರೆಗೂ Made in Japan ಎಂದೇ ಹೆಸರಿಟ್ಟ. ವಿಶ್ವದ ಜನರ ಕಿವಿಯ ಕಂಪನದ ಲಯವನ್ನೇ ಬದಲಾಯಿಸಿದ ಈ ಮೋಡಿಗಾರ ಮೊರಿಟಾ.

ಬಾಂಬ್ ದಾಳಿಯಿಂದ ಭಗ್ನಾವಶೇಷಗೊಂಡಿದ್ದ ಟೊಕಿಯೋದ ಒಂದು ಸಣ್ಣ ಮಳಿಗೆಯಲ್ಲಿ 1946ರಲ್ಲಿ ಆರಂಭವಾದ 'ಟೋಕಿಯೋ ಟೆಲಿಕಮ್ಯುನಿಕೇಶನ್ಸ್ ಮತ್ತು ಇಂಜಿನಿಯರಿಂಗ್ ಕಂಪೆನಿ' ಮುಂದೆ 'ಸೋನಿ'ಯಾಗಿ ಬೆಳೆದದ್ದು ರೋಚಕ ಕತೆ. 1947ರಲ್ಲಿ ಈ ಕಂಪೆನಿಯನ್ನು ಇನ್ನೊಂದು ಅಗ್ಗದ ಉಗ್ರಾಣಕ್ಕೆ ಸ್ಥಳಾಂತರಿಸುವಾಗ ಮೊರಿಟಾಗೆ ಕೇವಲ


26ವರ್ಷ. ಆಗ ಆತನೊಂದಿಗೆ ಇದ್ದಿದ್ದು ಕೇವಲ ಕನಸು ಮತ್ತು ತನಗಿಂತ 13 ವರ್ಷ ಹಿರಿಯ ಸ್ನೇಹಿತ ಮಸಾರು ಇಬುಕಾ. ಅಲ್ಲಿಂದಲೇ ಆತ 'ಅಜ್ಞಾತದ ಅನ್ವೇಷಕ' ನಾಗಿ ವಿಜೃಂಭಿಸಿದ.

ಬಾಂಬ್ ಬಿದ್ದು ಸುಟ್ಟ ಮಳಿಗೆಯಲ್ಲಿ, ಸಂದಿಯಲ್ಲೊಂದಿಷ್ಟು ಹಸಿರು ಚಿಗುರಿದಹಾಗೆ ಚಟುವಟಿಕೆ ಸಣ್ಣಗೆ ಕಾಣಿಸಿಕೊಂಡಿತು. ಟೆಲಿಫೋನ್ ಬಿಡಿ ಭಾಗಗಳು, ರೇಡಿಯೋದ ಕನ್ವರ್ಟರ್‌ಗಳು ಹೀಗೆ ಸಣ್ಣ ಪುಟ್ಟ ಉಪಕರಣ ತಯಾರಿಕೆಗೇ ಸೀಮಿತ. ಜನಪ್ರಿಯ ಆಗುವ ಸಾಮಗ್ರಿ ತಯಾರಿಕೆ ಅವರ ಕನಸು. ಅದಕ್ಕಾಗಿ ರೈಸ್ ಕುಕ್ಕರ್ ಮಾಡಲು ಕೈ ಹಾಕಿದರು. ಅದೇನು ಗೋಳೋ? ಕೊನೆಗೂ ಕುಕ್ಕರ್ ಸರಿಯಾಗಲೇ ಇಲ್ಲ. ಅನ್ನ ಎಂದೂ ಸರಿಯಾಗಿ ಬೇಯುತ್ತಲೇ ಇರಲಿಲ್ಲ. ಇಲ್ಲ ಅತಿಯಾಗಿ ಬೆಂದು ಮುದ್ದೆ ಮುದ್ದೆ ಆಗುತ್ತಿತ್ತು. ಇಂಥ ವೈಫಲ್ಯವನ್ನು ಅಕಿ ಮೋರಿಟಾ ತನ್ನ ಆತ್ಮಕತೆಯಲ್ಲಿ, ವೈಭವದ ಉತ್ತುಂಗದಲ್ಲಿ ಇದ್ದಾಗಲೂ ನೆನಪಿಸಿಕೊಂಡು ನಗುತ್ತಾರೆ. ತಮಾಷೆಯಾಗಿ ಹೇಳುತ್ತಾರೆ.

ಏನಾದರೂ ಮಾಡಬೇಕು, ಜನರೆಲ್ಲರ ಕೈಗಿಟ್ಟು ಖುಷಿಯಿಂದ ಬೀಗಬೇಕೆಂಬ ತುಡಿತ. ಆಗ ಅಮೆರಿಕಾದ ಅಧಿಕಾರಿಯೊಬ್ಬನ ಹತ್ತಿರವಿದ್ದ ಟೇಪ್‌ರೆಕಾರ್ಡರ್ ಕಂಡು, ಮಾಡಿದರೆ ಇಂಥದ್ದು ಮಾಡಬೇಕು ಅಂದುಕೊಂಡರು. ಆತನ ಟೇಪ್‌ರೆಕಾರ್ಡರ್ ಎರವಲು ತಂದು, ಒಂದೇ ದಿನದ ಮಟ್ಟಿಗೆ ನೋಡಿ ಹಿಂದಿರುಗಿಸಿದರು. ಆನಂತರ 'ಸೋನಿ'ಯ ದೊಡ್ಡ ಗಾತ್ರದ ಟೇಪ್‌ರೆಕಾರ್ಡರ್ ತಯಾರಾಯಿತು. ಹೊಸದು ತಯಾರಿಸಿದ ಖುಷಿ ಇದ್ದರೂ, ಸ್ವಲ್ಪ ಕಾಲದಲ್ಲಿಯೇ ಅದು ಠುಸ್ಸೆಂದಿತು. ಯಾಕೆಂದರೆ ಜಪಾನಿನ ಯಾರಿಗೂ ಅದು ಬೇಕಿರಲಿಲ್ಲ. ಜನಕ್ಕೆ, ಇಂಥದ್ದು ತೆಗೆದುಕೊಂಡು ಏನು ಮಾಡಬೇಕು ಅಂತಲೂ ತಿಳಿದಿರಲಿಲ್ಲ.

ಅಕಿಗೆ ಇಂಥ ಸಮಸ್ಯೆಗಳೇ ದೊಡ್ಡ ಸವಾಲುಗಳಾಗಿ ಮುಂದೆ ನಿಲ್ಲುತ್ತಾ ಇದ್ದವು. ಇಂಥ ಟೇಪ್‌ರೆಕಾರ್ಡರನ್ನು ಶಿಕ್ಷಣಕ್ಕೆ, ವಿವಿಧ ಸಾರ್ವಜನಿಕ ಕೆಲಸಗಳಿಗೆ ಬಳಸಬಹುದು. ಎಂದು ಸಾಧಿಸಿ ತೋರಿಸಿದ. ಅದಕ್ಕಾಗಿ, ಪ್ರಚಾರ ಮಾಡುವ ತಂಡವನ್ನೇ ಕಟ್ಟಿದ.

ಅಲ್ಲಿಂದ ಆರಂಭವಾಯಿತು ಸೋನಿ ಕಂಪೆನಿಯ ವಿಜಯಯಾತ್ರೆ. ಬೃಹತ್ ಗಾತ್ರದ, ಮ್ಯಾಗ್ನೆಟಿಕ್ ಟೇಪಿನ ಟೇಪ್‌ರೆಕಾರ್ಡರನ್ನು ಕುಗ್ಗಿಸಲು ಹಗಲೂ ರಾತ್ರಿ



ಹ್ಯಾಂಡಲ್ ತಿರುಗಿಸಿದಾಗ ಹಾಡುತ್ತಿದ್ದ ಹಳೆಯ ಗ್ರಾಮಾಫೋನ್



'ಸೋನಿ'ಗೆ ಮೊದಲು ಮಾರುಕಟ್ಟೆ ಕಲ್ಪಿಸಿದ ಟೇಪ್‌ರೆಕಾರ್ಡ್‌ರ್.

ಚಿಂತೆ ಹೊತ್ತುಕೊಂಡ. ಟೇಪಿಗಾಗಿ ಸೆಲ್ಯುಲೋಸ್, ಗಮ್‌ಟೇಪ್, ಕೊನೆಗೆ ಮ್ಯಾಗ್ನೆಟಿಕ್ ಕಣಗಳನ್ನು ಅಂಟಿಸಿದ. ಬರಿ ಕಾಗದ ಹಾಕಿ ನೋಡಿದ. ಇದೆಲ್ಲದರ ಪರಿಣಾಮವೆಂದರೆ ಇವತ್ತು ನಾವು ಕಾಣುತ್ತಿರುವ ಅತ್ಯಂತ ಸರಳ ವಿಧಾನದಿಂದ ತಯಾರಿಸಿದ ಸೆಲ್ಲೋಫೋನ್ ಟೇಪ್. ಜೊತೆಗೆ, ಬೃಹತ್‌ಗಾತ್ರದ ಟೇಪ್ ರೆಕಾರ್ಡರ್, ಬ್ರೀಫ್‌ಕೇಸ್ ಸೈಜಿಗಿಳಿಯಿತು, ಆನಂತರ ಕೈಯಲ್ಲಿ ಹಿಡಿಯಬಹುದಾದ ಗಾತ್ರಕ್ಕೆ ಕುಗ್ಗಿತು. ಈಗ ಮನೆ ಮನೆಯಲ್ಲೂ ಟೇಪ್ ರೆಕಾರ್ಡರ್ ಇವೆ. ಮನೆಯ ತರುಣ, ತರುಣಿಯರಿಗೆಂದೇ ವಾಕ್‌ಮನ್‌ಗಳೂ ಇವೆ. ಇದೆಲ್ಲದರ ಹಿಂದೆ ಇರುವುದು 'ಸೋನಿ' ಕಂಪೆನಿಯ ತನ್ಮಯತೆ ಮತ್ತು ಅವಿರತ ಶ್ರಮದ ಫಲ.

ತಾವು ನಿಜಕ್ಕೂ ತಮ್ಮ ಉದ್ಯಮದಲ್ಲಿ ಯಶಸ್ಸು ಹೊಂದಬೇಕಾದರೆ ವಿಶ್ವದ ಮಾರುಕಟ್ಟೆಯಲ್ಲಿ ತಮ್ಮ ವಸ್ತುಗಳನ್ನು ಮಾರಬೇಕು ಹಾಗು ಎಲೆಕ್ಟ್ರಾನಿಕ್ಸ್ ರಂಗದಲ್ಲಿ ನಡೆಯುತ್ತಿರುವ ಹೊಸ ಹೊಸ ಆವಿಷ್ಕಾರಗಳ ಬಗ್ಗೆ ತಿಳಿದುಕೊಂಡು ಅದನ್ನು ತಮ್ಮ ಕಂಪನಿಯಲ್ಲಿ ಅಳವಡಿಸಬೇಕೆನ್ನುವುದು ಅಕಿ ಮತ್ತು ಇಬುಕಾ ಇಬ್ಬರಿಗೂ ವೇದ್ಯವಾಗತೊಡಗಿತು.

ತಮ್ಮ ತುಂಬಾ ಯಶಸ್ವಿಯಾದ ಹಾಗು ಪ್ರಸಿದ್ಧವಾದ ಟೇಪ್ ರೆಕಾರ್ಡರನ್ನು ಅಮೆರಿಕಾದಲ್ಲಿ ಮಾರಾಟ ಮಾಡಲು ಹೋದಾಗ, ಎಲೆಕ್ಟ್ರಾನಿಕ್ಸ್ ಉದ್ಯಮದಲ್ಲೇ ಕ್ರಾಂತಿಕಾರಕವೆನಿಸಿದ, ಉದ್ಯಮದ ಸ್ವರೂಪವನ್ನೇ ಬದಲುಮಾಡಬಹುದಾದ 'ಟ್ರಾನ್ಸಿಸ್ಟರ್' ಆವಿಷ್ಕಾರದ ಅರಿವಾಯಿತು. ದೊಡ್ಡ ವಾಲ್ವ್‌ಗಳ ಬದಲಾಗಿ ರೇಡಿಯೋ ಉಪಯೋಗಿಸಬಹುದಾದದ್ದು ಈ ಟ್ರಾನ್ಸಿಸ್ಟರ್.

ಅಕಿ ಮೊರಿಟಾರ ಕಂಪೆನಿಯ ಜಪಾನಿ ಹೆಸರು 'ಟೊಕಿಯೋ ಸುಶಿನ್ ಕೆಂಗ್ಯೋ ಕಬುಷಿಕಿ ಕ್ವೆಶ' ಅಥವಾ 'ಟೋಕ್ಯೋ ಕಮ್ಯೂನಿಕೇಷನ್ಸ್ ಮತ್ತು ಇಂಜಿನಿಯರಿಂಗ್ ಕಂಪೆನಿ'ಯೆನ್ನುವುದು ಅಷ್ಟು ಪ್ರಭಾವಿ ಹೆಸರಲ್ಲ ಎನ್ನುವುದು, ಪರದೇಶಗಳಲ್ಲಿ ವ್ಯಾಪಾರ ನಡೆಸುವಾಗ, ಅನುಭವಕ್ಕೆ ಬಂತು. ಹಾಗಾಗಿ ತಮ್ಮ ಕಂಪೆನಿಗೆ ಹೊಚ್ಚ ಹೊಸ ಹೆಸರೊಂದನ್ನು ಇಡಲು ನಿರ್ಧರಿಸಿದರು. ಅಮೆರಿಕಾದ ಬಹುತೇಕ ಕಂಪೆನಿಗಳ ಹೆಸರುಗಳು ಉದಾಹರಣೆಗೆ 'ABC, NBC, RLA, AT & T, 3M ಮುಂತಾದ ಕಂಪೆನಿಗಳು ಮೂರ್ನಾಲ್ಕು ಅಕ್ಷರಗಳ ಚಿಹ್ನೆ (logo) ಹೊಂದಿದ್ದು ಗಮನಕ್ಕೆ ಬಂತು. ಒಂದು ದಿನ ಇಂಗ್ಲಿಷ್ ಶಬ್ದಕೋಶವನ್ನು ಲೋಕಾಭಿರಾಮವಾಗಿ

ತಿರುವುತ್ತಿರುವಾಗ 'SONUS' ಎನ್ನುವ ಲ್ಯಾಟಿನ್ ಶಬ್ದ ಕಣ್ಣಿಗೆ ಬಿತ್ತು. 'SONUS' ಎಂದರೆ ಶಬ್ದ ಎಂದರ್ಥ. ಆಗಿನ ಜಪಾನಿನ ಪ್ರತಿಭಾವಂತ ಯುವಕರನ್ನು 'SONNY' ಎಂದೂ ಕರೆಯುತ್ತಿದ್ದರು. ಅದರಲ್ಲಿ ಒಂದು ಅಕ್ಷರವನ್ನು ತೆಗೆದುಹಾಕಿ 'SONY' ಎನ್ನುವ ಹೆಸರನ್ನು ತಮ್ಮ ಕಂಪೆನಿಗೆ ಆರಿಸಿದರು. 'SONY' ಎನ್ನುವುದಕ್ಕೆ ಯಾವುದೇ ಭಾಷೆಯಲ್ಲಿ ನಿರ್ದಿಷ್ಟವಾದ ಅರ್ಥವೇನಿಲ್ಲ. ಸಾಮಾನ್ಯವಾದ, ಖಾಸಗಿಯಲ್ಲದ ಈ ಪದವನ್ನು ಯಾರು ಬೇಕಾದರೂ ಉಪಯೋಗಿಸಬಹುದೆಂಬ ತಕರಾರೆದ್ದಾಗ 'SONY' ಕಂಪೆನಿಯ ವಕೀಲರ ಸವಾಲಿಗೆ ಉತ್ತರವಾಗಿ ಯಾವುದೇ ಭಾಷೆಯಲ್ಲಿ ಯಾವುದೇ ಅರ್ಥಕೋಶದಲ್ಲಿ ಈ ಶಬ್ದವನ್ನು ಹುಡುಕಲಾಗಲಿಲ್ಲ. ಹಾಗಾಗಿ ಈ ಪದ ಆಕಿ ಕಂಪೆನಿಯ ಖಾಸಗಿ ಶಬ್ದವಾಗಿಯೇ ಉಳಿದುಕೊಂಡಿದೆ.

ಹೊರದೇಶಗಳ ತಾಂತ್ರಿಕತೆಯನ್ನು ಪಡೆಯುತ್ತಲೇ ಹೋದ ಆಕಿ ಮೊರಿಟಾ, ಯೂರೋಪಿನಿಂದ ಮೈಕ್ರೋಚಿಪ್ ಹಾಗೂ ಆಡಿಯೋ ಕ್ಯಾಸೆಟ್, ಅಮೆರಿಕಾದಿಂದ ವಿಡಿಯೋ ರೆಕಾರ್ಡರ್‌ನ ತಾಂತ್ರಿಕತೆಯನ್ನು ತಮ್ಮ ಕಂಪೆನಿಗೆ ದಕ್ಕಿಸಿಕೊಂಡರು. 1955ರಲ್ಲಿ 'ಸೋನಿ'ಯು ಮೊತ್ತ ಮೊದಲ ಟ್ರಾನ್ಸಿಸ್ಟರ್ ರೇಡಿಯೋವನ್ನು ಬಿಡುಗಡೆ ಮಾಡಿತು. ಎರಡು ವರ್ಷಗಳ ನಂತರ ಜಗತ್ತಿನ ಅತ್ಯಂತ ಸಣ್ಣ ಪಾಕೆಟ್ ಗಾತ್ರದ ರೇಡಿಯೋವನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಲಾಯಿತು. ಅಂಗಿಯ ಜೇಬಿಗಿಂತಲೂ ಸ್ವಲ್ಪ ದೊಡ್ಡದಿದ್ದ ಈ ರೇಡಿಯೋವನ್ನು ಅಂಗಿಯ ಜೇಬಿನಲ್ಲಿಟ್ಟುಕೊಳ್ಳಬಹುದೆಂದು ತೋರಿಸಲು ಸೋನಿ ಕಂಪೆನಿಯು ತುಸು ದೊಡ್ಡ ಜೇಬಿದ್ದ ಅಂಗಿಗಳನ್ನೇ ತನ್ನ ಸೇಲ್ಸ್‌ಮನ್‌ಗಳಿಗೆ ಒದಗಿಸಿತ್ತು.

1950ರ ದಶಕದಲ್ಲಿ ಜಪಾನಿನ ವಸ್ತುಗಳಿಗೆ ಹೊರ ದೇಶದ ಮಾರುಕಟ್ಟೆಯಲ್ಲಿ ಆಗುತ್ತಿದ್ದ ಅವಹೇಳನ ಕಂಡು ಆಕಿರವರಿಗೆ ಆಘಾತವಾಯಿತು. ಜಪಾನಿ ವಸ್ತುಗಳನ್ನು ಕೇವಲ ಅಗ್ಗದ ಪ್ಲಾಸ್ಟಿಕ್ ಆಟಿಕೆಗಳೆಂದು ಹೀಗಳೆಯಲಾಗುತ್ತಿತ್ತು. 'SONY' ಹೆಸರನ್ನು ಆರಿಸಿದುದರ ಹಿಂದೆ ಜಪಾನ್ ದೇಶದ ಹೆಸರನ್ನು ಮರೆ ಮಾಚುವ ಇಂಗಿತವಿತ್ತು ಮತ್ತು ಅದು ಫಲಕಾರಿಯೂ ಆಯ್ತು. ಹೊರದೇಶಗಳಿಗೆ ರಫ್ತು ಮಾಡುತ್ತಿದ್ದ ಸೋನಿ ಕಂಪೆನಿಯ ವಸ್ತುಗಳ ಮೇಲೆ Made in Japan ಎನ್ನುವುದನ್ನು ಉದ್ದೇಶಪೂರ್ವಕವಾಗಿ ಅತಿ ಚಿಕ್ಕ ಅಕ್ಷರಗಳಲ್ಲಿ ಬರೆಯಲಾಗುತ್ತಿತ್ತು. ಆದರೆ ಅದು ಅತಿ ಚಿಕ್ಕದೆಂದು ಅಮೆರಿಕಾದ ಕಸ್ಟಮ್ಸ್‌ನವರು ದೊಡ್ಡದಾಗಿ Made in Japan ಎಂದು ಬರೆಯಲು 'SONY' ಕಂಪೆನಿಗೆ ತಾಕೀತು ಮಾಡಿದರು.

ಈ ಕುಖ್ಯಾತಿಯನ್ನು ಕಂಡು ಆಕಿ ಮೊರಿಟಾ. ಪರದೇಶದ ಮಾರುಕಟ್ಟೆಯಲ್ಲಿ ಜಪಾನಿ ವಸ್ತುಗಳ ಬಗ್ಗೆ ಅರಿವು ಮೂಡಿಸುವುದರಅವಶ್ಯಕತೆಯನ್ನು ಮನಗಂಡರು. ಕೇವಲ ತಮ್ಮ ಕಂಪೆನಿಯ ವಸ್ತುಗಳಲ್ಲದೇ ತಮ್ಮ ದೇಶದ ಹೆಸರನ್ನು ಪ್ರಚುರಪಡಿಸುವ ಕೆಲಸದಲ್ಲಿ ತೊಡಗಿದರು. ಹಳೆಯ ಜಪಾನಿ ಮಾರ್ಕೆಟಿಂಗ್ ಪದ್ಧತಿಯಲ್ಲಿ ತಯಾರಕರಿಗೂ, ಗ್ರಾಹಕರಿಗೂ ಸಂಬಂಧವೇ ಇರುತ್ತಿರಲಿಲ್ಲ. ಆದರೆ ತಮ್ಮ ವಸ್ತುಗಳ ಬಗ್ಗೆ ಜನರಿಗೆ ತಿಳುವಳಿಕೆ ಕೊಡುವುದು ಒಂದು ಹೊಸ ಮಜಲಾಯಿತು.

ಸೋನಿ ಕಂಪೆನಿ ಮತ್ತು ಅದರ ವಸ್ತುಗಳು ಅಮೆರಿಕಾದಲ್ಲಿ ಸಂಪೂರ್ಣವಾಗಿ ಯಶಸ್ವಿ ಆಗಬೇಕಾದರೆ, ಅಮೆರಿಕಾದಲ್ಲಿ ಪ್ರತ್ಯೇಕವಾದ, ಸೋನಿಯ ಘಟಕವನ್ನೇ ಸ್ಥಾಪಿಸಬೇಕೆಂದು ಆಕಿ ಮೊರಿಟಾಗೆ ಅನಿಸತೊಡಗಿತು. ಜಪಾನ್ ಮತ್ತು ಅಮೆರಿಕಾ ಮಧ್ಯದ ತಿರುಗಾಟದಲ್ಲಿ ಅಮೆರಿಕಾದಲ್ಲಿ ಸಂಸ್ಥೆ ನಿರ್ವಹಣೆ ಕಷ್ಟವಾಗುತ್ತಿತ್ತು.

1961ರಲ್ಲಿ Sony Corporation of America ಸ್ಥಾಪನೆಯಾಯಿತು. ಆ ವರ್ಷದಲ್ಲೇ ಸೋನಿ ಕಂಪೆನಿಯು ತನ್ನ ಚರಿತ್ರೆಯಲ್ಲೇ ಮೊದಲ ಮತ್ತು ಕೊನೆಯ SONY ಕಾರ್ಮಿಕರ ಹರತಾಳವನ್ನು ಎದುರಿಸಬೇಕಾಯಿತು. ಸೋನಿ ಕಂಪೆನಿಯ 15ನೇ ವಾರ್ಷಿಕ ಮಹೋತ್ಸವದ ಅವಧಿಯಲ್ಲಿ ನಡೆದ, ಅತ್ಯಂತ ಪ್ರಬಲ ಕಾರ್ಮಿಕ ಸಂಘಗಳ ಪ್ರತಿಭಟನೆ ಇಡೀ ಸಂಘಟನೆಯನ್ನೇ ಸ್ಥಗಿತಗೊಳಿಸುವಷ್ಟು ಅಪಾಯಕಾರಿಯಾಗಿತ್ತು. ಆದರೆ ಆಕಿ ಮೊರಿಟಾ ಸಹೋದ್ಯೋಗಿಗಳ ಜೊತೆಗಿನ ತಮ್ಮ ಸೌಹಾರ್ದ ಬಾಂಧವ್ಯದ ಫಲವಾಗಿ ಈ ಹರತಾಳ ನಡೆಯದಂತೆ ನೋಡಿಕೊಂಡರು. ಆ ಸಂದರ್ಭದಲ್ಲಿ ಆಕಿ ಮೊರಿಟಾ ಹೇಳಿದ್ದು, 'ತನ್ನ ಉದ್ಯೋಗಿಗಳಲ್ಲಿ ಕಾರ್ಮಿಕರಲ್ಲಿ ಭವಿಷ್ಯದ ಬಗ್ಗೆ, ಪಾಲ್ಗೊಳ್ಳುವ ಭಾವವನ್ನು ನಿರ್ಮಿಸುವ ಸಂಸ್ಥೆಗಳು ಮಾತ್ರ ಜಪಾನ್‌ನಲ್ಲಿ ಯಶಸ್ವಿ ಕಂಪನಿಗಳು, ಭವಿಷ್ಯದ ದಿನಗಳು ಕೊಳ್ಳುವ ಜನರ ಕೈಯಲ್ಲಿದೆ' ತನ್ನ ದೃಷ್ಟಿಯಲ್ಲಿ SONY ಸಂಸ್ಥೆ ಏನು ಹಾಗು ಇದರ ಬಗ್ಗೆ ನಿಮ್ಮ ದೃಷ್ಟಿಯಲ್ಲಿ ಏನಿರಬೇಕೆಂಬುದನ್ನು ಉದ್ಯೋಗಿಗಳಿಗೆ ಮನವರಿಕೆ ಮಾಡಿಸಿ ಸಂಸ್ಥೆಯ ಪ್ರತಿಯೊಬ್ಬರ ಅಭ್ಯುದಯಕ್ಕಾಗಿ ದುಡಿಯುವುದೇ ತನ್ನ ಹಾಗು ತನ್ನ ಮ್ಯಾನೇಜ್‌ಮೆಂಟಿನ ಉದ್ದೇಶ ಎಂಬುದನ್ನು ಸ್ಪಷ್ಟಗೊಳಿಸುವುದರ ಮೂಲಕ, ಟ್ರೇಡ್ ಯೂನಿಯನ್‌ಗಳ ಹರತಾಳ ಮುಂತಾದ ಅಪಾಯಗಳಿಂದ ಸಂಸ್ಥೆಯನ್ನು ಉಳಿಸಿದರು.

SONY ಕಂಪೆನಿಯಲ್ಲಿ ಆಕಿ ಟ್ರೇಡ್ ಯೂನಿಯನ್‌ಗಳ ಮೇಲೆ ತಮ್ಮ ಹಿಡಿತವನ್ನು ಚಲಾಯಿಸಿರಲಿಲ್ಲ. SONY ಕಂಪೆನಿಯ ಯಾವುದೇ ಕಾರ್ಮಿಕನಿಗೂ ಪ್ರಜಾಪ್ರಭುತ್ವವಾದಿ ಅಡಿಪಾಯವನ್ನು ಒದಗಿಸಿದರು. ವಿಶ್ವದ ಯಾವುದೇ ಭಾಗದಲ್ಲಿರಲಿ ಮೊರಿಟಾ ಆಗಲಿ ಅವರ ಅಧಿಕಾರಿಗಳಾಗಲಿ ಎಲ್ಲಾ ಉದ್ಯೋಗಿಗಳನ್ನು SONY ಕುಟುಂಬದ ಸದಸ್ಯರಂತೆಯೇ ನಡೆಸಿಕೊಳ್ಳುತ್ತಿ

ಅಜ್ಞಾತ ಅನ್ವೇಷಕ ಮೊರಿಟಾ



ಮೊರಿಟಾ ಜಪಾನಿನ ಕೈಗಾರಿಕಾ ನಗರವಾದ ನಗೋಯಾ ಸಮೀಪದ ಕೊಸುಗಯದಲ್ಲಿ ಹುಟ್ಟಿದರು. ತಂದೆ ಯುರ್ಯುಮೋಎವ್ ಮತ್ತು ತಾಯಿ ಶುಕೋ ಮೊರಿಟಾ. ಅಕ್ಕಿಯಿಂದ ಭಟ್ಟಿ ಇಳಿಸಿ ತಯಾರಿಸುವ ಮಾದಕ ದ್ರವ್ಯ 'ಸಾಕೆ' ಉತ್ಪಾದನೆ ಇವರ ಮನೆತನದ ಉದ್ಯೋಗ.

ಆಕಿಯ ತಂದೆ ಯಶಸ್ವಿ ಉದ್ಯಮಿ. ನಷ್ಟದಲ್ಲಿದ್ದ ತನ್ನ ಉದ್ಯಮವನ್ನು ಲಾಭದತ್ತ ತಂದ ಧೀರ. ತನ್ನ ಮೊದಲ ಮಗ ಆಕಿ ಕೂಡ ತನ್ನ ಉದ್ಯಮದಲ್ಲಿಯೇ ಮುಂದುವರಿಯಬೇಕೆಂಬ ಆಸೆ ಇರಿಸಿಕೊಂಡಿದ್ದ. ಆದರೆ ಆಕಿ ಲಕ್ಷಾಂತರ ಜನರಿಗೆ ಅನ್ನ ನೀಡುವ ದೊಡ್ಡ ಮನುಷ್ಯನಾದ. ಆಕಿ ಎಂದರೆ ಅಸಾಧಾರಣ. ಮೊರಿಟಾ ಎಂದರೆ ಸಮೃದ್ಧ ಭತ್ತದ ಗದ್ದೆ. ಆದರೆ ಆಕಿ ಮೊರಿಟಾ ಬರಡು ಭೂಮಿಯಲ್ಲಿ ಸಮೃದ್ಧ ಫಸಲು ಬೆಳೆದಾತ.


ನಗೋಯ ನಗರದಲ್ಲಿದ್ದ ಆಕಿಯ ಕುಟುಂಬ ಅವಿಭಕ್ತ ಕುಟುಂಬ. ಸಹೋದರಿ, ಇಬ್ಬರು ಸಹೋದರರು. ಚಿಕ್ಕಪ್ಪ, ಚಿಕ್ಕಮ್ಮ, ಅಜ್ಜ, ಅಜ್ಜಿ, ಆರು ಜನ ಆಳುಗಳು. ಇನ್ನೈದು ಜನ ವಾರಾನ್ನ ಮಾಡುತ್ತಿದ್ದ ಹುಡುಗರೊಂದಿಗೆ ಬೆಳೆದ ಆಕಿಯ ಮೇಲೆ ತಾಯಿಯ ಪ್ರಭಾವ ಹೆಚ್ಚು. ತನ್ನ ಕುಟುಂಬದಲ್ಲಿ ಆಧುನಿಕತೆಯ ಗಾಳಿ ಬೀಸುವಂತೆ ಮಾಡಿದ ಆಕಿಯ ತಾಯಿ ಪಾಶ್ಚಾತ್ಯ ಸಂಗೀತದ ಆರಾಧಕಿ. ಹಳೆಯ ಗ್ರಾಮಾಫೋನ್‌ನಲ್ಲಿ ಸಂಗೀತ ಕೇಳುತ್ತಿದ್ದ ಆಕೆ ಮಗನಿಗೂ ಅದನ್ನು ಕಲಿಸಿದಳು. ನಂತರ ಹೊಸ ಗ್ರಾಮಾಫೋನ್ ಬಂದ ಮೇಲೆ ಬಾಲಕ ಆಕಿ ರವೆಲ್, ಮೊಜಾರ್ಟ್, ಬಿಥೋವನ್, ಬ್ಯಾಷ್ ಬ್ರಾಹ್ಮಸ್ ಮುಂತಾದವರ ಸಂಗೀತ ಆಲಿಸುತ್ತ ನಾದ ಲೋಕಕ್ಕೆ ಅಂಬೆಗಾಲಿಟ್ಟ.

ಪ್ರೌಢಶಾಲೆಗೆ ಬರುವ ಹೊತ್ತಿಗೆ ಹಳೆಯ ಗ್ರಾಮಾಫೋನನ್ನು ರಿಪೇರಿ ಮಾಡಿ ಎಲೆಕ್ಟ್ರಾನಿಕ್ಸ್‌ನಲ್ಲಿ ಆಸಕ್ತಿ ಬೆಳೆಸಿಕೊಂಡಿದ್ದ ಆಕಿ ಭೌತಶಾಸ್ತ್ರವನ್ನೇ ತನ್ನ ಅಧ್ಯಯನದ ವಿಷಯ ಮಾಡಿಕೊಂಡ. 19ನೇ ವಯಸ್ಸಿನಲ್ಲಿ (1940) ಸುಸಿಸುಬುಕೊ ಅಸಾಡಾ ಅವರಿದ್ದ ಒಸಾಕಾ ವಿಶ್ವವಿದ್ಯಾಲಯ ಸೇರಿದ. ಆಗಲೇ ಎರಡನೇ ಮಹಾಯುದ್ಧ ಆರಂಭವಾದ್ದರಿಂದ ಆಕಿ ಮಿಲಿಟರಿ ಸೇರುವುದು ಅನಿವಾರ್ಯವಾಯಿತು. ಅಲ್ಲಿಯೇ ಆತನಿಗೆ ಪ್ರತಿಭಾನ್ವಿತ ಎಲೆಕ್ಟ್ರಾನಿಕ್ಸ್ ಎಂಜಿನಿಯರ್ ಮಸಾರು ಇಬುಕಾರ ಪರಿಚಯವಾಯಿತು.

ಮೊರಿಟಾ ಮತ್ತು ಇಬುಕಾ ಸ್ನೇಹಿತರಾದದ್ದೇ ಅಲ್ಲದೆ ಕೊನೆಯವರೆಗೂ ಒಟ್ಟಾಗಿ ದುಡಿದು 'ಸೋನಿ'ಯ ಯಶಸ್ಸಿನ ವೀರಕತೆಯನ್ನು ಬರೆದರು.

ರು. ಅಕಿ ಮೊರಿಟಾ SONYಯ ಚಿಕ್ಕ ಮಳಿಗೆಗಳನ್ನು ಕಚೇರಿಗಳನ್ನು ರ್ಖಾನೆಗಳನ್ನು ಸಂದರ್ಶಿಸುತ್ತಿದ್ದು SONY ಕುಟುಂಬದ ಸದಸ್ಯರನ್ನು ಕಂಡು ತಃ ಮಾತನಾಡಿಸಿ ಅವರ ಕಷ್ಟ ಸುಖಗಳನ್ನು ವಿಚಾರಿಸುವುದಕ್ಕಾಗಿಯೇ. ಈ ರಹದ ಕೌಟುಂಬಿಕ ತತ್ವ ಜಪಾನಿನ ವ್ಯಾಪಾರಿ ಸಂಸ್ಥೆಗಳಲ್ಲಿ ರಳವಲ್ಲವಾದರೂ ಜಪಾನೇತರ ದೇಶಗಳಲ್ಲಂತೂ ಬಹಳ ವಿರಳವಾದ ಂಗತಿ.

SONY ಎಂಟು ಇಂಚಿನ (20 cm) ಟ್ರಾನ್ಸಿಸ್ಟರ್‌ನಿಂದ ಕೂಡಿದ ಲಿವಿಷನ್ ಅನ್ನು ಯಾರಿಸುವುದರ ಮೂಲಕ ವಿ.ಗಳಿಗೆ ಹೊಸದೊಂದು ಾರುಕಟ್ಟೆಯನ್ನೇ ಸೃಷ್ಟಿಸಿತು. ಂತರ ತನ್ನ ಹೊಸ ್ರಿನಿಟ್ರಾನ್' ಟಿ.ವಿ. ್‌ಗಳಿಂದ ಹೊಸ ಕಪ್ಪು ಳುಪು ಟಿ.ವಿ.ಗಳನ್ನು ಯಾರಿಸಿತು. ವ್ಯಾಪಾರದಲ್ಲಿ ಶಸ್ವಿಯಾಗಬೇಕಾದರೆ ಹೊಸ ೂಸ ಕ್ಷೇತ್ರಗಳಲ್ಲಿ ಾವಾಗಲೂ ಮೊದಲಿ ಾಗಿರಬೇಕೆಂಬ ಸತ್ಯವನ್ನು ONY ಕಂಡುಕೊಂಡಿದೆ. ಟ್ಟ ಮೊದಲ solid State ಡಿಯೋ, ಟ್ರಾನ್ಸಿಸ್ಟರ್‌ಯುಕ್ತ ವಿ.ಸೆಟ್, ಜೊತೆಗೆ ಯ್ಯಬಹುದಾದ ಸ್ಟೀರಿಯೋ ೇಯರ್ ಆದ ವಾಕ್‌ಮನ್, ುಲ್ಲಿ ಹಿಡಿಯಬಹುದಾದ ವಿ, ಜೊತೆಗೆ ಒಯ್ಯಬಹುದಾದ ಚಿಕ್ಕ Disc Player, 'ಡಿಸ್ಕ್‌ಮನ್', ಯಲ್ಲಿ ಹಿಡಿದೇ ತೆಗೆಯಬಹುದಾದ ವಿಡಿಯೋ ಕ್ಯಾಮೆರಾ, ಸಣ್ಣ ವಿಡಿಯೋ ೇಪ್ ಪ್ಲೇಯರ್‌ಗಳು, ಫಿಲ್ಮ್‌ನ ಅವಶ್ಯಕತೆಯೇ ಇಲ್ಲದ ಕ್ಯಾಮೆರಾಗಳು ಂತಾದ ನವೀನ, ನೂತನ ಎಲೆಕ್ಟ್ರಾನಿಕ್ಸ್ ವಸ್ತುಗಳನ್ನು SONY ವಿಷ್ಕರಿಸಿದೆ.



ಜಗತ್ತಿನೆಲ್ಲೆಡೆ ಯುವ ಜನಾಂಗದ ಸಂಗಾತಿ.
ಆ ಕಾರಣಕ್ಕೆ ಹಿರಿಯರಿಂದ ಪ್ರತಿಭಟನೆ ಎದುರಿಸಿದ 'ವಾಕ್‌ಮನ್'

ಅಕಿ ಮೊರಿಟಾ ಹೇಳುವ ಹಾಗೆ 'ಗ್ರಾಹಕರಿಗೆ ಯಾವುದು ಬೇಕೆಂದು ಕೇಳಿ ದುಕೊಂಡು, ಆ ವಸ್ತುವನ್ನು ತಯಾರಿಸುವುದಕ್ಕಿಂತ ಹೊಸ ಹೊಸ ವಿಷ್ಕಾರಗಳ ಮೂಲಕ ಗ್ರಾಹಕರಿಗೆ ಅವರ ಹೊಸ ಹೊಸ ಅವಶ್ಯಕತೆಗಳನ್ನು ನದಟ್ಟು ಮಾಡಿಸುವುದು ಹೆಚ್ಚು ಸೂಕ್ತ. ಏಕೆಂದರೆ ಜನರಿಗೆ ಯಾವುದು ಧ್ಯ ಎಂದು ಗೊತ್ತಿರುವುದಿಲ್ಲ ಆದರೆ ನಮಗೆ ಗೊತ್ತು. ಹಾಗಾಗಿ ಗ್ರಾಹಕರ ರ್ೀಕ್ಷಣೆ ಮಾಡುವುದಕ್ಕಿಂತಾ ನಮ್ಮ ಚಿಂತನೆಯನ್ನು, ನಮ್ಮ ವಸ್ತುಗಳನ್ನು ವಿಷ್ಕರಿಸಿ ಹೊಸ ಹೊಸ ವಸ್ತುಗಳನ್ನು, ಮಾರುಕಟ್ಟೆಗಳನ್ನು ಸೃಷ್ಟಿಸುತ್ತೇವೆ'.

ಇದನ್ನು ಮಾಡಲು ಸಾಧ್ಯವಾಗುವುದು ಕಂಪೆನಿಗೆ ಬಲವಾದ R & D esearch & Development) ಅಂಗವಿದ್ದಾಗ ಮಾತ್ರ. SONY ಯು (R & ಯನ್ನು ತನ್ನ ಸಂಸ್ಥೆಯ ಅವಿಭಾಜ್ಯ ಹಾಗು ಅತ್ಯಂತ ಪ್ರಮುಖ ವ್ಯವಸ್ಥೆಯಾಗಿ ಗಣಿಸಿದೆ. 1990ರ ದಶಕದಿಂದಲೂ ವರ್ಷಕ್ಕೆ 1000 ಹೊಸ ಪಕರಣಗಳನ್ನು ಆವಿಷ್ಕರಿಸುವ 9000 ವಿಜ್ಞಾನಿ ಮತ್ತು ಇಂಜಿನಿಯರ್‌ಗಳ ಡವನ್ನು ಹೊಂದಿದೆ.

ಅತ್ಯಂತ ಪ್ರಬಲ R & D ವ್ಯವಸ್ಥೆ ಹೊಂದಿದ SONY, ಆವಿಷ್ಕರಿಸಿದ ್ಞಾನಿಕ ವಿಷಯಗಳು ವಸ್ತು ರೂಪ ಪಡೆಯುವತ್ತ ಅತ್ಯಂತ ಹೆಚ್ಚಿನ ಗಮನ ಡುತ್ತದೆ. ಮೊರಿಟಾ ಪ್ರಶ್ನಿಸುವ ಹಾಗೆ 'ಉಪಯೋಗಿ, ಆಕರ್ಷಕ ಹಾಗು ಹಕರಿಗೆ ಅನುಕೂಲವಾಗುವಂಥ ವಸ್ತುಗಳನ್ನು ವಿನ್ಯಾಸಗೊಳಿಸಲು ಆಗದೇ ೇದರೆ, ಅತ್ಯಂತ ಆಧುನಿಕ, ಭವ್ಯವಾದ ನಿಮ್ಮ ತಂತ್ರಜ್ಞಾನದ ಚಿತತೆಯಾದರೂ ಏನು?' ಹಾಗಾಗಿ ಹೊಸ ಹೊಸ ಆಲೋಚನೆಗಳು. ಐಡಿಯಾಗಳು, ಅವು ವಿಜ್ಞಾನಿಗಳಿಂದ ಬಂದದ್ದಿರಲಿ, ಕಾರ್ಮಿಕರಿಂದ ಒದಗಿದ್ದಿರಲಿ ಅಥವಾ ಮ್ಯಾನೇಜ್‌ಮೆಂಟ್‌ನ ಯಾವುದೇ ಸ್ತರದಿಂದ ಬಂದದ್ದದ್ದಿರಲಿ SONY ಯಲ್ಲಿ ಕಾರ್ಯಗತಗೊಳ್ಳುತ್ತವೆ.

R & D ಯಲ್ಲಿ ಸೋನಿ ಹೂಡಿದ ಹಣ ಅಪಾರ. 1993ರ ಹೊತ್ತಿಗೆ 232.2 ಬಿಲಿಯನ್.ಯೆನ್ (2 ಬಿಲಿಯ ಡಾಲರ್‌ಗಳು) ಗಳನ್ನು ಹೂಡಿತ್ತು. Sony ಸಂಸ್ಥೆಯ ಅತ್ಯಂತ ಪ್ರಮುಖ ದೇಶಗಳಲ್ಲೂ ತನ್ನ ಅಸ್ತಿತ್ವವನ್ನು ಹೊಂದಿದೆ.


ಇದೆಲ್ಲದರ ನಡುವೆ, ತನ್ನ ಕಂಪೆನಿಯ ಉದ್ದಿಮೆಯನ್ನು ಇನ್ನೂ ಹೆಚ್ಚು ವಿಸ್ತರಿಸುವುದಕ್ಕಾಗಿ ತಾನು ಶಾಶ್ವತವಾಗಿ ಅಮೆರಿಕಾದಲ್ಲಿರುವುದು ಅನಿವಾರ್ಯವೆಂದರಿತ ಅಕಿ ಮೊರಿಟಾ 1962ರಲ್ಲಿ ಅಮೆರಿಕಾದಲ್ಲಿ ವಾಸ್ತವ್ಯ ಹೂಡಿದರು. ಆದರೆ ಕಂಪೆನಿಯ ಮೇಲಿನ ತಮ್ಮ ಹತೋಟಿಯನ್ನು ಕಾಪಾಡಿಕೊಳ್ಳಲು ಎರಡು ತಿಂಗಳಿಗೊಮ್ಮೆ ಟೋಕಿಯೋಗೆ ಒಂದು ವಾರದ ಮಟ್ಟಿಗೆ ಬಂದು ಹೋಗುವ ವ್ಯವಸ್ಥೆ ಮಾಡಿಕೊಂಡರು.

SONY ಮತ್ತು ಮೊರಿಟಾ ಮಾಡಿದ ಪ್ರತಿಯೊಂದು ಯಶಸ್ವಿಯಾಗಿದೆ ಎಂದೇನಲ್ಲ, ಕ್ಯಾಲ್ಕುಲೇಟರ್‌ಗಳನ್ನು ತಯಾರಿಸಲು ಶುರು ಮಾಡಿದ ಮೊಟ್ಟ ಮೊದಲ ಕೆಲವೇ ಕಂಪೆನಿಗಳಲ್ಲಿ SONY ಕೂಡ ಒಂದು. ಆದರೆ ನಂತರದ ತುರುಸಿನ ಸ್ಪರ್ಧೆಯಲ್ಲಿ 'ಎಲ್ಲಾ ಕಂಪೆನಿಗಳಿಗಾಗುವಷ್ಟು ಮಾರುಕಟ್ಟೆ ಕ್ಯಾಲ್ಕುಲೇಟರ್‌ಗಳಿಗಿಲ್ಲ' ವೆಂದು ನಿರ್ಧರಿಸಿ SONY ಕ್ಯಾಲ್ಕುಲೇಟರ್ ತಯಾರಿಕೆಯನ್ನು ನಿಲ್ಲಿಸಿಬಿಟ್ಟಿತು. ಆದರೆ ಕೆಲವೇ ವರ್ಷಗಳ ನಂತರ SONYಗೆ ತಾನು ಮಾಡಿರುವ ಬಹುದೊಡ್ಡ ತಪ್ಪಿನ ಅರಿವಾಯಿತು. ಅದೆಂದರೆ, ಅತ್ಯಂತ ದೊಡ್ಡ ಮಾರುಕಟ್ಟೆಯಾಗಿ ಬೆಳೆಯುತ್ತಿರುವ ಕಂಪ್ಯೂಟರ್ ಕ್ಷೇತ್ರದಲ್ಲಿ ಧುಮುಕಬೇಕೆಂದು ತಯಾರಾಗುತ್ತಿರುವಾಗ, ಆ ಕ್ಷೇತ್ರಕ್ಕೆ ಬೇಕಾದ ಸಂಪನ್ಮೂಲಗಳಾದ ಕಾರ್ಖಾನೆ, ಯಂತ್ರೋಪಕರಣಗಳು, ಆ ಕ್ಷೇತ್ರದ ಪರಿಣತಿ ಇವಾವು ತನಗಿಲ್ಲದ್ದು ಅರಿವಾಯಿತು. ಕ್ಯಾಲ್ಕುಲೇಟರ್ ತಯಾರಿಕೆಯನ್ನು ಮುಂದುವರಿಸಿದ್ದರೆ ಈ ಸಮಸ್ಯೆಯೇ ಉದ್ಭವವಾಗುತ್ತಿರಲಿಲ್ಲ. ತಾತ್ಕಾಲಿಕ ಕಷ್ಟಗಳನ್ನು ಪರಿಹರಿಸುವ ಸಲುವಾಗಿ SONY ದೂರಗಾಮೀ ಪರಿಣಾಮಗಳನ್ನು ಊಹಿಸಲಾರದೇ ಹೋಗಿ ಅಪಾರ ಅವಕಾಶಗಳಿಂದ ವಂಚಿತವಾಯಿತು.

ವಿಡಿಯೋ ಟೇಪ್ ಮಾರ್ಕೆಟ್‌ನ ಅವಕಾಶವನ್ನು ಅರ್ಥಮಾಡಿಕೊಂಡಿದ್ದ SONY 1975ರಲ್ಲಿ ತನ್ನ 'ಬೀಟಾಮ್ಯಾಕ್ಸ್' ವಿಡಿಯೋ ಕ್ಯಾಸೆಟ್ ಸಿಸ್ಟಂ ಅನ್ನು ತಯಾರಿಸಿತು. ಆದರೆ ಪ್ರತಿಸ್ಪರ್ಧಿ VHS ಸಿಸ್ಟಂನ ಸ್ಪರ್ಧೆಯ ಸಂಬಂಧದಿಂದ ಬೀಟಾಮ್ಯಾಕ್ಸ್ ಯಶಸ್ವಿಯಾಗಲಿಲ್ಲ. ಈ ಬೀಟಾಮ್ಯಾಕ್ಸ್ ಕಥೆ ತನ್ನೆಲ್ಲಾ ವಸ್ತುಗಳ ಬಗ್ಗೆ ಬಹಳ ಎಚ್ಚರಿಕೆಯ R & D ಯನ್ನು ನಡೆಸಬೇಕೆಂಬ ದೊಡ್ಡ ಪಾಠವನ್ನು SONYಗೆ ಕಲಿಸಿದೆ.

ಅಂತಾರಾಷ್ಟ್ರೀಯ ಹಾಗು ಬಹುರಾಷ್ಟ್ರೀಯ ಸಂಸ್ಥೆಯಾಗಿ ಬೆಳೆದಿರುವ SONY ಸಂಸ್ಥೆ, SONY, ಅಮೇರಿಕಾ, SONY ಹವಾಯ್, SONY ಪನಾಮಾ SONY ಯು.ಕೆ. ಮುಂತಾಗಿ ತನ್ನ ಸಂಸ್ಥೆಗಳನ್ನು ಹುಟ್ಟುಹಾಕಿದೆ.

SONY ವಸ್ತುಗಳ ಆವಿಷ್ಕಾರ ಹಾಗು ಅಭಿವೃದ್ಧಿಗೆ ಬೇಕಾದ ಐಡಿಯಾಗಳು ಹಲವಾರು ತೆರನಾದ ದಾರಿಗಳಿಂದ ಬಂದಿವೆ. ಉದಾಹರಣೆಗೆ SONY Walkman ನ ಐಡಿಯಾ ಶುರುವಾದದ್ದು ಮೊರಿಟಾ ಮನೆಯಲ್ಲಿಯೇ. ಒಂದು ದಿನ ಅಕಿ ಮಗಳು ನವೊಕೊ ಪ್ರವಾಸ ಮುಗಿಸಿಕೊಂಡು ಬಂದ ಕೂಡಲೇ



ರೇಡಿಯೋ ಆಲಿಸುವ ಸಂಸ್ಕೃತಿಯನ್ನೇ ಬದಲಿಸಿ ಮನೆಮಾತಾದ ಪಾಕೆಟ್ ಟ್ರಾನ್ಸಿಸ್ಟರ್

ಸಂಗೀತ ಕೇಳಲು ಮನೆಯ ಮಹಡಿಯಲ್ಲಿನ ತನ್ನ ಕೋಣೆಗೆ ಧಾವಿಸಿದಳು. ಯಾವಾಗಲೂ ಸಂಗೀತದ ಹುಚ್ಚಿರುವ, ಸದಾ ಸ್ಟೀರಿಯೋ ತನ್ನ ಜೊತೆಗಿರಬೇಕೆನ್ನುವ ಈ ಗೀಳು ಅಕಿಯನ್ನು ಆಶ್ಚರ್ಯಗೊಳಿಸಿತು. ಜೊತೆಗೆ, ಯಾವಾಗಲೂ ಸಂಗೀತವನ್ನು ಕೇಳಲಿಚ್ಛಿಸುವ ಯುವಕ ಯುವತಿಯರು ರಸ್ತೆಗಳಲ್ಲಿ ಭಾರವಾದ, ದೊಡ್ಡ ಸ್ಟೀರಿಯೋ ಅಥವಾ ರೇಡಿಯೋಗಳನ್ನು ತಮ್ಮ ಹೆಗಲ ಮೇಲೆ ಹೊತ್ತುಕೊಂಡು ಓಡಾಡುವುದೂ ಗಮನಕ್ಕೆ ಬಂತು. ಪೋರ್ಟಬಲ್ ಸ್ಟೀರಿಯೋದ ಐಡಿಯಾ ಆಗಿನಿಂದ ಅಕಿಯನ್ನು ಕಾಡಲು ಶುರುಮಾಡಿತು. ಒಂದು ದಿನ ಇಬೂಕ ಅಕಿಯ ಆಫೀಸಿನ ಕೋಣೆಗೆ ಬಂದು SONYಯ ಪೋರ್ಟಬಲ್ ಸ್ಟೀರಿಯೋ ಸೆಟ್‌ನ ಭಾರ ಮತ್ತು ಗಾತ್ರದ ಬಗ್ಗೆ ದೂರಲು ಶುರುಮಾಡಿದರು. ಹೇಳಿದ್ದು 'ನಾನು ಸಂಗೀತ ಕೇಳಲಿಚ್ಛಿಸುತ್ತೇನೆ. ಆದರೆ ಬೇರೆಯವರಿಗೆ ತೊಂದರೆ ಕೊಡಲಿಚ್ಛಿಸುವುದಿಲ್ಲ. ಆದರೆ ಮನೆಯಲ್ಲೇ ಸ್ಟೀರಿಯೋ ಮುಂದೆ 24 ಘಂಟೆ ಕೂರಲಿಚ್ಛಿಸುವುದಿಲ್ಲ'.

'ಇದಕ್ಕೆ ನನ್ನ ಪರಿಹಾರವೇನೆಂದರೆ ನಾನು ಸಂಗೀತವನ್ನು ಜೊತೆಯಲ್ಲೇ ಒಯ್ಯುತ್ತೇನೆ ಆದರೆ ಅದು ಭಾರ'.

ಮೊರಿಟಾ ಪ್ರೀತಿಸುತ್ತಿದ್ದದ್ದು ಈ ತರಹದ ಎಲೆಕ್ಟ್ರಾನಿಕ್ ಸವಾಲುಗಳನ್ನೇ. ಇಬುಕಾರ ಈ ಸಮಸ್ಯೆಯನ್ನು ಬಗೆಹರಿಸುವುದಾದರೆ ಖಾಸಗಿ ಸೌಂಡ್ ಸ್ಟೀರಿಯೋ ಐಡಿಯಾವನ್ನು ಬಗೆಹರಿಸುವ ಸಾಧ್ಯತೆ ಹೆಚ್ಚು. ತನ್ನ ಇಂಜಿನಿಯರ್‌ಗಳನ್ನು ಕರೆದು ಈ ನಿಟ್ಟಿನಲ್ಲಿ ಸಂಶೋಧನೆ ಮುಂದುವರಿಸುವಂತೆ ಹೇಳಿದರು. ಹಗುರವಾದ ಹೆಡ್‌ಫೋನ್‌ಗಳನ್ನು ಅಳವಡಿಸಿ, ರಿಕಾರ್ಡಿಂಗ್ ಸರ್ಕ್ಯೂಟ್ ಅನ್ನು ತೆಗೆದು ಹಾಕಲಾಯಿತು. ಆದರೆ ಯಾರೂ ಈ ಸಲಹೆಯನ್ನು, ಐಡಿಯಾವನ್ನು ಬೆಂಬಲಿಸದೇ ಹೋದದ್ದು ಮೊರಿಟಾಗೆ ಆಶ್ಚರ್ಯವನ್ನುಂಟುಮಾಡಿತು. ವಸ್ತು ಯೋಜನಾವಿಭಾಗದ ಇಂಜಿನಿಯರ್‌ಗಳೇ ಈ ಐಡಿಯಾದ ಬಗ್ಗೆ ಸಂದೇಹ ವ್ಯಕ್ತಪಡಿಸಿದರು.

ಈ Walkman ಪ್ರಾಜೆಕ್ಟ್‌ನುದ್ದಕ್ಕೂ Walkman ಐಡಿಯಾದ ಬಗ್ಗೆ ಯಾವುದೇ ನಂಬುಗೆ ಇರಲಿಲ್ಲ. ಈ ಪ್ರಾಜೆಕ್ಟ್‌ನಲ್ಲಿ ಸಹೋದ್ಯೋಗಿಗಳು ಸಹಕರಿಸದೇ ಹೋದರೆ ತಾನು ರಾಜಿನಾಮೆ ನೀಡುವುದಾಗಿ ಮೊರಿಟಾ ಬೆದರಿಕೆ ಹಾಕಿದಾಗ, ಮೊರಿಟಾ ತಮ್ಮ ಕೌಶಲ, ಅನುಭವ, ಮಾರ್ಕೆಟಿಂಗ್ ಜ್ಞಾನ, ಗ್ರಾಹಕರ ಮನಃಶಾಸ್ತ್ರ ಎಲ್ಲವನ್ನು ಉಪಯೋಗಿಸುತ್ತಿರುವುದನ್ನು ನೋಡಿ ಸಹೋದ್ಯೋಗಿಗಳು ಸುಮ್ಮನಾಗಿ, ಈ ಪ್ರಾಜೆಕ್ಟ್ ಯಶಸ್ವಿಯಾಗುವ ನಿಟ್ಟಿನಲ್ಲಿ ತಮ್ಮನ್ನು ಸಂಪೂರ್ಣ ತೊಡಗಿಸಿಕೊಂಡರು. ಸಂಸ್ಥೆಯ ಅಭ್ಯುದಯಕ್ಕಾಗಿ ತಮ್ಮ ಸ್ವಂತ ಭಾವನೆಗಳನ್ನು ಹುಗಿದು, ಬೇರೆಯವರ ಐಡಿಯಾಗಳನ್ನು ಅನುಸರಿಸಿ ಕೆಲಸ ಮಾಡುವುದು SONY ಸಂಸ್ಥೆಯ ಉದ್ಯೋಗಿಗಳ ಕಾರ್ಯವೈಖರಿಯ ವೈಶಿಷ್ಟ್ಯ.

Walkman ಎನ್ನುವ ನಾಮಕರಣದ ಬಗ್ಗೆಯೇ ಅಕಿ ಮೊರಿಟಾರ ತಕರಾರು ಇದ್ದದ್ದು. ಕೆಲಸದ ಮೇಲೆ ಅಕಿ ಪ್ರವಾಸ ಹೋದಾಗ, ಕಂಪೆನಿಯ ಕೆಲವು ಯುವಕರು Walkman ಎನ್ನುವ ಹೆಸರನ್ನು ಆರಿಸಿ, ಜಾಹೀರಾತುಗಳೆಲ್ಲವನ್ನು ಸಿದ್ಧಗೊಳಿಸಿ walkman ಎನ್ನುವ ಹೆಸರನ್ನು ಪ್ರಿಂಟು ಹಾಕಿಸಿಬಿಟ್ಟಿದ್ದರು. ಅಕಿ ಹಿಂದಕ್ಕೆ ಬಂದ ಮೇಲೆ ಈ ಶಬ್ದದ ವ್ಯಾಕರಣ ದೋಷವನ್ನು ಸರಿಪಡಿಸಿ ಹೆಸರು ಬದಲು ಮಾಡುವುದರೊಳಗೆ ಸಮಯ ಮಿಂಚಿ ಹೋಗಿತ್ತು. ಯರೋಪ್, ಯು.ಕೆ. ಮತ್ತು ಅಮೆರಿಕಾಗಳಲ್ಲಿಯೂ ಇದೇ ಸ್ಥಿತಿಯೇ! ಈ ದೇಶಗಳಲ್ಲಿ walkman ಹೆಸರಿಗೆ ಬದಲಾಗಿ Stow away, sound about ಮುಂತಾದ ಹೆಸರುಗಳನ್ನು ಚಲಾವಣೆ ಮಾಡಲು ಪ್ರಯತ್ನಿಸಿದರೂ ಸಾಧ್ಯವಾಗದೇ walkman ಹೆಸರು ಸ್ಥಿರವಾಯಿತು.

walkman ಅನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿದ ಕೂಡಲೇ ವಿಶ್ವದೆಲ್ಲೆಡೆ ಇರುವ SONY ಕಾರ್ಖಾನೆಗಳೆಲ್ಲವೂ ಉತ್ಪಾದಿಸಿದರೂ ಆಗದಷ್ಟು ಬೇಡಿಕೆಯ ಮಹಾಪೂರವೇ ಹರಿದು ಬಂತು.

ಸೋನಿಯ walkman ಕಥೆ ಈ ಸಂಸ್ಥೆಯ ದಕ್ಷತೆ ಹಾಗು ಅತ್ಯದ್ಭುತ ಯಶಸ್ಸನ್ನು ಗಳಿಸುವ ಅದರ ಸಾಮರ್ಥ್ಯದ ಬಗೆಗಿನ ಒಂದು ಜ್ವಲಂತ ನಿದರ್ಶನ. SONY ಕಂಪೆನಿಯನ್ನು ಶುರು ಮಾಡಿದಾಗ ಇಬುಕಾ, ಕಂಪೆನಿಯ ವಿವರಣಾಪತ್ರದಲ್ಲಿ ಕಂಪೆನಿಯನ್ನು ಬೆಳೆಸುವ ಮಟ್ಟದ ಬಗ್ಗೆ ಹಾಗು ಉದ್ದಿಮೆಯನ್ನು ಯಶಸ್ವಿಯಾಗಿ ನಡೆಸಲು ತಾವು ಮತ್ತು ಮೊರಿಟಾ ಹಂಚಿಕೊಂಡಿದ್ದ ಕನಸನ್ನು, ತತ್ವವನ್ನು ಹೀಗೇ ಹೇಳಿದ್ದಾರೆ 'ಉದ್ಯೋಗಿಗಳು ಪರಸ್ಪರ ಸಹಕಾರದಿಂದ ಟೀಂ ಕೆಲಸದ ಒಂದು ದೃಢ ಚೇತನದೊಂದಿಗೆ ಒಟ್ಟುಗೂಡಿ, ಅವರ ತಾಂತ್ರಿಕ ಸಾಮರ್ಥ್ಯವನ್ನು ಹೃತ್ಪೂರ್ವಕವಾಗಿ ಉಪಯೋಗಿಸುವ ವಾತಾವರಣವನ್ನು ನಾವು ನಿರ್ಮಾಣ ಮಾಡುವುದಾದರೆ ಆ ತರಹದ ಸಂಸ್ಥೆ ಹೇಳತೀರದಷ್ಟು

ಆನಂದವನ್ನು ಲಾಭವನ್ನು ತರುತ್ತದೆ.

ಜಪಾನಿನ ಇತರ ಕಂಪೆನಿಗಳಂತೆಯೇ SONY ಯೂ ತನ್ನ ಕಂಪೆನಿಯ ಕಟ್ಟಡಗಳ ಮೇಲೆ ಅಥವಾ ಕೇಂದ್ರಕಛೇರಿಯ ಅಂದಚೆಂದಕ್ಕೆ ಹೆಚ್ಚು ಹಣ ಹೂಡಲಿಲ್ಲ. ಸಾಮಾನ್ಯವಾಗಿ ಜಪಾನಿನ ಕಂಪೆನಿಗಳ ಕಾರ್ಖಾನೆಗಳು, ಕಛೇರಿಗಳು ಹೊರಗಿನಿಂದ ಉಗ್ರಾಣಗಳು ಕಂಡಂತೆ ಕಾಣುತ್ತವೆ. ಆದರೆ ಮಾಡಿಲ್ಲ, ಅಂದರೆ ನೀವೇ ಸ್ವಇಚ್ಛೆಯಿಂದ SONY ಸೇರಿರುವುದು. ಹಾಗಾಗಿ ಇದು ನಿಮ್ಮದೇ ಜವಾಬ್ದಾರಿ. ಸಾಮಾನ್ಯವಾಗಿ ನೀವು SONY ಯನ್ನು ಸೇರಿದಾಗ ಮುಂದಿನ ಇಪ್ಪತ್ತೈದು ರಿಂದ ಮೂವತ್ತು ವರ್ಷಗಳವರೆಗೆ ನೀವು ನಮ್ಮ ಜೊತೆ ಇರಬೇಕೆಂದು ಅಪೇಕ್ಷಿಸುತ್ತೇವೆ. ಈ ವರ್ಷಗಳು ನಿಮ್ಮ ಜೀವನದ ಅತ್ಯುತ್ತಮ ವರ್ಷಗಳಾಗಬೇಕು. ನೀವು ಈ



ಸುದ್ದಿ ಮಾಧ್ಯಮಗಳಿಗೆ ವರದಾನವಾದ 'ಹ್ಯಾಂಡಿಕ್ಯಾಮ್' ವಿಡಿಯೋ ಕ್ಯಾಮರಾ

ಒಳಗಡೆ ಉದ್ಯೋಗಿಗಳಿಗೆ ಬೇಕಾಗುವ ಯಾವುದೇ ಅವಶ್ಯಕತೆಯನ್ನು ಪೂರೈಸುವ ಸೌಕರ್ಯವಿರುತ್ತದೆ.

SONY ತನ್ನ ಹೆಚ್ಚಿನ ಹಣ ಹೂಡಿದ್ದು ತನ್ನ ಕಂಪೆನಿಯ ಸಿಬ್ಬಂದಿಯ ಮೇಲೆ ಸರಿಯಾದ ಕೆಲಸಕ್ಕೆ ಸರಿಯಾದ ವ್ಯಕ್ತಿ ಎನ್ನುವುದರ ನಂಬಿಕೆ. ಹೊಸದಾಗಿ SONY ಕಂಪೆನಿಗೆ ಸೇರುವ ಉದ್ಯೋಗಿಗಳ ಬಗ್ಗೆ ಅತ್ಯಂತ ಎಚ್ಚರ ಹಾಗು ಕಾಳಜಿ ತೆಗೆದುಕೊಳ್ಳಲಾಗುತ್ತದೆ. ಟೋಕಿಯೋದ ಕೇಂದ್ರ ಕಛೇರಿಯಲ್ಲಿ ಹೊಸದಾಗಿ ಕೆಲಸಕ್ಕೆ ಸೇರಿದ ಪದವೀಧರರನ್ನುದ್ದೇಶಿಸಿ ಸ್ವತಃ ಅಕಿ ಮೊರಿಟಾ ಮಾತಾಡುತ್ತಿದ್ದರು. SONY ಯಲ್ಲಿ ಕೆಲಸ ಮಾಡುವುದು ಕಾಲೇಜಿನಲ್ಲಿ ಓದಿದ ಹಾಗಲ್ಲ. ಇಲ್ಲಿ ಅವರಿಗೆ ಸಂಬಳ ಕೊಡುತ್ತಿರುವುದರಿಂದ, ಅವರು ಕೆಲಸ ಕಲಿಯುವವರೆಗೂ ಅವರು ಕಂಪೆನಿಗೆ ಹೊರೆಯೇ ಎಂದು ಹೇಳುತ್ತಿದ್ದರು ಮೊರಿಟಾ. ತಮ್ಮ ಕಂಪೆನಿಯಲ್ಲಿ ಹೊಸ ಉದ್ಯೋಗಿಗಳ ಸ್ಥಾನಮಾನವನ್ನು ಹೀಗೆ ಹೇಳುತ್ತಿದ್ದರು ''ಇದು ಸೈನ್ಯವಲ್ಲ, ನಾವು ನಿಮ್ಮನ್ನು ಒತ್ತಾಯದಿಂದ ಭರ್ತಿ ಸಂಸ್ಥೆಯನ್ನು ಬಿಡುವಾಗ, ಇಷ್ಟು ವರ್ಷಗಳು ಇಲ್ಲಿ ಕಳೆದದ್ದಕ್ಕಾಗಿ ನೀವು ಪಶ್ಚಾತ್ತಾಪ ಪಡುವಂತಾದರೆ ಅದಕ್ಕಿಂತ ದೊಡ್ಡ ದುರಂತ ಮತ್ತೊಂದಿಲ್ಲ. ಮುಂದಿನ ಕೆಲ ತಿಂಗಳುಗಳಲ್ಲಿ ಆಗಬೇಕಾದ ಅತ್ಯಂತ ಮುಖ್ಯ ಕೆಲಸವೆಂದರೆ ನೀವು ಇಲ್ಲಿ ಸಂತೋಷದಿಂದಿರುವಿರೋ ಇಲ್ಲವೋ ಎಂಬುದನ್ನು ನಿರ್ಧರಿಸುವುದು. ನಾವು ನಿಮಗೆ ಕೆಲಸ ಕೊಟ್ಟಿದ್ದರೂ ಕೂಡ ನಾವು ನಿಮಗೆ ಸಂತೋಷವನ್ನು ನೀಡಲಾರೆವು..... ಏಕೆಂದರೆ ಅದು ನಿಮಗೆ ನೀವೇ ನಿರ್ಮಿಸಿಕೊಳ್ಳಬೇಕಾದುದು''.

ಕೆಲಸದ ಬಗ್ಗೆ ಜಪಾನಿಯರ ದೃಷ್ಟಿ ಬೇರೆ ದೇಶಗಳಲ್ಲಿನ ಜನರ ಮನೋವೃತ್ತಿಯಿಂದ ತುಂಬಾ ಬೇರೆಯಾಗಿದೆ. ಪಾಶ್ಚಾತ್ಯ ಮತ್ತು ಜಪಾನಿ ಕಂಪೆನಿಗಳನ್ನು ಅಕಿ ಮೊರಿಟಾ ಇಟ್ಟಿಗೆ ಮತ್ತು ಕಲ್ಲುಗಳಿಂದ ಕಟ್ಟಡ ಕಟ್ಟುವವರಿಗೆ ಹೋಲಿಸುತ್ತಾರೆ.

ಪಾಶ್ಚಾತ್ಯ ಕಂಪೆನಿಗಳು ಇಟ್ಟಿಗೆಗಳೊಂದಿಗೆ ಕಟ್ಟಡ ಕಟ್ಟುವ ಮೇಸ್ತ್ರಿ ಇದ್ದ ಹಾಗೆ. ಏಕೆಂದರೆ ಕಂಪೆನಿಯು ಮೊದಲೇ ಎಲ್ಲವನ್ನು ಸರಿಯಾಗಿ

ಯೋಜಿಸಿ, ಪ್ರತಿಯೊಂದು ಕೆಲಸಕ್ಕೂ ಬೇಕಾಗುವ ಒಂದು ಚೌಕಟ್ಟನ್ನು ಸಿದ್ಧಗೊಳಿಸಿ, ನಂತರ ಆ ಚೌಕಟ್ಟಿನಲ್ಲಿ ಸರಿ ಹೋಗುವ ವ್ಯಕ್ತಿಗಾಗಿ ಜಾಹಿರಾತು ಕೊಡುತ್ತಾರೆ. ಸರಿಯಾದ ಆಕಾರದ ಇಟ್ಟಿಗೆ ಗೋಡೆಯಲ್ಲಿ ಸರಿಯಾಗಿ ಹೊಂದಿಕುಳಿತುಕೊಳ್ಳುವಂತೆ ಇವರು. ಆದರೆ ಜಪಾನಿನಲ್ಲಿ ಅತ್ಯುತ್ತಮ ಮತ್ತು ಪ್ರತಿಭಾನ್ವಿತರನ್ನು ಕೆಲಸಕ್ಕೆ ಸೇರಿಸಿಕೊಂಡು, ಪ್ರತಿಭೆಗಳನ್ನು ಹೇಗೆ ಉಪಯೋಗಿಸಬೇಕು, ಯಾವ ವಿಭಾಗದಲ್ಲಿ ಕೆಲಸ ಕೊಡಬೇಕು ಎಂಬುದನ್ನು ನಂತರ ಜಪಾನಿ ಮ್ಯಾನೇಜರ್ ನಿರ್ಧರಿಸುತ್ತಾರೆ. ಇದು ಕಲ್ಲುಗಳಿಂದ ಗೋಡೆಯನ್ನು ಕಟ್ಟಿದ ಹಾಗೆ. ಕಲ್ಲುಗಳು ಕೆಲವು ಬಾರಿ ಗುಂಡಗೆ, ಚೌಕವಾಗಿ, ಉದ್ದವಾಗಿ, ದೊಡ್ಡದಾಗಿ, ಸಣ್ಣದಾಗಿ ಇರಬಹುದು. ಆದರೆ ಅವೆಲ್ಲವನ್ನು ಸರಿಯಾಗಿ ಸೇರಿಸಿ ಕಟ್ಟಿದರೆ ಗಟ್ಟಿಯಾದ ಗೋಡೆಯಾಗುವ ಸಾಮರ್ಥ್ಯ ಪಡೆದಿರುತ್ತವೆ. ಈ ಗೋಡೆ ಆಕಸ್ಮಾತ್ ಬದಲಾಯಿಸಬೇಕಾದರೆ, ಅವರ ಉದ್ಯೋಗಿಗಳನ್ನು ಕಲ್ಲುಗಳನ್ನು ಬೇಕಾದ ಬೇರೆ ಬೇರೆ ಆಕಾರಗಳಲ್ಲಿಟ್ಟು, ಅಷ್ಟೇ ಶಕ್ತಿ ಸಮರ್ಥವಾದ ಗೋಡೆಯನ್ನು, ಸಂಸ್ಥೆಯನ್ನು ಕಟ್ಟಬಹುದು.

ಒಮ್ಮೆ ಸೇರಿದ ವ್ಯಕ್ತಿ ಸಂಸ್ಥೆಯಲ್ಲಿ ನಿವೃತ್ತಿಯಾಗುವ ತನಕ, ಅಥವಾ ಸಾಯುವ ತನಕ ನಿಷ್ಠೆಯಿಂದ ಕೆಲಸ ಮಾಡುವ ಜಪಾನಿ ಮ್ಯಾನೇಜ್‌ಮೆಂಟ್ ಪದ್ಧತಿ ಪಾಶ್ಚಾತ್ಯ ದೇಶದ ಮ್ಯಾನೇಜ್‌ಮೆಂಟ್ ಗುರುಗಳಿಗೆ ಅರ್ಥವಾಗುವುದು ಕಷ್ಟವಾಗುತ್ತದೆ. ಜಪಾನೇತರ ಕಂಪೆನಿಗಳಲ್ಲಿರುವ Hire & Fire ಕಾರ್ಯ ಪದ್ಧತಿಯನ್ನು ಕಂಡರೆ ಜಪಾನಿಯರಿಗೆ ಆಗದು.

ಕಾರ್ಯಪದ್ಧತಿಗೆ ಸಂಬಂಧಿಸಿದಂತೆ SONYಯಲ್ಲಿ ನೀಲಿಕಾಲರಿನ ಉದ್ಯೋಗಿಗೆ ಹಾಗು ಬಿಳಿ ಕಾಲರಿನ ಉದ್ಯೋಗಿಗೆ ಹೆಚ್ಚಿನ ವ್ಯತ್ಯಾಸವಿಲ್ಲ. ಹೆಚ್ಚಿನ ಕೆಲಸ ಮಾಡುವಂತೆ ನೀಲಿ ಕಾಲರಿನ ಉದ್ಯೋಗಿಯ ಮೇಲೆ ಒತ್ತಡವಾಗಲಿ, ದಬ್ಬಾಳಿಕೆಯಾಗಲಿ ಹೇರುವುದಿಲ್ಲ. ತನ್ನ ಸಾಮರ್ಥ್ಯಕ್ಕೆ ತಕ್ಕಂತೆ ಕೆಲಸ ಮಾಡುವ SONY ಉದ್ಯೋಗಿ ಒಬ್ಬ ಕಾವಲುಗಾರನ ಸ್ಥಾನದಿಂದ, ಕಾರ್ಯದರ್ಶಿ ಹುದ್ದೆಗೂ ಹೋಗಬಹುದು. ಉದ್ಯೋಗಿ ಒಂದು ನಿರ್ದಿಷ್ಟ ಜವಾಬ್ದಾರಿಯನ್ನು ನಿರ್ವಹಿಸುವ ಸಾಮರ್ಥ್ಯ ಹಾಗೂ ಉದ್ದೇಶವಿದ್ದರೆ, ಅದಕ್ಕೆ ತಕ್ಕಂತೆಯೇ ಅವನನ್ನು ಆ ಕೆಲಸಕ್ಕೆ ತೆಗೆದುಕೊಳ್ಳಲಾಗುತ್ತದೆ. ಜಗತ್ತಿನ ಯಾವುದೇ ದೇಶದ ಯಾವುದೇ ಕಂಪೆನಿಯಲ್ಲಿ ಈ ಪದ್ಧತಿಯನ್ನು ಕಾಣುವುದು ಅತಿ ವಿರಳ.

ಶ್ರವಣ, ದೃಶ್ಯ ಹಾಗೂ ಚಲನಚಿತ್ರ ರಂಗಕ್ಕೂ ತಮ್ಮ ಸಾಮ್ರಾಜ್ಯವನ್ನು ವಿಸ್ತರಿಸಿದ ಮೊರಿಟಾ ಮತ್ತು ಇಬುಕಾ, ಕ್ಯಾಸೆಟ್‌ಗಳು, ವಿಡಿಯೋ ಟೇಪ್‌ಗಳು, ಪ್ಲೇಯರ್‌ಗಳಷ್ಟೇ ಅಲ್ಲದೇ, ಸಂಗೀತ ಮತ್ತು ಸಿನಿಮಾಗಳನ್ನು ಟೇಪ್‌ಗೆ ಅಳವಡಿಸುವುದಕ್ಕೋಸ್ಕರ ಸಿನಿಮಾ ಮತ್ತು ರೆಕಾರ್ಡಿಂಗ್ ಕಂಪೆನಿಗಳನ್ನು ಖರೀದಿಸಿದರು.

SONY 1998ರಲ್ಲಿ CBS ರೆಕಾರ್ಡ್‌ಗಳನ್ನು 2 ಬಿಲಿಯನ್ ಡಾಲರ್‌ಗಳಿಗೆ ಕೊಂಡುಕೊಂಡರು. 1989ರಲ್ಲಿ ಕೊಲಂಬಿಯಾ ಪಿಕ್ಚರ್ಸ್ ಅನ್ನು 3.4 ಬಿಲಿಯನ್ ಡಾಲರ್‌ಗಳಿಗೆ ಖರೀದಿಸಿತು. ಜೊತೆಗೆ ಕೆಲವು ಖ್ಯಾತ ಕಲಾವಿದರ ರೆಕಾರ್ಡಿಂಗ್ ಹಕ್ಕುಗಳನ್ನು ಖರೀದಿಸಿತು. ಮೈಕೆಲ್ ಬೋಲ್ಟನ್, ಬ್ರೂಸ್ ಸ್ಪಿಂಗ್‌ಸ್ಟನ್, ಮಾರಿಯಾ ಕಾರೇ, ಮೇರಿ ಚಾಪಿನ್ ಕಾರ್ಪೆಂಟರ್ ಹಾಗು ಡಾಲಿ ಪಾರ್ಡನ್ ಮುಂತಾದ ಖ್ಯಾತನಾಮರು ತಾರೆಯರು Sony Music Entertainment ನ ಹೆಮ್ಮೆಯ ಕಲಾವಿದರು.

ಜಗತ್ತಿನ ಪರಿಸರ ಸಂರಕ್ಷಣೆ ವಿಷಯದಲ್ಲೂ, SONY ಬೇರೆಲ್ಲಾ ಕಂಪೆನಿಗಳಿಗಿಂತ ತುಂಬಾ ಭಿನ್ನವಾಗಿ ತನ್ನನ್ನು ತೊಡಗಿಸಿಕೊಂಡಿದೆ. ಓಝೋನ್ ಪದರದ ಕುಗ್ಗುವಿಕೆ, ಹೆಚ್ಚಾಗಿರುವ ಜಾಗತಿಕ ತಾಪ, ಜಗತ್ತಿನ ಮಳೆ ಅರಣ್ಯಗಳ ನಾಶ, ಮುಂತಾದ ಸಮಸ್ಯೆಗಳು ಹೆಚ್ಚಾಗುವುದಕ್ಕೆ ಕೆಲವು ಕಾರ್ಖಾನೆಗಳು ಹಾಗು ಕಂಪೆನಿಗಳು ಕೂಡಾ ಕಾರಣವಾಗುತ್ತವೆ.

1993ರಲ್ಲಿ SONYಯು ತನ್ನ 'ಜಾಗತಿಕ ಪರಿಸರ ಪಾಲಿಸಿ'ಯನ್ನು ಮಂಡಿಸಿ, ತನ್ನ ಕಂಪನಿಯ, ತನ್ನ ಕಾರ್ಖಾನೆಗಳ ಯಾವುದೇ ಕಾರ್ಯವೈಖರಿಯು ಪರಿಸರಕ್ಕೆ ಪೂರಕವಾಗಿರುವಂತಹ ಶೈಲಿಯನ್ನು ಅಳವಡಿಸಿಕೊಂಡಿತು.

ಅಕಿ ಮೊರಿಟಾ ಬೆಂಬಲದಿಂದ SONYಯು ಶೈಕ್ಷಣಿಕ, ಸಾಂಸ್ಕೃತಿಕ ಹಾಗು ವೈದ್ಯಕೀಯ ರಂಗಗಳಲ್ಲಿ ತನ್ನ ಸೇವೆಯನ್ನೀಯುತ್ತಿದೆ. ನ್ಯೂಯಾರ್ಕ್‌ನ ಲಿಂಕನ್ ಸೆಂಟರ್, ಕ್ಯಾನ್ಸರ್ ಮತ್ತು ಏಯ್ಡ್ಸ್ ಸಂಶೋಧನೆಯ ಡಿ.ಜ. ಮಾರ್ಷಲ್ ಪ್ರತಿಷ್ಠಾನಗಳಿಗೆ ಸಹಾಯ ನೀಡುತ್ತಿದೆ. ಯುರೋಪ್‌ನಲ್ಲಿ SONY ಇಟಾಲಿಯಾವು ಮಿಲನ್‌ನಲ್ಲಿರುವ ಲಿಯಾನಾರ್ಡೊ ಡಾವಿನ್ಸಿಯ ಪ್ರತಿಮೆಯನ್ನು ಒಳಗೊಂಡಂತೆ ಹಲವಾರು ಸ್ಮಾರಕಗಳ ರಕ್ಷಣೆಯ ಜವಾಬ್ದಾರಿ ಹೊತ್ತಿದೆ. ಜಪಾನಿನಲ್ಲಿ 1959ರಿಂದ ವಿಜ್ಞಾನ ಶಿಕ್ಷಣದ ಕಾರ್ಯಕ್ಕಾಗಿ ಹಲವಾರು ದೇಣಿಗೆಗಳನ್ನು ನೀಡುತ್ತಾ ಬಂದಿದೆ. SONY ಮತ್ತು ಜಪಾನ್ ಕಲ್ಯಾಣಾಭಿವೃದ್ಧಿ ಸಂಸ್ಥೆಗಳ ಸಹಯೋಗದೊಂದಿಗೆ ಅಂಗವಿಕಲರಿಗೆ ಉದ್ಯೋಗಾವಕಾಶಗಳನ್ನು ನೀಡುವ ಕೆಲಸದಲ್ಲಿ ನಿರತವಾಗಿದೆ. ಇಂಗ್ಲೆಂಡ್‌ನಲ್ಲಿ ಮೆದುಳು ಹಾಗು ನರ ದೌರ್ಬಲ್ಯಗಳಿಂದ ಬಳಲುತ್ತಿರುವ ಮಕ್ಕಳಿಗೆ ಧನ ಸಹಾಯ, ಅಷ್ಟೇ ಅಲ್ಲದೇ SONY ಯು ತನ್ನ ಕಂಪೆನಿಯ ಉದ್ಯೋಗಿಗಳನ್ನು ಜಗತ್ತಿನ ನಾನಾ ದೇಶಗಳಲ್ಲಿ ಸಾಮಾಜಿಕ ಚಟುವಟಿಕೆ ಹಾಗೂ ಸೇವೆಯಲ್ಲಿ ತೊಡಗಿಸಲು ಹಾಗು ಅವರಿಗೆ ಬೇಕಾದ ಸಹಾಯವನ್ನು, ಅನುಕೂಲತೆಗಳನ್ನು ಒದಗಿಸಿಕೊಡುತ್ತಿದೆ.

1993ರ ವೇಳೆಗೆ SONY ಕಾರ್ಪೊರೇಷನ್ ವಿಶ್ವಾದ್ಯಂತ 1,26,000 ಕೆಲಸಗಾರರನ್ನು ಹೊಂದಿದ್ದು ಇದರಲ್ಲಿ ಶೇಕಡ 7 ಭಾಗ, ವರ್ಷವೊಂದಕ್ಕೆ ಸುಮಾರು 1000 ಹೊಸ ವಸ್ತುಗಳನ್ನು ಆವಿಷ್ಕರಿಸುವ ಅತ್ಯುತ್ತಮ ಮಟ್ಟದ ವಿಜ್ಞಾನಿಗಳು ಹಾಗು ಇಂಜನಿಯರ್‌ಗಳು.

ಅಕಿ ಮೊರಿಟಾ ಹೇಳುವ ಹಾಗೆ SONY ಬೆಳೆಯುತ್ತಲೇ ಹೋಗುವ ಕಂಪೆನಿ. ಏಕೆಂದರೆ ಗ್ರಾಹಕರಿಗೋಸ್ಕರ, ಎಲೆಕ್ಟ್ರಾನಿಕ್ಸ್ ತಂತ್ರಜ್ಞಾನದ ಹೊಸ ಹೊಸ ಆವಿಷ್ಕಾರಗಳು ನಮ್ಮಲ್ಲಿವೆ; ಅದು ಕೇವಲ ಮನೋರಂಜನಾ ವಸ್ತುಗಳಿಗೆ ಸೀಮಿತವಾಗದೇ ಕಮ್ಯುನಿಕೇಷನ್ಸ್‌ನಲ್ಲಿ ಗೃಹೋಪಯೋಗಿ ವಸ್ತುಗಳಿಗೂ ಅನ್ವಯಿಸುತ್ತದೆ.'

SONY ಕಾರ್ಪೊರೇಷನ್‌ನ ಬೆಳವಣಿಗೆಗೆ, ಅಭಿವೃದ್ಧಿಗೆ ಅಕಿ ಮೊರಿಟಾ ಇತ್ತ ಪ್ರೇರಣೆ ಅಪಾರ. SONY ಕಂಪೆನಿಯನ್ನು ಆರಂಭಿಸಿ ನಲವತ್ತೆಂಟು ವರ್ಷಗಳ ನಂತರ ಅನಾರೋಗ್ಯದ ಕಾರಣಕ್ಕಾಗಿ ಅಕಿ ಮೊರಿಟಾ 1994ರ ನವೆಂಬರ್ 25ರಂದು SONY ಕಂಪೆನಿಯ ತಮ್ಮ ಛೇರ್ಮನ್ ಸ್ಥಾನಕ್ಕೆ, ಆಡಳಿತ ಮಂಡಳಿಯ ನಿರ್ದೇಶಕರ ಸ್ಥಾನಕ್ಕೆ ರಾಜಿನಾಮೆ ಸಲ್ಲಿಸಿದರು.

ಅವರ ರಾಜಿನಾಮೆಯ ನಂತರ SONYಯ ಮ್ಯಾನೇಜಿಂಗ್ ಡೈರೆಕ್ಟರ್‌ರಾದ ನೋರಿಯೋ ಒಹಾಗಾ ಕೊಟ್ಟ ಹೇಳಿಕೆಯಲ್ಲಿ ಅಕಿ ಮೊರಿಟಾ ಬಗೆಗೆ ಇಡೀ SONYಯ ಆದರ ಹಾಗೂ ಗೌರವ ವ್ಯಕ್ತವಾಗಿವೆ.

''ಅಕಿ ಮೊರಿಟಾ ಸಹಾಯದಿಂದ ನಿರ್ಮಾಣವಾದ ಅತ್ಯುಚ್ಚ ಮಟ್ಟದಲ್ಲಿರುವ SONYಯ ಹೆಸರನ್ನು ಪ್ರತಿಷ್ಠೆಯನ್ನು ಉಳಿಸಿ ಬೆಳೆಸುವುದಕ್ಕಾಗಿ SONYಯ ಪ್ರತಿಯೊಬ್ಬ ಉದ್ಯೋಗಿಯು ತನ್ನೆಲ್ಲ ಪ್ರತಿಭೆಯನ್ನು ಪಣಕ್ಕಿಡುತ್ತಾನೆಂಬ ಭರವಸೆ ನನಗಿದೆ''.

■ ಎನ್. ಮಾಲತೀಶ್ ಭಟ್

ಎಷ್ಟು ಬಿಸಿ ಇದ್ದರೂ, 'ಕಾಫಿ ಇನ್ನೂ ಬಿಸಿ ಮಾಡಿ ತರ್ಬೇಕಿತ್ತು' ಎನ್ನುತ್ತಿದ್ದ ಗುಂಡ. ಬಿಸಿ ದ್ರವವನ್ನು ಆರಾಮವಾಗಿ ಗಂಟಲಿಗೆ ಸುರಿದುಕೊಳ್ಳುತ್ತಿದ್ದ.
ಇನ್ನೂ ಬಿಸಿ ಎಂಬ ಮಾತು ಕೇಳಿ ಕೇಳಿ ರೋಸಿಹೋಗಿದ್ದ ಪತ್ನಿ ಹೇಳಿದಳು :
'ಇನ್ನೂ ಬಿಸಿ ಸಾಧ್ಯವಿಲ್ಲಾರೀ, ಬೇಕಾದ್ರೆ ಕಾಫಿ ಕುಡಿದು ನೀವೇ ಒಲೆ ಮೇಲೆ ಕೂತ್ಕೊಳ್ಳಿ!'

BISILA BADUKU Kannada Monthly OCTOBER 1999 RNI No. 67406 / 97 Regd. BGW / 394

The Many Signs of Success from KSIIDC





STRENGTH FROM RESOURCES & EXPERTISE.

CARE AND CONCERN FOR THE ENTREPRENEUR





MANY PROJECTS HAVE FLOWERED WITH US.

GUIDANCE AND DIRECTION TOO !





WE CUT PROCESSING TIME TO AID THE ENTREPRENEUR.

A POSITIVE OUTLOOK ON THE FUTURE.

KSIIDC, the industrial catalyst, plays a pivotal role in the industrialisation of the State.

KSIIDC nurtures the spark of enterprise with a total package of services for today's entrepreneur, right from project identification to post production stages.

So, if you want to set up business in Karnataka, come to the leader. Nobody knows the State better than us.

COMPREHENSIVE RANGE OF SERVICES:

■ Project Identification ■ Medium and Long Term Loans ■ Direct Equity Participation and Underwriting ■ Equipment Finance Scheme ■ Deferred Payment Guarantees ■ Equipment Leasing Scheme ■ Tourism Projects ■ Hospital/Nursing Home Finance Scheme ■ Corporate Loans ■ Bill Discounting Schemes ■ Subscription to Non-Convertible Debentures ■ Merchant Banking Services ■ Nodal Agency for certain mega projects of the State ■ Guarantees and LCs through Banks ■ Bought out deals ■ Financial restructuring and disinvestment proposals of companies / PSUs.

NODAL AGENCY OF THE KARNATAKA GOVERNMENT FOR :

■ International Airport at Devanahalli, Bangalore ■ Minor Airports & Sea Ports ■ Raichur Growth Centre ■ Export Promotion Industrial Park at Mangalore ■ Modern Commercial Office Complex at Bangalore (Khanija Bhavan) ■ Mega Steel Projects and Cement Plants.

KARNATAKA STATE INDUSTRIAL INVESTMENT & DEVELOPMENT CORPORATION LIMITED

'MSIL House', 36, Cunningham Road, Bangalore 560 052.
Tel : 2258131 - 33, 2261648. Fax : 2255740 / 2259371.

BRANCH OFFICES : ■ MYSORE:No. 2909/2910, 3rd Floor, Sunder Arcade, B. N. Road, Opp. Suburb Bus Stand, Mysore - 570 001. Telefax : 25422. ■ MANGALORE : No.407 / 408, 3rd Floor, Mahendra Arcade, Kudumal Ranga Rao Road, Karangalpadi, Mangalore - 575 003. Telefax : 492671. ■ HUBLI : Enkay Complex, Keshavapur, Hubli - 580 023. Tel : 367233. Telefax : 364168. Telex : 0865-272. ■ GULBARGA : Plot No. 69, S. G. Hadgil Building, Super Market, Gulbarga - 585 101. Tel : 24995.

ಮುದ್ರಣ: ರಾಜ್‌ಹನ್ಸ್ ಎಂಟರ್‌ಪ್ರೈಸಸ್, ಬೆಂಗಳೂರು - 44, ✆ 3357070